ಬೆಳಕಿನ ಬಳ್ಳಿ

ಬಸವರಾಜ ಸ್ವಾಮಿ

ಬೆಳಕಿನ ಬಳ್ಳಿ

ಶರಣರ ವಚನಾನುಭಾವ

ಬಸವರಾಜ ಸ್ವಾಮಿ

ಪ್ರಕಾಶಕರು

ಶ್ರೀ ಬಸವ ಸೇವಾ ಪ್ರತಿಷ್ಠಾನ

ಸುದ್ದಿಮೂಲ ಕಾರ್ಯಾಲಯ, ಅಂಚೆಪೆಟ್ಟಿಗೆ 350

12-7-196, ಸಿಯಾತಲಾಬ, ರಾಯಚೂರು - 584102.

ಬೆಳಕಿನ ಬಳ್ಳಿ
ಶರಣರ ವಚನಾನುಭಾವ
Belakina Balli - Sharanara Vachananubhava
by : **Basavaraj Swamy**
Editor, Suddimoola Kannada Daily
Siyatalab, Raichur - 584102

ಪುಟ : 228 + 16 + 4
ಬೆಲೆ : ರೂ. 200/-
ಪ್ರತಿಗಳು : 1000
ಪ್ರಥಮ ಮುದ್ರಣ : ಮೇ 2011
ಕಾಗದ ಬಳಕೆ : 70 ಜಿಎಸ್ಎಂ. ಎನ್ಎಸ್. ಮ್ಯಾಪ್‌ಲಿತೋ
ಅಳತೆ : ಡೆಮಿ 1/8

Pages : 228 +16
Price : Rs. 200/-
Copies : 1000

ಮುಖಪುಟ : ಮುರಳೀಧರ ರಾಠೋಡ

Printers : Shubhodaya Printers
No.35, Ist Cross, Nanjamba Agrahara,
Chamarajpet, Bangalore-18, Ph.: 080-22421555

ಪ್ರಕಾಶನ : ಶ್ರೀ ಬಸವ ಸೇವಾ ಪ್ರತಿಷ್ಠಾನ
ಸುದ್ದಿಮೂಲ ಕಾರ್ಯಾಲಯ
ಅಂಚೆಪಟ್ಟಿಗೆ 350, 12-7-196, ಸಿಯಾತಲಾಬ್,
ರಾಯಚೂರು-584102 (ಕರ್ನಾಟಕ)
ದೂರವಾಣಿ ಸಂಖ್ಯೆ : 08532-235730,
ಫ್ಯಾಕ್ಸ್ : 235293

ಅಕ್ಷರ ಸಂಯೋಜನೆ : ಪ್ರವೀಣ, ಸುದ್ದಿಮೂಲ

ಅರ್ಪಣೆ



ಪರಮಪೂಜ್ಯ ಸದ್ಗುರು

ಶ್ರೀ ವಿದ್ಯಾನಂದ ಶರಣರು

ಡಬ್ಬೇರುಮಡುವು

ತಾ. ಲಿಂಗಸೂಗೂರು, ಜಿ. ರಾಯಚೂರು

ಓದುವ ಮುನ್ನ....

12ನೇ ಶತಮಾನದಲ್ಲಿ ಬಸವಣ್ಣನವರ ಕ್ಷೇತ್ರವಾದ ಬಸವಕಲ್ಯಾಣದಲ್ಲಿ ಏಳುನೂರಾ ಎಪ್ಪತ್ತು ಅಮರಗಣಂಗಳು ನಿರ್ವಾಣ ಹೊಂದಿ ಈ ನಾಡಿನ ಉದ್ದಗಲದಲ್ಲೂ ಕಾರ್ಯನಿರ್ವಹಿಸಿದರು. ಅವರು ರಚಿಸಿದ ವಚನಗಳು ಎಂದೆಂದೂ ಅಮರ. ಅಂತೆಯೇ ಶರಣರ ಆಶಯವನ್ನಿಟ್ಟು ಕೊಂಡು ಡಬ್ಬೇರುಮಡುವಿನ ಪರಮಪೂಜ್ಯ ಸದ್ಗುರುಗಳಾದ ಶ್ರೀ ವಿದ್ಯಾನಂದ ಶರಣರು ಕಳೆದ ಆರು ದಶಕಗಳವರೆಗೂ ಈ ನಾಡಿನಲ್ಲಿ ಏಕಾಂಗಿಯಾಗಿ ಕಾರ್ಯನಿರ್ವಹಿಸಿದರು.

ಬೀದರ ಜಿಲ್ಲೆ ಬಸವಕಲ್ಯಾಣ ತಾಲೂಕಿನ ಮುಚಳಂಬ ಗ್ರಾಮದ ಶ್ರೀ ನಾಗಭೂಷಣ ಶಿವಯೋಗಿಗಳಲ್ಲಿ ಶಿಷ್ಯತ್ವ ಪಡೆದರು. ಶರಣರು ಕನ್ನಡ ಕಲಿತದ್ದು ಅಯ್ಯನವರ ಶಾಲೆಯಲ್ಲಿ. ನಂತರ ಸಂಸ್ಕೃತ ಹಿಂದಿ ಕಲಿತರು.

ಜ್ಞಾನಿಗಳಿಗೆ ಹುಟ್ಟು ಸಾವುಗಳಿಲ್ಲ. ಪರಮಪೂಜ್ಯ ವಿದ್ಯಾನಂದ ಶರಣರನ್ನು ಲೌಕಿಕವಾಗಿ ಪರಿಚಯಿಸುವುದು ಸಾಧ್ಯವಾಗುವುದೇ ಇಲ್ಲ. ತಮಗೆ ತಿಳಿದಾಗಿನಿಂದ 60 ಸಂವತ್ಸರಗಳನ್ನು ಜ್ಞಾನಕ್ಕಾಗಿ ಮೀಸಲಿಟ್ಟವರು. ಯಾರೂ ಕೆಟ್ಟವರಲ್ಲ. ಒಳ್ಳೆಯದು ಕೆಟ್ಟದ್ದು ಎಂದು ಗುರುತಿಸುವುದು ಆವರಿಸಿಕೊಂಡ ಅಜ್ಞಾನದಿಂದ. ಒಳ್ಳೆಯದು ಒಳ್ಳೆಯದಲ್ಲ ಕೆಟ್ಟದ್ದು ಕೆಟ್ಟದ್ದಲ್ಲ. ಇವೆರಡೂ ಒಂದು ನಾಣ್ಯದ ಎರಡು ಮುಖಗಳು. ಈ ಎರಡೂ ಮುಖಗಳನ್ನು ತಿಳಿಯುವ ಅರಿವೇ ಸತ್ಯ. ಆ ಅರಿವೇ ಗುರು. ಆ ಗುರುವನ್ನು ಸರ್ವರಿಗೂ ಪರಿಚಯಿಸುವ ಕಾಯಕದಲ್ಲಿ 60 ಸಂವತ್ಸರಗಳ ಪರ್ಯಂತ ಮಗ್ನರಾದರು. ಅರವಿನ ಹೃದಯ ಕಂಡರೆ ಗುರುಗಳಿಗೆ ಸಿಹಿ ಉಂಡಂತೆ. ಅವರನ್ನು ಹೃದಯದಿಂದ ಮಾತನಾಡಿಸಿ ಅವರ ಮನೆಗೆ ಹೋಗಿ 2-3 ದಿನಗಳವರೆಗೆ ವಚನಗಳ ಮೂಲಕ ಜ್ಞಾನ ಹೇಳಿ ಶರಣರ ಆಶಯದಂತೆ ಸುಖದಿಂದ ಜೀವಿಸಲು ಬಯಸುತ್ತಿದ್ದರು.

ಅಭಿವೃದ್ಧಿ ಎಂದರೆ ಕಲ್ಲು ಮಣ್ಣು ಕಟ್ಟಿಗೆ ಕಟ್ಟಡ ಕರೆನ್ಸಿ ಲೋಹಗಳಲ್ಲ. ತಾನು ಅಭಿವೃದ್ಧಿ ಹೊಂದುವುದು. ತನಗೆ ಅರಿವಾಗುವುದು. ತಾನು ತನ್ನಲ್ಲಿಯೇ ಸತ್ಯವನ್ನು ಕಂಡುಕೊಳ್ಳುವುದು.

ಅದು ಕಲ್ಲು ಮಣ್ಣು ಹೊಡೆದು ಚಿನ್ನ ತೆಗೆದಷ್ಟೆ ಕಠಿಣ. ಸರಕಾರ, ವಿಶ್ವವಿದ್ಯಾಲಯಗಳು, ಸಮಾಜ, ಕುಟುಂಬ ವರ್ಗಗಳು ಸಾಧ್ಯವಾದರೆ ಈ ಕ್ರಿಯೆಯಲ್ಲಿ ತೊಡಗಬೇಕಷ್ಟೆ. ಇದಕ್ಕೂ ಮಿಗಿಲಾಗಿ ತಾನು ತನ್ನ ಕೆಲಸದಲ್ಲಿ ತೊಡಗಬೇಕಷ್ಟೆ.

ತನಗೆ ಅರಿವುಂಟಾಗುವುದು ಎಂದರೆ ಒಂದು ಧಾರ್ಮಿಕ ಕೆಲಸವಲ್ಲ. ಧರ್ಮ ಜಾತಿ ಮತ ಪಂಥ ಇಂದಿನ ಆಧುನಿಕ ಮಠ ಮಂದಿರಗಳಿಂದ ಅದು ದೊರೆಯುವುದೂ ಇಲ್ಲ. ಬದಲಾಗಿ ಅರಿವಿನ ಕ್ರಿಯೆ ಇನ್ನೂ ತನ್ನಿಂದ ಬಹು ದೂರ ಸಾಗುವುದು.

ಅರಿವು ಶಾಲಾ ಕಾಲೇಜು ವಿಶ್ವವಿದ್ಯಾಲಯಗಳಿಂದ ದೊರೆಯುವುದಿಲ್ಲ.

ಪುಸ್ತಕಗಳಿಂದಲೂ ದೊರೆಯುವುದಿಲ್ಲ. ಆಧುನಿಕ ವಿಜ್ಞಾನ ಅರಿವಲ್ಲ, ಅರಿವಿನ ಒಂದು ಚಿಕ್ಕ ಕ್ರಿಯೆ ಮಾತ್ರ. ಅರಿವು ಬ್ರಹ್ಮಜ್ಞಾನ. ವಿಜ್ಞಾನ ಅರಿವಿನ ಬೈಪ್ರೊಡಕ್ಟ್. ಅದು ಭ್ರಮೆ ಜ್ಞಾನ. ಭ್ರಮಾಜ್ಞಾನಕ್ಕೆ ಮರುಳಾದದ್ದೇ ಹೆಚ್ಚು. ಇದನ್ನು ಯಾರೋ ಹೇಳಿದರೆ ತಿಳಿಯುತ್ತದೆಯೆಂದಲ್ಲ. ಅರಿವಾದರೆ ತನಗೆ ತಾನೇ ತಿಳಿಯುತ್ತದೆ, ತಾನು ಕಲಿತದ್ದೆಲ್ಲ ಭ್ರಮಾಜ್ಞಾನವೆಂದು ! ಆಗ ಕಲಿತದ್ದೆಲ್ಲ ಮರೆಯುತ್ತಾನೆ. ಪ್ಲಾಸ್ಟಿಕ್ ಹಾಳೆ ಮೇಲೆ ಬರೆದು ಬೇರ್ಪಡಿಸಿದರೆ ಬರೆದದ್ದೆಲ್ಲ ನಶಿಸಿಹೋಗುವಂತೆ ಅಷ್ಟು ತೀಕ್ಷ್ಣವಾಗಿ ಮರೆಯುವ ಕ್ರಿಯೆ ತನ್ನಲ್ಲಿ ನಡೆಯುತ್ತದೆ. ಇನ್ನು ಉಳಿದದ್ದು ಅರಿವು ಮಾತ್ರ. ಅದು ಸವಿದಷ್ಟೂ ಸಿಹಿ ; ಗಂಧದ ಕೊರಡು ಉಜ್ಜಿದಷ್ಟೂ ವಾಸನೆಯಿದ್ದಂತೆ.

ಇಂತಹ ಒಂದು ಸುಖ ಸರ್ವ ತನುಗಳಲ್ಲಿಯೂ ಇದೆ ; ಸರ್ವರಲ್ಲಿಯೂ ಇದೆ. ಅದು ದಕ್ಕಬೇಕೆಂಬುದೇ ಶರಣರ ಆಶಯವಾಗಿತ್ತು.

ಶ್ರೀ ವಿದ್ಯಾನಂದ ಶರಣರಿಗೆ ಹಸಿವಿತ್ತು. ಡಬ್ಬೇರು ಮಡುವಿನಿಂದ ಲಿಂಗಸೂಗೂರಿಗೆ ನಡೆದು ರಾಯಚೂರು-ಗುಲ್ಬರ್ಗಾಕ್ಕೆ ಬಸ್ ರೈಲು ಹಿಡಿದು ಅಲ್ಲಿಂದು 120 ಕಿ.ಮೀ. ದೂರದ ಮುಚಳಂಬಕ್ಕೆ ಕಾಲ್ನಡಿಗೆಯಿಂದ ಪ್ರಯಾಣ. ಅರಿವಿನ ಸುಖದ ಬೆನ್ನು ಹತ್ತಿದವರಿಗೆ ಇದೆಲ್ಲವೂ ಗೌಣ. ಆ ಸುಖದ ರುಚಿಯೇ ಹಾಗಿರುತ್ತದೆ. ಅದಕ್ಕಾಗಿಯೇ ಬುದ್ಧ ಮಹಾವೀರ ನಿಜಗುಣರು ಅರಸೊತ್ತಿಗೆಯನ್ನು ಕಡೆಗಣಿಸಿ ಅರಿವಿನ ಸುಖ ಅನುಭವಿಸಿದರು. ಸಕಲರೂ ಈ ಸುಖ ಅನುಭವಿಸಲು ಸರಳ ಸೂತ್ರ ರಚಿಸಿದರು.

ಶ್ರೀ ನಾಗಭೂಷಣ ಶಿವಯೋಗಿಗಳು ಆಗರ್ಭ ಶ್ರೀಮಂತರು. ಬಾಲ್ಯದಲ್ಲಿಯೇ ಮದುವೆಯಾಗಿತ್ತು.ನಡೆಯಲು ತವರಿನವರು ಗಂಡನ ಮನೆಗೆ ಕರೆತಂದರು. ಮನೆಯಲ್ಲಿದ್ದ ಒಡವೆಯೆಲ್ಲ ಹಾಕಲು ಕೊಟ್ಟರು. ಈ ಒಡವೆಯೆಲ್ಲಾ ಅವರಿಗೆ ಸಲ್ಲಬೇಕು. ಯೋಗ್ಯ ವರನಿಗೆ ಕೊಟ್ಟು ಮದುವೆ ಮಾಡಿ ಎಂದು ಪತ್ರ ಬರೆದು ಹೊರ ನಡೆದರು.

ತಟ್ಟೆಯಲ್ಲಿದ್ದ ಊಟ ಶಿವಯೋಗಿಗಳಿಗೆ ರುಚಿಸಲಿಲ್ಲ. ಹನ್ನೆರಡು ವರ್ಷಗಳ ಪರ್ಯಂತ ಅರಿವಿನ ಊಟಕ್ಕಾಗಿ ಹುಡುಕಿದರು. ಹುಬ್ಬಳ್ಳಿಯ ಸಿದ್ಧಾರೂಢರು ಉಣಬಡಿಸಿದರು. ಅರಿವಿನ ಊಟ ತಾಯಿಯ ಎದೆಹಾಲಿಗಿಂತಲೂ ರುಚಿಕರ.

ಕಲ್ಯಾಣದ ಬಸವಣ್ಣನ ವಿಶ್ವವಿದ್ಯಾಲಯದಲ್ಲಿ 1 ಲಕ್ಷ 96 ಸಾವಿರ ಜನ ಈ ದಾಸೋಹದ ರುಚಿಯ ಸವಿದರು. ಆದರೆ ಉಂಡದ್ದು 770 ಜನ ಮಾತ್ರ. ಅರಿವನೇ ಉಂಡರು ಅರಿವನೇ ತೇಗಿದರು.

254 ಜನ ಅರಿವಿನ ಶಿಕ್ಷಣದಲ್ಲಿ ತಮ್ಮನ್ನು ಅನವರತ ತೊಡಗಿಸಿಕೊಂಡಾಗ ಒಬ್ಬರಿಗೆ ಮಾತ್ರ ಜ್ಞಾನ ಲಭ್ಯವಾದದ್ದು ಕಲ್ಯಾಣದಲ್ಲಿ ಕಂಡುಬರುತ್ತದೆ. ಇದು ಜಗತ್ಪ್ರಸಿದ್ಧ. ಕೋಟಿಗೊಬ್ಬ ಶರಣ ಲಕ್ಷಕ್ಕೊಬ್ಬ ಭಕ್ತ ಎಂಬುದನ್ನು ತಮ್ಮ ಸರಳ ಮತ್ತು ನಿರಂತರ ಶಿಕ್ಷಣದಿಂದ ಸುಳ್ಳಾಗಿಸಿದರು.

ಅರಿವಿನ ಶಿಕ್ಷಣ ತನ್ನದೇ ಆದರೂ ಅದೆಷ್ಟು ಜಟಿಲವೆಂದು ಭಾಸವಾಗದೇ ಇರದು.

ತಿಳಿದರೆ ಅದೆಷ್ಟು ಸರಳವೆಂದೂ ಭಾಸವಾಗದೆ ಇರದು. ಆದರೆ ತಿಳಿಯುವ ಹಸಿವಾಗಬೇಕು; ಉತ್ಕಟೇಚ್ಛೆಯಾಗಬೇಕು. ಮಹಾವೀರ ಬುದ್ಧರಂತೆ ಮೋಳಿಗೆ ಮಾರಯ್ಯ, ಮರುಳ ಶಂಕರರಂತೆ; ನಾಗಭೂಷಣ ಶಿವಯೋಗಿ ವಿದ್ಯಾನಂದ ಶರಣರಂತೆ.

ನಲವತ್ತೈದು ವರ್ಷಗಳ ಹಿಂದೆ ನಾಗಭೂಷಣರು ವಿದ್ಯಾನಂದ ಶರಣರನ್ನು ಕರೆದು ಅರಿವಿನ ದಾಸೋಹ ಕಾಯಕದಲ್ಲಿ 12 ವರ್ಷಗಳಾದರೂ ಸೇವೆ ಮಾಡಬೇಕು ಎಂದು ಕೇಳಿಕೊಂಡರು. ವಿದ್ಯಾನಂದ ಶರಣರು ಹಿಂದೆ ನೋಡಲಿಲ್ಲ. ನಾಲ್ಕು ದಶಕಗಳ ಪರ್ಯಂತ ಈ ನಾಡಿನಾದ್ಯಂತ ಏಕಾಂಗಿಯಾಗಿ ಮನೆಮನೆಗೆ ಸಂಚರಿಸಿದರು. ಆಶ್ರಮ ಮಠಗಳನ್ನು ಕಟ್ಟಲಿಲ್ಲ. ಘಟ ಕಟ್ಟಿದರು. ಅರುಹೃಯದಕ್ಕೆ ಅರಿವಿನ ಸೂತ್ರ ಹೇಳಿಕೊಟ್ಟರು. ಅರಿವಿನಲ್ಲಿಯೇ ನಿಂತು ಸುಖಿಗಳಾಗುವ ಬಗೆ ವಿವರಿಸಿದರು.

ಸಾವಿರಾರು ಶಿಷ್ಯರನ್ನು ಮಾಡಿದರು. ಶಿಷ್ಯನ ಶಿಷ್ಯತ್ವ ಗುರುವಿನ ಗುರುತನ ಕೆಡೆಸಿ ಅರಿವಿನ ಆನಂದದಲ್ಲಿ ಉಳಿಯುವ ಬಗೆಯನ್ನು ಕೈ ಮುಟ್ಟಿ ತೋರಿಸಿದರು. ಅವರೆಲ್ಲ ಸಿದ್ಧರಾದರೆ ಈ ನಾಡಿನಲ್ಲಿ ಬೆಳಕೇ ಬೆಳಕು.

ನಾಗಭೂಷಣ ಶಿವಯೋಗಿಗಳು ಭಗವದ್ಗೀತೆ ಮೂಲಕ ಹೇಳಿದರೆ ವಿದ್ಯಾನಂದ ಶರಣರು ಶರಣರ ವಚನಗಳನ್ನು ತೆಗೆದುಕೊಂಡರು. ಒಂದೊಂದು ವಚನವೂ ಭಗವದ್ಗೀತೆ. ಅರಿವಿಗೆ ಹೋಗುವ ಸರಳ ಮಾರ್ಗ. ಒಂದು ವಚನಕ್ಕೆ ಮತ್ತೊಂದು ವಚನ ದೃಷ್ಠಾಂತ ಕೊಟ್ಟು ಮಾನವ ಕುಲದ ಮೇಲೆ ಶರಣರಿಗಿದ್ದ ಕಳಕಳಿಯನ್ನು ವಿವರಿಸಿದರು.

ಶರಣರ ವಚನಗಳನ್ನು ಅರಿವಿಗೆ ಹೋಗುವ ಪ್ರಾಯೋಗಿಕ ಸೂತ್ರಗಳ ರೂಪದಲ್ಲಿ ಹೊಸ ಆಯಾಮ ಕಂಡುಹಿಡಿದ ಶ್ರೇಯಸ್ಸು ಪರಮ ಪೂಜ್ಯ ಸದ್ಗುರುಗಳಾದ ಶ್ರೀ ವಿದ್ಯಾನಂದ ಶರಣರಿಗೆ ಸಲ್ಲಬೇಕು. ಹಗಲು ವಚನಗಳ ಮೂಲಕ ಮೈಮುಟ್ಟಿ ಪ್ರಾಯೋಗಿಕವಾಗಿ ಅರಿವಿಗೆ ಹೋಗುವ ವಿಧಾನವನ್ನು ಶಿಷ್ಯರಿಗೆ ಹೇಳಿದರೆ, ರಾತ್ರಿ ಶರಣರ ವಚನಗಳಿಗೆ ವ್ಯಾಖ್ಯಾನ ಬರೆಯುತ್ತಿದ್ದರು. ಹಾಗೆ ಬರೆದ ವ್ಯಾಖ್ಯಾನಗಳೇ ಸುಮಾರು ಐದು ಸಾವಿರ ಪುಟಗಳಷ್ಟಾಗಬಹುದು.

ಅರಿವಿಗೆ ಹೋಗುವ ಹೊಸ ಸುಳುಹು ಹೊಳೆದರೆ ಪಕ್ಕದಲ್ಲಿ ಮಲಗಿದವರನ್ನು ಮೈದಡವಿ ನೋಡು ಶರಣರು ಹೇಗೆ ಹೇಳಿದ್ದಾರೆ ಎಂದು ಹೇಳುವ ಮಾತೃ ಹೃದಯ ಅವರದು.

ಹೀಗೆ ಮನೆ ಮನೆಗೆ ಹೋಗಿ ಹೃದಯದ ಜೊತೆಗೆ ಮಾತನಾಡಿಸುವ ಅವರ ಕಾಯಕದಲ್ಲಿ ಸಿಕ್ಕವನೇ ನಾನು. ಶರಣರು ನನ್ನೊಂದಿಗೂ, ದೇವಾನಂದರೊಂದಿಗೂ ಐಕ್ಯದ ಕೊನೆಯ ದಿನಗಳವರೆಗೂ ಕಳೆದರು(2006 ಜುಲೈ 2). ಅವರೊಂದಿಗೆ ಉಂಡ ಅರಿವಿನ ಊಟವದು ಅಮೃತ. ಅದು ನಮ್ಮ ಸೌಭಾಗ್ಯ.

ಪರಮಪೂಜ್ಯ ಗುರುಗಳಂತೆ ಪೂರ್ಣ ಪ್ರಮಾಣದಲ್ಲಿ ಅರಿವಿನ ಕಾಯಕ ಮುಂದುವರಿಸಿಕೊಂಡು ಹೋಗುತ್ತಿರುವ ಶ್ರೀ ದೇವಾನಂದ ಶರಣರದು ಯಾದಗಿರಿ

ಜಿಲ್ಲೆಯ ಸುರಪುರ ತಾಲೂಕಿನ ಬೆನಕನಹಳ್ಳಿ ಗ್ರಾಮ. ಅದು ಪೂಜ್ಯ ಗುರುಗಳ ಐಕ್ಯಸ್ಥಾನ. ಶರಣರ ಕಾಯಕ, ಅರಿವಿನ ಕಾಯಕ, ಸರಕಾರಕ್ಕೂ, ಸಮಾಜಕ್ಕೂ, ಶ್ರೀಮಂತನಿಗೂ ನೀಗದ ಕಾಯಕ. ಜ್ಞಾನಕ್ಕೆ ಶರಣು ಹೋಗುವ ಕಾಯಕ. ಅರಿವಿಗೆ ದಾಸನಾಗುವ ಕಾಯಕ, ಜ್ಞಾನದ ಹಸಿವಾದವನಿಗೆ ದೊರೆಯುವ ಪ್ರಸಾದ. ಅದು ತನ್ನ ಅನ್ನ ತನಗೆ ಬಡಿಸಿ ಹೊರನಿಲ್ಲುವ ಗುರುವಿನ ಪ್ರಸಾದದ ಕಾಯಕ. ಈ ಕಾಯಕದಲ್ಲಿ ದೇವಾನಂದ ಶರಣರು ಸದಾನಿರತ.

ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್‌ರಾದ ದೇವೇಂದ್ರಪ್ಪನವರು ಪಕ್ಕದ ಹಳ್ಳಿಯ ದೇವತಗಲ್‌ನವರು. ಪೂಜ್ಯ ಗುರುಗಳು ಆ ಹಳ್ಳಿಗೆ ಹೋದಾಗ ದೊರೆತವರು. ಅಂದಿನಿಂದ ಕೆಲಸಕ್ಕೆ ಗುಡ್‌ಬೈ ಹೇಳಿ ಅರಿವಿನ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡವರು.

ಶರಣರ ದಾಸರ ವಿಷಯದಲ್ಲಿ ಡಾಕ್ಟರೇಟ್ ಮಾಡಿದವರು, ಮಾಡುವವರು ಅವರ ವಿಷಯದಲ್ಲಿ ಉಪನ್ಯಾಸ ನೀಡುವವರು, ತಮ್ಮನ್ನು ತಾವು ಕಂಡುಕೊಳ್ಳುವ ವಿಚಾರದಲ್ಲಿ ತೊಡಗಿದವರು, ದೇವಾನಂದರನ್ನು ಭೇಟಿಯಾಗಲೇ ಬೇಕು. ಸರಕಾರ, ವಿಶ್ವವಿದ್ಯಾಲಯಗಳು ರಚಿಸುವ ಅಧ್ಯಯನ ಪೀಠಗಳು ಇತ್ತ ಮುಖ ಮಾಡಲೇ ಬೇಕಾಗಿದೆ.

* * * *

ಶರಣರು ತನು ಮನ ಘನ ಕುರಿತು ಕಾರ್ಯ ನಿರ್ವಹಿಸಿದ್ದಾರೆ. ಜ್ಞಾನಕ್ಕೆ ಹೋಗುವ ಸರಳ ಮಾರ್ಗವನ್ನು ಸೂತ್ರ ರೂಪದಲ್ಲಿ ಬಂಧಿಸಿದ್ದಾರೆ. ಅವೇ ಶಿವಶರಣರ ವಚನಗಳು. ವಚನಗಳಲ್ಲಿ ಸಾಮಾಜಿಕ ಸ್ಥಿತಿಗತಿ, ಜಾತ್ಯಾತೀತತೆ, ಆರ್ಥಿಕ ಸಮಾನತೆ, ಕಾಯಕ ಮುಂತಾದ ವಿಷಯಗಳನ್ನು ಆಧುನಿಕರು ಕಂಡುಕೊಂಡರೂ ವಚನಗಳು ಅವೆಲ್ಲವುಗಳಿಂದಲೂ ಅತ್ತತ್ತ.

ಶರಣರು ಅನುಭವಿಸಿ ಸುಖಪಟ್ಟ ಸಿಹಿಫಲದ ಸೂತ್ರಗಳೆ ವಚನಗಳು. ಆ ಸೂತ್ರವೇ ಎಲ್ಲ ಅಲ್ಲ. ಅದರ ಹಿಂದೆ ಸೂತ್ರದ ತಿರುಳಿದೆ. ಗುರುವಿನ ಮುಖಾಂತರ ಸೂತ್ರದ ಸುಳುಹು ತಿಳಿದುಕೊಂಡಾಗ ಮಾತ್ರ ತನುವಿನಲ್ಲಿ ಸಂಗ್ರಹವಾದ ಕಹಿ ಕಳಚಿ ಸಿಹಿ ಫಲ ಉದಯವಾಗುತ್ತದೆ. ಆಗ ತನು ನುಡಿದದ್ದೆಲ್ಲ ವಚನ. ಓದಿದ ವಚನವೆಲ್ಲಾ ಪಚನ. ಶರಣರ ಆಶಯ ಅರ್ಥವಾಗುತ್ತ ಹೋಗುತ್ತದೆ. ಅವರ ಆಶಯದಂತೆ ಓದಿದ ಪ್ರತಿ ತನು ಸಿದ್ಧವಾಗುತ್ತದೆ. ಆದರೆ ಇವೆಲ್ಲದಕ್ಕೂ ಸಮರ್ಥ ಗುರುವಿನ ಅವಶ್ಯಕತೆಯಿದೆ.

ಹಸಿವಾದರೆ ಮಾತ್ರ ಊಟ ರುಚಿಸುತ್ತದೆ. ಪ್ರತಿ ಊಟಕ್ಕೂ ಹಸಿವು ಬೇಕೇ ಬೇಕು. ಹಾಗೆಯೇ ಮನಕ್ಕೆ ಜ್ಞಾನದ ಬಯಕೆಯಾಗಬೇಕು, ಹಸಿವಾಗಬೇಕು. ಸಮರ್ಥ ಗುರುವಿನ ಹುಡುಕಾಟದಲ್ಲಿ ತೊಡಗಿದ್ದರೆ, ತನುವಿನ ಯೋಗವಿದ್ದರೆ ಆ ತನುವನ್ನು ಕ್ಷಣಾರ್ಧದಲ್ಲಿ ತನ್ನಂತೆ ಮಾಡಿಕೊಳ್ಳುವ ಗುರು ತಪ್ಪದೇ ದೊರಕುತ್ತಾನೆ.

ಸದಾ ಗುರುವಾಗಿರುವ ಗುರು ಗುರುವಲ್ಲ. ಸದಾ ಶಿಷ್ಯನಾಗಿರುವ ಶಿಷ್ಯ ಶಿಷ್ಯನಲ್ಲ. ಇವರು ಪರಂಪರೆಯ ಗುರು ಶಿಷ್ಯರು. ಶಿಷ್ಯನಲ್ಲಿ ಗುರುವಿನ ಸುಳುಹು ತೋರಿ ಹಿಂದಕ್ಕೆ ಸರಿಯುವ ಗುರು ಅವಶ್ಯ. ಉರಿಯುವ ಪ್ರಣತಿ ಬತ್ತಿಗೆ ಚುಂಬಿಸುವ ಶಿಕ್ಷಣ ಸಾಕು.

ಎರಡೂ ಉರಿಯುತ್ತವೆ. ಚುಂಬಿಸಿದ್ದು ಗುರುವಲ್ಲ. ಬೆಳಗಿದ್ದು ಶಿಷ್ಯನಲ್ಲ.

ಶರಣರು ತನುವಿನಲ್ಲಿರುವ ಅಕ್ಷರೋತ್ತಮನನ್ನು ಗುರುತಿಸಿದ್ದಾರೆ. ಜ್ಞಾನಿಯಾಗಲು ಅಕ್ಷರದ ಅವಶ್ಯವಿಲ್ಲ. ತನುವು ಹಾಗೂ ತನುವಿನಲ್ಲಿರುವ ಅಗಾಧವಾದ ಅರಿವು ನೋಡುವ ಸುಳುಹಿನ ಅವಶ್ಯಕತೆ ಮಾತ್ರ ಇದೆ. ಮನ ತನುವಿನಲ್ಲಿರುವ ಜ್ಞಾನದ ಸುಳುಹಿನತ್ತ ವಾಲದೆ ಹೊರಗಿನ ವಸ್ತು ಸಂಗ್ರಹದಲ್ಲಿ ನಿರತವಾಗಿ ರೋಗದ ತನುವನ್ನಾಗಿಸಿದೆ. ಬಡವ ಶ್ರೀಮಂತ, ಉತ್ತಮ ಅಧಮನನ್ನಾಗಿ ಮಾಡಲು ಕಾರಣವಾಗಿ ಹೊರ ನೋಡುವ ಮನ ಒಳ ನೋಡಿದರೆ ಸಾಕು ನಷ್ಟವಾಗುತ್ತದೆ. ಉಳಿದದ್ದು ಘನ ತನು. ಜ್ಞಾನ ತನು ! ಹೊರ ನೋಡುವ ಮನ ತನುವಿನೊಳಗಣ ಜ್ಞಾನಕ್ಕೆ ದಾಸನಾಗಿ ಹೊರ ಬರುವುದೇ ಇಲ್ಲ. ಜ್ಞಾನದಿಂದ ನೋಡಲು ವಸ್ತುಗಳು ತನುವನ್ನು ಕೈ ಮಾಡಿ ಕರೆಯಲೇ ಇಲ್ಲ. ತನುವಿನ ಮನ ಜ್ಞಾನಕ್ಕೆ ಶರಣು ಹೋಯಿತು. ಶರಣ ತನುವಾಯಿತು. ಮನ ಜ್ಞಾನಕ್ಕೆ ದಾಸನಾಯಿತು. ದಾಸ ತನುವಾಯಿತು ! ಇದು ಶರಣರ ಸರಳ ಹಾಗೂ ಸಹಜ ಶಿಕ್ಷಣ.

ತನುವಿನಲ್ಲಿ ಕಲಿಯುವಂಥದ್ದು ಏನೂ ಇಲ್ಲ. ಸಾಧ್ಯವಾದರೆ ಮಾಹಿತಿ ಸಂಗ್ರಹಿಸಬಹುದು. ಮಾಹಿತಿ ಶಿಕ್ಷಣವಲ್ಲ. ಜ್ಞಾನವೂ ಅಲ್ಲ. ತನುವಿನಲ್ಲಿ ಜ್ಞಾನ ಸಿದ್ಧ ವಸ್ತುವಿನಂತಿದೆ. ತನುವನ್ನು ಸರಿಯಾಗಿ ನೋಡಬೇಕಷ್ಟೆ.

ಕಣ್ಣಿಗೆ ನೋಡುವ ಜ್ಞಾನವನ್ನು ಯಾರೂ ಕಲಿಸಲು ಸಾಧ್ಯವಿಲ್ಲ. ನೋಡುವುದೇ ಅದರ ಧರ್ಮ ! ಆದರೆ ನೋಡುವುದನ್ನು ನೋಡಲು ಅರಿಯದೆ ಕೆಟ್ಟಿದೆ. ನೋಡುವ ವಸ್ತುವನ್ನು ನೋಡಬೇಕಷ್ಟೆ. ವಸ್ತುವನ್ನು ನೋಡುವ ಸುಳುಹು ಬೇಕಷ್ಟೆ. ಸುಳುಹು ಸಿಕ್ಕರೆ ಸಾಕು ನೋಡುವ ವಸ್ತುವನ್ನು ಕಣ್ಣು ಬೇಡುವುದೇ ಇಲ್ಲ. ಕಣ್ಣು ಬೇಡದಿದ್ದರೆ ತನುವು ಚಂಚಲವಾಗುವುದಿಲ್ಲ. ಚಂಚಲವಾಗದ ತನು ಸದಾ ಸುಖಿ.

ಹೀಗೆ ಕೇಳುವ ಕಿವಿಗೂ ಕಲಿಕೆ ಬೇಕಿಲ್ಲ. ಸ್ಪರ್ಶಿಸುವ ಚರ್ಮಕ್ಕೂ, ವಾಸಿಸುವ ಮೂಗಿಗೂ, ರುಚಿಸುವ ನಾಲಿಗೆಗೂ ಕಲಿಕೆ ಬೇಕಿಲ್ಲ. ತನ್ನಲ್ಲಿರುವ ಅಪಾರವಾದ ಜ್ಞಾನ ನೋಡುವ, ಬಳಕೆ ಮಾಡುವ ಸುಳುಹು ಬೇಕಷ್ಟೆ. ಆ ಜ್ಞಾನ ಪಡೆಯಬೇಕೆಂಬ ಹಸುವು ಬೇಕಷ್ಟೆ. ಹಸಿವಾದರೆ ಸಾಕು ಹುಡುಕುವ ಉತ್ಕಟೇಚ್ಛೆ ತಾನೇ ಆಗುವುದು. ಹಸಿವಾಗದಿದ್ದರೆ ಪಂಡಿತನಾಗುವ ಬಯಕೆಯಾಗುವುದು. ಕಲಿಯುವ ಬಯಕೆ, ಪುಸ್ತಕ ಓದುವ ಬಯಕೆ, ಉಪನ್ಯಾಸ ಕೇಳುವ ಬಯಕೆ, ಸಿಕ್ಕಿದ್ದೆಲ್ಲ ಓದಿ ಧರ್ಮ ಪಂಥ ಪಂಗಡದಲ್ಲಿ ಸೇರಿ ಅನುಯಾಯಿ ಯಾಗುವ ಹಂಬಲ. ಮತ್ತೊಂದನ್ನು ಹಳಿಯುವ ಅಲ್ಲಗಳೆಯುವ ಕಾಯಕದಲ್ಲಿ ತನು ತೊಡಗುತ್ತದೆ. ಅಜ್ಞಾನ ಅಧಿಕವಾಗುತ್ತದೆ. ಜ್ಞಾನ ತನುವಿನಲ್ಲಿದ್ದರೂ ಅದು ಬಹುದೂರವಾಗುತ್ತದೆ.

ತನುವಿನಿಂದ ಬಂದ ಪುಸ್ತಕ ತನುವೇ ಓದಿ ಸಂಗ್ರಹಿಸುತ್ತದೆ. ಅದೇ ಪದಗಳನ್ನು ಡೆಲಿವರಿ ಮಾಡುತ್ತದೆ. ಓದಿದ ಪುಸ್ತಕಗಳನ್ನೆಲ್ಲ ಉದಾಹರಿಸಿ ಪಂಡಿತನಾಗುತ್ತದೆ. ತನುವಿನಲ್ಲಿದ್ದ ಮೀಸಲು ಜ್ಞಾನ ಮಾತ್ರ ಬಳಕೆಯಾಗುವುದೇ ಇಲ್ಲ.

ತನುವಿನ ಜ್ಞಾನ ಬಳಕೆಯಾಗದಿದ್ದಕ್ಕಾಗಿ ಎಲ್ಲೆಡೆಯೂ ಭ್ರಷ್ಟಾಚಾರ, ಕಳುವು, ದರೋಡೆ, ಕೊಲೆ, ಸುಲಿಗೆ, ಅತ್ಯಾಚಾರ, ಗುಂಡಾಗಿರಿಯಲ್ಲಿ ತನು ಭಾಗಿಯಾಗಿ ತನುವಿನಿಂದಲೇ ತನು ಹಣೆಪಟ್ಟಿ ಹಚ್ಚಿಕೊಳ್ಳುವಂತಾಗಿದೆ.

ಅಲ್ಲದ ಕೆಲಸದಲ್ಲಿ ಭಾಗಿಯಾದ ತನುವನ್ನು ಹೌದಾದ ಕೆಲಸದಲ್ಲಿ ಭಾಗಿಯಾದ ತನು ನಿಂದೆ ಮಾಡುತ್ತದೆ. ತನುಗಳು ಒಂದೇ ಆದರೂ ಕೆಲಸಗಳು ಬೇರೆ ಬೇರೆ. ಒಂದು ತನುವಿನದು ನಿಂದಿಸಿಕೊಳ್ಳುವ ಕಾಯಕ, ಮತ್ತೊಂದು ತನುವಿನದು ಹೊಗಳಿಸಿಕೊಳ್ಳುವ ಕಾಯಕ. ಇವೆರಡೂ ಅರ್ಥವಿಲ್ಲದ್ದು ಎಂದು ಕಂಡುಕೊಳ್ಳುವುದೇ ಜಟಿಲ.

ಮನ ತನುವಿನೊಂದಿಗೆ ಹಾದರ ಮಾಡುತ್ತ ಉತ್ತಮ ಕೆಲಸದ ಸೋಗು ಹಾಕುವುದು. ಅದೆಂಥ ನೀಚತನವೆಂದು ತನುವಿಗೆ ಅರ್ಥವಾಗದೆ ಇರದು. ಮನದ ಹಾದರಕ್ಕೆ ದಿಟ್ಟತನದಿಂದ ಸ್ಪಂದಿಸುವ ತನುವಿನ ಗುಣ ಉತ್ತಮವೋ ? ಮನದಲ್ಲಿ ಹಾದರ ತುಂಬಿಕೊಂಡು ಸೋಗಿನ ಕೆಲಸದಲ್ಲಿ ನಿರತವಾದ ತನು ಉತ್ತಮವೋ ?

ಕೊಲೆ ಸುಲಿಗೆ ದರೋಡೆ ಹಲ್ಲೆ, ಅತ್ಯಾಚಾರ ಹಾದರ, ಕಳುವು ಭ್ರಷ್ಟಾಚಾರದಲ್ಲಿ ನಿರತರಾದ ವರದೊಂದು ವರ್ಗ, ಇದ್ಯಾವುದರಲ್ಲಿ ಸಿಕ್ಕಿ ಹಾಕಿಕೊಳ್ಳದೆ ಮನದಲ್ಲೇ ಸುಖಿಸಿ ಹಾದರ ಮಾಡುತ್ತ ಉತ್ತಮರೆನಿಸಿಕೊಳ್ಳುವುದು ಮತ್ತೊಂದು ವರ್ಗ. ಒಂದು ವರ್ಗಕ್ಕೆ ಹಣೆಪಟ್ಟಿಯಿದೆ. ಮತ್ತೊಂದು ವರ್ಗಕ್ಕೆ ಹಣೆಪಟ್ಟಿಯಿಲ್ಲ ಅಷ್ಟೆ ! ಈ ಎರಡೂ ವರ್ಗಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಇವೆರಡಕ್ಕೂ ಅರ್ಥವಿಲ್ಲ.

ಬುದ್ಧ ಶಿಷ್ಯ ವೇಷಗಳ ತನುಗಳನ್ನು ಧಿಕ್ಕರಿಸಿ ಅಂಗುಲಿಮಾಲನ ಹತ್ತಿರ ಹೋದ. ತನು ಅಂಗುಲಿ ಮಾಲನ ವೇಷ ಹಾಕಿ ಆ ವೇಷದೊಂದಿಗೆ ನೈಜವಾಗಿತ್ತು. ಬುದ್ಧನ (ಜ್ಞಾನ) ಒಂದಂಶವೂ ತನುವಿನಲ್ಲಿ ಬಳಕೆಯಾಗಿರಲಿಲ್ಲ. ಬುದ್ಧ ಅಂಗುಲಿಮಾಲ ನನ್ನು ಮಾತನಾಡಿಸಲಿಲ್ಲ. ಬುದ್ಧ ಬುದ್ಧನೊಂದಿಗೆ ಮಾತನಾಡಿದ ಪಾತ್ರಧಾರಿ ಅಂಗುಲಿಮಾಲ ಬುದ್ಧನೊಂದಿಗೆ ಬೆರೆತು ಬುದ್ಧನೆ ಆದ ಮತ್ತೆ ಅಂಗುಲಿಮಾಲನಾಗಲೇ ಇಲ್ಲ.

ಶಿಕ್ಷಣದಲ್ಲಿ ಎರಡು ವಿಧ ! ಒಂದು ಬ್ರಹ್ಮ ಶಿಕ್ಷಣ. ಮತ್ತೊಂದು ಭ್ರಮೆ ಶಿಕ್ಷಣ. ಭ್ರಮೆ ಶಿಕ್ಷಣ ಪ್ರಪಂಚದಾದ್ಯಂತ ಬಳಕೆಯಲ್ಲಿದೆ. ಬ್ರಹ್ಮ ಶಿಕ್ಷಣ ಭಾರತದಲ್ಲಿ ಮಾತ್ರ ಅಲ್ಲಲ್ಲಿ ಬಳಕೆಯಲ್ಲಿದೆ. ಬ್ರಹ್ಮ ಶಿಕ್ಷಣ ಪಡೆದವರನ್ನು ಸಾಧು, ಸಂತ, ದಾಸ, ಶರಣ, ಋಷಿ ಮುಂತಾದ ಹೆಸರಲ್ಲಿ ಕರೆದು ಅವರನ್ನು ಸಮಾಜ ಬೇರೆ ರೀತಿಯಲ್ಲಿಯೇ ನೋಡಲ್ಪಟ್ಟಿದೆ. ವೇಷಭೂಷಣಗಳಿಂದ ಕೂಡಿದ ಸಾಧು ಸಂತರೇ ಬೇರೆ, ಉಳಿದ ಜನ ಬೇರೆ ಎಂದು ಗುರುತಿಸಿ ಪೂಜಿಸಲ್ಪಟ್ಟಿತ್ತು. ಅವರ ದರ್ಶನಕ್ಕೆ ಮಾತ್ರ ಸಮೀಪ ಸುಳಿದರು. ಅವರ ಮಾತನ್ನು ಜನ ಕೇಳಲೇ ಇಲ್ಲ. ಪವಾಡಗಳನ್ನು ಸೃಷ್ಟಿಸಿ ಅವರನ್ನು ಪವಾಡ ಪುರುಷರನ್ನಾಗಿ ಮಾಡಿ ಬ್ರಹ್ಮ ಶಿಕ್ಷಣದಿಂದ ಬಹಳ ದೂರ ಉಳಿಯಲು ಕಾರಣವಾಯಿತು. ಮಠ, ಮಂದಿರ, ಸಮಾಧಿ ನಿರ್ಮಿಸಿ ಮೌಢ್ಯದಲ್ಲಿ ಉಳಿಯಲು ತೀರ್ಮಾನಿಸಿತು. ತತ್ಪರಿಣಾಮವಾಗಿ ಭ್ರಮಾ ಶಿಕ್ಷಣ ಸಾಮಾನ್ಯ ಜನಕ್ಕೆ ಮೀಸಲಾಯಿತು. ಬರುಬರುತ್ತಾ ಬ್ರಹ್ಮ ಶಿಕ್ಷಣ ನೆಪದಲ್ಲಿ

ಕಾರ್ಪೊರೇಟ್ ಸಂಸ್ಥೆಗಳು ಹುಟ್ಟಿಕೊಂಡವು. ವ್ಯವಹಾರ ಪ್ರಾರಂಭವಾಯಿತು. ವೇಷ ಭೂಟಾಟಿಕೆ ಮಾತ್ರ ಕಂಡು ಬ್ರಹ್ಮ ಶಿಕ್ಷಣ ಹಿಂದಾಯಿತು.

ಬ್ರಹ್ಮ ಶಿಕ್ಷಣದ ಹೆಸರಿನಲ್ಲಿ ಮಠ, ಪೀಠ, ಪ್ರಾರ್ಥನಾ ಮಂದಿರಗಳು ಹುಟ್ಟಿಕೊಂಡವು. ಜಾತಿ ಮತ ಪಂಥ ಪಂಗಡಗಳು ಹುಟ್ಟಿಕೊಂಡವು. ಒಬ್ಬೊಬ್ಬ ಗುರುವಿಗೆ ಅನುಯಾಯಿಗಳ ದೊಡ್ಡ ಗುಂಪೇ ನಿರ್ಮಾಣವಾಯಿತು. ಜ್ಞಾನದ ನೆಪದಲ್ಲಿ ಅಜ್ಞಾನದ ದಂಡಿನದೇ ಕಾರುಬಾರು! ರಾಜಕಾರಣಿಗಳೂ ಪ್ರಜಾಪ್ರತಿನಿಧಿಗಳೂ ಬೆನ್ನು ಹತ್ತಿದರು. ಮೌಢ್ಯ ನಿಲ್ಲಿಸಲು ಸಾಧ್ಯವಿಲ್ಲವೇನೋ ಎನ್ನುವ ಹಂತಕ್ಕೆ ತಲುಪಿಯಾಗಿದೆ.

ವಿಶ್ವ ವಿದ್ಯಾಲಯಗಳಲ್ಲಿ ತತ್ವಶಾಸ್ತ್ರದ ಪಾಠ ಮಾಡಿದರೂ ಆಯಾ ತತ್ವಗಳ ಪ್ರತಿಪಾದನೆಯಲ್ಲಿ ಪಾಂಡಿತ್ಯದ ಶಿಕ್ಷಣ ದೊರೆಯುತ್ತಿದೆಯೇ ಹೊರತು, ಜ್ಞಾನವಲ್ಲ. ಜ್ಞಾನ ಸಂಗ್ರಹದಲ್ಲಿ ಸಾಧ್ಯವಾಯಿತೇ ಹೊರತು ತನುವಿನಲ್ಲಿಯೇ ಜ್ಞಾನವಿದೆಯೆಂದು ವಿಶ್ವವಿದ್ಯಾಲಯಗಳು ವೈಜ್ಞಾನಿಕವಾಗಿ ದೃಢಪಡಿಸಿ ಪಾಠ ಮಾಡುತ್ತಿಲ್ಲ.

ಬ್ರಹ್ಮ ಜ್ಞಾನ ಒಂದು ಶಿಕ್ಷಣ. ಅದು ಎಲ್ಲರಿಗೂ ಸಾಧ್ಯವೆಂಬ ನಿಟ್ಟಿನಲ್ಲಿ 12ನೇ ಶತಮಾನದಲ್ಲಿ ಶರಣರು ಸುಮಾರು 25 ವರ್ಷಗಳ ಪರ್ಯಂತ ಕಾರ್ಯನಿರ್ವಹಿಸಿದರು. ಒಂದು ಬೃಹತ್ ವಿಶ್ವ ವಿದ್ಯಾಲಯದ ಮಾದರಿಯಲ್ಲಿ ಕೆಲಸ ಮಾಡಿದರು. ಶರಣರ ಶಿಕ್ಷಣಕ್ಕೆ ಅಕ್ಷರದ ಅಗತ್ಯವಿಲ್ಲ. ಈ ಶಿಕ್ಷಣ ಕೈಗೆಟುಕಿದರೆ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಜಾತಿ ಮತ ಪಂಥ, ಕೊಲೆ, ಹಲ್ಲೆ, ದರೋಡೆ, ಕಳ್ಳತನ, ಹಾದರ ತನುವಿನಲ್ಲಿ ಸುಳಿಯುವುದೇ ಇಲ್ಲ.

ಸರಕಾರ ಶರಣ ಶಿಕ್ಷಣಕ್ಕೆ ಮುಂದಾದಲ್ಲಿ ಏಕರೂಪದ ಜನ ನಾಡಿನಲ್ಲಿ ಬೆಳಗುತ್ತಾರೆ. ಜಾತಿ-ಮತ ಪಂಥ ಭ್ರಷ್ಟಾಚಾರ ಕೊಲೆ ದರೋಡೆ ಸುಲಿಗೆ ಹಾದರ ಅತ್ಯಾಚಾರಗಳಿಲ್ಲದ ಸಮಾಜ ನಿರ್ಮಾಣವಾಗುತ್ತದೆ.

ಶರಣರ ವಚನಗಳಲ್ಲಿ ಸಂಪೂರ್ಣ ಬ್ರಹ್ಮ ಶಿಕ್ಷಣವೇ ಅಡಗಿದೆ. ಆ ನಿಟ್ಟಿನಲ್ಲಿ ತನು ನಿರ್ಧಾರವಾಗಬೇಕು. ಅದಕ್ಕೆ ನುರಿತ ಶಿಕ್ಷಕರ ಅಥವಾ ಶಿಕ್ಷಕರಿಗೆ ಅನುಭಾವಿಗಳಿಂದ ಶಿಬಿರ ಉಪನ್ಯಾಸಗಳ ಮುಖಾಂತರ ತರಬೇತಿಗೊಳಿಸಬಹುದಾಗಿದೆ.

ಬೆಳಕಿನ ಬಳ್ಳಿ ಪುಸ್ತಕದಲ್ಲಿ 16 ಶರಣರ 96 ವಚನಗಳನ್ನು ಬಳಕೆ ಮಾಡಿಕೊಳ್ಳಲಾಗಿದೆ. ಆ ವಚನಗಳಿಗೆ ನನಗೆ ಸಾಧ್ಯವಾದ ಮಟ್ಟಿಗೆ ವೈಜ್ಞಾನಿಕವಾಗಿ ಜ್ಞಾನಕ್ಕೆ ಹೋಗುವ ನಿಟ್ಟಿನಲ್ಲಿ ವ್ಯಾಖ್ಯಾನಿಸಲಾಗಿದೆ. ಪುಸ್ತಕಕ್ಕೆ ಒಗ್ಗುವ ಭಾಷೆ ಬಳಕೆಯಾಗಿಲ್ಲವೆಂದು ನನಗನ್ನಿಸಿದೆ. ಆದರೂ ಇದರಲ್ಲಿ ಜ್ಞಾನಕ್ಕೆ ಹೋಗುವ ಉಪಾಯಗಳಿವೆ. ಅವುಗಳನ್ನು ಬಳಸಿಕೊಂಡು ಮತ್ತಷ್ಟು ವಿಸ್ತಾರ ಮಾಡಿಕೊಳ್ಳಲು ಅನುಕೂಲ ವಾಗಲೆಂಬುದೇ ನನ್ನ ಆಶಯ.

ಬ್ರಹ್ಮ ಶಿಕ್ಷಣವೆಂದರೆ ತನುವಿನ ಸಹಜ ಶಿಕ್ಷಣ. ಪ್ರಾಣಿ ಪಶು ಪಕ್ಷಿ ಗಿಡ ಮರ ಬಳ್ಳಿ ಸಹಜವಾಗಿಯೇ ಇವೆ. ಮನುಷ್ಯನೊಬ್ಬನೇ ಇಲ್ಲದ್ದನ್ನು ತುಂಬಿಕೊಂಡು ಅಸಹಜವಾಗಿದ್ದಾನೆ. ಸಹಜವಾಗಿದ್ದವನನ್ನು ಜನ ಪವಾಡ ಪುರುಷನೆಂದು ಕರೆದು

ಬೇರ್ಪಡಿಸಿದ್ದೆ ಅನಾಹುತಕ್ಕೆ ಕಾರಣ.

ಭಿನ್ನವಾಗಿ ತನುವಿನೊಂದಿಗೆ ತನುವಿನ ಸಹಜ ಜ್ಞಾನದೊಂದಿಗೆ ಸರಳವಾಗಿ ಬದುಕುವ ಈತ ತನ್ನಂತೆ ಇತರರನ್ನು ಸಹಜವಾಗಿ ಕಾಣುತ್ತಾನೆ. ಶಬ್ದಕ್ಕೆ, ಸ್ಪರ್ಶಕ್ಕೆ , ರುಚಿಗೆ, ದೃಶ್ಯಕ್ಕೆ, ವಾಸನೆಗೆ ಮಾರುಹೋಗುವುದಿಲ್ಲ. ವಸ್ತುಗಳ ಮೂಲ ನೋಡಿ ಸತ್ಯ ಕಂಡುಕೊಳ್ಳುತ್ತಾನೆ. ಚಿನ್ನ, ಆಭರಣ ಕರೆನ್ಸಿ ಈತನಿಗೆ ನಗಣ್ಯ. ಸರ್ವರನ್ನು ಪ್ರೀತಿಸುತ್ತಾನೆ. ಗೌರವಿಸುತ್ತಾನೆ, ತನ್ನಂತೆ ಕಾಣುತ್ತಾನೆ, ಶರಣರ ಎಲ್ಲ ವಚನಗಳಲ್ಲಿ ಬ್ರಹ್ಮ ಶಿಕ್ಷಣದ ಸೂತ್ರಗಳೇ ತುಂಬಿವೆ. ಸರಿಯಾದ ಸುಳುಹು ಸಿಕ್ಕರೆ ಸಾಕು ತನುವಿನ ಸಿದ್ಧ ಶಿಕ್ಷಣ ಸುಲಭವಾಗಿ ಕೈಗೆಟುಕುವುದು. ದಯವಿಟ್ಟು ಸಾಧ್ಯವಾಗಿಸಿಕೊಂಡು ಈ ನಿಟ್ಟಿನಲ್ಲಿ ಓದಿ.

ಈ ಪುಸ್ತಕದಲ್ಲಿ ಬಂದದ್ದು ನನ್ನದಲ್ಲ. ಕಾಲಾನುಕಾಲದಿಂದ ಸರಳೀಕೃತವಾದದ್ದು. ಎಲ್ಲರ ಹೃದಯದಲ್ಲಿ ಇದ್ದದ್ದು. ಈ ವಸ್ತುವನ್ನು ಯಾರು ಬೇಕಾದರೂ ಬಳಸಿಕೊಳ್ಳಬಹುದು. ಮಾಧ್ಯಮಗಳಿಗೂ ಅಳವಡಿಸಿಕೊಳ್ಳಬಹುದು. ಅರಿವು ಮಾರುವ ವಸ್ತುವಲ್ಲ, ಕೊಳ್ಳುವ ವಸ್ತುವೂ ಅಲ್ಲ. ಸರಳವಾಗಿ ಹಂಚುವ ವಸ್ತುವೂ ಅಲ್ಲ.

ದಾಸರು ಕಲ್ಲು ಸಕ್ಕರೆ ಕೊಳ್ಳಿರೋ ಎಂದು ಗೆಜ್ಜೆ ಕಟ್ಟಿಕೊಂಡು ಸಂತೆಯಲ್ಲಿ ಕುಣಿದು ಉಚಿತವಾಗಿ ಮಾರಿದರೂ ಯಾರೂ ಕೊಳ್ಳಲಿಲ್ಲ. ತನ್ನಲ್ಲಿದ್ದ ಅರಿವು ತಾನೇ ಹೊಂದಬೇಕು. ತಾನೇ ಸವಿಯಬೇಕೆಂಬ ಬಯಕೆ ತನಗೆ ಆಗಬೇಕು. ಆ ಹಸಿವು ತನುವಿನಲ್ಲಿ ಹುಟ್ಟಬೇಕು. ಆಗ ಮಾತ್ರ ಈ ಕೆಲಸ ಸಾಧ್ಯವಾಗುವುದು.

ಪುಸ್ತಕ ಓದಿ ಸಂತೋಷ ವ್ಯಕ್ತಪಡಿಸಿದ ಶ್ರೀ ದೇವಾನಂದ ಶರಣರಿಗೂ, ಪುಸ್ತಕಕ್ಕೆ ಹೆಸರಿಸಿದ ಶ್ರೀ ಬಿ.ಜಿ.ಹುಲಿಯವರಿಗೂ, ಬೆನ್ನುಡಿ ಬರೆದ ಶ್ರೀ ಈಶ್ವರ ದೈತೋಟ ಅವರಿಗೂ ಕರಡು ಪ್ರತಿ ಓದಿದ ಪ್ರಾಧ್ಯಾಪಕರಾದ ಡಾ.ಬಸವಲಿಂಗ ಸೊಪ್ಪಿಮಠರಿಗೂ, ಡಾ.ಚೆನ್ನಬಸಯ್ಯ ಹಿರೇಮಠ ಅವರಿಗೂ, ಪ್ರತಿ ದಿನ ಅಂಕಣವಾಗಿ ಪ್ರಕಟಿಸಿದ ಸುದ್ದಿಮೂಲ ಪತ್ರಿಕೆಯ ಸಹೋದರರಿಗೂ ಶರಣು.

ಶರಣು ಶರಣಾರ್ಥಿ

ರಾಯಚೂರು — **ಬಸವರಾಜ ಸ್ವಾಮಿ**

ಮೇ 1, 2011

ಪರಿವಿಡಿ

ಕಣ್ಣು ಮತ್ತು ನಿಜಕಣ್ಣು

ನೋಡೂದ ನೋಡಲರಿಯದೆ ಕೆಟ್ಟಿತ್ತೀ ಜಗವೆಲ್ಲ.
ನೋಡೂದ ನೋಡಬಲ್ಲಡೆ ಕೂಡಲಿಲ್ಲ ಅಗಲಲಿಲ್ಲ.
ನೋಟದ ಕೂಟದ ಅಗಲದ ಸುಖವನು
ಗುಹೇಶ್ವರಾ ನಿಮ್ಮ ಶರಣ ಬಲ್ಲ

- ಅಲ್ಲಮ ಪ್ರಭು

ಅಲ್ಲಮಪ್ರಭು ಮಹಾನ್ ವಿಜ್ಞಾನಿ. ಜಗತ್ತಿನ ಕುರುಡು ಕಣ್ಣುಗಳಿಗೆ ಶಸ್ತ್ರ ಚಿಕಿತ್ಸೆಯಿಲ್ಲದೆ ಬೆಳಕು ನೀಡಿದ ಜ್ಞಾನಿ ! ಮೂರು ಸಾಲಿನ ಸೂತ್ರದಲ್ಲಿ ಕಣ್ಣಿನ ಪೊರೆಕಿತ್ತಿ ನಿಜ ಕಣ್ಣು ಗೋಚರಿಸುವ ಶಕ್ತಿ ತುಂಬಿದ ತತ್ವಜ್ಞಾನಿ!.

ಶರಣರ ಸೂತ್ರ ಕಣ್ಣಿಗೆ ಬಳಕೆಯಾಗಬೇಕು. ಬಾಯಿಗೆ ಬಳಕೆಯಾಗಬಾರದು. ಶರಣರ- ದಾಸವರೇಣ್ಯರ, ಕ್ರಿಸ್ತ-ಪೈಗಂಬರರ, ಮಹಾವೀರ-ಬುದ್ಧರ ಸೂತ್ರಗಳೆಲ್ಲವೂ ಬಾಯಿಗೆ ಬಳಕೆಯಾಗಿವೆ. ಕಣ್ಣಿಗೆ ಬಳಕೆಯಾಗಿಲ್ಲ, ಕಣ್ಣಿಗೆ ಬಳಕೆಯಾಗಿದ್ದರೆ ಜಗತ್ತು ಕೆಡುತ್ತಿರಲಿಲ್ಲ, ಯುದ್ಧಗಳೇ ಆಗುತ್ತಿರಲಿಲ್ಲ, ಜಾತಿ, ಮತ, ಪಂಥಗಳೇ ಇರುತ್ತಿರಲಿಲ್ಲ, ಏಕೆಂದರೆ ಕಣ್ಣು ನೋಡುವುದನ್ನೇ ನೋಡುತ್ತಿತ್ತು. ಆನಂದಪಡುತ್ತಿತ್ತು. ದೇಹಕ್ಕೆ-ಬಾಯಿಗೆ-ಕಿವಿಗೆ ಆನಂದದ ಸಂದೇಶ ಸಾರುತ್ತಿತ್ತು.

ವಸ್ತುವಿನಲ್ಲಿಯ ಸತ್ಯ ನೋಡದೆ ಕಣ್ಣು ಕುರುಡಾಗಿದೆ. ವಸ್ತುವಿನಲ್ಲಿರುವ ಸತ್ಯ ನೋಡುವ ಕಣ್ಣು ಕೂಡಾ ಕಣ್ಣಿನಲ್ಲಿಯೇ ಇದೆ. ಅದೇ ನಿಜ ಕಣ್ಣು!

ಹಳದಿ ಬಣ್ಣದಿಂದ ಕೂಡಿದ ಲೋಹಕ್ಕೆ ಕಣ್ಣು ಚಿನ್ನವೆಂದು ಹೆಸರು ಕೊಟ್ಟಿದೆ. ಹೀಗೆಯೆ ತಾಮ್ರ, ಹಿತ್ತಾಳೆ, ಕಂಚು, ಕಬ್ಬಿಣ,ಪ್ಲಾಟಿನಂ ಮುಂತಾದ ಹೆಸರುಗಳು ಸೃಷ್ಟಿಯಾದವು. ಸೃಷ್ಟಿಯಾದ ಹೆಸರುಗಳನ್ನೇ ಮೋಹಿಸಿದ ಕಣ್ಣು ಲೋಹ ಮರೆತು ಕುರುಡಾಯಿತು. ತಾನೇ ಹೆಸರಿಸಲ್ಪಟ್ಟ ಬಣ್ಣ ತನ್ನನ್ನೇ ಮೋಸ ಮಾಡಿದೆ. ಲೋಹಕ್ಕೆ ಬೆಲೆ ತಂದುಕೊಟ್ಟಿದ್ದು ಕಣ್ಣೇ. ಬೆಲೆ ತಂದುಕೊಟ್ಟು ತನ್ನನ್ನು ತಾನು ಮರೆತು ಕುರುಡಾದದ್ದು ಕಣ್ಣೇ. ಶರಣರ ಸೂತ್ರದ ಮೂಲಕ ನಿಜ ಕಣ್ಣು ಕುರುಡು ಕಣ್ಣನ್ನು ನೋಡಬೇಕಲ್ಲ, ಆಗ ಮಾತ್ರ ಕುರುಡುಗಣ್ಣಿಗೆ ಮುಕ್ತಿ.

ಕುರುಡು ಕಣ್ಣಿಗೆ ಲೋಹ ನೋಡುವ ಶಕ್ತಿ ಬರಬೇಕಲ್ಲ, ಕಣ್ಣು ಒಳಕಣ್ಣನ್ನು ನೋಡಿದಾಗ ಮಾತ್ರ ನಿಜ ಕಣ್ಣು ಗೋಚರಿಸುತ್ತದೆ. ಕಣ್ಣು ಇನ್ನೂ ಕುರುಡಾಗ ಹತ್ತಿದೆ. ಹಳದಿ ಬಣ್ಣದಿಂದ ಕೂಡಿದ ಲೋಹಕ್ಕೆ ಚಿನ್ನವೆಂದು ಕರೆದಿದೆ. ಆದರಿಂದ ಮಾಡಲ್ಪಟ್ಟ ಒಂದೊಂದು ವಸ್ತುವನ್ನು ಮೋಹಿಸಿದೆ. ಲೋಹವನ್ನು ಸಂಪೂರ್ಣ ಮರೆತು ಆಭರಣ

ಗಳಿಗೆ ಮಾರುಹೋಗಿದೆ. ಒಂದೊಂದು ಆಭರಣಕ್ಕೂ ಒಂದೊಂದು ಹೆಸರು ಕೊಟ್ಟು ಸಂಭ್ರಮಿಸಿದೆ. ಉಂಗುರ, ಚೈನು, ನೆಕಲಿಸ್, ಜೋರಮಳ, ಕಾಸಿನ ಸರ, ತಾಳಿ, ವಂಕಿ, ನಾಗರ, ಟಿಕಮಣಿ, ಗುಂಡಿನಟೀಕಿ ಒಂದೇ. ಎರಡೇ ನೂರಾರು-ಸಾವಿರಾರು ಹೆಸರು! ರಾಜ ತನ್ನ ತಲೆಗೆ ಧರಿಸಿ ಕಿರೀಟವೆಂದ, ವೀರ ತನ್ನ ರಟ್ಟೆಗೆ ಧರಿಸಿ ವೀರಕಡಗವೆಂದ.

ಲೋಹವನ್ನು ಮರೆತ ರಾಜ ಕಿರೀಟಕ್ಕಾಗಿ ಅನ್ಯ ರಾಜನನ್ನು, ಸೈನ್ಯವನ್ನು ಬಲಿತೆಗೆದುಕೊಂಡ. ಲೋಹವನ್ನು ಮರೆತ ವೀರ ಮತ್ತೊಬ್ಬ ವೀರನನ್ನು ಕೊಂದು ವೀರ ಕಡಗ ಪಡೆದ. ಕಿರೀಟದ ಆಸೆಗಾಗಿ ಅಲೆಕ್ಸಾಂಡರ್ ಸುತ್ತಿ ಸುತ್ತಿ ಅಲೆದು ಅನೇಕ ಅರಸರನ್ನು, ಸೈನಿಕರನ್ನು ಕೊಂದ, ಕೊಂದ ಕಣ್ಣುಗಳು ಬಲಿಯಾದ ಕಣ್ಣುಗಳು ಕುರುಡು ಕಣ್ಣುಗಳಲ್ಲವೆ.

ಈ ಕುರುಡು ಕಣ್ಣುಗಳಿಗೆ ಯಾರು ಪಾಠ ಮಾಡಬೇಕು ? ಯಾರಾದರೂ ಪಾಠ ಮಾಡಿದರೆ ಬಾಯಿಯಿಂದ ಪಾಠ ಮಾಡುತ್ತಾರೆಯೇ ವಿನಹ ಕಣ್ಣಿನಿಂದ ಪಾಠ ಮಾಡಲು ಬರುವುದಿಲ್ಲ, ಬಾಯಿಯಿಂದ ಮಾಡಿದ ಪಾಠ ಈ ಕಣ್ಣಿಗೆ ಕೇಳುವುದಿಲ್ಲ, ಏಕೆಂದರೆ ಕಣ್ಣಿಗೆ ಕಿವಿಗಳಿಲ್ಲ.

ತನ್ನ ಮುಂದಿರುವ ಕತ್ತಲೆ ಪರಿಚಯವಾದ ಕಣ್ಣು ನಿಜ ಕಣ್ಣು, ತನ್ನ ಮರವಿನ ಪರಿಚಯವಾದ ಕಣ್ಣು ನಿಜದ ಕಣ್ಣು, ಕಣ್ಣಿಗೆ ತನ್ನ ಮರವಿನ ಪರಿಚಯವಾಗುವುದಿಲ್ಲ, ನೋಡುವ ದೃಶ್ಯವನ್ನೇ ನಂಬಿ ಸತ್ಯವೆಂದು ತಿಳಿಯುತ್ತದೆ. ಅದನ್ನೇ ಮಾಧ್ಯಮ ರೂಪದಲ್ಲಿ ದೇಹಕ್ಕೆ ರವಾನಿಸುತ್ತದೆ. ದೇಹದಲ್ಲಿ ಉಂಟಾದ ರಣರಂಗಕ್ಕೆ ಕಣ್ಣು ಕಾರಣವಾಗಿ ಹೊರಗಣ ಶೃಂಗಾರಕ್ಕೆ ಮಾರು ಹೋಗುತ್ತದೆ.

ಶೃಂಗಾರ ಹೊರಗಿದೆಯೇ ? ಹೊರಗಿದ್ದರೆ ಅದು ನಾಶವಾಗಬಾರದಲ್ಲ, ನಾಶವಾಗುವದು ಶೃಂಗಾರ ಹೇಗಾದೀತು. ಕಣ್ಣು ತನ್ನ ಮುಂದೆಯೇ ನಷ್ಟಕ್ಕೊಳಗಾಗುವ ಶೃಂಗಾರದ ಮೇಲೆ ಆಸೆಯಿಟ್ಟು ತನ್ನ ದೇಹಕ್ಕೆ ರವಾನಿಸಿ ಒಳಗೆ ರಣರಂಗ ಉಂಟುಮಾಡಿದೆಯಲ್ಲ, ಒಂದು ವೇಳೆ ಶೃಂಗಾರವೇ ಆದಾಗಿದ್ದರೆ ಅದು ಕಣ್ಣಿಗೆ ವಶವಾದ ಬಳಿಕ ಕಣ್ಣು ಮತ್ತೊಂದನ್ನು ಬಯಸಬಾರದಲ್ಲ, ಒಂದು ಶೃಂಗಾರದ ವಸ್ತು ತನಗೆ ದಕ್ಕಿದ ಬಳಿಕ ಮತ್ತೊಂದನ್ನು ಬಯಸಿದರೆ ಅದು ಶೃಂಗಾರವು ಹೇಗಾದೀತು ? ಕಣ್ಣಿಗೆ ಕಂಡಿದ್ದೆಲ್ಲ ತನ್ನ ಆಸೆಗಣ್ಣಿನಿಂದ ನೋಡಿ ದೇಹಕ್ಕೆ ಚಂಚಲ ಉಂಟುಮಾಡುವುದೇ ಕಣ್ಣಿನ ಕೆಲಸವೇ ಹೇಗೆ ? ದೇಹದ ಹಿಂಸೆ ಕಣ್ಣಿಗೆ ಗೊತ್ತಾಗಬಾರದೆ ? ಗೊತ್ತಾಗದಿದ್ದರೆ ಅದು ನಿಜ ಕಣ್ಣು ಹೇಗಾದೀತು ? ದೇಹ ತಲ್ಲಣಗೊಂಡಾಗ ಕಣ್ಣಿಗೆ ಸಂತೋಷವಾಗುತ್ತದೆ ಎಂದರೆ ದೇಹದ ವೈರಿ ಕಣ್ಣಾಗಿರಬೇಕಲ್ಲ, ವಸ್ತು ನೋಡಿದರೆ ಸಾಕು ಅದನ್ನು ಪಡೆದುಕೊ ಎಂದು ದೇಹಕ್ಕೆ ಸುದ್ದಿ ರವಾನಿಸಿ ದೇಹವನ್ನು ಚಂಚಲಕ್ಕೀಡುಮಾಡುವ ಕಣ್ಣು ಕಣ್ಣಲ್ಲ, ಅದಕ್ಕೆ ಸರಿಯಾದ ದೃಷ್ಟಿ ಇಲ್ಲ.

ಕಣ್ಣು ಕುರುಡು ಎಂದು ಕಣ್ಣನ್ನು ನೋಡಿ ಹೇಳಲು ದೇಹಕ್ಕೆ ಕಣ್ಣಿಲ್ಲ, ದೇಹಕ್ಕೆ ನೋಡಲು ಬರುವುದಿಲ್ಲ, ಕಣ್ಣು ನೋಡಿದ್ದನ್ನೇ ದೇಹ ನಂಬಬೇಕು. ನಂಬದ ವಿನಹ ದೇಹಕ್ಕೆ ಗತಿಯಿಲ್ಲ, ಕಣ್ಣು ನೋಡಿದ್ದನ್ನೇ ದೇಹ ಪ್ರಸಾರ ಮಾಡಬೇಕು. ಅದು ದೇಹದ ಕರ್ತವ್ಯ. ಟಿ.ವಿ. ಪೆಟ್ಟಿಗೆ ಚೆನಾಲ್ ಅಲ್ಲ, ಚೆನಾಲ್‌ನಲ್ಲಿ ಬಂದದ್ದು ಮಾತ್ರ ಪ್ರಸಾರ ಮಾಡುವ ಕೆಲಸ ಟಿ.ವಿ.ಯದು. ಟಿ.ವಿ.ಯನ್ನು ದೂಷಿಸಲು ಬರುವುದಿಲ್ಲ . ಹೀಗಿದ್ದರೂ ಟಿ.ವಿ. ದೂಷಣೆಗೆ ಒಳಗಾಗಿದೆ. ಚೆನಾಲ್ ದೋಷದಿಂದ ಕೂಡಿದ್ದರೆ ಟಿ.ವಿ. ಪೆಟ್ಟಿಗೆ ಏನು ಮಾಡೀತು. ಚೆನಾಲ್‌ನ ದೋಷ ಕಳೆಯುವ ಶಕ್ತಿ ಟಿ.ವಿ.ಗೆ ಇಲ್ಲ, ಹಾಗೆಯೇ ಕಣ್ಣಿನ ದೋಷ ಸರಿಪಡಿಸುವ ಶಕ್ತಿ ದೇಹಕ್ಕಿಲ್ಲ, ಕಣ್ಣು ನೋಡಿದಂತೆ ದೇಹ ಪ್ರಸಾರ ಮಾಡುತ್ತದೆ. ಕಣ್ಣು ಹೇಳಿದ ಕಾಯಕ ಮಾಡುವುದೇ ದೇಹದ ಕರ್ತವ್ಯ.

ಕಣ್ಣಿನ ಆದೇಶ ಪಾಲಿಸಿದ ದೇಹ ಸಮಾಜದ ದಂಡನೆಗೆ ಗುರಿಯಾಗುತ್ತದೆ. ಕೋರ್ಟ್, ಕಚೇರಿ, ಪೊಲೀಸ್ ಠಾಣೆ ಜೈಲು ಶಿಕ್ಷೆಗಳನ್ನು ಅನುಭವಿಸುತ್ತದೆ. ಇವರಿಗೇನು ಗೊತ್ತು ದೇಹ ಕಣ್ಣಿನ ಗುಲಾಮನೆಂದು ! ಕಣ್ಣಿನ ತಪ್ಪು ಯಾರ ಗಮನಕ್ಕೂ ಬರುವುದಿಲ್ಲ, ದೇಹದ ತಪ್ಪುಗಳನ್ನು ಮಾತ್ರ ಗಮನಿಸುವ ಕಣ್ಣು ತಪ್ಪಿತಸ್ಥ ಕಣ್ಣಲ್ಲವೇ ? ನೋಡಿ ಕಣ್ಣಿನ ಮಹಿಮೆ ಹೇಗಿದೆ !

ಕಣ್ಣು ತಾನು ನೋಡಿದ ವಸ್ತುವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ದೇಹಕ್ಕೆ ಆದೇಶ ನೀಡಿ ತಪ್ಪಿತಸ್ಥನನ್ನಾಗಿ ಮಾಡುತ್ತದೆ. ಮತ್ತೊಂದು ಕಣ್ಣು ತಪ್ಪು ಮಾಡಿದ ದೇಹಕ್ಕೆ ಶಿಕ್ಷೆ ವಿಧಿಸಲು ಆದೇಶ ನೀಡುತ್ತದೆ. ದೃಷ್ಟಿ ದೋಷವುಳ್ಳ ಕಣ್ಣುಗಳು ಮಾಡುವುದೇ ಹೀಗೆ !. ಅಲ್ಲವಾದದ್ದನ್ನು ಅಪ್ಪಿಕೊಳ್ಳಲು ದೇಹಕ್ಕೆ ಆದೇಶ ನೀಡಿದುದು ಕಣ್ಣೇ. ಆದೇಶ ಪಾಲಿಸಲು ಅಪ್ಪಿಕೊಳ್ಳಲು ಹೋದ ದೇಹವನ್ನು ದಂಡನೆಗೆ ಗುರಿ ಮಾಡಿ ಸೆರೆಮನೆಗೆ ಕಳುಹಿಸಲು ಕಾರಣವಾದದ್ದೂ ಕಣ್ಣೇ ! ಇವೆರಡೂ ಕಣ್ಣುಗಳ ದೃಷ್ಟಿ ಒಂದೇ ಆಗಿದೆ.

ಒಂದು ಕಣ್ಣು ದೇಹವನ್ನು ತಪ್ಪಿಗೆ ಒಳಗಾಗುವಂತೆ ಮಾಡಿದರೆ, ಮತ್ತೊಂದು ಕಣ್ಣು ತಪ್ಪಿಗೆ ಒಳಗಾದ ದೇಹಕ್ಕೆ ಶಿಕ್ಷೆ ಕೊಡುವಂತೆ ಮಾಡುತ್ತದೆ. ನಿಜ ಕಣ್ಣಿನ ದೃಷ್ಟಿಗೆ ಇವೆರಡೂ ಕುರುಡು ಕಣ್ಣುಗಳಲ್ಲವೆ ?

■

ಆಚಾರ

ಆಚಾರ ಅಗೋಚರ ನೋಡಯ್ಯ, ಮಾಡಿದಲ್ಲದೆ ಇಲ್ಲ
ಒಡಲವಿಡಿದಾಡಿದರೆ ಹಿಡಿಯಲಿಲ್ಲವಯ್ಯ. ಇವನೀಸುವ ಕಳೆದು
ಕೂಡಲ ಚೆನ್ನಸಂಗಯ್ಯ ಬಸವಣ್ಣ ಬಲ್ಲ ನೋಡಯ್ಯ

- ಚೆನ್ನಬಸವಣ್ಣ

ಆಚಾರ ಅಗೋಚರ ನೋಡಯ್ಯ:

ಶರಣರು ಆಚರಿಸಿದ ಆಚಾರ ಜ್ಞಾನಾಚಾರ. ಇದು ಅಗೋಚರ. ಒಡಲು ಹಿಡಿದು ಆಚರಿಸುವ ಆಚಾರ ಗೋಚರ. ಕಣ್ಣಿಗೆ ಕಾಣಿಸುವಂಥದ್ದು. ಶರಣರ ಆಚಾರ ಕಣ್ಣಿಗೆ ಕಾಣಿಸದ ಆಚಾರ. ತನ್ನನ್ನು ತಾನು ತಿಳಿಯುವ ಆಚಾರ.

ಜಗತ್ತು ಒಡಲು ಹಿಡಿದು ಆಚರಿಸುವ ಆಚಾರಕ್ಕೆ ಪ್ರಾಧಾನ್ಯತೆ ಕೊಡುತ್ತದೆ. ಸತ್ಯ,ಅಹಿಂಸೆ, ಬ್ರಹ್ಮಚರ್ಯ, ತಪಸ್ಸು, ಪೂಜೆ, ಇಂದ್ರಿಯ ನಿಗ್ರಹ ಮುಂತಾದುವುಗಳು ಗೋಚರದ ಆಚಾರಗಳಾಗಿವೆ. ಕಣ್ಣಿನ ದೋಷ ಕಳೆದು ಜ್ಞಾನದ ದೃಷ್ಟಿ ಬರಿಸುವ ಶಕ್ತಿ ಈ ಆಚಾರಕ್ಕಿಲ್ಲ. ಕಿವಿಯ ಶಬ್ದ ದೋಷ ಕಳೆಯುವ, ಚರ್ಮದ ಸ್ಪರ್ಶ ದೋಷ ಕಳೆಯುವ ಶಕ್ತಿ ಈ ಆಚಾರಕ್ಕಿಲ್ಲ. ಮೂಗಿನ ವಾಸನಾ ದೋಷ, ನಾಲಿಗೆಯ ರುಚಿಯ ದೋಷ ಕಳೆಯುವ ಶಕ್ತಿ ಈ ಆಚಾರಕ್ಕಿಲ್ಲ. ತನ್ನ ತಾನು ತಿಳಿಯುವ ಆಚಾರಕ್ಕೆ ಪಂಚೇಂದ್ರಿಯಗಳ ದೋಷ ಕಳೆಯುವ ಶಕ್ತಿ ಇದೆ. ಇದನ್ನು ಶರಣರು ಜ್ಞಾನಾಚಾರವೆಂದು ಕರೆದಿದ್ದಾರೆ. ಇದು ಒಡಲು ಹಿಡಿದು ಆಚರಿಸುವ ಆಚಾರವಲ್ಲ. ಇದು ಅಗೋಚರ, ಅಪ್ರಮಾಣ, ಅಗಮ್ಯ ಆಚಾರ. ನುಡಿಗೆ, ಮನಕ್ಕೆ ಬುದ್ಧಿಗೆ ನಿಲುಕದ ಆಚಾರ. ಶರಣರ ಆಚಾರ ಘನಾಚಾರ. ಅರುವಿಂಗೆ ಅರುವಾಗಿರುವ ಘನದಿರುವಿನ ಆಚಾರ. ನುಡಿ, ನಡೆ, ಕೆಟ್ಟವರ ಆಚಾರ.

ಮಾಡಿದಲ್ಲದೆ ಇಲ್ಲ:

ಶರಣರ ಆಚಾರ, ಮಾಡಿದಲ್ಲದೆ ಇಲ್ಲ. ಅಂದರೆ ತನ್ನನ್ನು ತನ್ನ ದೇಹವನ್ನು ಅರುವಿಂಗೆ ಅರುವು ಮಾಡಿದಲ್ಲದೆ ಇಲ್ಲ. ಕಾವಿ ಬಟ್ಟೆ ಹಾಕಿಕೊಂಡು ತಾನು ಸಚ್ಚಿದಾನಂದನೆಂದು ನುಡಿಯಿಂದ ಹೇಳುವವರುಂಟು. ಚಿಂತನ,ಧ್ಯಾನ, ತಪ ಮಾಡಿದವರುಂಟು. ಏನೂ ಅನ್ನದೆ ತಾನೇ ತಾನಾಗಿ ತನ್ನ ನಿಜದಿರುವ ಅರಿತವರದು ನಿಜಾಚಾರ. ಇದು ಶರಣರು ಆಚರಿಸುವ ಆಚಾರ.

ಒಡಲ ಹಿಡಿದಾಡಿದರೆ ಹಿಡಿಯಲಿಲ್ಲವಯ್ಯಾ :

ಒಡಲು ಹಿಡಿದು ನುಡಿಯುವವರಿಗೆ ದೊರಕದ ಆಚಾರ. ಜ್ಞಾನಚಾರ. ಒಡಲು

ಹಿಡಿದು ನೋಡುವವರಿಗೆ ಗೋಚರಿಸದ ಆಚಾರ. ಜ್ಞಾನಕ್ಕೆ ಒಡಲಿಲ್ಲ. ಜ್ಞಾನಾಚಾರಿಗೂ ಒಡಲಿಲ್ಲ.

'ಒಡಲಿಲ್ಲ ಗುರುವಿಂಗೆ, ಒಡಲಿಲ್ಲ ಭಕ್ತಂಗೆ
ಒಡಲಿಲ್ಲ ಪ್ರಸಾದ ಸಂಬಂಧಿಗೆ
ಕೂಡಲ ಚೆನ್ನಸಂಗಯ್ಯ ನಿಮ್ಮ ನಿಲುವಿಂಗೆ ಪ್ರತಿಯಿಲ್ಲ
ಹಿಂದಿಲ್ಲ. ಮುಂದಿಲ್ಲ. ಒಂದೂ ಇಲ್ಲ ನಿಮ್ಮ ಶರಣಂಗೆ"

ಸರ್ವಾಂಗದಲ್ಲಿ ಜ್ಞಾನವೇ ತುಂಬಿರುವ ರಹಸ್ಯವನ್ನು ಬಲ್ಲವರು ನಿಶಬ್ಧವೇದಿಗಳು. ಒಡಲು ಹಿಡಿದು ಆಚರಿಸುವ ಆಚಾರಕ್ಕೆ ಸುಖ-ದುಃಖ ಉಂಟು, ಶಬ್ಧದಿಂದ ಒಡಲು ಅರಳುತ್ತದೆ, ಕೆರಳುತ್ತದೆ. ಜ್ಞಾನಿಗಳು ನಿಶಬ್ಧವೇದಿಗಳು. ಶಬ್ಧವನ್ನು ಜ್ಞಾನದಿಂದ ಕೇಳಿ ಕಿವಿಯ ಎಂಜಲನ್ನು ಕ್ಷಣಾರ್ಧದಲ್ಲಿ ನಿರ್ನಾಮ ಮಾಡುತ್ತಾರೆ. ಇದು ಶರಣರ ಆಚಾರ. ಒಡಲಿಲ್ಲದ ಆಚಾರ. ಜ್ಞಾನಾಚಾರ ತನ್ನ ತಾ ತಿಳಿದು ಆಚರಿಸುವ ಆಚಾರ. ಇದಕ್ಕೆ ಹಿಂದಿಲ್ಲ ಮುಂದಿಲ್ಲ. ಇಂತಹ ಆಚಾರ ಅಗೋಚರ ಆಚಾರ.

ಇವನೀಸುವ ಕಳೆದು ಕೂಡಲ ಚೆನ್ನ ಸಂಗಯ್ಯ ಬಸವಣ್ಣ ಬಲ್ಲ ನೋಡಯ್ಯ :

ಬಸವಣ್ಣ ಇವೆಲ್ಲವ ಕಳೆದಾತ. ಒಡಲು ಕಳೆದಾತ, ಒಡಲಿಗಂಟಿದ ಕ್ರೌರ್ಯ ಕಳೆದಾತ. ಕಿವಿಗಂಟಿದ ನಂಜು ಕಳೆದಾತ, ಮೂಗಿನ ವಾಸನೆ ಕಳೆದಾತ ಚರ್ಮದ ವಿಷಯಾಸಕ್ತಿ ಕಳೆದಾತ, ನಾಲಿಗೆಗಂಟಿದ ರುಚಿಯ ಭ್ರಮೆಯ ಕಳೆದಾತ ಎಂದು ಚೆನ್ನ ಬಸವಣ್ಣನವರು ಬಸವಣ್ಣನವರನ್ನು ಕೊಂಡಾಡಿದ್ದಾರೆ.

■

ಎಂಜಲು ಮತ್ತು ಮೀಸಲು

ಎಂಜಲು ಮಾತ ನುಡಿವ ರಂಜಕರೆಲ್ಲರೂ
ಮಿಗೆ ಮಿಗೆ ಮೀಸಲ ತಾವೆತ್ತ ಬಲ್ಲರು ?
ಮೀಸಲು ಎಂಜಲಹುದೇ ? ಎಂಜಲು ಮೀಸಲಹುದೇ?
ಮಾತಿನ ಬಣಬೆಯ ಮೇದ ಪಶುಪ್ರಾಣಿಗಳಂತೆ
ಎಂಜಲ ಮಾತ ನುಡಿಯುತ್ತಿಹರು.
ಲಿಂಗಸಕೀಲ ಸಂಯೋಗದ ವರ್ಮಸ್ಥಲವನವರೆತ್ತಬಲ್ಲರು ?
ಕೂಡಲ ಚೆನ್ನಸಂಗಯ್ಯನಲ್ಲಿ
ಶಬ್ದಸೂತಕರೆಲ್ಲರೂ ರೌರವ ನರಕಿಗಳು.

- ಚೆನ್ನಬಸವಣ್ಣ

ಮಹಾಜ್ಞಾನಿ ಚೆನ್ನಬಸವಣ್ಣನವರ ಈ ವಚನದಲ್ಲಿ ಎಂಜಲು ಮತ್ತು ಮೀಸಲು ಎನ್ನುವ ಎರಡು ಶಬ್ದಗಳು ಬಳಕೆಯಾಗಿವೆ. ಶರಣರ ಅನುಭಾವದಿಂದ ಬಂದ ಮಾತು ಮಿಗೆಮಿಗೆ ಮೀಸಲ ಮಾತು. ಇದನ್ನು ಸಂಗ್ರಹಿಸಿ ಬಳಸಿಕೊಂಡು ನುಡಿವ ಮಾತು ಎಂಜಲು ಮಾತು! ಎಂಜಲು ಮಾತು ನುಡಿವವರೆಲ್ಲಾ ರಂಜಕರೆಂದಿದ್ದಾರೆ ಚೆನ್ನಬಸವಣ್ಣ. ಎಂಜಲು ಮೀಸಲಾಗದು. ಮೀಸಲು ಎಂಜಲಾಗದು. ಅಹಂಬ್ರಹ್ಮಾಸ್ಮಿ ಎಂದರೆ ಬ್ರಹ್ಮನಾಗಲಾರ. ಭ್ರಮೆಯನ್ನು ಕಳಚಿಕೊಂಡು ಬ್ರಹ್ಮವೇ ತಾನಾಗಿ ನುಡಿದವರು ಶರಣರು. ಶರಣರ ನುಡಿ ಮೀಸಲು. ಅವರು ನುಡಿದಂತೆ ನುಡಿದು ಹೇಳುವ ನುಡಿ ಎಂಜಲು.

ಮಾತಿನ ಬಣಬೆಯ ಮೇದ ಪಶುಪ್ರಾಣಿಗಳಂತೆ ಎಂಜಲು ಮಾತು ನುಡಿಯುತ್ತಿಹರು.

ಭಗವದ್ಗೀತೆ,ಬೈಬಲ್,ವೇದ,ಉಪನಿಷತ್,ರಾಮಾಯಣ, ಮಹಾಭಾರತ, ಪುರಾಣ, ಪುಣ್ಯಕತೆಗಳೆಲ್ಲ ಮಾತಿನ ಬಣಬೆಗಳು. ಇವುಗಳಲ್ಲಿ ಆಯಾ ಮಹಾತ್ಮರ ಅನುಭಾವಗಳೇ ತುಂಬಿಕೊಂಡಿವೆ.ಅವು ಅವರ ಅನುಭಾವದ ಮಾತು. ಮಿಗೆಮಿಗೆ ಮೀಸಲ ಮಾತು. ಮಹಾಂತರ ಹೃದಯದಿಂದ ಬಂದು ಪುಸ್ತಕದಲ್ಲಿ ಸೇರಿದ ಮಾತು. ಆ ಪುಸ್ತಕದ ಮಾತುಗಳನ್ನೇ ಪಶುವಿನಂತೆ ಮೇದು ವೇದಿಕೆಯ ಮೇಲೆ ರಂಜನೆಯಿಂದ ನುಡಿದರೆ ಮೀಸಲ ಮಾತಾಗುವುದೇ ಎಂದು ಪ್ರಶ್ನಿಸಿದ್ದಾರೆ.

ಶರಣರ ಅನುಭಾವದ ಮಾತುಗಳು ಹಾಗೂ ಪುಸ್ತಕದಲ್ಲಿ ಓದಿ,ಕೇಳಿ ಹಾಗೆಯೇ ನುಡಿಯುವವರ ಮಾತುಗಳು ಒಂದೇ ಆದರೂ ಇವು ಮೀಸಲು ಮಾತಲ್ಲ. ಏಕೆಂದರೆ ಶರಣರ ಸ್ವಾನುಭವದಿಂದ ಬಂದ ಮಾತುಗಳು ಪುಸ್ತಕದಲ್ಲಿ ಸೇರಿವೆ. ಪುಸ್ತಕದಲ್ಲಿರುವ

ಮಾತುಗಳು ಓದುಗರಲ್ಲಿ ಸಂಗ್ರಹವಾಗಿವೆ. ಸಂಗ್ರಹದ ಮಾತು ಮುಗಿದ ಮೇಲೆ ಮತ್ತೆ ಮಾತಿಲ್ಲ. ಆ ಮಾತು ಈ ಮಾತು ಒಂದೇ ಆದರೂ ಸಂಗ್ರಹದ ಮಾತು ಎಂಜಲು. ಶರಣರ ಮಾತು ಮೀಸಲು.

ಶರಣರ ಹೃದಯ ಸ್ವಾನುಭಾವದ ಸಾಗರ. ಜ್ಞಾನದ ಮಹಾಪೂರ. ಎಂಜಲಿನ ಅವಶ್ಯಕತೆಯಿಲ್ಲ. ಅವರು ಜಗದಗಲ ಮುಗಿಲಗಲ!

ಲಿಂಗ ಸಕೀಲ ಸಂಯೋಗದ ವರ್ಮಸ್ಥಲವನವರೆತ್ತಬಲ್ಲರು :

ದೇಹವು ಜ್ಞಾನದ ಮಹಾಸಾಗರ. ಇದರಲ್ಲಿ ಸಕಲ ಜ್ಞಾನಗಳೂ ಅಡಗಿವೆ. ಸಂತರು, ದಾಸರು, ಶರಣರು, ಮಹಾಂತರು ದೇಹಧಾರಿಗಳೆ. ವೈದ್ಯರು, ಅಭಿಯಂತರರು, ಶ್ರೀಮಂತರು, ಬಡವರು ದೇಹಧಾರಿಗಳೆ.

ಪಂಡಿತರು-ಪಾಮರರು, ರಾಜರು, ರಾಕ್ಷಸರು, ಮಂತ್ರಿಗಳು, ಕಳ್ಳರು, ಸುಳ್ಳರು ದೇಹಧಾರಿಗಳೆ. ಜಾತಿ-ಮತ, ಹೆಣ್ಣು-ಗಂಡು ದೇಹಧಾರಿಗಳೆ. ಈ ದೇಹದಲ್ಲಿ ಜ್ಞಾನ ಸಂಪತ್ತು ಅಡಗಿದೆ. ಈ ದೇಹದಲ್ಲಿ ಅಡಗಿರುವ ಜ್ಞಾನ ಸಂಪತ್ತು ಪುಸ್ತಕದಲ್ಲಿ ಬಂದಿದೆ. ಇದು ಲಿಂಗ ಸಕೀಲ! ಈ ಸಕೀಲ ಭೇದಿಸಿ ಜ್ಞಾನಕ್ಕೆ ಹೋಗುವ ತಂತ್ರಗಾರಿಕೆ ತಿಳಿದರೆ ಸಾಕು ಕೂಡಲಚೆನ್ನ ಸಂಗಯ್ಯನ ದರ್ಶನ.

ಮಹಾಜ್ಞಾನದ ದರ್ಶನ ! ಆತ ನುಡಿವ ಮಾತುಗಳೆಲ್ಲ ಮಿಗೆಮಿಗೆ ಮೀಸಲು ಮಾತು. ತನ್ನನ್ನು ತಾನು ತಿಳಿವುದೇ ಸೂತ್ರರೂಪಿ ಮಾತು. ಈ ತಂತ್ರಗಾರಿಕೆಯನು ಅರಿಯದೆ ನುಡಿವ ಪಾಂಡಿತ್ಯದ ಮಾತುಗಳೆಲ್ಲ ಎಂಜಲ ಮಾತುಗಳು, ಮಿಗೆಮಿಗೆ ಮೀಸಲು ತಾವೆತ್ತ ಬಲ್ಲರು ಎಂದು ಪ್ರಶ್ನಿಸುತ್ತಾ ಸಕಲರು ಮೀಸಲು ಬುತ್ತಿಯನ್ನುಣ್ಣುವ ಜ್ಞಾನದ ಸೂತ್ರವನ್ನು ಬಿಚ್ಚಿಟ್ಟಿದ್ದಾರೆ ಮಹಾಜ್ಞಾನಿ ಚೆನ್ನಬಸವಣ್ಣನವರು.

ಕೂಡಲ ಚೆನ್ನ ಸಂಗಯ್ಯನಲ್ಲಿ ಶಬ್ದ ಸೂತಕರೆಲ್ಲರೂ ರೌರವ ನರಕಿಗಳು :

ಹುಟ್ಟು,ಸಾವು,ಋತುಕ್ರಿಯೆ ಈ ಮೂರು ನಿಸರ್ಗ ಕ್ರಿಯೆಗಳನ್ನು ಮನುಷ್ಯ ಅಜ್ಞಾನದಿಂದ ಸೂತಕಗಳನ್ನಾಗಿಸಿಕೊಂಡಿದ್ದಾನೆ. ಈ ಮೂರೂ ಶಬ್ದಗಳನ್ನು ಜ್ಞಾನದಿಂದ, ಸ್ವಾನುಭವದಿಂದ ನೋಡಿದರೆ ನಿಸರ್ಗ ಕ್ರಿಯೆಯೆಂದು ಕೂಡಲೇ ಗಮನಕ್ಕೆ ಬರುತ್ತದೆ. ಅಜ್ಞಾನದಿಂದ ಪಂಚಾಂಗ ಕೇಳಲು ಹೋದರೆ ಶಬ್ದ ಸೂತಕದ ಭ್ರಮೆ ಬೆನ್ನು ಹತ್ತುತ್ತದೆ. ಸ್ವಾನುಭವಕ್ಕೆ ಹೋಗದೆ ಪಂಚಾಂಗ, ಪುರಾಣ, ಪುಣ್ಯಕತೆ ಮುಂತಾದ ಮಾತಿನ ಬಣವೆಯ ಮೇದು ಎಂಜಲು ಮಾತನಾಡುವ ಶಬ್ದ ಸೂತಕಿಗಳೆಲ್ಲ ರೌರವ ನರಕಿಗಳೆಂದು ಹೇಳುತ್ತಾ ಕೂಡಲೇ ಜ್ಞಾನಕ್ಕೆ ಹೋಗುವ ತಂತ್ರಗಾರಿಕೆ ವಿವರಿಸಿದ್ದಾರೆ ಚೆನ್ನಬಸವಣ್ಣ.

■

ಜ್ಞಾನ

ಲಿಂಗದಲುದಯ, ಜಂಗಮದಲನುಭಾವ,
ಮತ್ತೊಂದ ಮತ್ತೊಂದನರಿಯನಯ್ಯ ಶರಣ.
ಕೂಡಲ ಚೆನ್ನ ಸಂಗಯ್ಯನಲ್ಲಿ ದ್ವಿವಿಧ ಸಂಪನ್ನನಾಗಿ.

-ಚೆನ್ನಬಸವಣ್ಣ

ಇದು ಶರಣರ ಲಿಂಗಾಂಗ ಸಾಮರಸ್ಯ. ಅಂಗದಲ್ಲಿ ಜ್ಞಾನ ಉದಯವಾಗಿದೆ. ಅಂಗದಲ್ಲಿಯೇ ಜ್ಞಾನದ ಅನುಭಾವವಾಗಿದೆ. ಇದರ ಹೊರತಾಗಿ ಶರಣ ಮತ್ತೊಂದ ಮತ್ತೊಂದನು ಅರಿಯ. ಈ ಅಂಗದಲ್ಲಿಯೇ ದ್ವಿವಿಧ ಸಂಪನ್ನನಾದುದರಿಂದ .

ಅಂಗದಲ್ಲಿ ಉದಯವಾಗಿ ಜ್ಞಾನ ಸಂಪನ್ನನಾಗಿದ್ದಾನೆ. ಅಂಗದಲ್ಲಿಯೇ ಉದಯವಾಗಿ ಜ್ಞಾನಾನುಭವ ಸಂಪನ್ನನಾಗಿದ್ದಾನೆ. ಇವೆರಡು ಅಂಗದ ಅಕ್ಷಯನಿಧಿ. ತನ್ನ ಸ್ವಸೌಭಾಗ್ಯ.

ಲಿಂಗದಲುದಯ:

ಇದು ತನ್ನ ಅಂಗದಲ್ಲಿ ತನ್ನ ಜ್ಞಾನದ ಉದಯ. ತನ್ನ ಇರುವಿನ ಉದಯ. ಉದಯ ಅಸ್ತವೆನ್ನದ ಜ್ಞಾನದ ಉದಯ. ಇದು ಶಬ್ದ, ಭಾವ, ನೆನಹು, ನಿರ್ಣಯ, ಉಪದೇಶಗಳು ಸತ್ತಾಗ ಅಂಗದಲಿ ಉದಯವಾದ ಜ್ಞಾನ. ನಾನು ನೀನೆಂಬುದು ಸತ್ತು ಅಂಗದಲಿ ಅನಂಗನೆಂಬ ಅವ್ಯಕ್ತನ ಉದಯ. ತನ್ನಿಂದ ತನ್ನ ಕಂಡ ತನ್ನ ಉದಯ. ಇದು ಜ್ಞಾನದ ಜ್ಞಾನವಾಗಿಹ ಸ್ವತೇಜ. ತನ್ನ ಅಂಗದಲ್ಲಿ ಗರ್ಭೀಕರಿಸಿದ ನಿಜ ನಿಕ್ಷೇಪ.

ಜಂಗಮದಲನುಭಾವ:

ಜಗತ್ತಿನ ಆಗುಹೋಗುಗಳನ್ನು ಬಿಟ್ಟಾಗ ತನ್ನ ಜ್ಞಾನದ ಅನುಭವವಾಗುತ್ತದೆ. ಓದಿದಾಗ , ಕೇಳಿದಾಗ, ನೋಡಿದಾಗ ತನಗೆ ಅನುಭವವಾಗುತ್ತದೆ. ಆನಂದವಾಗುತ್ತದೆ. ಅದು ಶಾಶ್ವತವಾಗಿ ಉಳಿಯುವುದಿಲ್ಲ, ಓದಲು ಕಾರಣವಾದ ಪುಸ್ತಕ, ಕೇಳಲು ಕಾರಣ ವಾದ ಶಬ್ದ, ನೋಡಲು ಕಾರಣವಾದ ದೃಶ್ಯ ಸಂಗ್ರಹವಾಗಿ ನೆನಪಿನಲ್ಲಿ ಉಳಿಯುತ್ತದೆ. ಅದೇ ಸಂದರ್ಭನುಸಾರವಾಗಿ ಅಲ್ಪಸ್ವಲ್ಪ ಉದಾಹರಣೆಯೊಂದಿಗೆ ಹೊರಗೆ ಬರುತ್ತದೆ. ಅದು ಜ್ಞಾನವಲ್ಲ. ತನ್ನದೇ ಆದ ಜ್ಞಾನ ಬಳಕೆಯಾಗದೇ ಹಾಗೇ ಉಳಿಯುತ್ತದೆ. ತನ್ನ ಜ್ಞಾನ ಬಳಕೆ ಮಾಡುವ ಸೂತ್ರ ತನಗೆ ಅರಿವಾದಾಗ ಮತ್ತೊಂದನರಿಯುವುದಿಲ್ಲ,

ಮತ್ತೊಂದನರಿಯನಯ್ಯ ಶರಣ:

ಓದುವುದು, ಬರೆಯುವುದು, ನೋಡುವುದು, ಕೇಳುವುದು ನಿಲ್ಲುತ್ತದೆ.

ಓದುವ ಪುಸ್ತಕ ತನ್ನದೇ ಜ್ಞಾನ, ನೋಡುವ ದೃಶ್ಯ ತನ್ನದೇ ಜ್ಞಾನ, ಕೇಳುವ ಶಬ್ದವೂ ತನ್ನದೇ ಜ್ಞಾನವಾಗಿ ತನ್ನ ಅನುಭವ ತನಗೆ ಆನಂದ ನೀಡುತ್ತದೆ. ಅನುಭವ ಆಗದಿದ್ದಲ್ಲಿ ತನ್ನ ಜ್ಞಾನದಿಂದಲೇ ಆನಂದವಾಗಿದೆ ಎನ್ನುವ ಅರಿವು ಮರುವಾಗುತ್ತದೆ. ನೋಡಲು, ಓದಲು, ಕೇಳಲು ಕಾರಣವಾದುದು ಸಂಗ್ರಹವಾಗಿ ಪಂಡಿತ ಶಾಸ್ತ್ರಿ ಸ್ವಾಮಿ, ಸಾಹಿತಿ ಬರಹಗಾರ ಎಂದು ಕರೆಸಿಕೊಳ್ಳುತ್ತಾನೆ.

ತನಗೆ ತೊಂದರೆಯಾದಾಗ ತಾನು ಕಲಿತ ಶಾಸ್ತ್ರ ತನಗೆ ಉಪಯೋಗವಾಗುವುದಿಲ್ಲ, ಕೇಳಿದ ಶಬ್ದ, ನೋಡಿದ ರೂಪ ತನ್ನನ್ನು ಕೆರಳುವಂತೆ ಮಾಡಿದಾಗ ಓದಿದ ಪುಸ್ತಕ, ಕೇಳಿದ ಶಾಸ್ತ್ರ ಸಹಾಯಕ್ಕೆ ಬರುವುದಿಲ್ಲ, ಕೇಳಿದ ಶಬ್ದದಿಂದ ಕೆರಳಿ ಕುಡಿಯದಿದ್ದರೂ ಕುಡುಕನಂತೆ ವರ್ತಿಸುತ್ತಾನೆ. ನುಡಿದ ಶಾಸ್ತ್ರ ಮರೆತು ರೂಪ ನೋಡಿದ ಶರೀರದ ಜೊತೆಗೆ ಸಂಬಂಧ ಬೆಳೆಸುತ್ತಾನೆ. ಕಾಮುಕನಾಗುತ್ತಾನೆ. ಪಂಡಿತ, ಶಾಸ್ತ್ರಿ ಸಾಹಿತಿ, ಸ್ವಾಮಿ ಎಂದು ನಾನಾ ರೀತಿಯಿಂದ ಹಾಡಿ ಬಿರುದು ಕೊಟ್ಟ ಸಮಾಜ ಕಲ್ಲಿನಿಂದ ಹೊಡೆಯುತ್ತದೆ. ಸರಕಾರ ಜೇಲಿಗೆ ತಳ್ಳುತ್ತದೆ. ಹೊರಗಿನ ಅನುಭವದಿಂದ ಜ್ಞಾನಕ್ಕೆ ಸಂಬಂಧಪಟ್ಟ ಶರೀರ ಶಿಕ್ಷೆಗೆ ಒಳಗಾಗುತ್ತದೆ.

ಶಬ್ದಕೇಳಿ ಕೆರಳಿದ ಶರೀರವನ್ನು ಮನ ಸೇಡು ತೀರಿಸಿಕೊಳ್ಳಲು ಪ್ರೇರೇಪಿಸುತ್ತದೆ. ಇನ್ನೂ ಕುದಿಯುವಂತೆ ಮಾಡುತ್ತದೆ. ಓದುವ ಪುಸ್ತಕ, ಕೇಳಿದ ಶಾಸ್ತ್ರ ನೋಡಿದ ಉತ್ತಮ ದೃಶ್ಯಗಳೆಲ್ಲ ಮನದಲ್ಲಿ ಸಂಗ್ರಹವಾಯಿತು. ಜ್ಞಾನಕ್ಕೆ ಇವುಗಳು ಬೇಕಿಲ್ಲ, ಏಕೆಂದರೆ, ಜ್ಞಾನ ಸ್ವತಃ ನಿಜನಿಕ್ಷೇಪ, ಅಮೃತದ ಕುಂಡ. ಭಗವದ್ಗೀತೆ, ಬೈಬಲ್ ಮುಂತಾದ ಗ್ರಂಥಗಳೆಲ್ಲ ತನ್ನೊಳಗಿನ ಜ್ಞಾನ ದಿಂದಲೇ ಬಂದಿವೆ. ಅದಕ್ಕಾಗಿಯೇ ಅಲ್ಲಮ ಪ್ರಭುಗಳು "ನಿನ್ನೊಡವೆ ಎಂಬುದು ಜ್ಞಾನರತ್ನ ಅದನ್ನು ಕೆಡಗೊಡದೆ ಅಲಂಕರಿಸು" ಎಂದರು. "ಭೂಮಿ, ಹೇಮ, ಕಾಮಿನಿ ಇವು ಜಗಕ್ಕಿಕ್ಕಿದ ವಿಧಿ " ಎಂದರು.

ಅಂಗದಲ್ಲಿ ಉದಯವಾಗುವ ಜ್ಞಾನ, ಉದಯವಾದ ಆ ಜ್ಞಾನದ ಅನುಭಾವ ಇವೆರಡರಿಂದ ಸಂಪನ್ನನಾದ ಶರಣ ಮತ್ತೊಂದನು ಅರಿಯ ಎಂದು ಜ್ಞಾನಕ್ಕೆ ಹೋಗುವ ಸೂತ್ರದ ತಂತ್ರ ಚೆನ್ನಬಸವಣ್ಣನವರು ಈ ವಚನದಲ್ಲಿ ಬಿಚ್ಚಿಟ್ಟಿದ್ದಾರೆ.

■

ಅಚ್ಚ ಶರಣ

ಪೂರ್ವಿಕ ಪೂಜಕ, ಅಪೂರ್ವಿಕ ಭಕ್ತ.
ಕರ್ಮಿ ಪೂಜಕ, ನಿಷ್ಕರ್ಮಿ ಭಕ್ತ.
ಲಿಂಗ ಪೂಜಕ, ಜಂಗಮ ಭಕ್ತ.
ತನುಗುಣ ಪೂರ್ವ ಸೂತಕ ವಿರಹಿತ.
ಕೂಡಲ ಚೆನ್ನ ಸಂಗಯ್ಯ ಆತನೆ ಅಚ್ಚ ಶರಣ.

-ಚೆನ್ನಬಸವಣ್ಣ

ಪೂರ್ವಿಕ ಪೂಜಕ :

ಕಲ್ಲು ಕೊಟ್ಟು ಕಲಾವಿದನಿಂದ ಮೂರ್ತಿ ಮಾಡಿಸಿ, ಆ ಕಲ್ಲನ್ನೇ ದೊಡ್ಡದನ್ನಾಗಿ ಮಾಡಿ ; ತಾನು ಚಿಕ್ಕವನಾಗಿ ಆ ಮೂರ್ತಿಯನ್ನೇ ದೇವರೆಂದು ಪೂಜಿಸುವವನು. ಭ್ರಮಾಧೀನನಾಗಿ ತನ್ನ ಇಷ್ಟಾರ್ಥದ ಬೇಡಿಕೆಯನ್ನು ಅದರ ಮುಂದಿಟ್ಟು ನೆರವೇರಿಸುವಂತೆ ಪ್ರಾರ್ಥಿಸುವವನು. ಅದಕ್ಕೆ ವಸ್ತ್ರಾಭರಣಗಳನ್ನು ತೊಡಿಸಿ ಕಿರೀಟ ಪಾದುಕೆಗಳನ್ನಿತ್ತು, ಭವ್ಯ ಮಂದಿರಗಳನ್ನು ನಿರ್ಮಿಸಿ ಫಲ ಪದಗಳನ್ನು ಬೇಡುವವನು ಪೂರ್ವಿಕ ಪೂಜಕ.

ಅಪೂರ್ವಿಕ ಭಕ್ತ :

ವಸ್ತುವಿನ ಮೂಲ, ಶಬ್ದದ ಮೂಲ, ರೂಪದ ಮೂಲಕ್ಕೆ ಹೋಗಿ ಸತ್ಯವನ್ನು ಕಾಣುವವನು ಅಪೂರ್ವಿಕ. ಮೂರ್ತಿ ಕಲ್ಲಿನದಾಗಿದ್ದರೆ ಕಲ್ಲು, ಚಿನ್ನದ್ದಾಗಿದ್ದರೆ ಚಿನ್ನ, ಕಟ್ಟಿಗೆಯದಾಗಿದ್ದರೆ ಕಟ್ಟಿಗೆ ಎಂದು ವಸ್ತುವಿನ ಮೂಲವನ್ನು ಕ್ಷಣಾರ್ಧದಲ್ಲಿ ತಿಳಿದು ಪೂಜಿಸದೆ ಸುಮ್ಮನಾಗುವನು. ಶಬ್ದದ ಮೂಲಕ್ಕೆ ಹೋದಾಗ ಅದಕ್ಕೆ ಕೆರಳಿಸುವ ಅರಳಿಸುವ ಶಕ್ತಿ ಇಲ್ಲ. ಶಬ್ದ ಕೇಳಿದವರೆಲ್ಲ ಕೆರಳುವುದಿಲ್ಲ. ಪೂರ್ವಿಕ ಶಬ್ದವನ್ನು ತನ್ನ ನೇರಕ್ಕೆ ತೆಗೆದುಕೊಂಡು ಹೋಗಿ ಕೆರಳುತ್ತಾನೆ. ಶಬ್ದ ಬಳಸಿ ಕೆರಳುವಂತೆ ಮಾಡುತ್ತಾನೆ. ಅಪೂರ್ವಿಕ (ಜ್ಞಾನಿ) ನಿಗೆ ಶಬ್ದ ನಪುಂಸಕ. ಕೇಳಿದ ತಕ್ಷಣ ಶಬ್ದದ ಜ್ಞಾನವಾಗಿ ಶಬ್ದ ನಪುಂಸಕವಾಗುತ್ತದೆ. ವಿಕೃತ ಅಥವಾ ಸುಖದ ಕ್ರಿಯೆ ನಿಲ್ಲುತ್ತದೆ.

ಅಪೂರ್ವಿಕ ಪ್ರತಿ ರೂಪವನ್ನು ತನ್ನಂತೆ ನೋಡುತ್ತಾನೆ. ರೂಪದ ಮೂಲಕ್ಕೆ ಹೋದಾಗ ರೂಪ ಬಿಂದುವಿನಿಂದಾದದ್ದು, ತಾನೂ ಬಿಂದುವಿನಿಂದಾದವನು. ಹೆಣ್ಣು ಗಂಡಿನ ಭೇದ ಕ್ಷಣಾರ್ಧದಲ್ಲಿ ಕಳೆದು ; ರೂಪ ಹೊತ್ತ ನಿರೂಪ ಅಪೂರ್ವಿಕನ ಗಮನ ಸೆಳೆಯುತ್ತದೆ. ನಿರೂಪ ಅನಂತ, ಅಂದು ಇಂದು ಎಂದೆಂದೂ ಇದ್ದದ್ದು. ರೂಪ ಇಂದು ಇದ್ದು ಮುಂದೆ ಇಲ್ಲದಂತಾಗುವದು. ಬಾಲ್ಯದಲ್ಲಿ ಒಂದು ರೂಪ, ಪ್ರೌಢದಲ್ಲಿ

ಮತ್ತೊಂದು ರೂಪ., ಯೌವ್ವನದಲ್ಲಿ ಒಂದು ರೂಪ, ಅಂತ್ಯದಲ್ಲಿ ಮತ್ತೊಂದು ರೂಪ. ಪೂರ್ವಿಕನ ಕಣ್ಣಿಗೆ ರೂಪ ಮೋಸ ಮಾಡುತ್ತದೆ. ಅಪೂರ್ವಿಕನ ಕಣ್ಣು ರೂಪ ಹೊತ್ತ ನಿರೂಪ ನೋಡುತ್ತದೆ. ನಿರೂಪ ಹೋದ ರೂಪ ಶವ ! ಶವವನ್ನು ಯಾರೂ ಪ್ರೀತಿಸುವುದಿಲ್ಲ, ನಿರೂಪವನ್ನು ಯಾರೂ ನೋಡುವುದಿಲ್ಲ, ಅಪೂರ್ವಿಕನ ಹೊರತು. ಪೂರ್ವಿಕನಿಗೆ ರೂಪ ಇಷ್ಟ. ಅಪೂರ್ವಿಕನಿಗೆ ನಿರೂಪ ಇಷ್ಟ. ಇದು ಅಪೂರ್ವಿಕ ಭಕ್ತನ ಜ್ಞಾನ ಕಲೆ.

ಪೂರ್ವಿಕ ಪೂಜಕನು ಕಲ್ಲನ್ನೇ ದೇವರೆಂದು ತಿಳಿದು ಅಭಿಷೇಕ ಮಾಡಿ ಪೂಜಿಸಿ ಪೂಜಿಸಿ ಕರ್ಮಿಯಾಗಿದ್ದಾನೆ. ಅಪೂರ್ವಿಕನು ಮೂರ್ತಿಯನ್ನು ನೋಡಿ ಕಲ್ಲೆಂದು ತಿಳಿದು ಪೂಜಿಸದೆ ನಿಷ್ಕರ್ಮಿಯಾಗಿದ್ದಾನೆ.

ಪೂರ್ವ ಕಾಲದಿಂದಲೂ ಅಂದರೆ ಅನಾದಿಯಿಂದಲೂ ಬಂದಿರುವಂತಹ ಗುಣಗಳನ್ನು ಸೂತಕವನ್ನು ತನ್ನ ಜ್ಞಾನದ ಬಲದಿಂದ ತಿಳಿದು ಸತ್ಯವನ್ನು ಪೂಜಿಸಿ ಧ್ಯಾನಿಸಿ, ಆರಾಧಿಸಿ ಅಪೂರ್ವಿಕ ಭಕ್ತನಾಗಿದ್ದಾನೆ. ಜ್ಞಾನಿಯಾಗಿದ್ದಾನೆ ! ಅಚ್ಚ ಶರಣನಾಗಿದ್ದಾನೆ !!

■

ಜ್ಞಾನವೇ ತಾಯಿ ತಂದೆ

ಶ್ರೀಗುರುವೇ ತಾಯಿ ತಂದೆಯಾಗಿ,
ಜಂಗಮವೇ ಅತ್ತೆ ಮಾವಂದಿರಾಗಿ,
ಶಿವಭಕ್ತರೆ ಬಾಂಧವರಾಗಿ,
ಸತ್ಯ ಸದಾಚಾರವೆಂಬ ಮನೆಗೆ ಕಳುಹಿದರಾಗಿ,
ಶರಣ ಸತಿ ಎಂಬ ನಾಮ ನಿಜವಾಯಿತ್ತು.
ಆದಂತೆ ಇರುವೆ ಹಿಂದುಮುಂದರಿಯದೇ ನಡೆವೆ.
ಮನಕ್ಕೆ ಮನವೇ ಸಾಕ್ಷಿಯಾಗಿ ಮಾಡುವೆ
ಬಸವಣ್ಣ ಪ್ರಿಯ ಚೆನ್ನಸಂಗಯ್ಯ ನಿಮ್ಮಡಿಗಳಿಗೆ.

-ಅಕ್ಕನಾಗಮ್ಮ

"ತಂದೆ ನೀನು ತಾಯಿ ನೀನು ಬಂಧು ನೀನು ಬಳಗ ನೀನು,ನೀನಲ್ಲದೆ ಮತ್ತಾರೂ ಇಲ್ಲವಯ್ಯಾ ಕೂಡಲ ಸಂಗಮದೇವಾ ಹಾಲಲ್ಲಾದರೂ ಅದ್ದು ನೀರಲ್ಲಾದರೂ ಅದ್ದು ನಿಮ್ಮ ಧರ್ಮ" ಎಂದು ಬಸವಣ್ಣನವರು ಹಡೆದ ತಂದೆ ತಾಯಿಗಳನ್ನು ಮರೆತು ಶ್ರೀ ಗುರು (ಜ್ಞಾನ) ವನ್ನು ತಂದೆ ತಾಯಿ ಬಂಧು ಬಳಗವನ್ನಾಗಿ ಮಾಡಿಕೊಂಡು ಹಾಡಿದ್ದಾರೆ.

ಶ್ರೀಗುರುವೇ ತಾಯಿ ತಂದೆಯಾಗಿ, ಜಂಗಮವೇ ಅತ್ತೆ ಮಾವಂದಿರಾಗಿ, ಶಿವಭಕ್ತರೆ ಬಾಂಧವರಾಗಿ, ಸತ್ಯ ಸದಾಚಾರವೆಂಬ ಮನೆಗೆ ಕಳುಹಿದರಾಗಿ, ಶರಣ ಸತಿ ಎಂಬ ನಾಮ ನಿಜವಾಯಿತ್ತು. :

ಶರಣರು, ಸಂತರು, ತತ್ವಪದಕಾರರು, ದಾಸರು ತಮ್ಮ ಅಂಕಿತ ನಾಮಕ್ಕೆ ಶ್ರೀಗುರು, ತಂದೆ ತಾಯಿ, ಬಂಧು ಬಳಗ, ಗಂಡ ಎಂದು ಹೆಸರಿಟ್ಟು ಹಾಡಿದ್ದಾರೆ. ಅನುಭಾವಿಗಳು ತಮ್ಮ ನಾಮವನ್ನು ಮುಂದೆ ಮಾಡಲಿಲ್ಲ, ಅಂಕಿತ ನಾಮವನ್ನೇ ಮುಂದೆ ಮಾಡಿದರು. ಸರ್ವಾಂಗದಲ್ಲಿ ತುಂಬಿದ ಜ್ಞಾನವೇ ಅಂಕಿತನಾಮ. ದೇಹಕ್ಕೆ ಹೆಸರಿಟ್ಟು ಕರೆದ ನಾಮವೇ ನಡೆನಾಮ; ಇದು ಅಜ್ಞಾನ, ಇದನ್ನೇ ಮನ, ಊಸರವಳ್ಳಿ, ಸೂಳೆ ಎಂದು ಕರೆದಿದ್ದಾರೆ ಶರಣರು.

ಜ್ಞಾನವೆನ್ನುವುದು ಒಂದು ದೇಹದ ಗುತ್ತಿಗೆಯಲ್ಲ. ಒಂದು ವೇಷದ ಗುತ್ತಿಗೆಯಲ್ಲ. ಒಂದು ಧರ್ಮದ ಗುತ್ತಿಗೆಯಲ್ಲ.

ಒಂದು ಪೀಠದ ಗುತ್ತಿಗೆಯಲ್ಲ. ಒಬ್ಬ ತೋರಿಕೆಯ ಗುರುವಿನ ಗುತ್ತಿಗೆಯಲ್ಲ. ಅದು ಜಗತ್ತಿನ ಮನುಕುಲವನ್ನು ಹೊತ್ತ ಭಂಡಾರ. ಸರ್ವಾಂಗವನ್ನು ವ್ಯಾಪಿ

ಶಿವ ಚಿನ್ಮಯ ನಿಧಿ. ಆ ನಿಧಿಯನ್ನು ಶರಣೆ ಅಕ್ಕನಾಗಮ್ಮ ಶ್ರೀ ಗುರುವೆಂದು ಕರೆದಿದ್ದಾಳೆ.

ತಾಯಿ –ಮಗಳು, ಅತ್ತೆ –ಸೊಸೆ, ಗಂಡ –ಹೆಂಡತಿ, ಅಣ್ಣ –ತಮ್ಮ, ಮಾವ – ಅಳಿಯ, ಅಧಿಕಾರಿ- ಪೇದೆ, ಮಂತ್ರಿ –ಶಾಸಕ ಮುಂತಾದ ಪಾತ್ರದ ನಾಮಗಳನ್ನೆಲ್ಲ ಮಹಾಜ್ಞಾನದ ಒಡಲಿನ ಒಡೆಯನಿಗಿತ್ತಿದ್ದಾಳೆ; ಶರಣ ಸತಿಯೆಂಬ ನಿಜನಾಮದವಳಾಗಿದ್ದಾಳೆ.

ನಡೆನಾಮ: ಇದು ಅಜ್ಞಾನ. ಮಗಳಾಗಿ ತಾಯಿಯ ಸುಖ ಉಂಡು, ಅತ್ತೆಯಾಗಿ ಸೊಸೆಯನ್ನು ಕಾಡಿಸುತ್ತಾಳೆ. ಮಗನಾಗಿ ತಂದೆ ತಾಯಿಯ ಸುಖ ಉಂಡು, ಗಂಡನಾಗಿ ಹೆಂಡತಿಯನ್ನು ಕಾಡಿಸುತ್ತಾನೆ. ಪ್ರಜೆಯಾಗಿ ರಾಜನ ಸಂಕಟ ಅನುಭವಿಸಿ, ರಾಜನಾಗಿ ಪ್ರಜೆಗಳನ್ನು ದುಃಖದಲ್ಲಿ ತಳ್ಳುತ್ತಾನೆ. ತನ್ನ ಹೆಸರಿಗೆ (ನಡೆನಾಮ) ಪದವಿಗಳು ದೊರೆಯದಿದ್ದಲ್ಲಿ ಸಂಕಟಪಡುತ್ತಾನೆ. ದೊರೆತರೂ ಸಂಕಟಪಡುತ್ತಾನೆ. ನಡೆನಾಮ ದೇಹವನ್ನು ಸಂಕಟದ ಗೂಡಾಗಿ ಪರಿವರ್ತಿಸಿ ಕತಕತ ಕುದಿಯುವಂತೆ ಮಾಡುತ್ತದೆ. ಆತ್ಮಹತ್ಯೆಗೆ ಕರೆದೊಯ್ಯುತ್ತದೆ. ನಡೆನಾಮ ಸತ್ಯ ಸದಾಚಾರವುಳ್ಳ ಜ್ಞಾನ ತುಂಬಿದ ದೇಹವೆಂಬ ಮನೆಯನ್ನು ಸುಣ್ಣದ ಬಟ್ಟಿಯಾಗಿ ಪರಿವರ್ತಿಸುತ್ತದೆ. ಶಬ್ದ ಬಡಿದರೆ ಸಾಕು ಕುದಿಯುತ್ತದೆ. ಶಬ್ದದ ನಂಜು ತೊಡೆ ತಟ್ಟಿ ಜಗಳಕ್ಕೆ ದಾರಿ ಮಾಡುತ್ತದೆ. ಸಾಯುವಂತೆ ಮಾಡುತ್ತದೆ. ಕೊಲ್ಲಲು ಪ್ರೇರೇಪಿಸುತ್ತದೆ. ಇದು ನಡೆನಾಮದ ಬಲ.

ಶರಣ ಎಂದರೆ ದಾಸ. ಜ್ಞಾನಕ್ಕೆ ದಾಸನಾದವನು, ಶರಣು ಹೋದವನು. ಜ್ಞಾನ ಹೇಳಿದಂತೆ ಕೇಳುವವ ಜ್ಞಾನಕ್ಕೆ ಸತಿಯಾದವನು. ಜ್ಞಾನಕ್ಕೆ ಸತಿಯಾಗಿ, ಜ್ಞಾನವೇ ತಾವಾಗಿ ಮಹಾಜ್ಞಾನ ಹೊಂದಿದ ಶಿವಭಕ್ತರೇ ಬಂಧುಗಳು ನನಗೆ. ಈ ಬಂಧುಗಳು ಸತ್ಯ ಸದಾಚಾರವುಳ್ಳ ದೇಹವೆಂಬ ಮನೆಗೆ ಕಳುಹಿಸಿದ್ದಾರೆ.

ಆದಂತೆ ಇರುವೆ. ಹಿಂದು-ಮುಂದರಿಯದೆ ನಡೆವೆ. ಮನಕ್ಕೆ ಮನವೇ ಸಾಕ್ಷಿಯಾಗಿ :

ಭೂತ, ಭವಿಷ್ಯತ್ ಕಾಲದ ಶಾಸ್ತ್ರ ಸಂಪ್ರದಾಯಗಳನ್ನು ಮುರಿದು ಜ್ಞಾನ ಹೇಳಿದಂತೆ ಕೇಳುವೆ. ಪರಿದಾಡುವ ಮನವನ್ನು ಮಹಾಜ್ಞಾನದ ಅಡಿಗೆ ಹಾಕಿ ಸಾಕ್ಷಿ ಮಾಡಿ ಜ್ಞಾನಿಗಳನ್ನೇ ಬಂಧುಗಳನ್ನಾಗಿಸಿಕೊಂಡು ಜ್ಞಾನದಲಿ ಓಲಾಡುವೆ ಎಂದಿದ್ದಾಳೆ ಶಿವಶರಣೆ ಅಕ್ಕನಾಗಮ್ಮ.

■

ತನುವಿನಲ್ಲಿ ತನ್ಮಯವಾದ ಜ್ಞಾನ

ತೆರಹಿಲ್ಲದ ಘನವನರಸಿಹೆನೆಂದಡೆ ಕಾಣಬಾರದು,
ಅದೇನು ಕಾರಣವೆಂದಡೆ ಆ ಅರಸುವಾತನು ತಾನೆ ವಸ್ತುವಾದ ಕಾರಣ,
ವಿಚಾರಕ್ಕೆ ಬಾರದುದು ನಿಶ್ಚಲ ಬ್ರಹ್ಮನೆಂದುದು ಗುಹೇಶ್ವರಾ.

- ಅಲ್ಲಮ ಪ್ರಭು

ತೆರಹಿಲ್ಲದ ಘನವನರಸಿಹೆನೆಂದಡೆ ಕಾಣಬಾರದು :

"ಮುಳ್ಳು ಗುತ್ತುವಡೆ ತೆರಹಿಲ್ಲದ ಘನ", "ಬಟ್ಟಿಡಲೆಡೆ ತೆರಹಿಲ್ಲದ ಘನ" ಎಂದು ಶರಣರು ಸರ್ವಾಂಗದಲ್ಲಿ ಭರಿತವಾದ (ಜ್ಞಾನ) ಘನವನ್ನು ಕುರಿತು ಹೇಳುತ್ತಾರೆ.

ಘನವೆಂದರೆ : ಘನವಾದುದು, ಗಗನ ಸದೃಶವಾದುದು. ಘನವೆಂದರೆ ಜ್ಞಾನ. ಶರಣರು ಜ್ಞಾನಕ್ಕೆ ಘನವೆಂದು ಕರೆದಿದ್ದಾರೆ.

ಜ್ಞಾನ ಸಂಗ್ರಹಕ್ಕಾಗಿ ಜ್ಞಾನಾರ್ಜನೆಗಾಗಿ ಮನುಷ್ಯ ಸಾಕಷ್ಟು ಪ್ರಯತ್ನ ಮಾಡುತ್ತಾನೆ. ಸುಮಾರು ವರ್ಷಗಳ ಪರ್ಯಂತ ಶಾಲಾಕಾಲೇಜುಗಳಲ್ಲಿ ಕಲಿಯುತ್ತಾನೆ. ಕೆಲವರಂತೂ ಗುರುಗಳಲ್ಲಿ ಶಿಷ್ಯತ್ವ ಸ್ವೀಕರಿಸಿ ಜೀವನ ಪರ್ಯಂತ ಗುರುವಿನ ಜೊತೆ ಸೇವೆ ಮಾಡುತ್ತ ಕಾಲ ಕಳೆಯುತ್ತಾರೆ. ಇನ್ನು ಕೆಲವರು ಯೋಗಾಸನಗಳ ಮೂಲಕ ಪ್ರಶಸ್ತ ಸ್ಥಳವನ್ನು ಹುಡುಕುತ್ತ ಹಿಮಾಲಯದಲ್ಲಿ ವಾಸಿಸುತ್ತಾರೆ; ಅನುಷ್ಠಾನ, ಮೌನವ್ರತ ಆಚರಿಸುತ್ತಾರೆ. ಮತ್ತೆ ಕೆಲವರು ವೇದ, ಉಪನಿಷತ್ತು ಭಗವದ್ಗೀತೆ ಮುಂತಾದ ಗ್ರಂಥಗಳನ್ನು ಓದಿ ಆಧ್ಯಾತ್ಮ ಜೀವಿಯಂತೆ ಕಾವಿ ತೊಟ್ಟು ತಮ್ಮನ್ನು ವಿಶಿಷ್ಟ ರೀತಿಯಲ್ಲಿ ಗುರುತಿಸಿಕೊಳ್ಳುತ್ತಾರೆ. ಜಪ-ತಪ ಮಾಡುತ್ತಾರೆ. ಶರಣರು, ಜ್ಞಾನ ಪಡೆಯಲು ಅದೇನು ಹೊರಗಿದೆಯೇ ? ಬಟ್ಟೆಯಲ್ಲಿದೆಯೇ ? ಅದು ಸಂಸಾರ ಬಿಟ್ಟರೆ ಬರುತ್ತದೆಯೇ ? ಇಲ್ಲ.

ಜ್ಞಾನ ಹೊರಗಿಲ್ಲ ಎಂದು ಅಲ್ಲಮ ಪ್ರಭುಗಳು ಮೂರು ಸಾಲಿನ ಸೂತ್ರದ ಮೂಲಕ ಮೇಲಿನ ವಚನದಲ್ಲಿ ವಿವರಿಸಿದ್ದಾರೆ. ಅವರದೇ ಆದ ಮತ್ತೊಂದು ವಚನದಲ್ಲಿ :

'ಲಿಂಗ ಒಳಗೊ ಹೊರಗೊ ಬಲ್ಲಡೆ ನೀವು ಹೇಳಿರೆ ? ಲಿಂಗ ಎಡನೊ ಬಲನೊ ಬಲ್ಲಡೆ ನೀವು ಹೇಳಿರೆ ? ಲಿಂಗ ಮುಂದೊ ಹಿಂದೊ ಬಲ್ಲಡೆ ನೀವು ಹೇಳಿರೆ ? ಲಿಂಗ ಸ್ಥೂಲವೊ ಸೂಕ್ಷ್ಮವೊ ಬಲ್ಲಡೆ ನೀವು ಹೇಳಿರೆ ? ಲಿಂಗ ಪ್ರಾಣವೋ ಪ್ರಾಣ ಲಿಂಗವೊ ಬಲ್ಲಡೆ ನೀವು ಹೇಳಿರೆ ? ಗುಹೇಶ್ವರ ಲಿಂಗವನು .'

ಜ್ಞಾನ (ಲಿಂಗ) ಒಳಗೊ ಹೊರಗೊ, ಎಡನೊ ಬಲನೊ, ಮುಂದೊ ಹಿಂದೊ, ಸ್ಥೂಲವೊ ಸೂಕ್ಷ್ಮವೊ, ಅದು ಪ್ರಾಣವೊ ಅಥವಾ ದೇಹವೊ ಎಂದು ಮಾರ್ಮಿಕವಾಗಿ ಪ್ರಶ್ನಿಸುತ್ತಾ ಜ್ಞಾನ ಹೊರಗಿಲ್ಲ, ತನುವಿನಲ್ಲಿ ತನ್ಮಯವಾಗಿ ತುಂಬಿಕೊಂಡಿದೆ ಎಂದು ಚಿತ್ತರಿಸಿದ್ದಾರೆ.

ತನುವಿನಲ್ಲಿ ತುಂಬಿಕೊಂಡ ಜ್ಞಾನವನ್ನು ಹೊರಗೆ ಹುಡುಕಿದರೆ, ಪುಸ್ತಕದಲ್ಲಿ ಓದಿದರೆ, ಪ್ರವಚನದ ಮೂಲಕ ಕೇಳಿದರೆ ಅದು ತನಗೆ ಕಂಡಂತೆ ಆಗುತ್ತದೆ, ಆನಂದವಾಗುತ್ತದೆ. ಕೇಳಲು ಹೇಳಲು ಹಿತವೆನಿಸುತ್ತದೆ ಆದರೆ ಪ್ರಯೋಗಕ್ಕೆ ನಿಲುಕುವುದಿಲ್ಲ.

ಅದೇನು ಕಾರಣವೆಂದಡೆ ಅರಸುವಾತನು ತಾನೆ ವಸ್ತುವಾದ ಕಾರಣ :

ಜ್ಞಾನವನ್ನು ಹೊರಗೆ ಕಾಣುವಂತಿಲ್ಲ ಏಕೆಂದರೆ ಹೊರಗೆ ಕಾಣುವ, ಓದುವ, ಕೇಳುವ, ಹುಡುಕುವಾತನು ತಾನೇ ಜ್ಞಾನದ ವಸ್ತುವಾಗಿದ್ದಾನೆ ಎಂದು ಸ್ಪಷ್ಟವಾಗಿ ಪ್ರಭುಗಳು ವಿವರಿಸಿದ್ದಾರೆ.

ವಿಚಾರಕ್ಕೆ ಬಾರದುದು ನಿಶ್ಚಲ ಬ್ರಹ್ಮನೆಂದುದು ಗುಹೇಶ್ವರಾ :

ಜ್ಞಾನ-ಅಜ್ಞಾನ, ಬೆಳಕು-ಕತ್ತಲಿನಂತೆ. ಜ್ಞಾನ ಕ್ಷಣಾರ್ಧದಲ್ಲಿ ಹೊಳೆಯುತ್ತದೆ ಪುನಹ ಅಜ್ಞಾನ ಆವರಿಸುತ್ತದೆ. ದೇಹ ಅಜ್ಞಾನಕ್ಕೆ ಬಳಕೆಯಾಗಿ ಶಿಕ್ಷೆಗೆ ಗುರಿಯಾದ ಮೇಲೆ ತಪ್ಪು ಮಾಡಬಾರದಾಗಿತ್ತು ಎಂದು ಹೊಳೆಯುತ್ತದೆ. ಅಜ್ಞಾನದ ಕಾರ್ಯದಲ್ಲಿ ಭಾಗಿಯಾದುದು ತಾನೇ, ತಪ್ಪು ಅರಿವಾಗಿ ಮಾಡಬಾರದಾಗಿತ್ತು ಎಂದು ಹೊಳೆಯುವುದು ಕೂಡಾ ತನಗೇ. ಹೀಗೆ ಮನುಷ್ಯ ಕತ್ತಲು-ಬೆಳಕಿನಂತೆ ಕ್ಷಣ ಕ್ಷಣದಲ್ಲಿಯೂ ಗೊಂದಲದಲ್ಲಿ ಬದುಕುತ್ತಾನೆ. ಪ್ರಯೋಗಕ್ಕೆ ಹೋಗಿ ಇದು ಯಾಕೆ ಹೀಗೆ ಎಂದು ತನ್ನನ್ನು ತಾನೆ ಪ್ರಶ್ನಿಸಿಕೊಳ್ಳುವುದಿಲ್ಲ, ದೇಹವನ್ನು ಕಾಡುವ ಮನದ ಬಗ್ಗೆ ಯೋಚಿಸುವದಿಲ್ಲ. ಮನ ಕತ್ತಲಿನಂತೆ ದೇಹದ ತುಂಬ ಆವರಿಸಿಕೊಂಡಿದೆ. ಜ್ಞಾನ ದೇಹದಲ್ಲಿ ತನ್ಮಯವಾಗಿದೆ. ಆವರಿಸಿಕೊಂಡ ಮನ ದೇಹವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ. ತನ್ಮಯವಾದ ಜ್ಞಾನ ಮನವನ್ನು ಬೆಳಗಿಸುತ್ತದೆ. ಮನ ಚಲನೆಯುಳ್ಳದ್ದು ಅದು ದೇಹವನ್ನು ತನಗೆ ರುಚಿ ಬಂದೆಡೆಗೆ ಕರೆದೊಯ್ಯುತ್ತದೆ. ತನ್ಮಯ ವಾದ ಜ್ಞಾನ ನಿಶ್ಚಲವಾದುದು, ಚಲನೆರಹಿತವಾದುದು ಎಲ್ಲೆಲ್ಲೂ ತುಂಬಿಕೊಂಡಿದೆ. ಅಲ್ಲಮ ಪ್ರಭುಗಳು ತನ್ಮಯವಾದ ಜ್ಞಾನವನ್ನು ನಿಶ್ಚಲ ಬ್ರಹ್ಮವೆಂದು ಕರೆದಿದ್ದಾರೆ.

ಬ್ರಹ್ಮ ಎಂದರೆ ಜ್ಞಾನ. ಭ್ರಮೆ ಅಜ್ಞಾನ. ಬ್ರಹ್ಮ ಬೆಳಕು, ಭ್ರಮೆ ಕತ್ತಲು. ಬೆಳಕು ಸದಾ ಇರುತ್ತದೆ. ಕತ್ತಲು ಬೆಳಕಿನಿಂದ ಸೃಷ್ಟಿಯಾಗಿದೆ. ಕತ್ತಲು ಕಳೆಯಬೇಕಾದರೆ ಬೆಳಕು ಹಾಕ ಬೇಕು ಆಗ ಕತ್ತಲು ಬೆಳಕಿನಲ್ಲಿ ಲೀನವಾಗುತ್ತದೆ. ಬೆಳಕಿನಲ್ಲಿ ಲೀನವಾದ ಕತ್ತಲು ಹೊರಗೆ ಬರಲು ಸಾಧ್ಯವಾಗುವುದಿಲ್ಲ, ಏಕೆಂದರೆ ಬೆಳಕಿನಲ್ಲಿ ಲೀನವಾದ ಕತ್ತಲು ಬೆಳಕೇ ಆಗಿದೆ; ನಿಶ್ಚಲ ಬ್ರಹ್ಮವಾಗಿದೆ ! ಅದು ಒಂದು ವೇಳೆ ಪುಸ್ತಕದಲ್ಲಿ ಬಂದರೂ ಬೆಳಕಿನಂತಿರುವ ಬೆಳ ಕಿನ ನೆರಳೇ ಹೊರತು ಬೆಳಕಲ್ಲ, ಅದನ್ನೇ ಬೆಳಕೆಂದು ತಿಳಿದು ತನ್ನ ಬೆಳಕನ್ನು ಮರೆತು ಪುಸ್ತ ಕದ ಜ್ಞಾನ ಸಂಗ್ರಹಿಸಿಕೊಂಡು ನುಡಿದರೆ ಅದು ಬೆಳಕೆಂದೆನಿಸಿದರೂ ತನ್ನ ಉಪಯೋಗಕ್ಕೆ ಬಾರದ್ದಕ್ಕಾಗಿ ತನ್ನಲ್ಲಿ ತೊಳಲಾಟ ನಿಲ್ಲುವುದಿಲ್ಲ, ಆದಕ್ಕಾಗಿಯೇ ವಿಚಾರಕ್ಕೆ ಬಾರದುದು ನಿಶ್ಚಲ ಬ್ರಹ್ಮ, ಅಂದರೆ ಹೊರಗಿನದನ್ನು ವಿಚಾರ ಮಾಡುತ್ತೇವೆ. ಒಳಗಿನದನ್ನು ವಿಚಾರಿಸು ವಂತಿಲ್ಲ, ವಿಚಾರಿಸುವ ವಸ್ತು ತಾನೇ ಆಗಿದ್ದಾನೆ ಎಂದು (ಜ್ಞಾನ)ಘನವನ್ನು ಕುರಿತು ಅಲ್ಲಮ ಪ್ರಭುಗಳು ಸೂತ್ರ ರೂಪದಲ್ಲಿ ಎಳೆ ಎಳೆಯಾಗಿ ಜಗತ್ತಿಗೆ ಕರುಣಿಸಿದ್ದಾರೆ.

■

ನಿರ್ವಿಕಲ್ಪ-ನಿರಹಂಭಾವ

ನಿರ್ವಿಕಲ್ಪವೆಂಬ ನಿಜದೊಳಗೆ ನಿರಹಂಭಾವದಲ್ಲಿರ್ದೆ ನೋಡಿರೆ.
ನೋಡಿಹೆನೆಂದಡೆ ನೋಡಲಿಲ್ಲ, ಕೇಳಿಹೆನೆಂದಡೆ ಕೇಳಲಿಲ್ಲ,
ಘನ ನಿರಂಜನದ ಬೆಳಗಿಂಬಾದುದನೇನೆಂಬೆ ಗುಹೇಶ್ವರಾ.

- ಅಲ್ಲಮಪ್ರಭು

ನಿರ್ವಿಕಲ್ಪವೆಂಬ ನಿಜದೊಳಗೆ ನಿರಹಂಭಾವದಲ್ಲಿರ್ದೆ ನೋಡಿರೆ :

ನಾನಾ ಕಲ್ಪನಾ ಲೋಕದಲ್ಲಿ ಕೂಡಿದ ಮನುಷ್ಯನ ಸ್ವಭಾವ ಅಹಂಭಾವ. ಅವನಿಗೆ ನಿರಹಂಭಾವದ ಸುಖ ತಿಳಿಯದು. ನಿರ್ವಿಕಲ್ಪವೆನ್ನುವ ನಿಜವು ಸಾಧ್ಯವಾಗದು. ಕಲ್ಪನಾ ಲೋಕದಲ್ಲಿದ್ದವನು ವಸ್ತುಗಳ ಮೂಲಕ ಸುಖ ಅನುಭವಿಸುತ್ತಾನೆ. ವಸ್ತುವಿನಲ್ಲಿ ಸುಖವಿಲ್ಲ ಎನ್ನುವುದು ಹೊಳೆಯುವುದಿಲ್ಲ, ಪ್ರತಿ ವಸ್ತುವು ತನ್ನಿಂದ ಸೃಷ್ಟಿಯಾಗಿದೆ ಎನ್ನುವುದೂ ಹೊಳೆಯುವುದಿಲ್ಲ, ವಸ್ತುವಿನಲ್ಲೆಲ್ಲ ತನ್ನ ಮನದ ಕಲ್ಪನೆ ತುಂಬಿದೆ. ವಸ್ತುವಿನಲ್ಲಿರುವ ಕಲ್ಪನೆಯ ನಿಜ ತನ್ನ ಅರಿವಿನಲ್ಲಿ ಅಡಗಿದೆ.

ಆಭರಣಗಳ ಕಲ್ಪನೆ ಪೊರೆಯಂತೆ ಕಣ್ಣಿನಲ್ಲಿ ಆವರಿಸಿದೆ. ಅದರ ನಿಜ ; ಕಣ್ಣಿನ ಕಣ್ಣಿನಲ್ಲಿ ಹಳದಿ ಲೋಹವಾಗಿ ಗೋಚರಿಸುತ್ತದೆ. ವಸ್ತುವನ್ನು ಕಲ್ಪನೆಯಿಂದ ನೋಡಿದಾಗ ಆಭರಣವಾಯಿತು. ಸಂಗ್ರಹಕ್ಕಾಗಿ ಯುದ್ಧಗಳಾದವು. ಸಾವು ನೋವುಗಳಾದವು. ಕಲ್ಪನೆ ಅಹಂಕಾರ ಸೃಷ್ಟಿಸಿತು. ನಿಜ ಸುಖ ದೂರವಾಯಿತು. ಹಳದಿ-ಬಿಳಿ-ಕಪ್ಪು ಇವು ಲೋಹದಲ್ಲಿರುವ ಬಣ್ಣಗಳು. ತಿಳಿದರೆ ಬಣ್ಣಗಳು ಮನುಷ್ಯನನ್ನು ಮೋಸ ಮಾಡುವುದಿಲ್ಲ, ತಿಳಿಯದಿದ್ದರೆ ಬಣ್ಣದ ವಸ್ತುಗಳಿಗೆ ದಾಸನಾಗುತ್ತಾನೆ. ವಸ್ತುಗಳ ಮೇಲಿರುವ ಕಲ್ಪನೆ ಅತಿಯಾಗಿ ಸಂಗ್ರಹ ಭಾವನೆ ಇಮ್ಮಡಿಯಾಗುತ್ತದೆ. ಅಹಂಭಾವ ಅಹಂಕಾರ ಮನುಷ್ಯನನ್ನು ಆವರಿಸಿಕೊಳ್ಳುತ್ತದೆ.

ನಿರ್ವಿಕಲ್ಪವೆಂಬ ನಿಜ ದೂರವಾಗುತ್ತದೆ. ನಿರಹಂಭಾವವೆಂಬ ಸುಖವೂ ದೂರವಾಗುತ್ತದೆ. ನಿರ್ವಿಕಲ್ಪ-ನಿರಹಂಭಾವವೆಂಬ ಸುಖ ನಿಜಸುಖ. ತನ್ನನ್ನು ಪ್ರೀತಿಸುವ ಸುಖ. ಇತರರನ್ನೂ ತನ್ನಂತೆ ಪ್ರೀತಿಸುವ ಸುಖ. ಈ ಸುಖ ಕಲ್ಪನೆಯಲ್ಲಿಲ್ಲ, ನಿರ್ವಿಕಲ್ಪನೆಯಿಂದ ವಸ್ತುಗಳನ್ನು ನೋಡಿದಾಗ ನಿರಹಂಭಾವದ ಸುಖ ಅರಿವಿಗೆ ಬರುತ್ತದೆ. ವಸ್ತುವಿನ ಬಣ್ಣ ಬಯಲಾಗುತ್ತದೆ. ತಾನು ಕಲ್ಪಿಸಿಕೊಂಡ ಭ್ರಮೆಗೆ ಭಂಗವಾಗಿ ತನಗೇ ಆನಂದವಾಗುತ್ತದೆ ಎಂದು ಪ್ರಭುಗಳು ನಿರ್ವಿಕಲ್ಪ ನಿರಹಂಭಾವದ ಸುಖದ ಸೂತ್ರವನ್ನು ಹೇಳಿದ್ದಾರೆ.

ನೋಡಿಹೆನೆಂದಡೆ ನೋಡಲಿಲ್ಲ, ಕೇಳಿಹೆನೆಂದಡೆ ಕೇಳಲಿಲ್ಲ :

ವಸ್ತುಗಳ ನಿಜ ಗೋಚರಿಸಿದ ಮೇಲೆ ವಸ್ತುಗಳನ್ನು ನೋಡಲು ಹೋದಂತೆಲ್ಲ ನಿಜ ಕಾಣುತ್ತದೆ. ಆಸೆ ಕಣ್ಣುಗಳಿಂದ ನೋಡಲಿಲ್ಲ. ಸಂಗ್ರಹಿಸಲಿಲ್ಲ. ವಸ್ತುಗಳಿಗಾಗಿ ಜಗಳ ಕಾಯಲಿಲ್ಲ, ಯುದ್ಧ ಮಾಡಲಿಲ್ಲ. ಏಕೆಂದರೆ ವಸ್ತುಗಳ ನಿಜ ಕಣ್ಣಿಗೆ ಗೋಚರಿಸಿತು. ವಸ್ತುಗಳ ನಿಜ ಗೋಚರಕ್ಕೆ ಬಾರದಿದ್ದರೆ ರಾಜ ಕಿರೀಟಕ್ಕಾಗಿ ಯುದ್ಧ ಮಾಡುತ್ತಾನೆ.

ಬುದ್ಧ-ಮಹಾವೀರರಿಗೆ ಕಿರೀಟದ ಕಲ್ಪನೆ ಹರಿಯಿತು. ಅರಿವಿನಿಂದ ಅದರ ಮೇಲಿನ ಅಹಂಭಾವ ನುಚ್ಚುನೂರಾಯಿತು. ನಿರ್ವಿಕಲ್ಪವೆಂಬ ನಿರಹಂಭಾವದ ಸುಖ ದಲ್ಲಿ ಆನಂದಿತರಾದರು. ಪುನಃ ಕಿರೀಟ ನೋಡಲಿಲ್ಲ. ಅದನ್ನು ಕೇಳಲೂ ಇಲ್ಲ. ಇದು ತ್ಯಾಗದ ಮಾತಲ್ಲ ; ಅರಿವಿನ ಮಾತು; ಅರಿವಿನ ನೋಟ. ಅದಕ್ಕಾಗಿ ಅಲ್ಲಮ ಪ್ರಭು ಗಳು ನೋಡಿಹೆನೆಂದಡೆ ನೋಡಲಿಲ್ಲ, ಕೇಳಿಹೆನೆಂದಡೆ ಕೇಳಲಿಲ್ಲ ಎಂದು ಹೇಳುತ್ತಾ ಕಣ್ಣಿನ ನಂಜು, ಕಿವಿಯ ನಂಜು ಕಳೆಯುವ ಸೂತ್ರ ಚಿತ್ತರಿಸಿದ್ದಾರೆ.

ಘನ ನಿರಂಜನದ ಬೆಳಗಿಂಬಾದುದನೇನೆಂಬೆ ಗುಹೇಶ್ವರಾ :

ಜ್ಞಾನ ಒಡಲೊಳಗಿದೆ. ಅದು ಘನವಾದುದು. ಅದು ನಿರಂಜನ. ನೋಡುವ ನೋಟದಲ್ಲಿ ನಂಜು ಕಳೆದು ಇಂಬಾಗಿ ಬೆಳಗಿದೆ. ಕೇಳುವ ಕಿವಿಯಲ್ಲಿ ಶಬ್ದದ ನಂಜು ಕಳೆದು ಇಂಬಾಗಿ ಬೆಳಗಿದೆ. ಸ್ಪರ್ಶಿಸುವ ಚರ್ಮದಲ್ಲಿ, ರುಚಿಸುವ ನಾಲಿಗೆಯಲ್ಲಿ, ವಾಸಿ ಸುವ ಮೂಗಿನಲ್ಲಿಯ ನಂಜು ಕಳೆದು ಬೆಳಗಿಂಗೆ ಬೆಳಕಾಗಿ ಬೆಳಗಿದೆ. ದೇಹ ಬ್ಯಾಟರಿ -ಜ್ಞಾನ ಬೆಳಕು. ದೇಹಕ್ಕೆ ಇಂಬಾಗಿ ಬೆಳಗುವ ಬೆಳಕು ಕಂಡು ಪ್ರಭುಗಳಿಗೆ ಆನಂದವಾ ಗಿದೆ. ಅದನ್ನೇ ನಮಗೆಲ್ಲ ಹಂಚಿದ್ದಾರೆ ಪ್ರಭುಗಳು.

■

ಒಳಕಣ್ಣು ಹೊರಕಣ್ಣು

ಕಣ್ಣೊಳಗಣ ಕಸ, ಕಾಲೊಳಗಿನ ಮುಳ್ಳು,
ಮನದೊಳಗಣ ಶಂಕೆ ಹರಿಯಿತ್ತು
ಗುಹೇಶ್ವರನೆಂಬ ಭಾವ ನಿರಾಳದಲ್ಲಿ.

– ಅಲ್ಲಮಪ್ರಭು

ಕಣ್ಣೊಳಗಣ ಕಸ :

ಕಣ್ಣಲ್ಲಿ ಕಸ ಬಿದ್ದರೆ, ಕಣ್ಣು ಮಂಜಾದರೆ ವೈದ್ಯರ ಹತ್ತಿರ ಹೋಗುತ್ತೇವೆ, ಚಿಕಿತ್ಸೆಯ ನಂತರ ಸಂಕಟ ನಿವಾರಣೆಯಾಗುತ್ತದೆ. ಅಲ್ಲಿಗೆ ಮುಗಿಯಿತು. ಅಲ್ಲಮ ಪ್ರಭುಗಳು ಹೇಳಿದ ಕಸ ಕಣ್ಣಿನ ವೈದ್ಯರಿಂದ ಬಗೆಹರಿಯುವುದಿಲ್ಲ. ಅದಕ್ಕೆ ಪ್ರಭುಗಳಂತಹ ಭವರೋಗದ ವೈದ್ಯನೇ ಬೇಕು. ಕಸದ ಕಣ್ಣು ಕಳೆದು ನಿಜ ಕಣ್ಣು ತೋರಿಸುವ ನಿಸ್ಸೀಮನೇ ಬೇಕು.

ಕಸದ ಕಣ್ಣು :

ವಸ್ತುವಿನಲ್ಲಿಯ ಸತ್ಯ ಗೋಚರಿಸದ ಕಣ್ಣು, ಮೋಸದ ಕಣ್ಣು, ತನ್ನ ದೇಹಕ್ಕೆ ತಾನೇ ಚಂಚಲ ಉಂಟು ಮಾಡುವ ಕಣ್ಣು, ಈ ಕಣ್ಣಿಗೆ ಅಲ್ಲಮ ಪ್ರಭುಗಳು ಕಸದ ಕಣ್ಣು, ನೋಡೂದನ್ನು ನೋಡಲರಿಯದೆ ಕೆಟ್ಟ ಕಣ್ಣು ಎಂದಿದ್ದಾರೆ.

ಈ ಕಣ್ಣು ರೂಪ ನೋಡಿ ದೇಹ ವಿಕೃತವನ್ನಾಗಿಸುತ್ತದೆ. ದೇಹಕ್ಕೆ ಹಾದರಿಗ, ವಿಟ, ವೇಶ್ಯೆ ಕಳ್ಳ ಮುಂತಾದ ಪಟ್ಟ ಕಟ್ಟುತ್ತದೆ. ಸಾಯುವಂತೆ ಮಾಡುತ್ತದೆ. ಹಲ್ಲೆ ಅತ್ಯಾಚಾರ ಕ್ಕೆಳಸಿ ಜೇಲಿಗೆ ತಳ್ಳುತ್ತದೆ. ಕೊಲೆ ಮಾಡುತ್ತದೆ. ಇದೆಲ್ಲ ಕಣ್ಣಿನೊಳಗಣ ಕಸದ ಮಹಿಮೆ.

ರೂಪದಲ್ಲಿರುವ ಚರ್ಮ ತನ್ನಂತಿದೆ. ಮಾಂಸ, ಮಜ್ಜೆ ಎಲುಬು, ಮೇದಸ್ಸು ಕೂಡಾ ತನ್ನಂತಿದೆ. ತನ್ನಂತೆಯೇ ಇರುವ ಮತ್ತೊಂದು ರೂಪದ ಮೇಲೆ ಕಣ್ಣಿಗೆ ಬಯಕೆ, ಕಣ್ಣಿನ ನೋಟ ದೇಹವನ್ನು ವಿಕೃತಗೊಳಿಸುತ್ತದೆ. ಸುಖಿಸಲು ಪ್ರೇರೇಪಿಸುತ್ತದೆ. ಒಪ್ಪದಿದ್ದಲ್ಲಿ ಹಲ್ಲೆ ಅತ್ಯಾಚಾರ ಕೊಲೆಗೆ ಗುರಿ ಮಾಡುತ್ತದೆ. ನೋಡುವುದೊಂದೇ ಕಣ್ಣಿನ ಕೆಲಸ. ಅಪಾತ್ರಕ್ಕೆ ಗುರಿಯಾಗುವುದು ಮಾತ್ರ ದೇಹ ! ನೋಡಿದ ಕಣ್ಣು ಸುಮ್ಮನಿದೆ. ದೇಹದಲ್ಲಿ ವಿಕೃತ ಸಂಚಯನ ಮಾಡುವುದು ಮಾತ್ರ ಅದರ ಕೆಲಸ. ಕಣ್ಣನ್ನು ಯಾರೂ ನಿಂದೆ ಮಾಡುವುದಿಲ್ಲ. ಅದರ ದೃಷ್ಟಿದೋಷವನ್ನು ಹಳಿಯುವುದಿಲ್ಲ. ದೇಹವನ್ನು ನಿಂದಿಸು ತ್ತಾರೆ. ಕಣ್ಣಿನ ಬಯಕೆಯ ಆದೇಶ ಪಾಲಿಸುವುದು ಮಾತ್ರ ದೇಹದ ಕೆಲಸ. ಏಕೆಂದರೆ ದೇಹಕ್ಕೆ ನೋಡಲು ಬರುವುದಿಲ್ಲ. ಕಣ್ಣಿನಲ್ಲಿ ಕಸ ತುಂಬಿದೆ, ಕಣ್ಣು ಕಂಡರೂ ಕುರುಡು ಗಣ್ಣು, ವಸ್ತುವಿನಲ್ಲಿರುವ ಸತ್ಯ ತಿಳಿಯದ ಕಣ್ಣು ಕಸದ ಕಣ್ಣು.

ಕಣ್ಣೊಳಗಿನ ಕಣ್ಣು ಒಳಗಣ್ಣು : ಆಭರಣ ನೋಡಿ ಹಳದಿ ಲೋಹವೆಂದು ನಿರ್ಧರಿ

ಸುತ್ತವೆ ಒಳಗಣ್ಣು! ಲೋಹ ಹಳದಿ, ಕಪ್ಪು, ಬಿಳಿ, ಕೆಂಪು ಬಣ್ಣದಿಂದ ಕೂಡಿದ್ದರೇನಂತೆ ಲೋಹ ಲೋಹವೇ. ಅದರ ಬಣ್ಣ ಗುರುತಿಸಿದ್ದು ಕಣ್ಣೆ, ಅದಕ್ಕೆ ಕಣ್ಣು ಮಾರುಹೋಗು ವಂತಿಲ್ಲ, ವಸ್ತುವಿನ ನಿಜ ಒಳ ಕಣ್ಣಿಗೆ ಕೂಡಲೇ ಪರಿಚಯವಾಗುತ್ತದೆ. ಒಳಕಣ್ಣಿಗೆ ಯಾವುದೇ ಬೇಡಿಕೆಗಳಿಲ್ಲ, ಎಲ್ಲ ವಸ್ತುಗಳ ಹೆಸರು ಹೇಳಿ ಅದರ ಸೃಷ್ಟಿಗೆ ಕಾರಣವಾ ಮದ್ದು ಕಣ್ಣೇ. ಕಣ್ಣು ಸುಂದರ. ಕಾಣುತ್ತದೆ. ಕಾಣುವ ಕಣ್ಣಿಗಿಂತ ವಸ್ತು ಸುಂದರವಾಗ ಲಾರದು. ವಸ್ತುವಿನ ಸೌಂದರ್ಯವೂ ಕಣ್ಣಿನಲ್ಲಿಯೇ ನಿರ್ಮಾಣ. ಕಣ್ಣಿಗಂಟಿದ ನಂಜು ವಸ್ತುವನ್ನು ದೊಡ್ಡದು ಮಾಡಿ ತಾನು ಚಿಕ್ಕದಾಗುತ್ತದೆ. ತನಗಂಟಿದ ನಂಜು ತನ್ನ ಶರೀರ ವನ್ನೇ ದುರ್ಬಲಗೊಳಿಸುತ್ತದೆ.

ಕಣ್ಣು ತನ್ನದೆ, ಕಸ ತನ್ನದೇ. ತನ್ನ ಕಸ ಒಳಗಣ್ಣಿನಿಂದ ತಾನೇ ಕಳೆದುಕೊಳ್ಳಬೇಕು. ಒಳಕಣ್ಣು ಅರಿವಿನಿಂದ ಕೂಡಿದೆ. ಹೊರಗಣ್ಣಿನಲ್ಲಿ ಮರುವಿನ ಕಸ ಬೆರತಿದೆ.

ಒಳಕಣ್ಣು : ಪ್ರಭುವಿನ ಕಣ್ಣು, ಬುದ್ಧ-ಬಸವನ ಕಣ್ಣು, ತನ್ನ ಕಣ್ಣು, ನಿಜದ ಕಣ್ಣು, ಹೊರಗಣ್ಣು ಕುರುಡಾದರೂ ಒಳಗಣ್ಣು ಬೆಳಕು. ತನ್ನನ್ನು ಇತರರನ್ನೂ ಬೆಳಗುವ ಬೆಳಗಿನ ಬೆಳಕು.

ಕಾಲೊಳಗಿನ ಮುಳ್ಳು : ಇದು ಅಜ್ಞಾನದ ಮುಳ್ಳು, ತನ್ನ ಅಜ್ಞಾನದ ಮುಳ್ಳು ತನ್ನ ಕಾಲಿಗೆ ಚುಚ್ಚಿದೆ. ಹೆಣ್ಣು ಗಂಡು, ಜಾತಿ ಮತ, ಶ್ರೀಮಂತ ಬಡವ, ದೇವರು ದೈವ ಮುಂತಾದ ಭ್ರಮೆ ಆವರಿಸಿ ಬ್ರಹ್ಮನನ್ನು (ಜ್ಞಾನ) ನೋಡದಂತೆ ಮಾಡಿದೆ. ಒಳಗಣ್ಣಿ ನಿಂದ ನೋಡಿದರೆ ಸಾಕು ಚುಚ್ಚಿದ ಅಜ್ಞಾನದ ಮುಳ್ಳುಗಳೆಲ್ಲ ಉದುರಿ ಬೀಳುತ್ತವೆ.

ಮನದೊಳಗಣ ಶಂಕೆ ಹರಿಯಿತ್ತು ಗುಹೇಶ್ವರನೆಂಬ ಭಾವ ನಿರಾಳದಲ್ಲಿ :

ಮನ ಕತ್ತಲು ; ನಾನಾ ಶಂಕೆಗಳಿಂದ ಕೂಡಿದೆ. ಕಣ್ಣೊಳಗೆ ಶಂಕೆಯ ಕಸ ಚೆಲ್ಲಿ ವಸ್ತು ವಿನ ನಿಜ ಕಾಣದಂತೆ ಮಾಡಿದೆ. ಮನ ಚಿನ್ನ ಕೊಟ್ಟು ದೇವರನ್ನು ಮಾಡಿಸಿ ಪೂಜಿಸಲು ತೊಡಗುತ್ತದೆ. ಕೈತಪ್ಪಿ ಬಿದ್ದರೆ ಅಪರಾಧಿ ಭಾವದಿಂದ ನಲುಗುವಂತೆ ಮಾಡುತ್ತದೆ. ಕಷ್ಟಕಾ ಲದಲ್ಲಿ ಚಿನ್ನದ ದೇವರನ್ನೇ ಮಾರುವಂತೆ ಮಾಡುತ್ತದೆ. ಕೊಂಡವ ಚಿನ್ನದ ದೇವರನ್ನು ಅಸಲಿಯೊ ನಕಲಿಯೊ ಎಂದು ಸುತ್ತಿಗೆಯಿಂದ ಹೊಡೆಯುತ್ತಾನೆ. ಆಗ ತಾನೇ ಪೂಜಿಸಿದ ದೇವರನ್ನು ಮಾರುವ ಮನಕ್ಕೆ ಯಾವ ನೋವೂ ಇಲ್ಲ, ಅನುಕೂಲವಾದಾಗ ಮತ್ತೆ ದೇವರನ್ನು ಕೊಳ್ಳುವುದು ಬಿಡುವುದಿಲ್ಲ, ಆದಕ್ಕಾಗಿಯೇ ಪ್ರಭುಗಳು ಮನ ಕತ್ತಲು, ಅನೇಕ ಶಂಕೆಗಳಿಂದ ಕೂಡಿದೆ. ಮನದ ಕತ್ತಲು ಕಳಿಯಲು ಜ್ಞಾನದ ಬೆಳಕು ಬೇಕು. ಕತ್ತಲನ್ನು ಕಳೆಯುವ ಶಕ್ತಿ ಬೆಳಕಿಗೆ ಮಾತ್ರ ಇದೆ. ಆ ಬೆಳಕು ಹೊರಗಿಲ್ಲ, ದೇಹದಲ್ಲಿದೆ. ದೇಹ ಅರಿವಿನ ಗುಹೆ. ಅಲ್ಲಿ ಗುಹೇಶ್ವರನ ವಾಸ. ಆತನ ಬೆಳಕಿನಿಂದ ಕಣ್ಣಿನೊಳಗಣ ಕಸ, ಕಾಲೊಳಗಿನ ಮುಳ್ಳು ಮನದೊಳಗಿನ ಶಂಕೆ ಹರಿಯಿತ್ತು ಎಂದು ಮಹಾಜ್ಞಾನಿ ಅಲ್ಲಮ ಪ್ರಭುಗಳು ಜ್ಞಾನದಿಂದ ನಿರಾಳವಾಗುವ ಸೂತ್ರ ಹೇಳಿದ್ದಾರೆ.

■

ಅಂಗ ಜ್ಞಾನದ ನಿಜ ನಿವಾಸ

ಅಂಗದಾಶ್ರಯವಳಿದು ಲಿಂಗದಾಶ್ರಯಮಾಡಿದ
ಗುರುವೆ ಶರಣು, ಶ್ರೀ ಗುರುವೆ ಶರಣು.
ಪರಮ ಸುಖವ ತೋರಿದೆಯಾಗಿ ಮಹಾಘನ
ಸೋಮೇಶ್ವರನ ಸಾಹಿತ್ಯವ ಮಾಡಿ
ನಿಜ ನಿವಾಸದಲ್ಲಿರಿಸಿದೆಯಾಗಿ ಗುರುವೆ ಶರಣು.

- ಅಜಗಣ್ಣ ಶರಣರು

ಇವು ಮಾತುಗಳಲ್ಲ ಮಾತಲ್ಲದ ಮಾತುಗಳು. ಮಾತನಳಿಯುವ ಮಾತುಗಳು. ನಿಶಬ್ದವೇದಿ ನಿಜ ಶರಣ ಅಜಗಣ್ಣನ ಮಾತುಗಳು. ಅಂಗ ಲಿಂಗ ಒಂದು ಮಾಡುವ ಲಿಂಗಾಂಗ ಸಾಮರಸ್ಯದ ಮಾತುಗಳು.

ಅಂಗದಾಶ್ರಯವಳಿದು ಲಿಂಗದಾಶ್ರಯ ಮಾಡಿದ
ಗುರುವೆ ಶರಣು, ಶ್ರೀ ಗುರುವೆ ಶರಣು :

ಮನ ಅಂಗದಾಶ್ರಯ ಪಡೆದು, ಆಶ್ರಯ ಪಡೆದ ಅಂಗವನ್ನೇ ದುರ್ಬಳಕೆ ಮಾಡಿಕೊಳ್ಳುತ್ತದೆ. ಸೆರೆ ಅಂಗಡಿಗೆ, ಕ್ಲಬ್ಬಿಗೆ, ವೇಶ್ಯಾ ಗೃಹಕ್ಕೆ, ಕಳುವಿಗೆ, ಹಾದರಕ್ಕೆ, ಕಬಳಿಕೆಗೆ, ದರೋಡೆ ಮುಂತಾದೆಡೆಗೆ, ಆಶ್ರಯ ಪಡೆದ ಅಂಗವನ್ನು ಮನ ತನ್ನ ಮನ ಬಂದಂತೆ ಕರೆದೊಯ್ಯುತ್ತದೆ. ತನ್ನ ಚಪಲಕ್ಕೆ ಜ್ಞಾನದ (ಲಿಂಗ) ದೇಹವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ. ಜನ ಅಂಗದಾಶ್ರಯ ಪಡೆದ ಮನ ನೋಡುವುದಿಲ್ಲ, ಲಿಂಗದ (ಜ್ಞಾನ) ಅಂಗ ನೋಡುತ್ತಾರೆ. ಅಂಗ ತಪ್ಪು ಮಾಡಿದೆಯೆಂದು ಅಂಗವನ್ನೆ ದೂಷಿಸು ತ್ತಾರೆ, ಬಡಿಯುತ್ತಾರೆ, ಒದೆಯುತ್ತಾರೆ, ಸೆರೆ ಮನೆಗೆ ತಳ್ಳುತ್ತಾರೆ. ಅವರಿಗೇನು ಗೊತ್ತು ಇದು ಮನದ ತಪ್ಪೆಂದು ! ದೂಷಣೆ ಮಾಡುವವರದೂ ತಪ್ಪಲ್ಲ ; ಅವರೂ ಮನ ದಿಂದ ಕೂಡಿದವರೆ, 12 ಜನ ಬುದ್ಧಿವಂತರ ಕತೆಯಂತೆ ! ಎಣಿಕೆ ಮಾಡುವವನು ತನ್ನ ಮರೆತು ಎಣಿಕೆ ಮಾಡುತ್ತಾನೆ.

ಮನ ಕತ್ತಲು , ಮಂಗ, ರಾಕ್ಷಸ, ಊಸರವಳ್ಳಿ. ಅದರದ್ದು ಕ್ಷಣಕ್ಕೊಂದು ಬಣ್ಣ. ಅದರ ವಾಸಸ್ಥಾನ ಅಂಗ. ಅಂಗಕ್ಕೆ ಶಿಕ್ಷೆ ಕೊಟ್ಟರೆ ಮನಕ್ಕೆ ಬುದ್ಧಿ ಬರುವುದಿಲ್ಲ. ಅದಕ್ಕಾ ಗಿಯೇ ಹುತ್ತವ ಬಡಿದರೆ ಹಾವು ಸಾಯಬಲ್ಲುದೇ ಅಯ್ಯಾ ಎಂದಿದ್ದಾರೆ ಬಸವಣ್ಣನ ವರು. ಅದರ ಬಲ ಮತ್ತಷ್ಟು ವೃದ್ಧಿಯಾಗುತ್ತದೆ. ರಾಕ್ಷಸ ಅವತಾರ ತಾಳುತ್ತದೆ. ಕೋರ್ಟು ಕಚೇರಿಗಳಿಗೆಳೆಯುತ್ತದೆ. ಪೊಲೀಸರಿಗೆ, ಸರಕಾರಕ್ಕೆ ಹೇಳುತ್ತದೆ. ಅವುಗಳಿಗಾದರೂ ಮನಕ್ಕೆ ಶಿಕ್ಷೆ ಕೊಡುವ ಶಿಕ್ಷಣ ಗೊತ್ತಿಲ್ಲ. ಜ್ಞಾನಿ ಮಾತ್ರ ಮನಕ್ಕೆ ಶಿಕ್ಷೆ ಕೊಡಬಲ್ಲ.

ಬುದ್ಧ ಅಂಗುಲಿ ಮಾಲನ ಅಂಗಕ್ಕೆ ಶಿಕ್ಷೆ ಕೊಡಲಿಲ್ಲ. ಅಂಗದಾಶ್ರಯ ಹೊಂದಿದ್ದ (ಮನ) ಮಂಗದೊಂದಿಗೂ ಮಾತನಾಡಲಿಲ್ಲ. ಲಿಂಗದೊಂದಿಗೆ (ಜ್ಞಾನ) ಮಾತನಾಡಿದ. ಅಂಗ (ಜ್ಞಾನ) ಲಿಂಗದ ತೊತ್ತು. ಲಿಂಗ ಹೇಳಿದಂತೆ ಅಂಗ ಕೇಳ ಬೇಕು. ಅಂಗವ ಮಾಲೀಕ (ಜ್ಞಾನ) ಲಿಂಗ, ಮನ (ಅಜ್ಞಾನ) ಅಂಗದ ಬಾಡಿಗೆದಾರ. ಬಾಡಿಗೆದಾರನದೆ ಕಾರುಬಾರು. ಮನೆ ತುಂಬಾ ಕತ್ತಲು. ಸುಣ್ಣ ಬಣ್ಣ ಬಳಿಯದೆ ಗೋಡೆ ಗಳಿಗೆಲ್ಲ ತೂತು. ಬಾಡಿಗೆದಾರನಿಗೆ ಮನೆ ಮಾಲಿಕನ ಪರಿಚಯವಿಲ್ಲ. ಮಾಲಿಕನ (ಜ್ಞಾನ) ಗೋಣಗಾಟವೂ ನಡೆದಿದೆ. ಬಾಡಿಗೆದಾರನ ದುರ್ಬಳಕೆಯೂ ನಡೆದಿದೆ. ಬೆಳಕು-ಕತ್ತಲಿನಾಟ ! ಅಂಗುಲಿಮಾಲ ಬಾಡಿಗೆದಾರ; ಬುದ್ಧ ಬಾಡಿಗೆದಾರನೊಂದಿಗೆ ಮಾತನಾಡಿದ್ದರೆ ಬುದ್ಧನ ಬೆರಳೂ ಅಂಗುಲಿಮಾಲನ ಕೊರಳಲ್ಲಿರುತ್ತಿತ್ತು. ಬುದ್ಧ ಮಹಾಜ್ಞಾನಿ. ಮಂಗದೊಂದಿಗೆ ಆತನ ಕೆಲಸವಿಲ್ಲ, ಅಂಗ ಆವರಿಸಿದ (ಕತ್ತಲೂ) ಮಂಗವೂ ಆತನಿಗೆ ಕಾಣಲಿಲ್ಲ. ಬರೀ ಲಿಂಗ (ಜ್ಞಾನ ಬೆಳಕು) ಕಂಡಿತು. ಲಿಂಗದೊಂದಿಗೆ ಮಾತನಾಡಿದ. (ಲಿಂಗ ಅಂಗದ ಮಾಲೀಕ) ಕೂಡಲೇ ಅಂಗದ ತುಂಬಾ ಲಿಂಗ (ಜ್ಞಾನದ ಬೆಳಕು) ಆವರಿಸಿತು. ಅಂಗದಾಶ್ರಯ ಪಡೆದ ಮಂಗ, ಲಿಂಗ(ಬೆಳಕು)ದಲ್ಲಿ ಲೀನವಾಗಿ ಲಿಂಗವೇ ತಾನಾಯಿತು. ಕತ್ತಲು ತುಂಬಿದ ಮನೆಯಲ್ಲಿ ಬೆಳಕು ಹಾಕಿದಂತೆ. ಮನೆ ಆವರಿಸಿದ ಕತ್ತಲು ಬೆಳಕಿನಲ್ಲಿ ಲೀನವಾಗಿ ಬೆಳಕೇ ಆದಂತೆ !

ಅಂಗದಾಶ್ರಯ ಪಡೆದ (ಮಂಗ) ಮನಕ್ಕೆ ಉಪದೇಶ ನಿಲ್ಲುವುದಿಲ್ಲ. ಲಿಂಗ (ಜ್ಞಾನ)ಕ್ಕೆ ಉಪದೇಶ ಬೇಕಿಲ್ಲ. ಬುದ್ಧ (ಜ್ಞಾನ)ನೊಂದಿಗೆ ಮಾತನಾಡುವ ಶಕ್ತಿ ಬುದ್ಧನಿಗೆ ಮಾತ್ರ ಇದೆ. ಮಾತನಾಡಿ ಹೇಳುವ ಬುದ್ಧ ಗುರುವಾದರೆ ಅದನ್ನು ಮೌನ ದಿಂದಲೇ ಕೇಳಿ ಅಂಗದಾಶ್ರಯಪಡೆದ ಮಂಗನನ್ನು ತನ್ನಂತೇ ಮಾಡಿಕೊಂಡವ (ಜ್ಞಾನ) ಶ್ರೀ ಗುರು !

ಮಾತಲ್ಲದ ಮಾತಿನಿಂದ ಪರಮ ಸುಖವ ತೋರಿದ ಗುರುವೆ , ಮೌನದಿಂದ ಮನ ತನ್ನಂತೆ ಮಾಡಿಕೊಳ್ಳುವ ಶ್ರೀ ಗುರುವಿನ ಕಲೆ ತೋರಿದ * ವಿದ್ಯಾನಂದ ಗುರುವೇ, ಅಂಗವೆಂಬ ನಿಜ ನಿವಾಸ ದಲ್ಲಿರುವ ಪರಮ ಸುಖದ ಸಾಹಿತ್ಯವನ್ನು ಸೂತ್ರರೂಪದಲ್ಲಿ ಸರ್ವರಿಗೂ ಅರುಹಿದ ಅಜಗಣ್ಣ ಗುರುವೇ ಶರಣು ಶರಣಾರ್ಥಿ.

■

---

* ಪರಮಪೂಜ್ಯ ಸದ್ಗುರುಗಳಾದ ಶ್ರೀ ವಿದ್ಯಾನಂದ ಶರಣರು
ಪಚ್ಚೇರುಮಡುವು. ತಾ. ಲಿಂಗಸೂಗೂರು, ಜಿ. ರಾಯಚೂರು

ಅಂಗದ ಭಂಗ

ಅಂಗದ ಬೆಂಬಳಿಯಲು ಭಂಗವೆಂದರಿಯರು.
ಲಿಂಗದ ಬೆಂಬಳಿಯಲಾದ ಪ್ರಸಾದಿಯು ಅರ್ಪಿತವನರಿಯ
ಪ್ರಸಾದದಲ್ಲಿ ಪರಿಣಾಮಿಯಾಗಿ
ಮಹಾಘನ ಸೋಮೇಶ್ವರ ಮುಂತಾಗಿ
ಅರಿವೇ ಅನುಭಾವವಾದ ಪ್ರಸಾದಿ.

– ಅಜಗಣ್ಣ ಶರಣರು

ಅಂಗದ ಬೆಂಬಳಿಯಲು ಭಂಗವೆಂದರಿಯರು :

ಅಂಗದ ಬೆನ್ನು ಬಿದ್ದರೆ ಭಂಗವೆಂದು ತಿಳಿಯುವುದಿಲ್ಲ, ಅಂಗ ಸುಂದರವೆಂದು ಅಂಗದ ಬೆನ್ನು ಬೀಳುತ್ತದೆ. ಅಂಗದ ಅಭಿಮಾನ ವಿಪರೀತ. ಹೆಣ್ಣು ಗಂಡೆಂದು, ಹೆಂಡತಿ ಮಕ್ಕಳೆಂದು, ಬಂಧು ಬಳಗವೆಂದು, ಗುರು ಶಿಷ್ಯನೆಂದು, ಮಂತ್ರಿ ಅಧಿಕಾರಿಯೆಂದು, ಅಣ್ಣ ತಮ್ಮನೆಂದು, ಅಳಿಯ ಮಾವನೆಂದು, ಅತ್ತೆ ಸೊಸೆಯೆಂದು, ದೇವರು ದೈವ ವೆಂದು, ಸಹಪಾಠಿ ಗೆಳೆಯನೆಂದು. ತನ್ನ ದೇಶ ಪರದೇಶದವನೆಂದು, ತನ್ನ ಜಾತಿ–ಅನ್ಯ ಜಾತಿಯವನೆಂದು ಒಂದೇ ಎರಡೆ ಹಲವಾರು. ಅಂಗಕ್ಕೆ ಭಂಗ ತರುವ ವೈರಿ ಬೇರೆ ಯಾರೂ ಅಲ್ಲ; ತನ್ನಂಗದಂತಿರುವ ಅಂಗದಿಂದಲೇ ತನ್ನಂಗಕ್ಕೆ ಭಂಗ ಉಂಟಾಗುತ್ತದೆ.

ಅಂಗದಿಂದ ಸುಖಪಟ್ಟ ಅಂಗ ಮತ್ತೊಂದು ದಿನ ಅದೇ ಅಂಗದಿಂದ ಭಂಗ ಕ್ಕೊಳಗಾಗುತ್ತದೆ. ಭಂಗಕ್ಕೊಳಗಾದ ಅಂಗ ಸಾಯುತ್ತದೆ ಇಲ್ಲವೆ ಸಾಯಿಸುವಂತೆ ಮಾಡುತ್ತದೆ.

ಅಂಗಕ್ಕೆ ಸುಖದುಃಖಗಳ ಪರಿಚಯವಿಲ್ಲ. ಅದು ಟಿ.ವಿ. ಪೆಟ್ಟಿಗೆಯಂತೆ. ಟಿ.ವಿ. ಪೆಟ್ಟಿಗೆಯಲ್ಲಿ ಸುಖ–ದುಃಖಗಳ ಧಾರವಾಹಿ ಬರುತ್ತವೆ. ಟಿ.ವಿ.ಗೆ ಯಾವುದೂ ಪರಿಚಯವಿಲ್ಲ; ಅದು ಸ್ಥೂಲ. ಆದರಂತೆಯೇ ಅಂಗವನ್ನೂ ಸ್ಥೂಲವೆಂದು ಕರೆದಿದ್ದಾರೆ ಶರಣರು.

ಲಿಂಗದ ಬೆಂಬಳಿಯಲಾದ ಪ್ರಸಾದಿಯು ಅರ್ಪಿತವನರಿಯ :

ಲಿಂಗ : ಸರ್ವಾಂಗದಲ್ಲಿ ತುಂಬಿಕೊಂಡಿರುವ ಬೆಳಕು ಜ್ಞಾನ. ಇದು ಬೆಳಕಿನ ಪ್ರಸಾದ. ಬೆಳಕಿಗೆ ಕತ್ತಲನ್ನು ತನ್ನಂತೆ ಮಾಡಿಕೊಳ್ಳುವ ಶಕ್ತಿಯಿದೆ. ಬೆಳಕು ಕಂಡ ಕತ್ತಲು ಬೆಳಕಿನಲ್ಲಿ ಲೀನವಾಗುತ್ತದೆ. ಬೆಳಕಿನಿಂದಲೇ ಕತ್ತಲ ನಿರ್ಮಾಣ ; ಬೆಳಕಿನಿಂದಲೇ ಕತ್ತಲ ನಿರ್ನಾಮ. ಸರ್ವಾಂಗದಲ್ಲಿ (ಲಿಂಗ) ಬೆಳಕೇ ತುಂಬಿದೆ. ತನ್ನ ಅಂಗದಲ್ಲಿ ತುಂಬಿದ ಬೆಳಕಿನ ಬೆನ್ನು ಬಿದ್ದು ಆ ಬೆಳಕನ್ನೇ ಉಂಡ ಪ್ರಸಾದಿಯು ಅರ್ಪಿತವನರಿಯ. ಆಚಾರ

ವನರಿಯ. ತಾನೂ ಬೆಳಕು. ತನ್ನಿಂತಿರುವ ಇತರರೂ ಬೆಳಕೇ.

ಪ್ರಸಾದದಲ್ಲಿ ಪರಿಣಾಮಿಯಾಗಿ ಮಹಾಘನ ಸೋಮೇಶ್ವರ ಮುಂತಾಗಿ ಅರಿವೇ ಅನುಭಾವವಾದ ಪ್ರಸಾದಿ :

ಬೆಳಕಿನ ಪ್ರಸಾದ ಹಳಸದ ಪ್ರಸಾದ. ಇದು ತನ್ನಲ್ಲಿ ನಿರ್ಮಾಣವಾದ ತನ್ನ ಪ್ರಸಾದ. ಸರ್ವಾಂಗದಲ್ಲಿ ತುಂಬಿರುವ ಲಿಂಗ ಪ್ರಸಾದ, ಅರಿವಿನ ಪ್ರಸಾದ. ಇದು ತನ್ನಂಗದಲ್ಲಿರುವ ಅರುವೇ ತನಗೆ ಅನುಭವವಾದ ಪ್ರಸಾದ. ಈ ಪ್ರಸಾದವನ್ನುಂಡ ಅನುಭವಿಯೇ ಅಚ್ಚ ಪ್ರಸಾದಿ. ಅಚ್ಚ ಶರಣ, ನಿಜ ಶರಣ. ಮಹಾಜ್ಞಾನಿ ಎಂದಿದ್ದಾರೆ ಅಜಗಣ್ಣ ಶರಣರು.

■

ಗುರು-ಸದ್ಗುರು

ಇವನ ಕಂಡ ತಮದಂತಾಯಿತ್ತೆನ್ನ ಗುರುವಿನುಪದೇಶ.
ವಾಯುವಿನ ಕೈಯ ಸೊಡರಿನಂತಾಯಿತ್ತೆನ್ನ ಗುರುವಿನುಪದೇಶ.
ಉರಿಯ ಮುಖದೊಳಿಪ್ಪ ಕರ್ಪುರದಂತಾಯಿತ್ತೆನ್ನ ಗುರುವಿನುಪದೇಶ.
ಮಹಾಘನ ಸೌರಾಷ್ಟ್ರ ಸೋಮೇಶ್ವರ ಸದ್ಗುರುವೆನ್ನ ಕರಸ್ಥಲಕ್ಕೆ
ಕೃಪೆ ಮಾಡಿದ ಕಾರಣ, ಸಕಲ ಪ್ರಪಂಚ ಬಿಟ್ಟೋಡಿತ್ತು.

- ಅಜಗಣ್ಣ ಶರಣರು

ಅಜಗಣ್ಣ ಶರಣರು ಇಬ್ಬರು ಗುರುಗಳನ್ನು ಪರಿಚಯಿಸಿದ್ದಾರೆ.ಒಬ್ಬ ಗುರು. ಮತ್ತೊಬ್ಬ ಸದ್ಗುರು.

ಗುರು : ಶಿಷ್ಯತ್ವ ಸ್ವೀಕರಿಸಿ ಶಿಷ್ಯನನ್ನಾಗಿಸಿಕೊಂಡು ಉಪದೇಶ ಮಾಡುತ್ತಾನೆ. ಗುರು ಶಿಷ್ಯ ಪರಂಪರೆ-ಸಂಬಂಧಗಳನ್ನು ಹೆಣೆಯುತ್ತಾನೆ. ಗುರುವು ಗುರುವಾಗಿರುತ್ತಾನೆ. ಶಿಷ್ಯ ಶಿಷ್ಯನಾಗಿಯೇ ಮುಂದುವರಿಯುತ್ತಾನೆ. ಶಿಷ್ಯನಿಗೆ ಪಂಚಾಕ್ಷರಿ, ಷಡಕ್ಷರಿ, ನಾರಾಯಣ, ಓಂಕಾರ ಮಂತ್ರ ಬೋಧಿಸುತ್ತಾನೆ. ಸಾಧ್ಯವಾದರೆ ಅವುಗಳ ವಿವರ ಹೇಳುತ್ತಾನೆ. ಜಪ, ತಪ ನಿಧಿಧ್ಯಾಸನ ಮುಂತಾದ ಕ್ರಮಗಳನ್ನು ಹೇಳಿ ಅವುಗಳಲ್ಲಿ ಮುಂದುವರಿಯಲು ಹೇಳುತ್ತಾನೆ. ವರ್ಷಕ್ಕೆರಡು-ಮೂರು ಬಾರಿ ಬಂದು ಮಠ, ಆಶ್ರಮಕ್ಕೆ ಬೇಕಾಗುವ ಪಡಿ ಪದಾರ್ಥ, ಕಟ್ಟಡಕ್ಕೆ ಬೇಕಾಗುವ ಪರಿಕರ ಭೂಮಿ ಹಣ ಪಡೆದು ಪೂಜೆ ಮಾಡಿಕೊಂಡು ಪ್ರಸಾದ ಮಾಡಿ ಆಶೀರ್ವದಿಸಿ ಮುಂದಿನೂರಿಗೆ ಪ್ರಯಾಣ ಬೆಳೆಸುತ್ತಾನೆ. ಅಲ್ಲಲ್ಲಿ ಉಪನಿಷತ್ತು ವೇದ, ವೇದಾಂತ, ಭಗವದ್ಗೀತೆ ಶರಣರ ವಚನಗಳ ಮೂಲಕ ಉಪನ್ಯಾಸ ಮಾಡುತ್ತಾನೆ. ಶಾಲಾ ಕಾಲೇಜು, ಪ್ರಸಾದ ನಿಲಯ, ನಿತ್ಯ ಪ್ರಸಾದ, ಅನ್ನದಾಸೋಹ, ಪೂರ್ವಜರ ಪುಣ್ಯ ಸ್ಮರಣೆ, ಜಾತ್ರೆಗಳನ್ನು ಮಾಡುತ್ತಾರೆ. ಅವರ ಗುಣಗಾನ ಮಾಡುತ್ತಾರೆ. ಕಾಣಿಕೆ ನೀಡಿದ ಭಕ್ತರನ್ನು ಬಾಯಿತುಂಬಾ ಹೊಗಳುತ್ತಾರೆ.

ಇವರು ಗುರುಗಳೆ ಆದರೂ ತನ್ನಲ್ಲಿರುವ ಶಿಷ್ಯನಲ್ಲಿರುವ ಅರಿವಿನ ಗುರು(ಜ್ಞಾನ) ವನ್ನು ಕಾಣಲಿಲ್ಲ. ಗುರು ಶಿಷ್ಯರ ಮಧ್ಯದಲ್ಲಿರುವ ಅರಿವು ಒಂದೇ. ಅರಿಯದೇ ಗುರುವಾದ ಅರಿಯದೇ ಶಿಷ್ಯನಾದ. *"ಶಿಷ್ಯನ ಮುಖದಿಂದಾದ ಗುರುವಿಂಗೆ ಶಿಷ್ಯನ ಪ್ರಸಾದ. ಶಿಷ್ಯನ ಪ್ರಸಾದ ಗುರುವಿಂಗಲ್ಲದೆ ಗುರುವಿನ ಪ್ರಸಾದ ಶಿಷ್ಯಂಗಿಲ್ಲ. ಇದು ಕಾರಣ ಗುರುವೇ ಓಗರ ಓಗರವೇ ಅರ್ಪಿತ. ಪ್ರಸಾದ ಪ್ರಸಾದವೆಂದು ಉಂಡುಂಡು ಸವೆದರಲ್ಲ. ಸುಡುಸುಡು ಶಬ್ದ ಸೂತಕರ ಕೈಯಲ್ಲಿ ಸ್ಥಾವರ ವಿಧಿವಶವಾಯಿತ್ತು ಗುಹೇಶ್ವರಾ"* ಗುರುವಿನಿಂದ ಬೆಳಕು ಕಾಣದೆ ಶಿಷ್ಯನ ಶರೀರ ವ್ಯರ್ಥವಾಗಿ ವಿಧಿವಶವಾಗುತ್ತದೆ ಎಂದು ಹೇಳುತ್ತಾ *"ಇಬ್ಬರ ಮಧ್ಯದಲ್ಲಿ ಒಂದು ವಸ್ತು ಉಂಟು ಕಂಡಿರೆ ಗಣಂಗಳಿರಾ ಕಂಡಿರೆ ಅಣ್ಣಗಳಿರಾ ? ಗುರು*

ವಿನ ಗುರು ಬೇಗಲರಿಯಿರೆ ಗುಹೇಶ್ವರಾ" ಎಂದು ಅಲ್ಲಮ ಪ್ರಭುಗಳು ಬೋಧೆ ಮಾಡುವ ಗುರುವನ್ನು ಸ್ವೀಕರಿಸುವ ಶಿಷ್ಯರನ್ನು ಎಚ್ಚರಿಸುವ ಸೂತ್ರ ಕರುಣಿಸಿದ್ದಾರೆ.

ಸದ್ಗುರು : ಸದ್ಗುರುವಿಗೆ ಶಿಷ್ಯನನ್ನು ತನ್ನಂತೆ ಜ್ಞಾನಿಯನ್ನಾಗಿ ಮಾಡುವ ಹಂಬಲ. ಈತ ವೇಷಧಾರಿ ಗುರುವಲ್ಲ, ಮನೆತನದ ಗುರುವೂ ಅಲ್ಲ. ದೀಪ ಬತ್ತಿಯನ್ನು ಚುಂಬಿಸಿ ತನ್ನಂತೆ ಮಾಡಿ ಕೊಳ್ಳುತ್ತದೆ. ಮೊದಲು ಬೆಳಗುವ ದೀಪ ಗುರುವಲ್ಲ ನಂತರ ಬೆಳಗುವ ದೀಪ ಶಿಷ್ಯನಲ್ಲ. ಎರಡೂ ಪ್ರಕಾಶಮಾನವಾಗಿ ಬೆಳಗುತ್ತವೆ. ಸದ್ಗುರುವು ಶಿಷ್ಯನನ್ನಾಗಿಸಿ ಕೊಂಡು ಶಿಷ್ಯನ ಶಿಷ್ಯತ್ವ ಕೆಡಿಸಿ ತನ್ನ ಗುರುತನವನ್ನೂ ಕೆಡಿಸಿಕೊಳ್ಳುತ್ತಾನೆ. ಶಿಷ್ಯನನ್ನಾಗಿಸಿಕೊ ಳ್ಳುವುದೂ ಅಹಂಕಾರ, ಗುರುವಾಗುವುದೂ ಅಹಂಕಾರ. ಶಿಷ್ಯನಲ್ಲಿರುವ ಗುರುವು (ಅರಿವೂ) ಒಂದೇ. ಗುರುವಿನಲ್ಲಿರುವ ಗುರುವೂ ಒಂದೇ . ಶಿಷ್ಯನಲ್ಲಿರುವ ಗುರುವಿಗೆ ಬೋಧೆ ಬೇಕಿಲ್ಲ. ಗುರುವಿಗೆ ಗುರುವು ಬೋಧಿಸುವಂತಿಲ್ಲ. ಸದ್ಗುರುವು ಶಿಷ್ಯನಲ್ಲಿರುವ ಬೆಳಕು ತೋರಿಸುತ್ತಾನೆ. ಬೆಳಕು ಕಂಡ ಬೆಳಕು, ತಾನು ಬೆಳಕು ಎನ್ನುವುದಿಲ್ಲ. ಬೆಳಕೂ ಮೌನ, ಬೆಳಕು ಕಂಡ ತಾನೂ ಮೌನ !

ವಾಯುವಿನ ಕೈಯ ಸೊಡರಿನಂತಾಯಿತ್ತೆನ್ನ ಉಪದೇಶ : ಉಪದೇಶ ನೀಡಿದ ಗುರುವು ಒಬ್ಬ, ತನ್ನಂತರಂಗದಲ್ಲಿ ನಿರಂತರ ಬೆಳಗುವ, ಕಾಣಬಾರದ ಗುರುವೊಬ್ಬ. ಈತ ಗುರುವಿಗೂ ಗುರುವು. ಶಿಷ್ಯನಿಗೂ ಗುರುವು. ಈ ಗುರುವಿನ ಉಪದೇಶ ಸೂರ್ಯನ ಬೆಳಕಿನಂತೆ. 'ಕೋಟಿ ಸೂರ್ಯಂ ಸಮಪ್ರಭೆ' ಕೋಟಿ ಸೂರ್ಯರನ್ನು ಬೆಳಗುವ ಬೆಳಕು. ಇದು ಗಾಳಿಗೆ ಆರುವುದಿಲ್ಲ, ಮಳೆಗೆ ನಂದುವುದಿಲ್ಲ !

ಉರಿಯ ಮುಖದೊಳಿಪ್ಪ ಕರ್ಪುರದಂತಾಯಿತ್ತೆನ್ನ ಗುರುವಿನುಪದೇಶ :

ಕರ್ಪುರದಲ್ಲಿ ಉರಿಯಿದೆ. ಕರ್ಪುರ ಉರಿ ಒಂದನ್ನೊಂದು ಉರಿಯದಂತೆ ಬೆಸಗೊಂಡಿವೆ. ಅಂಗವಿದೆ ಅರಿವಿದೆ. ಅಂಗದಲ್ಲಿ ಅರಿವು ಮರೆವಾಗಿದೆ. ಉಪದೇಶದಿಂದ ಗುರು ಶಿಷ್ಯನೆಂಬ ಭಾವ ಅಧಿಕವಾಗಿ ಅರಿವು ಮರೆವಾಗಿದೆ.

ಮಹಾಘನ ಸೌರಾಷ್ಟ್ರ ಸೋಮೇಶ್ವರ ಸದ್ಗುರುವೆನ್ನ ಕರಸ್ಥಲಕ್ಕೆ ಕೃಪೆ ಮಾಡಿದ ಕಾರಣ, ಸಕಲ ಪ್ರಪಂಚ ಬಿಟ್ಟೋಡಿತ್ತು : ಸದ್ಗುರು, ಕರುಣೆಯಿಂದ ಶಿಷ್ಯನ ಕರಸ್ಥಲ (ಸರ್ವಾಂಗ) ದಲ್ಲಿ ತುಂಬಿರುವ ಸಕಲ ಸಂಪತ್ತನ್ನು ತೋರಿಸುತ್ತ, ಇದು ಜಗದಗಲ, ಮುಗಿಲಗಲ. ಈ ಅಂಗದಿಂದಲೇ ಸಕಲ ಪುಸ್ತಕಗಳು ಬಂದಿವೆ. ಇದು ಮಂತ್ರಗಳ ಉಗಮಸ್ಥಾನ. ಬೆಳಗಿಂಗೆ ಬೆಳಗಾಗಿ ಬೆಳಗುವ ಬೆಳಕು ಇಲ್ಲಿದೆ. ಇದು ನೀನೇ ಆಗಿರುವಿ. ಇದು ಚಿನ್ಮಯ ಪಾತ್ರೆ ಇದರಲ್ಲಿ ಅಮೃತವೇ ತುಂಬಿದೆ ಎಂದು ಸದ್ಗುರುವು ಕೃಪೆ ಮಾಡಿದ ತಕ್ಷಣ ಅಂಗಕ್ಕಂಟಿದ ಸಕಲ ಭ್ರಮೆಗಳೂ ಕಳಚಿ ಬ್ರಹ್ಮವೇ (ಜ್ಞಾನ) ತಾನಾಗುತ್ತಾನೆ. ಅಜಗಣ್ಣ ಶರಣರು ಲೋಕಕ್ಕೇ ಸದ್ಗುರುಗಳು. ಅಂಗದ ಭ್ರಮೆ ಕಳಚಿ ಸರ್ವಾಂಗವನ್ನು ಲಿಂಗವಾಗಿಸುವ ಸೂತ್ರ ಅರುಹಿದ್ದಾರೆ.

■

ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ

ಅರ್ಚನೆ ಪೂಜನೆ ನೇಮವಲ್ಲ, ಮಂತ್ರ ತಂತ್ರ ನೇಮವಲ್ಲ,
ಧೂಪ ದೀಪಾರತಿ ನೇಮವಲ್ಲ, ಪರಧನ ಪರಸ್ತ್ರೀ
ಪರದೈವಂಗಳಿಗೆರಗದಿಪ್ಪುದೇ ನೇಮ. ಶಂಭು ಜಕ್ಕೇಶ್ವರನಲ್ಲಿ
ಇವು ಕಾಣಿರಣ್ಣಾ ನಿತ್ಯನೇಮ.

- ಶಿವಶರಣೆ ಸತ್ಯಕ್ಕ

ಅರ್ಚನೆ ಪೂಜನೆ ನೇಮವಲ್ಲ:

ಇದು ಜಗತ್ತಿನ ನಿಯಮ. ನಿಯಮಗಳಲ್ಲಿ ಭಿನ್ನತೆಯಿದೆ. ದೇವರು ನಿರಾಕಾರನೆಂದು ಪ್ರಾರ್ಥಿಸುವ ನಿಯಮ. ದೇವರು ಸಾಕಾರನೆಂದು ಪೂಜಿಸುವ ನಿಯಮ. ದೇವರು ಸಾಕಾರನೆಂದು ಕಲ್ಲು ಕಟ್ಟಿಗೆ ಮಣ್ಣು ಚಿನ್ನ, ಬೆಳ್ಳಿಯಿಂದ ಮೂರ್ತಿ ಮಾಡಿ ದೇವಾಲಯಗಳನ್ನು ಕಟ್ಟಿ ಮನೆಯಲ್ಲಿ ಜಗಲಿ ಮಾಡಿ ಅರ್ಚಿಸಿ ಪೂಜಿಸುವ ನೇಮ. ಈ ನೇಮಕ್ಕೆ ನಿಯಮವಲ್ಲ ಎನ್ನುತ್ತಾರೆ ಶರಣೆ ಸತ್ಯಕ್ಕ.

ಮಂತ್ರ ತಂತ್ರ ನೇಮವಲ್ಲ ಧೂಪ ದೀಪಾರತಿ ನೇಮವಲ್ಲ:

ಮೂರ್ತಿಗಳ ಮುಂದೆ ಕುಳಿತು ಗಂಧ ಅಕ್ಷತೆ ನಾನಾ ವಿಧದ ಹೂಗಳನ್ನು ಚೆಲ್ಲಿ ತುಪ್ಪದ ದೀಪ ಹಚ್ಚಿ ಪರಿಮಳ ಧೂಪ ಹಾಕಿ, ದೀಪಾರತಿ ಮಾಡುವುದು ನೇಮವಲ್ಲ. ತಂತ್ರಿಗಳನ್ನು ಕರೆಸಿ ಯಜ್ಞ ಕುಂಡಗಳನ್ನು ರಚಿಸಿ ಹೋಮ ಹವನ ಮಾಡುವುದು, ಕುರಿಬಲಿ, ನರಬಲಿ ನೀಡುವುದು ನೇಮವಲ್ಲ. ಇದು ಪೂಜಿಸಲು ಹೇಳಿದವನು ಸೃಷ್ಟಿಸಿದ ಭ್ರಮೆ, ಪೂಜಿಸಿದವನ ಭ್ರಮೆ.

ತಪ್ಪು ಮಾಡಿ, ಮಾಡಿದ ತಪ್ಪು ನಿವಾರಣೆಗಾಗಿ ಭ್ರಮೆಯಿಂದ ಶಾಸ್ತ್ರ ಕೇಳಲು ಹೋಗುತ್ತಾನೆ. ಶಾಸ್ತ್ರಿ ಇರುವುದೇ ಶಾಸ್ತ್ರ ಹೇಳುವುದಕ್ಕೆ. ತಪ್ಪು ಮಾಡಿದ್ದು ಶನಿ ಕಾಟದಿಂದ, ಶನಿ ನಿವಾರಣೆಗಾಗಿ ಹೋಮ, ತಾನು ಹೊಟ್ಟೆ ಹೊರೆಯುವುದಕ್ಕಾಗಿ ಹೋಮ, ಮತ್ತೊಂದು ತಪ್ಪು ಮಾಡಲು ಅಣಿಯಾಗುವುದಕ್ಕಾಗಿ ಹೋಮ !

ನೇಮ ಮಾಡುವವರೆಲ್ಲ ತಪ್ಪು ಮಾಡಿದವರಲ್ಲ. ಅರಿವಿನಿಂದ ಮೂರ್ತಿ ಮಾಡಿ ಮರೆವಿನಿಂದ ಅದರ ಮೂಲ ಸ್ವರೂಪ ಅರಿಯದೆ ಪೂಜೆ ಮಾಡುವುದು. ಅದಕ್ಕಾಗಿಯೇ ಶರಣರು 'ಅಡ್ಡ ಬಿದ್ದು ಬೇಡಿಕೊಂಡರೆ ಗಡ್ಡವೆಲ್ಲ ಮಣ್ಣಾಯ್ತು ಕೇಳೆ ಕಲ್ಲೆ' ಎಂದಿದ್ದಾರೆ. ಮೂರ್ತಿಯ ಮೂಲ ಸ್ವರೂಪ ತಿಳಿಯುವುದು ನೇಮ. ಆಗ ಅರ್ಚನೆ ಪೂಜನೆ,ಮಂತ್ರ,ತಂತ್ರ, ಧೂಪ ದೀಪಾರತಿಗಳು ನಿಲ್ಲುತ್ತವೆ. ಅರಿವಿನ ನೇಮ ಜಾರಿಗೆ

ಬರುತ್ತದೆ. ಅಜ್ಞಾನ ದೂರವಾಗುತ್ತದೆ.

ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ:

ಮಂತ್ರಿಯಾದವನು ಜನಸೇವೆಯೇ ಜನಾರ್ದನಸೇವೆ ಎಂದು ಘೋಷಿಸಿ ತಾನೇ ಬದ್ದನಾಗಿರುವುದಿಲ್ಲ, ಭೂಮಿ ಹಣ ಕದ್ದದ್ದು ಜನಕ್ಕೆ ಗೊತ್ತಾದ ಮೇಲೆ ಸ್ಥಾನ ದಲ್ಲಿ ಉಳಿಯಲು ಮಂತ್ರ, ತಂತ್ರ ಹೋಮ ಯಜ್ಞಗಳನ್ನು ಮಾಡಿ ಜನರನ್ನು ಮರಳು ಮಾಡುವ ಪ್ರಯತ್ನ ಮಾಡುತ್ತಾನೆ. ತಾನು ಸಫಲನಾದರೆ ಪೂಜೆ ಮಾಡಲು ಹೇಳಿದ ತಂತ್ರಿಯೂ ಸಫಲನಾದಂತೆ !

ಅರಿವಿನ ಕೆಲಸದಲ್ಲಿ ಸುಖವಿದೆಯೆಂದು ಹೊಳೆಯದೆ ಧನ ಸಂಗ್ರಹ ಮಾಡು ತ್ತಾನೆ. ಇಕ್ಕಟ್ಟಿಗೆ ಗುರಿಯಾಗುತ್ತಾನೆ.

ಪರಸ್ತ್ರೀ:

ರಾವಣ, ಕೀಚಕ ಮುಂತಾದವರು ಪರಸ್ತ್ರೀ ಬಯಸಿ ಹಿರಿಯ ವ್ಯಕ್ತಿಗಳಾಗಿಯೂ ಅಪಮಾನಕ್ಕೊಳಗಾದರು. ಬಯಕೆ ಇತ್ತು ಹತ್ತಿಕ್ಕಿದ್ದರು. ಬಯಕೆಯ ಬಲ ಜಾಸ್ತಿಯಾ ದಾಗ ಬಲಿಯಾದರು.

ಪರದೈವಂಗಳಿಗೆರಗದಿಪ್ಪುದೇ ನೇಮ:

ತನ್ನ ಮನೆ ದೇವರೇ ಶ್ರೇಷ್ಠ, ದೇವರ ಗುಣಗಾನ, ಪವಾಡಗಳನ್ನು ಕತೆ ಮಾಡಿ ಹೇಳುವುದು, ಇತರರನ್ನು ತನ್ನ ದೇವರೆಡೆಗೆಳೆದು ಸಂಖ್ಯೆ ಹೆಚ್ಚು ಮಾಡುವುದು, ಹೀಗೆ ಪ್ರಾರ್ಥಿಸುವ ದೇವರು,ಪೂಜಿಸುವ ದೇವರ ಸಂಖ್ಯೆಗಳೇ ಜಗತ್ತಿನ ತುಂಬಾ ತುಂಬಿವೆ.

ಪ್ರಾರ್ಥಿಸುವ- ಪೂಜಿಸುವ ನೇಮಕ್ಕಾಗಿ ಜನ ಬಡಿದಾಡುತ್ತಾರೆ. ಸಾಯು ತ್ತಾರೆ. ಸಾಯುವ ಜನರನ್ನು ದೇವರು ಒಮ್ಮೆಯೂ ಬದುಕಿಸಲಿಲ್ಲ. ಜನರ ಬಡಿದಾ ಟದಲ್ಲಿ ದೇವರು ಒಮ್ಮೆಯೂ ಸಾಯಲಿಲ್ಲ.

ಪೂಜಿಸುವ ಅರ್ಚಿಸುವ ನೇಮ. ಪರಧನ, ಪರಸ್ತ್ರೀ ಗಳಿಗೆರಗದೆ ಹತ್ತಿಕ್ಕಿಕೊ ಳ್ಳುವ ನೇಮವಿದೆ. ಈ ನೇಮ ಮುರಿದು ಬಯಕೆ ಈಡೇರಿಸಿಕೊಂಡವರು ಕ್ರೂರಿ ಗಳು. ಬಯಕೆ ಇದ್ದು ಕಣ್ಣಿನಿಂದ,ಶಬ್ದದಿಂದ, ಮನದಿಂದ ನಡೆಯುವ ಹಾದರ ಕಂಡು ಬರುವುದಿಲ್ಲ. ಇವರು ಶ್ರೇಷ್ಠರು.

ಪರ ದೈವಗಳಿಗೆ ಪೂಜಿಸಿ ಅರ್ಚನೆ ಮಾಡುವುದು ಬಯಕೆಯೇ ; ಪರಧನ ಪರಸ್ತ್ರೀಗಳಿಗೆರಗುವುದೂ ಬಯಕೆಯೇ.

ಶಂಭು ಜಕ್ಕೇಶ್ವರನಲ್ಲಿ ಇವು ಕಾಣೆರಣ್ಣಾ ನಿತ್ಯ ನೇಮ :

ಪರಧನ,ಪರಸ್ತ್ರೀ ಪರದೈವ ಇವು ಹೊರಗಣವು. ಪ್ರಪಂಚದ ಯಾವ ಮೂಲೆಗೆ ಹೋದರೂ ಧನ ಸಂಗ್ರಹ ವಿಷಯ ಸುಖ, ದೇವರನ್ನು ಪೂಜಿಸುವುದು ಪ್ರಾರ್ಥಿಸು ವುದು ನಡೆದೇ ಇದೆ. ಇವು ಸಮಾಜದ ನಿಯಮ, ಮನುಷ್ಯನ ಬಯಕೆ, ಬಯಕೆ

ಮುರಿಯುವ ನಿಯಮ ಶಂಭುಜಕ್ಕೇಶ್ವರನಲ್ಲಿದೆ. ಅತ ದೇಹದೊಳಗಿದ್ದಾನೆ.

ದೇಹವ ತುಂಬಾ ತನ್ಮಯವಾಗಿದ್ದಾನೆ. ಅರು ಸ್ವರೂಪನಾಗಿದ್ದಾನೆ. ಅರಿವೇ ತಾನಾಗಿದ್ದಾನೆ. ಆ ಅರಿವಿನಿಂದ ಮೂರ್ತಿಯನ್ನು ನೋಡಿದಾಗ ಕಲ್ಲು ಕಾಣುತ್ತದೆ. ಕಲ್ಲಿಗೆ ಪೂಜಿಸುವ,ಅರ್ಚಿಸುವ, ಧೂಪ ದೀಪಾರತಿ ಮಾಡುವ ನೇಮಕ್ಕೆ ಕತ್ತರಿ ಬೀಳುತ್ತದೆ. ತನ್ನ ಅರಿವೆಂಬ ಗುರುವಿನ ಆರಾಧನೆ ಶುರುವಾಗುತ್ತದೆ. ಇದು ಸ್ವ ದೈವದ ನಿತ್ಯ ನೇಮ.

ಆಭರಣಗಳೆಲ್ಲ ಹಳದಿ ಲೋಹಗಳು, ಕರೆನ್ಸಿ ಕಾಗದ, ಅದು ವಿನಿಮಯಕ್ಕಾಗಿ ಮಾತ್ರ. ಪ್ರಾಣ ಕಳೆಯಲು, ಪ್ರಾಣ ತುಂಬಲು ಅಲ್ಲ. ಈ ನಿಜ ಅರಿವಿಗೆ ಗೋಚರವಾಗುತ್ತದೆ. ಮರುವಾದರೆ ವಸ್ತುಗಳು ಪ್ರಾಣ ಕಳೆಯುತ್ತವೆ. ಅರಿವಾದರೆ ವಸ್ತುವಿನ ನಿಜ ಗೋಚರಿಸುತ್ತದೆ.

ಪರಸ್ತ್ರಿ :

ವಿಷಯ ಸುಖ ; ಪರಸ್ತ್ರಿ ಪರ ಪುರುಷನಲ್ಲಿಲ್ಲ. ಹಾಗೆ ನೋಡುವ ಕಣ್ಣುಗಳಲ್ಲಿ ವಿಷಯದ ನಂಜಿದೆ. ಚರ್ಮ ಒಂದೇ. ಸ್ತ್ರೀಯಾದರೇನು ಪುರುಷ ನಾದರೇನು. ಚರ್ಮ ಚರ್ಮ ಸ್ಪರ್ಶಿಸುವ ಮುನ್ನ ಸುಖ ಲಭಿಸಿದರೆ ಮತ್ತೆ ಚರ್ಮ ಸ್ಪರ್ಶಿಸುವ ಬಯಕೆ ಮಾಡುವುದಿಲ್ಲ. ಸ್ಪರ್ಶಿಸುವ ಮುನ್ನ ಬಯಕೆ ಮಾಡಿತ್ತು. ಸ್ಪರ್ಶಿಸುವ ಮುನ್ನ ಬಯಕೆ ಈಡೇರಿತು. ಮತ್ತೆ ಬಯಕೆ ಮಾಡಲಿಲ್ಲ. ಸುಖ ತನ್ನಲ್ಲಿತ್ತೊ ಅನ್ಯ ಚರ್ಮದಲ್ಲಿತ್ತೋ? ಈ ಜ್ಞಾನ ಪುಸ್ತಕದಲ್ಲಿಲ್ಲ, ಶಂಭು ಜಕ್ಕೇಶರನಲ್ಲಿದೆ. ತನ್ನಲ್ಲಿದೆ. ತನ್ನ ಜ್ಞಾನದಲ್ಲಿದೆ ಇದನ್ನು ಕಾಣಲು ಜ್ಞಾನದ ನಿಯಮಾಚರಣೆಯಲ್ಲಿ ತೊಡಗಬೇಕು.ಜ್ಞಾನದ ನೇಮವೇ ಸತ್ಯ. ಸತ್ಯ ಹೊರತಾಗಿ ಜ್ಞಾನ ಅನ್ಯ ನೋಡುವುದಿಲ್ಲ; ಅನ್ಯ ಕೇಳುವುದಿಲ್ಲ; ಅನ್ಯ ಸ್ಪರ್ಶಿಸುವುದಿಲ್ಲ. ಇದು ಸತ್ಯದ ನಿತ್ಯ ನೇಮ ಎಂದಿದ್ದಾರೆ ಶರಣೆ ಸತ್ಯಕ್ಕ.

■

ತವಕವಿಲ್ಲದ ಇನಿಯ

ಇನಿಯಂಗೆ ತವಕವಿಲ್ಲ, ಎನಗೆ ಸೈರಣೆಯಿಲ್ಲ,
ಮನದಿಚ್ಛೆಯನರಿವ ಸಖಿಯರಿಲ್ಲ. ಇನ್ನೇವೆನಯ್ಯ
ಮನಮಥನ ವೈರಿಯ ಅನುಭಾವದಲ್ಲಿ ಎನ್ನ ಮನ ಸಿಲುಕಿ ಬಿಡದು.
ಇನ್ನೇನ ಮಾಡುವೆ ನೆಲೆ ಕರುಣವಿಲ್ಲದ ತಾಯಿ
ದಿನ ವೃಥಾ ಹೋಯಿತ್ತಾಗಿ. ಯೌವ್ವನ (ವ್ಯರ್ಥ)
ಬೀಸರವಾಗದ ಮುನ್ನ ಪಿನಾಕಿಯ ನೆನಹವ್ವಾ ಶಂಭುಜಕ್ಕೇಶ್ವರ.

- ಶಿವಶರಣೆ ಸತ್ಯಕ್ಕ

ಇನಿಯಂಗೆ ತವಕವಿಲ್ಲ, ಎನಗೆ ಸೈರಣೆಯಿಲ್ಲ :

ಶಿವಶರಣೆ ಸತ್ಯಕ್ಕನವರು ತಾವೇ ಸಂಭಾಷಣೆ ಮಾಡುವ ಮೂಲಕ ಮನುಕುಲಕ್ಕೆ ಅರಿವು-ಮರೆವುಗಳ ಸತ್ಯ ಸಂದೇಶ ಸಾರಿದ್ದಾರೆ. ಇನಿಯ ಅಂದರೆ ಜ್ಞಾನ. ಸತಿ ಅಂದರೆ ಮನ. ದೇಹದಲ್ಲಿ ಜ್ಞಾನವೂ ಇದೆ, ಅಜ್ಞಾನವೂ ಇದೆ. ಗಂಡನಿಗೆ ಹೆಂಡತಿಯೊಂದಿಗೆ ಕೂಡಬೇಕೆಂಬ ಬಯಕೆಯಿಲ್ಲ, ಕೂಡುವ ತನಕ ಕಾಯಬೇಕೆಂಬ ಸಮಾಧಾನವೂ ಹೆಂಡತಿಗಿಲ್ಲ, ಹೆಂಡತಿಯ ಮನದಿಚ್ಛೆಯರಿತು ಗಂಡನೊಂದಿಗೆ ಕೂಡುವ ಬಗೆಯನ್ನು ಹೇಳಿಕೊಡುವ ಗೆಳತಿಯರೂ ಇಲ್ಲ.

ಮನದಿಂದ ದೇಹ ಕಂಗಾಲಾಗಿದೆ. ಕಣ್ಣಿನಲ್ಲಿ ನಂಜು ಬೆರೆತು ನೋಡಿದ್ದೆಲ್ಲಾ ಬಯಸುತ್ತದೆ. ಕಿವಿಯಲ್ಲಿ ನಂಜು ಬೆರೆತು ಕೇಳಿದ್ದಕ್ಕೆ ಕುದಿಯುತ್ತದೆ, ನಾಲಿಗೆಯಲ್ಲಿ ನಂಜು ಬೆರೆತು ಪದಾರ್ಥದ ರುಚಿಗೆ ಮಾರುಹೋಗಿದೆ, ಮೂಗು ಚರ್ಮದಿಂದ ದೇಹ ಕಂಗಾಲಾಗಿದೆ. ಅಜ್ಞಾನಕ್ಕೆ ಒಳಗಾಗಿ ಕಂಗಾಲಾದ ದೇಹವನ್ನು ಇನಿಯ (ಗಂಡ ಜ್ಞಾನ) ಮಾತ್ರ ತನ್ನ ತೆಕ್ಕೆಗೆ ಸೆಳೆದುಕೊಳ್ಳಬಲ್ಲ.

ಇನಿಯ :

ಹೆಣ್ಣಿಗೂ ಇನಿಯ, ಗಂಡಿಗೂ ಇನಿಯ. ಹೆಣ್ಣಿಗೂ ಬಯಕೆಯಿದೆ, ಗಂಡಿಗೂ ಬಯಕೆಯಿದೆ. ಇವೆರಡೂ ಬಯಕೆಗಳೆ. ಈ ಬಯಕೆಗಳ ಉದ್ದೇಶವೂ ಒಂದೆ. ಶರಣರ ದೃಷ್ಟಿಯಲ್ಲಿ ಹೆಣ್ಣು ಹೆಣ್ಣಲ್ಲ, ಗಂಡು ಗಂಡಲ್ಲ, ಇವೆರಡೂ ದೇಹಗಳೇ, ಬಯಕೆಗಳಿಂದ ಕಂಗಾಲಾದ ದೇಹಗಳು. ಕಣ್ಣಿನ ದೃಷ್ಟಿದೋಷದಿಂದ ಹೆಣ್ಣು, ಗಂಡಾಗಿ ಕಾಣುತ್ತದೆ. ಇನಿಯ (ಜ್ಞಾನ)ನ ದೃಷ್ಟಿಗೆ ದೇಹವಾಗಿ ಕಾಣುತ್ತದೆ. ದೇಹ ಎಲಬು ತೊಗಲು ಮಾಂಸ ರಕ್ತ ಮಜ್ಜಾ ಮೇದಸ್ಸುಗಳಿಂದ ಕೂಡಿದೆ.

ಕಣ್ಣಿಗೆ ದೇಹ ಹೆಣ್ಣು ಗಂಡಾಗಿ ಕಂಡರೆ ಕಣ್ಣಿನ ಕಣ್ಣಿಗೆ ಹೆಣ್ಣು ಗಂಡುಗಳು

ದೇಪವಾಗಿ ಕಾಣುತ್ತದೆ. ಕಣ್ಣಿನಲ್ಲಿ ಅಜ್ಞಾನದ ನಂಜಿದೆ. ಕಣ್ಣಿನ ಕಣ್ಣಿನಲ್ಲಿ ಇನಿಯ (ಜ್ಞಾನ) ನಿದ್ದಾನೆ.

ದೇಪದ ತುಂಬಾ ಆವರಿಸಿರುವ ಅಜ್ಞಾನದೊಂದಿಗೆ ಕೂಡಿ ತನ್ನಂತೆ ಮಾಡಿಕೊಳ್ಳಬೇಕೆಂಬ ತವಕ ಇನಿಯ (ಜ್ಞಾನ)ನಿಗಿಲ್ಲ, ನನಗೂ (ಮನ) ಸಮಾಧಾನವಿಲ್ಲ, ಇನಿಯನನ್ನು ಸೇರುವ ಬಯಕೆಯಾಗಿದೆ. ಹೇಳಿ ಕೊಡುವ ಸಖಿಯರಿಲ್ಲ, ತೊಳಲಿ ಬಳಲುತ್ತಿದ್ದೇನೆ, ಇನಿಯನನ್ನು ಸೇರುವ ಬಯಕೆಯಿಂದ.

ನನ್ನ ಇನಿಯ ಕಾಮದಿಂದ ಕೂಡಿದವನಲ್ಲ, ಅವನು ಮನ್ಮಥನ ವೈರಿ. ಅವನ ಅನುಭಾವದಲ್ಲಿ ಎನ್ನ ಮನ ಸಿಲುಕಿ ಬಿಡದು. ಇನ್ನೇನು ಮಾಡುವೆನು ಎಲೆ ಕರುಣೆ ಇಲ್ಲದ ತಾಯಿ. ದಿನಗಳು ವ್ಯರ್ಥ ಕಳೆಯುತ್ತಲಿವೆ. ಕಣ್ಣು, ಕಿವಿ, ಮೂಗು, ಚರ್ಮ, ನಾಲಗೆಯ ನಂಜು ವೃದ್ಧಿಯಾಗುತ್ತಲಿದೆ. ಯೌವ್ವನ ಹೋಗಿ ಮುಪ್ಪು ಆವರಿಸದ ಮುನ್ನ ಪಿನಾಕಿಯ (ಶಿವ ಜ್ಞಾನ) ನೆನಹವ್ವಾ ಶಂಭು ಜಕ್ಕೇಶ್ವರ ಎಂದು ತನ್ನ ಇನಿಯ (ಜ್ಞಾನ) ನೊಂದಿಗೆ ಸಂಭಾಷಣೆ ಮಾಡುತ್ತಾ ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವನನ್ನು ಸರ್ವರಿಗೂ ಪರಿಚಯಿಸಿದ್ದಾಳೆ ಮಹಾಜ್ಞಾನಿ ಶರಣೆ ಸತ್ಯಕ್ಕ.

■

ಲಂಚ ವಂಚನೆಗಳಿಗೆ ಇಂಬಾಗದ ಅರಿವಿನ ಮನೆ

ಲಂಚ ವಂಚನಕ್ಕೆ ಕೈಯಾನದ ಭಾಷೆ,
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ ಕೈಮುಟ್ಟಿ
ಎತ್ತಿದೆನಾದೊಡೆ ಅಯ್ಯಾ ನಿಮ್ಮಾಣೆ.
ನೀವಿಕ್ಕಿದ ಭಾಷೆಯೊಳಗಿಪ್ಪೆನಯ್ಯಾ.
ಶಂಭು ಜಕ್ಕೇಶ್ವರ ದೇವಯ್ಯಾ ನಿಮ್ಮಾಣೆ.

– ಶಿವಶರಣೆ ಸತ್ಯಕ್ಕ

ಲಂಚ ವಂಚನಕ್ಕೆ ಕೈಯಾನದ ಭಾಷೆ :

ತನ್ನಂತೆ ಇರುವ ಇತರರಿಗೆ ಲಂಚ. ಇತರರಂತೆ ಇರುವ ತನಗೆ ವಂಚನೆ. ತನ್ನಂತೆ ಇರುವ ಗುರುವಿಗೆ ಲಂಚ. ಗುರುವಿನಂತೆ ಇರುವ ಶಿಷ್ಯನಿಗೆ ಗುರುವಿನಿಂದಲೇ ವಂಚನೆ.

ಅರಿವು, ಅನುಷ್ಠಾನ, ಧ್ಯಾನ, ಯೋಗ, ಜಪ-ತಪಗಳ ಸೋಗು ಹಾಕಿ ಶಿಷ್ಯನಿಂದ ಲಂಚ ಪಡೆಯುವ ಗುರು. ಗುರುವಿನ ವಂಚನೆಗೆ ಒಳಗಾಗಿ ಇತರರನ್ನು ವಂಚಿಸಿ ಗುರುವಿನಲ್ಲಿಗೆ ಕರೆದೊಯ್ಯುವ ಶಿಷ್ಯ. ಪುಸ್ತಕದ ಮಾತಿಗಾಗಿ ಲಂಚ ವಂಚನೆ ಕ್ರಿಯೆ ! ವಂಚಿಸಿದೆನೆಂದು ಗುರುವು, ಕೊಟ್ಟೆನೆಂದು ಶಿಷ್ಯ. ಬೇಡುವವನಿಗು ಬೇಡಿಸಿಕೊಂಬುವವನಿಗೂ ಮುಕ್ತಿಯಿಲ್ಲ ಬೇಡುವವನು ಜಂಗಮನೆ ? ಬೇಡಿಸಿಕೊಂಬುವನು ಭಕ್ತನೆ ಕಾಳಗುರಕಿ ಗುರುವಿಗೆ ಕಾಳಗುರಕಿ ಶಿಷ್ಯ ಇಬ್ಬರಿಗೂ ಮುಕ್ತಿಯಿಲ್ಲ ಎಂದಿದ್ದಾರೆ ಶರಣರು.

ಗುರುವು ಶಿಷ್ಯನ ಅಜ್ಞಾನವನ್ನು ಬೇಡಬೇಕು. ಶಿಷ್ಯ ಜ್ಞಾನವನ್ನು ಕೇಳಬೇಕು. ಹಣ, ಚಿನ್ನ, ಒಡವೆ, ವಸ್ತ್ರ ಭೂಮಿ, ಪಾತ್ರೆ ಪಡಗ ಕೇಳುವವ ಗುರುವು ಹೇಗಾಗುತ್ತಾನೆ ? ಬೇಡುವ ಗುರುವನ್ನು ಶಿಷ್ಯ ನಿರ್ಮಿಸಿದ್ದಾನೆ. ಇವನು ಶಿಷ್ಯನಿಂದಾದವನು. ಶಿಷ್ಯನೇ ಮಠ ಆಶ್ರಮ ಕಟ್ಟಿ, ಆಳುಗಳನ್ನಿಟ್ಟು, ಭೂಮಿ ವಸ್ತ್ರ ಚಿನ್ನ ವಾಹನ ನೀಡಿ, ಗುರುವನ್ನು ಸಾಕಿದ್ದಾನೆ. ಗುರುವಿಗೆ ಲಂಚ ಕೊಟ್ಟಿದ್ದಾನೆ. ಆಳು ಹೋಳು ನೋಡಿಕೊಳ್ಳುವುದೇ ಆತನ ಕೆಲಸ. ವ್ಯತಿರಿಕ್ತವಾದಲ್ಲಿ ಮತ್ತೊಬ್ಬ ಗುರು ಆ ಸ್ಥಾನಕ್ಕೆ ಬರುತ್ತಾನೆ. ಗುರುವಿಗೂ ಅರಿವಿಲ್ಲ, ಶಿಷ್ಯನಿಗೂ ಅರಿವಿಲ್ಲ, ಇವರಿಬ್ಬರೂ ಲಂಚ ವಂಚನೆಗೊಳಗಾದವರು. ಸತ್ಯ (ಜ್ಞಾನ) ಹೇಳಲು ಹಣ ಬೇಕಿಲ್ಲ, ಕೇಳಲೂ ಹಣ ಬೇಕಿಲ್ಲ,

ದಾಸರು ಸತ್ಯದ ಕಲ್ಲು ಸಕ್ಕರೆಯನ್ನು ಸಂತೆಯಲ್ಲಿ ಮಾರಿದರು. ಕೊಳ್ಳುವವರಿ

ಲ್ಲದೆ ಹಾಡಿಬೇಡಿ ಅಳೆದರು. ಗೆಜ್ಜೆ ಕಟ್ಟಿ ಕುಣಿದರು ಜನರನ್ನು ತಮ್ಮತ್ತ ಸೆಳೆದರು. ದಾಸರಿಗೆ ಜನ ಕೇಳುವುದೇ ಲಂಚವಾಗಿತ್ತು. ಕೇಳುವವರಿಗೆ ಸತ್ಯದ, ಅನುಭವದ ಸಕ್ಕರೆ ತಿನ್ನಿಸಿದರು. ದಾಸರು ಜ್ಞಾನಕ್ಕೆ ದಾಸರಾದವರು, ಶಿಷ್ಯರಿಗಲ್ಲ.

ದೇಹ ಅನುಭವ ಮಂಟಪ. ಈ ಅನುಭವ ಮಂಟಪದಲ್ಲಿ ಅಮೃತವೇ ತುಂಬಿದೆ. ಈ ಆನಂದ ಸವಿಯಲು ಲಂಚ-ವಂಚನೆಗಳ ಅವಶ್ಯಕತೆಯಿಲ್ಲ. ಹೇಳಲು ಹಣವಿಲ್ಲ ಕೇಳಲೂ ಹಣವಿಲ್ಲ. ಕಟ್ಟಡಗಳ ಅವಶ್ಯಕತೆ ಮೊದಲೇ ಇಲ್ಲ. ಅಂಗ ಅನುಭವ ಮಂಟಪ, ಅಂಗದ ತುಂಬ ಅರಿವೇ ತುಂಬಿದೆ. ಅದು ಲಿಂಗ. ಸರ್ವಾಂಗದಲ್ಲಿ ತುಂಬಿರುವ ಆ ಅರಿವಿಗೆ ಶರಣಾದವರು ಶರಣರು. ವ್ಯಕ್ತಿಗೆ ಶರಣಾಗಲಿಲ್ಲ, ವ್ಯಕ್ತಿಯಲ್ಲಿ ತುಂಬಿರುವ ಅವ್ಯಕ್ತ ಜ್ಞಾನಕ್ಕೆ ಶರಣಾದರು. ಅರಿವು ಎಲ್ಲರ ಹೃದಯದಲ್ಲಿಯೂ ಇದೆ. ಯಾರಿಗೆ ಲಂಚ ಕೊಡಬೇಕು. ಅರಿವಿಗೆ ಲಂಚ ಬೇಕೆ ? ಅಜ್ಞಾನಕ್ಕೆ ಲಂಚ. ಗುರುವಿನಲ್ಲಿಯೂ ಅರಿವಿದೆ. ಭಕ್ತನಲ್ಲಿಯೂ ಅರಿವಿದೆ. ಮಂತ್ರಿಯಲ್ಲಿಯೂ ಅರಿವಿದೆ ಅಧಿಕಾರಿಯಲ್ಲಿಯೂ ಅರಿವಿದೆ. ಅರಿವು ಮರೆಯಾದುದಕ್ಕೆ ಲಂಚ. ಜಾಗೃತವಾದರೆ ಲಂಚ ಕೊಡಲಿಲ್ಲ ತೆಗೆದುಕೊಳ್ಳಲಿಲ್ಲ, ವಂಚನೆ ಮಾಡಲಿಲ್ಲ ಮಾಡಿಸಿಕೊಳ್ಳಲಿಲ್ಲ. ಲಂಚ ವಂಚನೆಗೆ ಕೈಯಾನದ ಭಾಷೆ ಎಂದು ಸತ್ಯದ ಸೂತ್ರ ಬಿಚ್ಚಿದ್ದಾರೆ ಸತ್ಯಕ್ಕ.

ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ ಕೈಮುಟ್ಟಿ ಎತ್ತಿದೆನಾದೊಡೆ ಅಯ್ಯಾ ನಿಮ್ಮಾಣೆ :

ಬಟ್ಟೆ ಎಂದರೆ ದೇಹ. ಇದನ್ನು ಸಂತರು ಕೈವಲ್ಯ ಕಲ್ಪವಲ್ಲರಿ ಎಂದಿದ್ದಾರೆ. ಸಕಲ ವಸ್ತುಗಳು ಈ ದೇಹದಿಂದಲೇ ಸೃಷ್ಟಿಯಾಗಿವೆ. ದೇಹದಿಂದ ಸೃಷ್ಟಿಯಾದ ವಸ್ತುಗಳಿಗೆಲ್ಲ ದೇಹವೇ ಮಾರು ಹೋಗಿದೆ. ವಸ್ತುಗಳಿಂದ ದೇಹ ಚಂಚಲವಾಗುತ್ತದೆ. ವಿಕೃತವಾಗುತ್ತದೆ. ಸುಣ್ಣ ಹಾಕಿ ಕಲಕಿದ ಮಡಕೆಯಂತಾಗುತ್ತದೆ.

ಕಬ್ಬಿಣ ತನ್ನಿಂದಲೇ ಸೃಷ್ಟಿ, ಚಿನ್ನ ತನ್ನಿಂದಲೇ ಸೃಷ್ಟಿ. ಎರಡೂ ಲೋಹಗಳೇ. ಒಂದಕ್ಕೆ ಚಿನ್ನವೆಂದ ಮತ್ತೊಂದಕ್ಕೆ ಕಬ್ಬಿಣವೆಂದ. ಕಬ್ಬಿಣದ ತುಂಡು ನೋಡಿ ಮುಟ್ಟಲೂ ಇಲ್ಲ, ಚಿನ್ನದ ಎಳೆಗೆ ಮಾರು ಹೋದ. ದೇಹವೆಂಬ ಬಟ್ಟೆಯಿಂದ(ಜ್ಞಾನದಿಂದ) ಚಿನ್ನ ಸೃಷ್ಟಿಯಾಯಿತು. ಚಿನ್ನ ಕಂಡ ದೇಹಗಳಿಗೆಲ್ಲ ಕದಿಯುವ ಬಯಕೆ. ಜಗಳ-ಯುದ್ಧ ಚಿನ್ನಕ್ಕಾಗಿ ನಡೆಯಿತು. ದೇಹವೆಂಬ ಬಟ್ಟೆಯಲ್ಲಿ ಅರಿವು ಜಾಗೃತವಾದರೆ ಚಿನ್ನ ಬಿದ್ದರೇನು ವಜ್ರ ಬಿದ್ದರೇನು? ಹಣ ಬಿದ್ದರೇನು. ದೇಹವೆಂಬ ಬಟ್ಟೆ ಲೋಹವೆಂದು ತಿಳಿಯುತ್ತದೆ. ಕರೆನ್ಸಿಯನ್ನು ಕಾಗದವೆಂದು ತಿಳಿಯುತ್ತದೆ. ಕೈಮುಟ್ಟುವುದಿಲ್ಲ. ಎತ್ತುವುದಿಲ್ಲ ಎತ್ತಿದರೆ ನಿಮ್ಮಾಣೆ ಎಂದು ಜ್ಞಾನದ ಮೇಲೆ ಆಣೆ ಇಟ್ಟಿದ್ದಾಳೆ ಸತ್ಯಕ್ಕ.

ನೀವಿಕ್ಕಿದ ಭಾಷೆಯೊಳಗಿಪ್ಪೆನಯ್ಯಾ, ಶಂಭು ಜಕ್ಕೇಶ್ವರ ದೇವಯ್ಯಾ ನಿಮ್ಮಾಣೆ :

ಶರಣರು, ದಾಸರು, ಸಂತರು, ಬುದ್ಧ, ಕ್ರಿಸ್ತ, ಮಹಾವೀರ ಮುಂತಾದ ಜ್ಞಾನಿಗಳು ದೇಹದಲ್ಲಿ ತುಂಬಿರುವ ಜ್ಞಾನದೊಂದಿಗೆ ಮಾತನಾಡಿದರು. ಜ್ಞಾನಕ್ಕೆ

ಅಂಕಿತನಾಮವಿಟ್ಟರು. ಸತ್ಯಕ್ಕ ತನ್ನ (ದೇಹ) ಬಟ್ಟೆಯ ಸತ್ಯಕ್ಕೆ ಶಂಭು ಜಕ್ಕೇಶ್ವರನೆಂದು ನಾಮಕರಣ ಮಾಡಿದ್ದಾಳೆ. ತಾನು ಸತ್ಯ, ತನ್ನ ಬಟ್ಟೆಯ ಭಾಷೆಯೂ ಸತ್ಯ. ಅದು ನುಡಿದು ಹೇಳುವ ಭಾಷೆಯೂ ಸತ್ಯ ! ವಸ್ತುವಿನ ಅನಾವರಣ ಮಾಡುವ ಶಕ್ತಿ ಸತ್ಯಕ್ಕೆ ಮಾತ್ರ ಇದೆ. ಸತ್ಯದ ಬಟ್ಟೆ (ದೇಹ)ಗೆ ಹೊನ್ನು ಲೋಹವಾಗಿ ಕಂಡಿತು. ವಸ್ತ್ರ ನೂಲಾಗಿ ಕಂಡಿತು. ಇದು (ದೇಹ) ಬಟ್ಟೆಯ ಬೆಡಗು, ಸತ್ಯದ ಭಾಷೆಗೆ ಮಾತ್ರ ಬಿಚ್ಚಲು ಸಾಧ್ಯ. ಸತ್ಯದ ಭಾಷೆ ಸರ್ವರ ಭಾಷೆ. ಈ ಭಾಷೆಯ ಮೇಲೆ ಆಣೆ ಇಟ್ಟು ಸರ್ವರೂ ಸವಿಯಲೆಂದು ಡಂಗುರ ಹೊಡೆದು ಹೇಳಿದ್ದಾಳೆ ಶಿವಶರಣೆ ಸತ್ಯಕ್ಕ.

■

ಜ್ಞಾನ ಮೊದಲೊ ದೇವರು ಮೊದಲೊ ?

ಆದಿಯಲ್ಲಿ ದೇವಾ ನಿಮ್ಮನಾರು ಬಲ್ಲರು ?
ವೇದಂಗಳು ಮುನ್ನಲತ್ತತ್ತಲರಿಯವು.
ವೇದಿಗಳು ಪರಬ್ರಹ್ಮವೆಂದೆಂಬರು.
ನಾದ ಬಿಂದು ಕಲಾತೀತನೆಂದೆಂಬರು.
ಸಾಧು ಸಜ್ಜನ ಸದ್ಭಕ್ತರಿಚ್ಛೆಗೆ ಬಂದೆಯಾಗಿ
ಈಗೀಗ ದೇವನಾದೆ ಶಂಭು ಜಕ್ಕೇಶ್ವರನು.

– ಶಿವಶರಣೆ ಸತ್ಯಕ್ಕ

ಆದಿಯಲ್ಲಿ ದೇವಾ ನಿಮ್ಮನಾರು ಬಲ್ಲರು ? ವೇದಂಗಳು ಮುನ್ನಲತ್ತತ್ತಲರಿಯವು :

ವೇದಗಳು ಜೀವನನ್ನು ಕುರಿತು ಹೇಳಿದವು. ಕರ್ಮಜ್ಞಾನ, ಉಪಾಸನಾ ಜ್ಞಾನ, ಜ್ಞಾನಕಾಂಡದ ಜ್ಞಾನ ಈ ಮೂರು ದೋಷ ನಿವೃತ್ತಿ ಮಾಡುವ ಕುರಿತು ಹೇಳಿದವು. ಇದಕ್ಕೂ ಮುನ್ನ ಏನೆಂದು ತಿಳಿಯಲಿಲ್ಲ, ಆದಿ ಅನಾದಿ ಕಾಲಗಳಿಂದಲೂ ನನ್ನಿಂದಲೆ ಇವು ಸೃಷ್ಟಿಯಾಗಿ ಬೇತಾಳನಂತೆ ನನ್ನ ಬೆನ್ನು ಬಿದ್ದವೆಂದು ನಾನೇ ತಿಳಿಯಲಿಲ್ಲ.

"*ಕಾಳಿಕಂಕಾಳದಿಂದ ಮುನ್ನ ಉಮೆಯ ಕಲ್ಯಾಣದಿಂದ ಮುನ್ನ ಹರಿವಿರಂಚಿಗಳಿಂದ ಮುನ್ನ. ಮುನ್ನ ಮುನ್ನ ಮುನ್ನ ಅಂದಿಂಗೆಳೆಯ ನೀನು ಹಳೆಯ ನಾನು ಮಹಾದಾನಿ ಕೂಡಲ ಸಂಗಮದೇವಾ*" ಬಸವಣ್ಣನವರು ತನ್ನಿಂದ ಸೃಷ್ಟಿಯಾದ ದೇವರನ್ನು ಎಳೆಯನೆಂದು ತಾನು ಹಳೆಯನೆಂದು ಹೇಳಿದ್ದಾರೆ.

ಕಾಳಿ ಕಂಕಾಳಿ ಉಮೆ, ಹರಿ, ವಿಷ್ಣು, ಬ್ರಹ್ಮ ಮುಂತಾದವರ ಕತೆಗಳನ್ನು, ಚಿತ್ರಗಳನ್ನು ಮನುಷ್ಯನೇ ಬರೆದು ದೇವರನ್ನೇ ಮುಂದೆ ಮಾಡಿ ತಾನು ಹಿಂದೆ ಬಿದ್ದಿದ್ದಾನೆ. ವೇದಗಳಾಗಲಿ ದೇವರಾಗಲಿ ತಮ್ಮ ಸೃಷ್ಟಿಗೆ ಕಾರಣವಾದ ಅರಿವನ್ನು ಅವು ಅರಿಯಲಿಲ್ಲ, ಏಕೆಂದರೆ ಆ ಅರಿವಿನಿಂದಲೇ ಅವು ಸೃಷ್ಟಿಯಾದವು. ದೇವರನ್ನು ವೇದಗಳನ್ನು ಸೃಷ್ಟಿ ಮಾಡಿದ ಅರಿವು ಮರೆವಾಗಿ ಅವುಗಳಿಂದಲೇ ಮನುಷ್ಯ ಆಳಿಸಿಕೊಳ್ಳ ಹತ್ತಿದ. ಅವುಗಳಿಗೆ ಜೀವವಿಲ್ಲ, ಜೀವವಿದ್ದವನು ಅವುಗಳನ್ನು ತಿಳಿಯಲು ಸಾಧ್ಯವಾಗುತ್ತಿಲ್ಲ, ತನ್ನಿಂದಲೇ ಸೃಷ್ಟಿಯಾಗಿ ಬೃಹದಾಕಾರವಾಗಿ ಬೆಳೆದಿವೆ. ಸೃಷ್ಟಿಯಾದದ್ದು ತನ್ನಲ್ಲಿಯೇ, ಅವು ತನ್ನಲೇ ನಷ್ಟವಾಗಬೇಕು. ತನ್ನನ್ನು ತಾನು ತಿಳಿಯಬೇಕು. ತಾನು ಮುನ್ನವೋ, ವೇದಗಳು ಮತ್ತು ದೇವರು ಮುನ್ನವೋ ಎಂದು ತನ್ನಲ್ಲಿ ತಾನು ತಿಳಿಯುವ ಸತ್ಯವನ್ನು ಶಿವಶರಣೆ ಸತ್ಯಕ್ಕ ಸಾರಿದ್ದಾರೆ.

ವೇದವನೋದಿದ ವೇದಿಗಳು ಪರಬ್ರಹ್ಮ, ನಾದ ಬಿಂದು, ಕಲಾತೀತನೆನ್ನುತ್ತಾರೆ.

ಸಾಧು, ಸಜ್ಜನ, ಸದ್ಭಕ್ತರ ಅರಿವಿಗೆ ಬಂದ ಕಾರಣ ಈಗೀಗ ದೇವನಾದೆ. ಶಂಭು ಜಕ್ಕೇಶ್ವರ (ಜ್ಞಾನ)ನೆಂಬ ದೇವ ತನ್ನಲ್ಲಿಯೇ ತನ್ಮಯನಾದ ಕಾರಣ ತನ್ನರಿವೇ ತನಗೆ ದೇವರಾದುದು ವೇದ್ಯವಾಯಿತು. ಅರಿವೇ ಗುರುವಾಯಿತು. ಅರಿವೇ ದೇವರಾಯಿತು. ಆ ದೇವರೇ ತಾನಾದ.

ಇದು ಶಿವಶರಣೆ ಸತ್ಯಕ್ಕಳ ಸತ್ಯದ ದೇವರನ್ನು ಅರಿಯುವ ಸೂತ್ರ. ಅರಿವಿನ ಸೂತ್ರ.

■

ಮರೆದಡೆ ಎಚ್ಚರಿಸುವ ಅಂತರಂಗದ ಅರಿವು

ಹೊರಗಿದ್ದಹನೆಂದು ಮರೆದು ಮಾತನಾಡಿದೆ
ಅರಿಯಲೀಯದೆ ಬಂದೆನ್ನ ಅಂತರಂಗದಲ್ಲಿಪ್ಪನು.
ತೆರಹಿಲ್ಲದಭವ ನುಡಿಗೆಡೆಗೊಡನು
ಆತನ ಬಯಲಿಂಗೆ ಬೇಟೆಗೊಂಡೆನವ್ವಾ.
ನಾನೇನ ಮಾಡುವೆನೆಲೆ ತಾಯೆ ಮರೆದಡೆ ಎಚ್ಚರಿಸುವ
ಕುರುಹಿಲ್ಲದ ಗಂಡನು. ತನ್ನನರಿದಡೆ ಒಳ್ಳಿದನವ್ವಾ
ನಮ್ಮ ಶಂಭು ಜಕ್ಕೇಶ್ವರನು.

– ಶಿವಶರಣೆ ಸತ್ಯಕ್ಕೆ

ಹೊರಗಿದ್ದಹನೆಂದು ಮರೆದು ಮಾತನಾಡಿದೆ ಅರಿಯಲೀಯದೆ ಬಂದೆನ್ನ ಅಂತರಂಗದಲ್ಲಿಪ್ಪನು :

ದೇವರ ನಾಮ ಜಪಿಸಿ ಯೋಗ, ಧ್ಯಾನ,ಧಾರಣ ಮಾಡಿ ; ತಿರುಪತಿ ವೆಂಕಟ ರಮಣ ಜ್ಯೋತಿರ್ಲಿಂಗಗಳನ್ನು ಪೂಜಿಸುವ ಮೂಲಕ, ದೇವರನ್ನು ಆರಾಧಿಸುತ್ತಾರೆ. ದೇವರು ಹೊರಗಿದ್ದಾನೆಂದು ಕತೆ ಮಾಡಿ ಹೇಳುತ್ತಾರೆ.

ದೇವರ ಮೂರ್ತಿ ಮಾಡಿದವನು ತಾನೆ, ಮಂದಿರ ಕಟ್ಟಿಸಿದವನು ತಾನೆ. ದೇವರ ಕತೆ ಬರೆದವನು ತಾನೆ, ಮರೆತು ಮಾತನಾಡಿ ಪೂಜಿಸುವವನು ತಾನೆ. ದಾರಿ ಕ್ರಮಿಸಿ ದೂರದೂರಿಗೆ ಹೋಗಿ ಸಾಲಿನಲ್ಲಿ ನಿಂತು ಹಣ ನೀಡಿ ಚೀಟಿ ಪಡೆದು ಮೂರ್ತಿ ನೋಡಿ ದೂಕಿಸಿಕೊಂಡವನು ತಾನೆ. ಧನ್ಯನಾದೆನೆಂದು ನುಡಿದು ಹೇಳಿದವನು ತಾನೆ.

ಅರಿವು ಮರೆವಾಗಿದೆ. ಮರೆವೇ ಮನ. (ಅಜ್ಞಾನ) ಅರಿವೇ ಘನ. (ಜ್ಞಾನ) ತಾನು ಕೊಟ್ಟ ಹಣದಿಂದಲೇ ಮಂದಿರ, ತಾನು ಕೊಟ್ಟ ಹಣದಿಂದಲೇ ರಥ, ತಾನು ಕೊಟ್ಟ ಹಣದಿಂದಲೇ ಉತ್ಸವ, ತಾನು ಕೊಟ್ಟ ಹಣದಿಂದಲೇ ದೇವರ ಮದುವೆ ಕಲ್ಯಾಣ. ತಾನು ಕೊಟ್ಟ ಹಣದಿಂದಲೇ ಊಟ. ಇದೆಲ್ಲವನ್ನು ಮರೆತು ಅಲ್ಲಿಯ ವೈಭವ, ಭವ್ಯ ಕಟ್ಟಡಗಳು, ಊಟ ಉಡುಗೆ ತೊಡಿಗೆಗಳ ಗುಣಗಾನ ಮಾಡುವುದು. ವರ್ಷಕ್ಕೊಮ್ಮೆ ಎರಡು ಬಾರಿ ದರ್ಶನ ಮಾಡಿ ಧನ್ಯನಾದೆನೆಂದು ಹೇಳುವುದು, ಮಾಡುವ ಅಜ್ಞಾನದ ಕೆಲಸಗಳನ್ನು ಒಮ್ಮೆಯೂ ತಿಳಿಯಲು ಹೋಗಲಿಲ್ಲ.

ಅರಿಯಲು ಹೋದರೆ ಮರೆವಿನ ಕೆಲಸ ಗೋಚರಿಸುತ್ತದೆ. 'ಮನದೆರೆದು ಮಾತ

ನಾಡಿದರೆ ಲಿಂಗವ ಕಾಣಬಹುದು' ಮನ (ಅಜ್ಞಾನ) ಸುಸಿ ಮಾತನಾಡಿದರೆ ಲಿಂಗ (ಜ್ಞಾನ ದೇವರು)ಕಾಣಬಹುದು. ಮರೆತು ಮಾತನಾಡುವುದೇ ಅಜ್ಞಾನ, ಅರಿತು ನೋಡುವುದೇ ಜ್ಞಾನ. ಅರಿವು ಅಂತರಂಗದಲ್ಲಿದೆ.

ತೆರಹಿಲ್ಲದಭವ ನುಡಿಗೆಡೆಗೊಡನು, ಆತನ ಬಯಲಿಂಗೆ ಬೇಟೆಗೊಂಡೆನವ್ವಾ :

ನುಡಿಗೆ ಅವಕಾಶಕೊಡದಂತಹ ಅರಿವು ಅಂತರಂಗದಲ್ಲಿದ್ದರೂ ನುಡಿಯ ಹೇಳುತ್ತೇವೆ. ನುಡಿಯಿಂದ ಪೂಜಿಸುತ್ತೇವೆ. ಸ್ತುತಿಸಿ ಆರಾಧಿಸುತ್ತೇವೆ. ಮರೆವಿನ ಲೀಲೆ ಅನಂತ. ಅದು ತನಗೆ ತಾನೇ ಅಂಟಿಸಿಕೊಂಡ ಬೇತಾಳ. ತಾನೇ ಮಾಡುವುದು ತಾನೇ ಪೂಜಿಸುವುದು. ತಾನೇ ನುಡಿವುದು. ತಾನೇ ಆರಾಧಿಸುವುದು. ಇದು ತನಗಂಟಿದ ಬ್ರಹ್ಮ ರಾಕ್ಷಸ. ಮರೆವಿನ ಕಾಳಕೂಟ ವಿಷ.

ಗುರುದೇವೋ ಮಹಾದೇವೋ ಗುರುದೇವೋ ಸದಾಶಿವಃ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರೀ ಗುರುವೇ ನಮಃ ಅರಿವೇ ಗುರು, ಆ ಗುರು ದೇವನೆ ಮಹಾದೇವ, ಸದಾಶಿವ, ಸಾಕ್ಷಾತ್ ಪರಬ್ರಹ್ಮನೂ ಕೂಡ ಅವನೇ ಎಂದು ಅನಂತ ಕಾಲದಿಂದಲೂ ನುಡಿದು ಹೇಳುತ್ತಾನೆ. ಅರಿವೇ ತಾನಾಗಲು ಒಲ್ಲ, ನುಡಿಗೂ ಪೂಜೆಗೂ ಅವಕಾಶ ಕೊಡದಂತೆ ತನ್ನ ಅಂತರಂಗದ ಸರ್ವಾಂಗದಲ್ಲಿ ತುಂಬಿಕೊಂಡಿರುವ ಅರುವಿನ ಮಹಾಜ್ಞಾನಿಯ ಬಯಲ ಬೇಟೆಗೆ ತುತ್ತಾಗಿರುವೆನು ಎಂದಿದ್ದಾಳೆ ಶರಣೆ ಸತ್ಯಕ್ಕ.

ನಾನೇನು ಮಾಡುವೆನೆಲೆ ತಾಯೆ ಮರೆದಡೆ ಎಚ್ಚರಿಸುವ ಕುರುಹಿಲ್ಲದ ಗಂಡನು:
ಮೂರ್ತಿ ಮಾಡಿ ಪೂಜಿಸಲು ಹೋದಡೆ ಕಲ್ಲೆಂದು ಎಚ್ಚರಿಸುವನು. ಹೋಮ ಯಜ್ಞ ಮಾಡಲು ಹೋದರೆ ತಿನ್ನುವ ಪದಾರ್ಥಗಳು ಸುಡಬೇಡವೆಂದು ಜರಿಯುವನು. ಕತೆ ಮಾಡಿ ಹೇಳಲು ಹೋದರೆ ಕತೆ ಬರೆದವನು ನೀನೇ ಎಂದು ಮೂದಲಿಸುವನು. ನಾನೇನು ಮಾಡಲಿ ; ಮರೆತು ಪೂಜಿಸಲು ನುಡಿಯಲು ಹೋದರೆ ಮಾಡುವ ಪೂಜೆಗೆ ನುಡಿಯುವ ನುಡಿಗೂ ಅವಕಾಶ ಕೊಡದಂತೆ ಕುರುಹಿಲ್ಲದ ಗಂಡ : ಅಂಗ ಕುರುಹು, ಅಂಗವನ್ನು ಹೊತ್ತ ಲಿಂಗ ಜ್ಞಾನ ಕುರುಹಿಲ್ಲದ ಗಂಡ, ಶರಣ ಸತಿ ಲಿಂಗ ಪತಿ.

ಜ್ಞಾನ ಗಂಡನನ್ನು ಅರಿತು ನಡೆದ ಸತಿ ಗರತಿಯಾಗುತ್ತಾಳೆ. ಒಳ್ಳೆಯ ಹೆಂಡತಿ ಎನ್ನಿಸಿಕೊಳ್ಳುತ್ತಾಳೆ. ಇದು ಮರೆತು ಮಾತನಾಡಲು ಅವಕಾಶ ಮಾಡಿಕೊಡದ ಅಂತರಂಗದಲ್ಲಿಯ ಕುರುಹಿಲ್ಲದ ಗಂಡನ ಸೂತ್ರ. ತನ್ನನರಿಯುವ ಸೂತ್ರ. ಶಂಭುಜಕ್ಕೇಶ್ವರನ ಸೂತ್ರ. ಶಿವಶರಣೆ ಸತ್ಯಕ್ಕಳ ಸತ್ವದ ಸೂತ್ರ.

■

ಜ್ಞಾನ ತಿಳಿಯಲು ಶಾಸ್ತ್ರಬೇಕೆ ?

ಆಧಾರ ಸ್ವಾಧಿಷ್ಠಾನ ಮಣಿಪೂರಕ
ವಿಶುದ್ಧಿ ಆಜ್ಞೇಯುವ ನುಡಿದಡೇನು?
ಆದಿ ಅನಾದಿಯ ಸುದ್ದಿಯ ಕೇಳಿದಡೇನು ಹೇಳಿದಡೇನು?
ತನ್ನಲ್ಲಿದ್ದುದ ತಾನರಿಯದನ್ನಕ್ಕರ.
ಉನ್ಮನಿಯ ರಭಸದ ಮನ ಪವನದ ಮೇಲೆ
ಚೆನ್ನಮಲ್ಲಿಕಾರ್ಜುನಯ್ಯನ ಭೇದಿಸಲರಿಯರು.

-ಅಕ್ಕ ಮಹಾದೇವಿ

ಆಧಾರ ಸ್ವಾಧಿಷ್ಠಾನ ಮಣಿಪೂರಕ ವಿಶುದ್ಧಿ ಆಜ್ಞೇಯುವ ನುಡಿದಡೇನು? :

ಆಧಾರ ಆಜ್ಞೇಯ ಸಹಸ್ರ ಸೇರಿದಂತೆ ಗುದದ್ವಾರದಿಂದ ನೆತ್ತಿಯವರೆಗೆ ಇರುವ ಆರು ಚಕ್ರಗಳು.ಕುಂಡಲಿನಿ ವಿದ್ಯೆಯ ಮೂಲಕ ಅನುಷ್ಠಾನ ಮಾಡಿದರೆ ಈ ಚಕ್ರಗಳು ಒಲಿಯುತ್ತವೆ ಎಂದು ಶಾಸ್ತ್ರ ಗ್ರಂಥಗಳು ಹೇಳುತ್ತವೆ. ಸಾಧಕರು ಕೂಡ ಇವುಗಳ ಬೆನ್ನು ಬಿದ್ದು ಒಲಿಸಿಕೊಂಡೆವೆಂದು ಹೇಳುತ್ತಾರೆ. ಶಿಷ್ಯರನ್ನು ಮಾಡಿಕೊಂಡು ಅವರಿಗೆ ಬೋಧಿಸುತ್ತಾರೆ. ಈ ವಿದ್ಯೆ ಒಲಿತರೆ ನೆಲ ಬಿಟ್ಟು ಮೇಲೆ ಹಾರುತ್ತೇವೆ ಎಂದು ಸಾಧನೆ ಮಾಡುವವರು ಹೇಳುತ್ತಾರೆ. ಆಯುಷ್ಯ ಪೂರ್ತಿ ಚಕ್ರಗಳನ್ನು ಒಲಿಸಿಕೊಳ್ಳಲು ಕಾಲ ಕಳೆಯುತ್ತಾರೆ. ಮೇಲೆ ಹಾರಲು ಅಷ್ಟೊಂದು ಸಮಯ ಬೇಕೇ ?ವಿಮಾನದಲ್ಲಿ ಕುಳಿತರೆ ಕ್ಷಣಾರ್ಧದಲ್ಲಿ ಮೇಲೆ ಹಾರುವುದಿಲ್ಲವೆ ?

ರಾಮಕೃಷ್ಣ ಪರಮಹಂಸರು ಒಮ್ಮೆ ನೀರಿನ ಮೇಲೆ ನಡೆಯುವ ಸಂತನನ್ನು ನೋಡಿದರು. ಸಾಧಿಸಲು ಎಷ್ಟು ವರ್ಷ ಬೇಕಾಯಿತೆಂದು ಕೇಳಿದರು. 12 ವರ್ಷಗಳ ತಪಸ್ಸು ಇದು ಎಂದು ಹೇಳಿದರು ಸಂತರು. ಪೂಜ್ಯರೆ ಬಹಳಷ್ಟು ಸಮಯ ಹಾಳಾಯಿತು. ನಾನು ನೋಡಿ ಈಗಲೇ ಹೋಗುತ್ತೇನೆಂದು ನಾಲ್ಕಾಣೆ ಕೊಟ್ಟು ಪುಟ್ಟಿಯಲ್ಲಿ ಕುಳಿತು ಆಚೆ ದಂಡೆಗೆ ಹೋದರು. ಹಾವು,ಮೀನು, ಕಪ್ಪೆ.ಮೊಸಳೆ ನೀರಲ್ಲಿ ಇರುತ್ತವೆ. ಅವು ಸಂತರಾಗಲರಿಯವು. ಹದ್ದು, ಕಾಗೆ,ಗಿಡುಗ ಕೂಡಾ ಹಾರುತ್ತವೆ.ಅವು ಕೂಡಾ ಸಂತರಾಗಲರಿಯವು ಎಂದು ಅಕ್ಕ ಖಂಡಿಸಿದ್ದಾಳೆ.

ಆದಿ ಅನಾದಿಯ ಸುದ್ದಿಯು ಕೇಳಿದಡೇನು ಹೇಳಿದಡೇನು ತನ್ನಲ್ಲಿದ್ದುದ ತಾನರಿಯದನ್ನಕ್ಕರ:

ಆದಿ ಅನಾದಿ ಕಾಲದಿಂದ ಬಂದ ಶಾಸ್ತ್ರಗಳನ್ನು ಓದಿದಡೇನು ಕೇಳಿದಡೇನು ಹೇಳಿದಡೇನು ? ಅವೆಲ್ಲವೂ ತನ್ನಲ್ಲಿದ್ದುವೆ, ತನ್ನಂತರಂಗದಿಂದ ಪುಸ್ತಕ ಸೇರಿ ಶಾಸ್ತ್ರಗಳಾ

ದವು, ಶಾಸ್ತ್ರ ಓದಿ ಕಲಿತುಕೊಂಡರೆ ಶಾಸ್ತ್ರಿಯಾದ, ಬರೆದರೆ ಪಂಡಿತನಾದ, ಜಪ ಮಾಡಿದರೆ ಮುನಿಯಾದ. ತನ್ನಲ್ಲಿದ್ದುದನ್ನು ತಾನು ಅರಿಯಲು ಹೊರಗಿನ ಶಾಸ್ತ್ರ ಬೇಕೆ? ಜಪತಪ ಮಾಡಬೇಕೇ? ಇರುವುದು ಒಂದು ದೇಹ. ಅದರ ತುಂಬಾ ಜ್ಞಾನವೇ ಇದೆ. ಅದನ್ನು ತಿಳಿಯಲು ಶಾಸ್ತ್ರ ಓದಬೇಕೇ? ಒಂದನ್ನು ಆರು ಮಾಡಬೇಕೆ ? ಆರನ್ನು ಮೂವತ್ತಾರು ಮಾಡಬೇಕೇ? ಮತ್ತೆ ಒಂದು ಮಾಡಬೇಕೆ ? ತನ್ನಲ್ಲಿರುವ ಒಂದನ್ನು (ಜ್ಞಾನ) ನೋಡಿ ಅದು ತಾನೇ ಆದರೆ ಸಾಲದೇ? ಇದು ಯಾವ ಶಾಸ್ತ್ರ? ಇದು ಯಾವ ಪಾಂಡಿತ್ಯ ? ತನ್ನಲ್ಲಿದ್ದುದ ತಾನರಿಯದನ್ನಕ್ಕರ ? ಬೆಳಕೂ ಇದೆ, ಕತ್ತಲೂ ಇದೆ ಇದೇನು ಚೋದ್ಯವೋ ? ಆನೆಯೂ ಸಿಂಹವೂ ಒಂದೆಡೆ ಉಂಬುವಂತೆ ಎಂದು ಅಲ್ಲಮಪ್ರಭುಗಳು ಕೂಡ ಶಾಸ್ತ್ರವನ್ನು ಖಂಡಿಸಿ ತನ್ನಲಿರುವ ಜ್ಞಾನ ಸಂಪತ್ತು ತೋರಿಸುತ್ತಾರೆ.

ಉನ್ಮನಿಯ ರಭಸದ ಮನ ಪವನದ ಮೇಲೆ ಚೆನ್ನಮಲ್ಲಿಕಾರ್ಜುನಯ್ಯನ ಭೇದಿಸಲರಿಯರು :

ಮನ ಊಸರವಳ್ಳಿ, ಕ್ಷಣಕ್ಕೊಂದು ಬಣ್ಣ ಬದಲಾಯಿಸುತ್ತದೆ. ಮನಕ್ಕೆ ಜ್ಞಾನದ ಬಯಕೆಯಾದರೆ ಸಾಕು ವೇದ ವೇದಾಂತ ಶಾಸ್ತ್ರ ಪುರಾಣ, ಜಪತಪ ಮಾಡಲು ಹಿಮಾಲಯಕ್ಕೆ ಹೋಗಿ ಆಧಾರ- ಆಜ್ಞೇಯದಿಂದ ಹಿಡಿದು ಸಹಸ್ರದವರೆಗೆ ಕಲಿತು ಕುಂಡಲಿನಿ ವಿದ್ಯೆಗೆ ಕೈ ಹಾಕುತ್ತದೆ. ಇವು ಹೊರಗಿಲ್ಲ ಒಳಗಿದೆ ಎನ್ನುವ ಅರಿವು ಮನಕ್ಕೆ ಬರುವುದಿಲ್ಲ. ಗಾಳಿಯಂತೆ ಅದರ ವೇಗ. ದೇಹದೊಳಗಿದ್ದ ಜ್ಞಾನವನ್ನು ಭೇದಿಸಲರಿಯದು.

ಜ್ಞಾನ ದೇಹದಲ್ಲಿದೆ. ಆದರೆ ಮನ ದೇಹವನ್ನು ಪುಸ್ತಕ- ಪುರಾಣ, ಪುಣ್ಯಕ್ಷೇತ್ರ, ಜಪತಪ, ಹಿಮಾಲಯ, ಹಳ್ಳ ಕೊಳ್ಳ, ದೇವಸ್ಥಾಗಳನೆಲ್ಲ ಸುತ್ತಿಸಿ ಕೊನೆಗೆ ದೇಹಕ್ಕೆ ಕರೆದು ತಂದರೆ ತರಬಹುದು ಇಲ್ಲದಿದ್ದರೆ ಸುತ್ತುವುದರಲ್ಲಿಯೇ ಆಯುಷ್ಯ ಕಳೆಯಬಹುದು.

ಉನ್ಮನಿಯ ಮನ ರಭಸದ ಮನ. ಮನಕ್ಕೆ ಮುಕ್ತಿಯ ಬಯಕೆಯಾಗಿದೆ. ಮುಕ್ತಿಗಾಗಿ ಅಲ್ಲಿ ಇಲ್ಲಿ ಸುತ್ತುವುದು. ದೇವಸ್ಥಾನ ಕಟ್ಟುವುದು. ರಥ ನಿರ್ಮಿಸಿ ಎಳೆಯುವುದು. ಶಾಸ್ತ್ರಪುರಾಣ ಪ್ರವಚನ ಮಾಡುವುದು. ಗುರುಗಳನ್ನು ಕರೆಸಿ ಪಾದಪೂಜೆ ಮಾಡಿಸುವುದು. ದೀಕ್ಷೆ ತೆಗೆದುಕೊಂಡು ಮಂತ್ರ ಜಪಿಸುವುದು. ಒಂದೇ ಎರಡೇ ಉನ್ಮನಿಯ ಮನದ ಕೆಲಸ ಅನೇಕ. ಸುತ್ತಿಸುಳಿವ ಮನವನ್ನು ಕಟ್ಟಿ ದೇಹದಲ್ಲಿಯೇ ಜ್ಞಾನ ದರ್ಶನ ಭಾಗ್ಯ ಕಲ್ಪಿಸುವ ವೀರ ಗುರು ಬೇಕು. ಆ ಮಹಾವೀರನನ್ನು ಈ ಮನವೇ ಹುಡುಕಬೇಕು. ಅಲ್ಲಿಗೆ ಈ ಮನಕ್ಕೆ ಮುಕ್ತಿ. ಚೆನ್ನಮಲ್ಲಿಕಾರ್ಜುನ (ಜ್ಞಾನ)ಯ್ಯನ ದರ್ಶನ. ಬೆಳಕು ಕಂಡ ಕತ್ತಲು ಬೆಳಕಿನಲ್ಲಿ ಲೀನವಾಗಿ ಬೆಳಕೇ ತಾನಾಗುವುದು. ಮನ ಘನ ಮನವಾಗುವ ಸೂತ್ರವಿದು ! ಬೆಳಕಿನ ಸೂತ್ರ. ಬೆಳಕನುಟ್ಟು ಬೆಳಕನ್ನೆ ಹೊದ್ದ ಅಕ್ಕಳ ಸೂತ್ರ!

■

ಉಡುಗೆ ಕಳಚಿ ಬೆಳಗನುಟ್ಟ ಅಕ್ಕ

ಕೈಸಿರಿಯ ದಂಡವ ಕೊಳಬಹುದಲ್ಲದೆ
ಮೈಸಿರಿಯ ದಂಡವ ಕೊಳಲುಂಟೆ ?
ಉಟ್ಟಂತಹ ಉಡುಗೆ ತೊಡುಗೆಯನೆಲ್ಲ
ಸೆಳೆದುಕೊಳ್ಳಬಹುದಲ್ಲದೆ
ಮುಚ್ಚಿರ್ದ ಮುಸುಕಿರ್ದ ನಿರ್ವಾಣವ ಸೆಳೆದುಕೊಳ್ಳಬಹುದೇ?
ಚೆನ್ನ ಮಲ್ಲಿಕಾರ್ಜುನ ದೇವರ ಬೆಳಗನುಟ್ಟು
ಲಜ್ಜೆಗೆಟ್ಟವಳಿಗೆ ಉಡುಗೆ ತೊಡುಗೆಯ ಹಂಗೇಕೋ ಮರುಳೆ ?

-ಅಕ್ಕಮಹಾದೇವಿ

ಕೈಸಿರಿಯ ದಂಡವ ಕೊಳಬಹುದಲ್ಲದೇ ಮೈಸಿರಿಯ ದಂಡವ ಕೊಳ ಲುಂಟೇ :

ಮೈಸಿರಿಯ ದಂಡ : ರೂಪದೊಳಗಣ ಸತ್ಯ -ಜ್ಞಾನ.

ಕೈಸಿರಿಯ ದಂಡ : ವಸ್ತ್ರ , ಆಭರಣ, ರೂಪ.

ಮೈಮೇಲಿರುವ ಆಭರಣಗಳನ್ನು ಕಳ್ಳ ಕಳವು ಮಾಡುತ್ತಾನೆ. ಕಳ್ಳ ಆಭರಣಗಳನ್ನು ಮಾತ್ರ ನೋಡುತ್ತಾನೆ. ಆಭರಣಗಳ ಹೊರತಾಗಿ ಏನೂ ನೋಡುವುದಿಲ್ಲ. ಇದು ಕಳ್ಳನ ಕಣ್ಣು. ಕಾಮುಕ ಚರ್ಮ ನೋಡುತ್ತಾನೆ. ಚರ್ಮದ ಹೊರತು ಬೇರೇನೂ ನೋಡುವುದಿಲ್ಲ. ಚರ್ಮ ನೋಡುವವನಿಗೆ ಆಭರಣ ಗೌಣ.ಆಭರಣ ನೋಡು ವವನಿಗೆ ಚರ್ಮ ಗೌಣ. ಅಡ್ಡಿ ಪಡಿಸಿದರೆ ಇವರಿಬ್ಬರಿಂದಲೂ ಮರಣ. ಇಬ್ಬರ ಕಣ್ಣು ಗಳೂ ಕುರುಡು. ಒಬ್ಬ ಚರ್ಮ(ರೂಪ) ನೋಡಿದ ಅದರಲ್ಲಿ ತುಂಬಿದ ಜ್ಞಾನ (ನಿರೂಪ) ನೋಡಲಿಲ್ಲ. ಮತ್ತೊಬ್ಬ ಆಭರಣ ನೋಡಿದ ಚಿನ್ನ ನೋಡಲಿಲ್ಲ. ಚಿನ್ನ ಹಳದಿ ಲೋಹ. ಇದು ಸತ್ಯ. ಚಿನ್ನಕ್ಕೆ ಬೆಲೆ ಕಟ್ಟಿದ್ದು ತಾನೆ ಬಯಕೆ ಮಾಡಿದ್ದೂ ತಾನೆ ; ಒಬ್ಬನಿಗೆ ಆಭರಣ ಕಣ್ಣು ಕುಕ್ಕಿತು, ಮತ್ತೊಬ್ಬನಿಗೆ ಯೌವ್ವನ (ರೂಪ) ಕಣ್ಣು ಕುಕ್ಕಿತು. ಕಣ್ಣಿನ ನಂಜಿನಿಂದ ಈ ಎರಡೂ ಬಯಕೆಗಳು ಉಂಟಾದವು.

ಉಟ್ಟಂತಹ ಉಡುಗೆ ತೊಡುಗೆಯನೆಲ್ಲ ಸೆಳೆದುಕೊಳಬಹುದಲ್ಲದೆ, ಮುಚ್ಚಿರ್ದ ಮುಸುಕಿರ್ದ ನಿರ್ವಾಣವ ಸೆಳೆದುಕೊಳಬಹುದೇ ? :

ಕಾಮುಕನಿಗೆ ಆಭರಣಗಳ ಅವಶ್ಯಕತೆಯಿಲ್ಲ. ಯೌವ್ವನದ ಸುಖಬೇಕು. ಉಡುಗೆ ಮರೆಯಲ್ಲಿದ್ದ ಚರ್ಮ (ರೂಪ) ನೋಡಿ ವಸ್ತ್ರ ಕಳೆಯಲು ಹೋಗುತ್ತಾನೆ. ಚರ್ಮದ ಹಿಂದಿರುವ ಸುಖದ ಸುಖ (ನಿರೂಪ) ಕಾಮುಕನಿಗೆ ಪರಿಚಯವಿಲ್ಲ. ವಸ್ತ್ರ ,ಆಭರಣ ಸೆಳೆದುಕೊಳ್ಳುತ್ತಾನೆಯೇ ಹೊರತು ಆಭರಣ ಮುಸುಕಿರ್ದ ಲೋಹ

ಕಾಣುವುದಿಲ್ಲ. ಚರ್ಮ ಮುಸುಕಿರ್ದ ಜ್ಞಾನ (ನಿರ್ವಾಣ) ಕಾಣುವುದಿಲ್ಲ. ಇದು ಕಣ್ಣಿನ ಅಜ್ಞಾನದ ಪೊರೆ ಕಳೆದುಕೊಂಡವರ ಮಾತು.

ಚೆನ್ನಮಲ್ಲಿಕಾರ್ಜುನ ದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ
ಉಡುಗೆ ತೊಡುಗೆಯ ಹಂಗೇಕೋ ಮರುಳೆ ?

ಸರ್ವಾಂಗವೂ ಸುಂದರವೇ ಆಗಿದೆ. ಅದಕ್ಕೆ ಆಭರಣಗಳ ಅವಶ್ಯಕತೆಯಿಲ್ಲ. ಜ್ಞಾನದಿಂದ ಕೂಡಿದೆ. ಜ್ಞಾನವೇ ತಾನಾಗಿದೆ. ಇಂದು ಇದ್ದು ನಾಳೆ ಇಲ್ಲದ ಅಂಗ. ಅಂಗ ಹೊತ್ತ ಲಿಂಗ (ಜ್ಞಾನ) ಹಿಂದೆಯೂ ಇತ್ತು, ಇಂದೂ ಇದೆ. ಮುಂದೆಯೂ ಇರುತ್ತದೆ. ಜ್ಞಾನ ದೇಹವನ್ನು ಹೊದ್ದ ಬೆಳಕು. ಬೆಳಕಿಗೆ ಕತ್ತಲಿನ ಭಯವಿಲ್ಲ. ಕತ್ತಲಿಗೆ (ಅಜ್ಞಾನಕ್ಕೆ) ಅಂಜುವುದೂ ಇಲ್ಲ. ಬೆಳಕಿನ ಉಡುಗೆ ಉಟ್ಟವಳಿಗೆ ಕತ್ತಲಿನ ಭಯವಿಲ್ಲ. ಬೆಳಕನೇ ಉಟ್ಟು ಬೆಳಕನೇ ಹೊದ್ದ ಜ್ಞಾನಿಗೆ ಉಡುಗೆ ತೊಡುಗೆಯ ಹಂಗೇಕೋ ಮರುಳೆ ಎಂದು ಪ್ರಶ್ನಿಸಿದ್ದಾಳೆ ಅಕ್ಕ ಮಹಾದೇವಿ.

ಕೌಶಿಕನೊಬ್ಬನೆ ಕಾಮುಕನಲ್ಲ. ಜಗತ್ತೇ ಕಾಮದ ಕಣ್ಣಿನಿಂದ ಕೂಡಿದೆ. ಕಣ್ಣಿನಲ್ಲಿ ನಂಜಿನ ಪೊರೆ ಆವರಿಸಿದೆ. ಸಾಧ್ಯವಾದರೆ ಕೌಶಿಕನೆ ನಾನುಟ್ಟ ಬೆಳಕು ನೋಡು. ನೀನೊಬ್ಬನೆ ಅಲ್ಲ , ಜಗದ ಕಣ್ಣುಗಳೆಲ್ಲ ನೋಡಲಿ ಎಂದು ಕೌಶಿಕನೆದುರೆ ಉಡುಗೆ ತೊಡುಗೆಯ ಹಂಗು ಹರಿದು ಜ್ಞಾನ ಪ್ರಸಾದವನ್ನೆ ಕರುಣಿಸಿದಳು ಅಕ್ಕ.

■

ಕಾಯ, ಜೀವ, ಮಾಯೆ ಕಳೆಯುವ ದೇವನ ಸೂತ್ರ

ಎನ್ನ ಕಾಯ ಮಣ್ಣು, ಜೀವ ಬಯಲು,
ಆವುದು ಹಿಡಿದೆನಯ್ಯಾ ದೇವಾ ?
ನಿಮ್ಮನಾವ ಪರಿಯಲ್ಲಿ ನೆನೆವೆನಯ್ಯಾ?
ಎನ್ನ ಮಾಯೆಯನು ಮಾಣಿಸಯ್ಯಾ
ಚೆನ್ನ ಮಲ್ಲಿಕಾರ್ಜುನಾ

- ಅಕ್ಕಮಹಾದೇವಿ

ಅಕ್ಕಮಹಾದೇವಿ ಈ ವಚನದಲ್ಲಿ ನಾಲ್ಕು ಶಬ್ದಗಳನ್ನು ಪ್ರಯೋಗಿಸಿದ್ದಾರೆ. ಕಾಯ, ಜೀವ, ಮಾಯೆ ಮತ್ತು ದೇವ.

ತಾಯಿಯ ಗರ್ಭದಿಂದ ಹೊರಬಂದ ಕಾಯ ಅನೇಕ ಬದಲಾವಣೆಗಳನ್ನು ಕಂಡು ಮಣ್ಣು ಸೇರುತ್ತದೆ. ಜೀವ ಬಯಲಾಗುತ್ತದೆ. ಇವೆರಡೂ ಟಿ.ವಿ.ಮತ್ತು ವಿದ್ಯುತ್‌ನಂತೆ ಕಾರ್ಯ ನಿರ್ವಹಿಸುತ್ತವೆ. ಟಿ.ವಿ. ಇದೆ. ವಿದ್ಯುತ್ ಇದೆ. ಇವೆರಡಿದ್ದರೂ ಪರದೆಯ ಮೇಲೆ ಏನೂ ಕಾಣುವಂತಿಲ್ಲ, ಇವೆರಡೂ ಜೀವಾಳ ; ಆದರೂ ಜಡ. ವಿದ್ಯುತ್‌ನಿಂದ ಜೀವಕಳೆ, ಟಿ.ವಿ ಯಿಂದ ಬೆಳಕು ಬಂದರೂ ನಿರರ್ಥಕ. ಆದಕ್ಕೆ ಅರ್ಥವಿಲ್ಲ, ಅದನ್ನು ಯಾರೂ ನೋಡುವುದಿಲ್ಲ, ಚನಾಲ್ ಇಲ್ಲದಿದ್ದರೆ ವಿದ್ಯುತ್ ಮಾತ್ರ ಇದ್ದ ಟಿ.ವಿ.ಪೆಟ್ಟಿಗೆ ಯಾರಿಗೂ ಬೇಡ. ಮಕ್ಕಳಿಗೂ ಕೂಡಾ.

ಮಣ್ಣುಸೇರುವ ಕಾಯವನ್ನು ಜೀವ ಇರುವವರೆಗೂ ಪ್ರೀತಿಸುತ್ತೇವೆ. ಕಾಯದ ರೂಪಕ್ಕೆ ಮೋಹ, ಧ್ವನಿಗೂ ಮೋಹ ಜೀವ ಬಯಲು ಸೇರಿದ ಮೇಲೆ ಕಾಯ ನೋಡಿದರೆ ಭಯ. ರೂಪ ವಿದ್ದರೂ ಕಾಯದ ಮೋಹಕ್ಕೆ ಭಂಗ.

ಎಲ್ಲ ಕಾಯವನ್ನೂ ಮೋಹಿಸುವುದಿಲ್ಲ, ರೂಪವಿದ್ದ ಕಾಯದ ಮೇಲೆ ಬಯಕೆ, ನಾಮದಿಂದ ಕೀರ್ತಿಹೊಂದಿದ ಕಾಯದ ಮೇಲೆ ವ್ಯಾಮೋಹ. ಕಾಯ ಕಳುವಿನ ವೃತ್ತಿಯಲ್ಲಿದ್ದರೆ ಭಯ. ರೂಪ ಹೊಂದಿದ್ದರೆ ಬಯಕೆ. ಶ್ರೀಮಂತನಾಗಿದ್ದರೆ ಗೌರವ ಮಿಶ್ರಿತ ಭಯ. ರಾಜಕಾರಣಿ, ಗಣ್ಯ, ಜ್ಯೋತಿಷಿ, ಸ್ವಾಮಿ, ಸಾಧು-ಸತ್ಪುರುಷ ಸ್ತ್ರೀ-ಪುರುಷ ಸ್ವದೇಶಿ -ಅನ್ಯದೇಶಿ ಎನ್ನುವ ಮಾಯೆ ಕಾಯದಲ್ಲಿ ಬೆರೆತಿದೆ.

ಅರಿವಿನಿಂದ ನೋಡಿದಾಗ ಮಣ್ಣು ಸೇರುವ ಕಾಯ, ಕಾಯಕ್ಕಂಟಿದ ಜೀವ ಬಯಲಾಗುವ ಬಗೆ, ಕಾಯ ಮತ್ತು ಜೀವಕ್ಕಂಟಿದ ಮಾಯೆ ಅರಿವಿಗೆ ಬರುತ್ತದೆ.

ಕಾಯ-ಜೀವ ಮತ್ತು ಮಾಯೆ ಇವು ಮೂರು ಸುಖ ಮತ್ತು ದುಃಖದ ಕಲ್ಪನೆಗೆ ದಾರಿ ಮಾಡಿಕೊಡುತ್ತವೆ. ಅರ್ಥವಿಲ್ಲದ ಸುಖ, ಅರ್ಥವಿಲ್ಲದ ದುಃಖಕ್ಕೆ ಒಂದನ್ನೊಂದು ಆಶ್ರಯ ಪಡೆದಿವೆ.

ಹೆಣ್ಣು ಗಂಡಿನಿಂದ ಸುಖ-ದುಃಖವೆಂದರೆ ಹೆಣ್ಣೂ-ಗಂಡೂ ಕಾಯವೇ ಆಗಿದೆ. ಶ್ರೀಮಂತಿಕೆ-ಬಡತನದಿಂದ ಸುಖ, ದುಃಖವೆಂದರೆ ಅವೆರಡೂ ಕೂಡಾ ಕಾಯವೇ ಆಗಿದೆ. ರಾಜ- ಪ್ರಜನಿಂದ ಸುಖ, ದುಃಖ ವೆಂದರೆ ಅವೆರಡೂ ಕಾಯದಿಂದಲೇ.

ಗುರು-ಶಿಷ್ಯನಿಂದ, ಸುಖ ದುಃಖವೆಂದರೆ ಅವೆರಡೂ ಕಾಯವೆ. ಕಾಲಾಳು ರಾಜನಾಗುತ್ತಾನೆ ; ರಾಜ ಕಾಲಾಳಾಗುತ್ತಾನೆ. ಶಿಷ್ಯ ಗುರುವಾಗುತ್ತಾನೆ ; ಗುರುವು ಶಿಷ್ಯನಾಗಿದ್ದ, ಹೆಣ್ಣು-ಗಂಡೆಂಬುದು ಕೂಡಾ ಮಾಯೆ ; ಅಜ್ಞಾನ.

ಕಾಣುವ ಕಾಯ ಇದ್ದಂತೆ ಕಂಡು ಇಲ್ಲವಾಗುತ್ತದೆ. ಅದಕ್ಕಂಟಿದ ಜೀವವೂ ಬಯಲಾಗುತ್ತದೆ. ಕಾಯ -ಜೀವವನ್ನು ಸುಖ-ದುಃಖಗಳ ಪರಿಯಲ್ಲಿ ಆಡಿಸಿ ಇಲ್ಲದ ಮಾಯೆ ಇಲ್ಲವಾಗುತ್ತದೆ.

ಕಾಣುವ ಕಾಯವಿಲ್ಲ, ಅದಕ್ಕಂಟಿದ ಜೀವವೂ ಇಲ್ಲ, ಮಾಯೆಯೂ ಇಲ್ಲ. ಈ ಮೂರನ್ನೂ ನೋಡುವ ಅರಿವು ಮಾತ್ರ ಇದೆ. ಆ ಅರಿವೇ ಗುರುವು. ಆ ಅರಿವೇ ದೇವರು. ಆ ಅರಿವೇ ಚೆನ್ನಮಲ್ಲಿಕಾರ್ಜುನ.

ಆ ದೇವನ ದರ್ಶನವಾದರೆ ಮಾಯೆ ಇಲ್ಲವಾಗುತ್ತದೆ. ಮಾಯೆ ಮನುಕುಲಕ್ಕೆ ಅಂಟಿದ ರೋಗ. ಈ ರೋಗ ಕಳೆಯಲು ಯಾವ ವೈದ್ಯನಿಂದಲೂ ಸಾಧ್ಯವಾಗುವುದಿಲ್ಲ.

ಅಕ್ಕಮಹಾದೇವಿ ಮಹಾಜ್ಞಾನಿ. ಮನುಕುಲಕ್ಕಂಟಿದ ಭವರೋಗವನ್ನು ಕ್ಷಣಾರ್ಧದಲ್ಲಿ ಕಳೆಯುವ ನಿಪುಣೆ ! ಚೆನ್ನ ಮಲ್ಲಿಕಾರ್ಜುನ (ಜ್ಞಾನ ದೇವ) ನೆಂಬ ದಿವ್ಯ ಔಷಧಿಯ ಸೂತ್ರವನ್ನು ಜಗಕೆ ಕರುಣಿಸಿದ ವೈದ್ಯೆ.

■

ಬೆಳಕು-ಬೆಳಕಾದ ಬಗೆ

ದೇವರೆಂದು ಅರ್ಚಿಸಿ ಪೂಜಿಸಿ ಭಾವಿಸಿ
ಮತ್ತೆ ತ್ರಿವಿಧವ ಮುಟ್ಟಿದರೇನು ?
ಕಷ್ಟ ಗುಣವ ನುಡಿವ ಭಕ್ತಿಹೀನರ ಕಂಡಡೆ
ಅವರನೊಚ್ಚುತ ತೊಲಗಬೇಕು ಶಂಭುಜಕ್ಕೇಶ್ವರಾ

- ಶಿವಶರಣೆ ಸತ್ಯಕ್ಕ

ಶರಣರು ಮಹಾಜ್ಞಾನಿಗಳು. ಜ್ಞಾನವನ್ನೇ ದೇವರೆಂದು ಜ್ಞಾನಕ್ಕೆ ಅರ್ಚನೆ ಮಾಡಿದರು. ಪೂಜಿಸಿದರು. ಜ್ಞಾನವೇ ದೇವರೆಂದು ಭಾವಿಸಿದರು.

ಜ್ಞಾನಕ್ಕೆ ಗುರುವೆಂದರು, ಜಂಗಮವೆಂದರು, ಲಿಂಗವೆಂದರು. ದೇಹವೇ ದೇವಾಲಯ. ಈ ಆಲಯದಲ್ಲಿ ಜ್ಞಾನಿ ಗುರುವಿದ್ದಾನೆ ಜಂಗಮನಿದ್ದಾನೆ ಲಿಂಗಯ್ಯನಿದ್ದಾನೆ ಈ ಮೂರು ಒಂದಾದ ಜ್ಞಾನ, ಈ ಜ್ಞಾನ ತಿಳಿಯಲು, ಸದ್ಗುರು ಶಿಷ್ಯನ ತನುವಿನಲ್ಲಿ ತನ್ಮಯವಾಗಿರುವ ಗುರು ಲಿಂಗ ಜಂಗಮ ಕುರಿತು ಸಾಹಿತ್ಯ ಮಾಡಿ ಹೇಳುತ್ತಾರೆ. ಮೂರು ಒಂದಾದ ಬಗೆಯನ್ನು ತಿಳಿಸುತ್ತಾರೆ. ಆ ಒಂದು ತಾನೇ ಆದ ಬಗೆಯನ್ನು ಅರುಹುತ್ತಾರೆ. ಸದ್ಗುರು ಗುರುವಿನ ಗುರುತನವನ್ನು ಶಿಷ್ಯನ ಶಿಷ್ಯತ್ವವನ್ನು ಕೆಡಿಸಿ ನಾನು-ನೀನು ಒಂದೇ ಎಂಬುದನ್ನೂ ಮನದಟ್ಟು ಮಾಡಿ ಅರಿವಿಗೆ ತಂದುಕೊಡುತ್ತಾರೆ.

ಒಂದು ಹಣತೆಯಲ್ಲಿ ದೀಪ ಉರಿಯುತ್ತಿದೆ. ಮತ್ತೊಂದು ಹಣತೆಯಲ್ಲಿ ಎಣ್ಣೆಯಿದೆ ಬತ್ತಿಯಿದೆ. ದೀಪ ಬತ್ತಿಯಲ್ಲಿ ಸುಪ್ತವಾಗಿದೆ. ಉರಿಯುತ್ತಿರುವ ಹಣತೆ ಬತ್ತಿಗೆ ಚುಂಬಿಸಿದರೆ ಸಾಕು ಬತ್ತಿ ಪ್ರಕಾಶಮಾನವಾಗಿ ಉರಿಯುತ್ತದೆ. ಎರಡೂ ಹಣತೆ ಪ್ರಕಾಶಮಾನವಾಗಿ ಉರಿಯುತ್ತವೆ. ಹಚ್ಚಿದ ದೀಪ ಗುರುವಲ್ಲ, ಹತ್ತಿಸಿಕೊಂಡದ್ದು ಶಿಷ್ಯನಲ್ಲ. ಎರಡೂ ಪ್ರಕಾಶ. ಮೊದಲಿನದು ದೊಡ್ಡದಲ್ಲ. ಎರಡನೆಯದು ಸಣ್ಣದಲ್ಲ. ಇಲ್ಲಿ ಕಡೆ ಮೊದಲಿಲ್ಲದಂತೆ ಬರೀ ಪ್ರಕಾಶ !

ಪ್ರಕಾಶ ಪ್ರಕಾಶವೇ. ಅದು ಕತ್ತಲನ್ನು ತಿಳಿಯುವುದಿಲ್ಲ, ಕತ್ತಲು ಸಮೀಪ ಬರುವುದೂ ಇಲ್ಲ. ತನ್ನ ಪೂರ್ವಾಶ್ರಯದ ಪ್ರಣತಿ, ಬತ್ತಿ, ಎಣ್ಣೆಯ ಪರಿಚಯವೂ ಇಲ್ಲ. ಹೀಗಿದ್ದೂ ಗುರು ಲಿಂಗ ಜಂಗಮ ಕುರಿತು ಕತೆ ಮಾಡಿ ಹೇಳಿ ಉತ್ಸವಗಳನ್ನು ಆಚರಿಸುವ, ಬದುಕುವುದಕ್ಕಾಗಿ ಜ್ಞಾನದ ಕತೆಯನ್ನೇ ಹೇಳಿ ಕಷ್ಟ ತಂದುಕೊಳ್ಳುವ ಹೀನರ ಕಂಡು ಅವರಿಂದ ದೂರ ತೊಲಗಬೇಕು ಎಂದಿದ್ದಾರೆ ಮಹಾಜ್ಞಾನಿ ಸತ್ಯಕ್ಕ. ■

ಮನದೊಡೆಯನ ಕಥನವಲ್ಲದ ಕತೆ

ಮನದೊಡೆಯ ಮಹಾದೇವ ಮನವ ನೋಡಿಹೆನೆಂದು
ಮನುಜರ ಕೈಯಿಂದ ಒಂದೊಂದ ನುಡಿಸುವನು.
ಇದಕ್ಕೆ ಕಳವಳಿಸದಿರು ಮನವೆ, ಕಾತರಿಸದಿರು ಮನವೆ.
ನಿಜವ ಮರೆಯದಿರು ಕಂಡಾ, ನಿಶ್ಚಿಂತನಾಗಿರು ಮನವೆ
ಬಸವಣ್ಣಪ್ರಿಯ ಚೆನ್ನಸಂಗಯ್ಯ ಬೆಟ್ಟದನಿತಪರಾಧವನು
ಒಂದು ಬೊಟ್ಟಿನಲ್ಲಿ ತೊಡೆವನು.

- ಅಕ್ಕನಾಗಮ್ಮ

ಮನದೊಡೆಯ ಮಹಾದೇವ ಮನವ ನೋಡಿಹೆನೆಂದು ಮನುಜರ ಕೈಯಿಂದ ಒಂದೊಂದ ನುಡಿಸುವನು :

ಮನ ಕತ್ತಲು, ಅದರ ಒಡೆಯ ಮಹಾದೇವ ಬೆಳಕು. ಮನದ ಕೆಲಸ ಕತ್ತಲಿನ ಕೆಲಸ, ಅಜ್ಞಾನದ ಕೆಲಸ, ಮನಕ್ಕೆ ಬಯಕೆ ಅನೇಕ. ಅದು ಬಯಸಿದ ಸುಖವನ್ನೆಲ್ಲ ದೇಹದ ಮೂಲಕ ಈಡೇರಿಸಿಕೊಳ್ಳುತ್ತದೆ. ಮನ ದೇಹದ ಭಾಗಗಳಾದ ನಾಲಿಗೆ, ಕಣ್ಣು, ಚರ್ಮ, ಕಿವಿ, ಮತ್ತು ಮೂಗು ಈ ಪಂಚೇಂದ್ರಿಯಗಳ ಮೂಲಕ ಸುಖಪಡುತ್ತದೆ. ಇವುಗಳಲ್ಲಿಯೇ ಅದರ ವಾಸ.

ಮನಕ್ಕೆ ಸುಖದ ಬಯಕೆಯೂ ಇದೆ, ಸಮಾಜದ ಭಯವೂ ಇದೆ. ಮನ ಸಮಾಜದ ಭಯದಿಂದ ದೇಹಕ್ಕೆ ಉತ್ತಮನ ಪಾತ್ರ ಧರಿಸುತ್ತದೆ. ತಾನು ಸುಪ್ತವಾಗಿ ಪಂಚೇಂದ್ರಿಯಗಳ ಮೂಲಕ ಸಮಾಜಬಾಹಿರ ಸುಖಪಡುತ್ತದೆ. ಕಲ್ಪನೆಯ ಸುಖ ಹೆಚ್ಚು ಆನಂದವನ್ನುಂಟು ಮಾಡುವುದಿಲ್ಲ. ದೇಹ ಬಳಕೆ ಮಾಡಿ ಸುಖಪಡುವ ಗತ್ತು ಅದಕ್ಕೆ. ದೇಹ ಬಳಕೆ ಮಾಡಿ ಸುಖ ಪಡಲು ಹೋದರೆ ಉತ್ತಮನ ಪಾತ್ರ ಅಡ್ಡಿ ಮಾಡುತ್ತದೆ. ಪಾತ್ರ ಕಡೆಗಣಿಸಿ ಸುಖಿಸಿದರೆ ಮನುಜರಿಂದ ಕಲ್ಲೇಟು. ಬಿರು ನುಡಿಗಳಿಂದ ಹಿಂಸೆ, ಮನಕ್ಕೆ ತಳಮಳ. ಅದರ ವಾಸ ಸ್ಥಾನವಾದ ದೇಹಕ್ಕೆ ಪೆಟ್ಟು. ಅದಕ್ಕೆ ನರಕಯಾತನೆ, ಏಕೆಂದರೆ ಮನ ಸುಖಿಸಲು ಹೋದ ಸುಖ ಸಮಾಜಬಾಹಿರ. ಅದಕ್ಕಾಗಿಯೇ ಮನುಜರಿಂದ ಬಿರು ನುಡಿಗಳು.

ಮನುಜರು ಬಿರು ನುಡಿಗಳಿಂದ ಬೈದದ್ದು ಮನದ ಕೆಲಸಕ್ಕೆ, ಅದರ ವಾಸ ಸ್ಥಾನ ದೇಹಕ್ಕೆ. ದೇಹ ಯಾವ ತಪ್ಪೂ ಮಾಡಿಲ್ಲ. ಮನದೊಡೆಯ (ಜ್ಞಾನ) ನ ಮಾತು ಕೇಳಿದ್ದರೆ ದೇಹಕ್ಕೆ ಈ ಗತಿ ಬರುತ್ತಿರಲಿಲ್ಲ. ಎಮ್ಮೆಯ ಬೆನ್ನು ಹತ್ತಿದ ಆಕಳಕ್ಕೆ ಮಲ ತಿನ್ನುವುದೇ ಸುಖವೆನ್ನಿಸಿದರೆ ಮಾಲಿಕನಿಂದ ಪೆಟ್ಟು ತಿನ್ನಲೇಬೇಕು. ಆಕಳ ಮಾಲಿಕನ ಸೊತ್ತು.

ಅದನ್ನು ತಾನು ಹಾಗೂ ಇತರರು ಪೂಜಿಸಲೆಂದು ಸಾಕಿದ್ದಾನೆ. ಮಲ ತಿನ್ನುವ ಆಕಳನ್ನು ಪೂಜಿಸುವುದು ಹೇಗೆ ? ಅದಕ್ಕೆ ಬಿರುನುಡಿಗಳು ಮತ್ತು ಪೆಟ್ಟೇ ಗತಿ.

ಮನದೊಡೆಯ ಮಹಾದೇವನು ಸುತ್ತಿ ಬಳಸಿ ಆಡುವ ಜ್ಞಾನದ ಈ ಆಟ ವನ್ನು ಶರಣೆ ಅಕ್ಕನಾಗಮ್ಮ ಮನುಜರ ಮುಂದೆ ಬಿಚ್ಚಿಟ್ಟಿದ್ದಾಳೆ. ಮನ ಘನ ಮನವಾಗಲಿ ಎಂದು ಮನುಜರ ಕೈಯಿಂದ ಒಂದೊಂದನ್ನು ನುಡಿಸುವ ಮಹಾದೇವನ ಲೀಲೆಯನ್ನು ಬಹಿರಂಗಪಡಿಸಿದ್ದಾಳೆ.

ಇದಕ್ಕೆ ಕಳವಳಿಸದಿರು ಮನವೆ, ಕಾತರಿಸದಿರು ಮನವೆ, ನಿಜವ ಮರೆಯದಿರು ಕಂಡಾ, ನಿಶ್ಚಿಂತನಾಗಿರು ಮನವೆ. :

ಮನದ ಸುಖವೇ ಹಾಗೆ. ಸುಖಕ್ಕಾಗಿ ಹಾತೊರೆಯುವ ಮನ ಸುಖಿಸುತ್ತದೆ. ಆ ಸುಖದ ಹಿಂದೆ ದುಃಖದ ಮಡುವೇ ಇರುತ್ತದೆ. ಮನ ಸುಖಿಸುವುದು ಭೂಮಿ, ಆಭರಣ, ಹೆಂಡ, ಚೆಲುವು, ಪದಾರ್ಥ ಮುಂತಾದ ವಸ್ತುಗಳಿಂದ. ವಸ್ತುಗಳನ್ನು ದುಡಿದೊ, ಪಡೆದೊ ಅಥವಾ ಕಳುವಿನಿಂದಲೋ ಭೋಗಿಸಬೇಕು ಎಂಬ ಕಾತುರ, ದೊರೆಯದಿದ್ದರೆ ಕಳವಳ. ಸುಖಿಸಲು ಹಂಬಲಿಸಿ, ಕಾತರಿಸಿ, ಕಳವಳಪಡುವ ಮನ ತಹಬಂದಿಗೆ ಬರಲಿ, ವಸ್ತುವಿನ ಮತ್ತು ತನ್ನ ನಿಜ ತನಗೆ ಗಮನಕ್ಕೆ ಬರಲಿ ಎಂದು ಸ್ವತಃ ಮನದೊಡೆಯ ಮಹಾದೇವನೇ ಮನುಜರ ಕೈಯಿಂದ ಬಿರುನುಡಿ ನುಡಿಸುತ್ತಾನೆ. ಇನ್ನಾದರೂ ನಿಜವ ಮರೆಯದೆ ನಿಶ್ಚಿಂತನಾಗಿರು ಮನವೆ ಎಂದು ಎಚ್ಚರಿಸುವ ಮಾತನ್ನು ಹೇಳಿದ್ದಾಳೆ ಅಕ್ಕನಾಗಮ್ಮ.

ಸುಖಿಸಲು ಹೋಗಿ ಮನುಜರಿಂದ ಅಪಮಾನಕ್ಕೆ ಗುರಿಯಾದ ಮನ ತಾನು ಘಾಸಿಗೊಳ್ಳುವುದಿಲ್ಲ, ದೇಹದೊಂದಿಗೆ ಘಾಸಿಗೊಳ್ಳುತ್ತದೆ. ದೇಹದೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತದೆ. ಮನ ಸುಖಪಡುವುದಕ್ಕಾಗಿ ದುಃಖ ತಂದುಕೊಳ್ಳಬೇಕೆ ? ಮನದ ಸುಖದ ಹಿಂದೆ ದುಃಖವಿದೆಯೇ ? ಮನಕ್ಕೆ ದುಃಖವಾದರೆ ನಷ್ಟವಾಗುವುದು ದೇಹಕ್ಕೆ ! ಮನದ ಸುಖ ಸುಖವೂ ಅಲ್ಲ, ದುಃಖ ದುಃಖವೂ ಅಲ್ಲ, ಸುಖ-ದುಃಖದ ಆಚೆ ಇರುವ ನಿಜವನ್ನು ಮನ ಅರಿಯಬೇಕಿದೆ. ಆ ನಿಜವನರಿತು ನಿಶ್ಚಿಂತನಾಗಬೇಕಿದೆ.

ಬಸವಣ್ಣ ಪ್ರಿಯ ಚೆನ್ನಸಂಗಯ್ಯ ಬೆಟ್ಟದನಿತಪರಾಧವನು ಒಂದು ಬೊಟ್ಟಿನಲ್ಲಿ ತೊಡೆವನು :

ದೇಹದಲ್ಲಿ ಮಹಾದೇವ (ಜ್ಞಾನ)ನೂ ಇದ್ದಾನೆ, ಮನ (ಅಜ್ಞಾನ)ವೂ ಆಶ್ರಯಿಸಿಕೊಂಡಿದೆ. ಆಶ್ರಯ ಪಡೆದ ಮನ ತನ್ನ ಸುಖಕ್ಕಾಗಿ ದೇಹವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ. ದೇಹ ಬಳಸಿಕೊಂಡೇ ಲಂಚ ಪಡೆಯುತ್ತದೆ, ಹಾದರ ಮಾಡುತ್ತದೆ. ಅಧಿಕಾರ ಚಲಾಯಿಸುತ್ತದೆ. ಇತರರ ಮೇಲೆ ದಬ್ಬಾಳಿಕೆ ಮಾಡುತ್ತದೆ. ಕೊಲೆ, ಸುಲಿಗೆ, ದರೋಡೆ ನಾನಾ ರೀತಿಯ ಅಪರಾಧ ದೇಹ ಬಳಸಿಕೊಂಡೇ ಮಾಡುತ್ತದೆ.

ಪ್ರಾಯಶ್ಚಿತ್ತಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತದೆ. ಅಜ್ಞಾನದೆಡೆಗೆ ಮುಖ ಮಾಡಿಕೊಂಡ ಮನಕ್ಕೆ ಅಕ್ಕ ಸಕ್ಕರೆ ಲೇಪಿಸಿ ಅರಿವಿನೆಡೆಗೆ ಮುಖ ಮಾಡಿದ್ದಾಳೆ. ಆ ಅರಿವಿನಲ್ಲಿ ಮಹಾದೇವನಿದ್ದಾನೆ. ಬಸವಣ್ಣ ಪ್ರಿಯ ಚೆನ್ನಸಂಗಯ್ಯನಿದ್ದಾನೆ. ಮನ ಮಾಡಿದ ಬೆಟ್ಟದಷ್ಟಿರುವ ಅಪರಾಧ ಒಂದು ಬೆರಳಿನಲ್ಲಿ ಬಿಸಾಡುವನು. ಮನವನ್ನು ಘನಮನವನ್ನಾಗಿಸುವನು. ಮನ ಕತ್ತಲು, ಮಹಾದೇವ ಬೆಳಕು. ಬೆಳಕು ಕಂಡ ಕತ್ತಲು ಬೆಳಕಿನಲ್ಲಿ ಹುದುಗಿ ಬೆಳಕೇ ಆಗುವುದು. ಇದು ಶಿವಶರಣೆ ಅಕ್ಕನಾಗಾಯಿಯ ಮನದೊಡೆಯ ಮಹಾದೇವನ ಕಥನ.

■

ಪುಣ್ಯ-ಪಾಪಗಳಿಂದ ಹೊರಗಾಗುವ ಸೂತ್ರ

ಅರಿಯದೆ ಮರಹಿಂದ ಭವದಲ್ಲಿ ಬಂದೆನಲ್ಲದೆ
ಇನ್ನು ಅರಿದ ಬಳಿಕ ಬರಲುಂಟೆ ?
ಹೃದಯ ಕಮಲದಲ್ಲಿ ನಿಜವು ನೆಲೆಗೊಂಡ ಬಳಿಕ
ಪುಣ್ಯ ಪಾಪವೆಂಬುದಕ್ಕೆ ಹೊರಗಾದೆನು.
ಭುವನ ಹದಿನಾಲ್ಕರೊಳಗೆ ಪರಿಪೂರ್ಣ
ನಿರಂಜನ ಜ್ಯೋತಿಯಾಗಿ ಬೆಳಗುವ ಪ್ರಭುವ ಕಂಡು
ಬದುಕಿದೆನು ಕಾಣಾ ಬಸವಣ್ಣ ಪ್ರಿಯ ಚೆನ್ನಬಸವಣ್ಣ.

- ಅಕ್ಕನಾಗಮ್ಮ

ಅರಿಯದೆ ಮರಹಿಂದ ಭವದಲ್ಲಿ ಬಂದೆನಲ್ಲದೆ ಇನ್ನು ಅರಿದ ಬಳಿಕ ಬರಲುಂಟೆ ?:

ಇದು ಭವ ಬಂಧನದ ಪ್ರಶ್ನೆಯಲ್ಲ, ಅರಿವು ಮರೆವಿನ ಪ್ರಶ್ನೆ. ಅಜ್ಞಾನದಿಂದ ಜೀವನ ನಡೆಸುವುದೆ ಭವ ಬಂಧನ. ತಾನೇ ನಿರ್ಮಿಸಿದ ಅಜ್ಞಾನದಲ್ಲಿ ತನ್ನನ್ನೇ ಬಂಧಿಯಾಗಿಸಿಕೊಳ್ಳುವುದು.

ಕೃಷ್ಣ, ಕ್ರಿಸ್ತ, ಬುದ್ಧ, ಮಹಾವೀರ, ದಾಸರು, ಶರಣರು, ಸಂತರು, ತತ್ವಪದಕಾರರು, ಇವರು ಅರುವು ಅರಿಯ ಹೇಳಿದ ವಿಜ್ಞಾನಿಗಳು. ಆದರೆ ಮನುಷ್ಯ ಮರೆವಿನಿಂದ ಕೃಷ್ಣನನ್ನು ಪೂಜಿಸಿ ಹಿಂದುವಾದ, ಕ್ರಿಸ್ತನನ್ನು ಪ್ರಾರ್ಥಿಸಿ ಇಸಾಯಿಯಾದ. ಬುದ್ಧನನ್ನು ಪೂಜಿಸಿ ಬೌದ್ಧನಾದ, ಮಹಾವೀರನನ್ನು ಪೂಜಿಸಿ ಜೈನನಾದ. ಶರಣರನ್ನು ಪೂಜಿಸಿ ವೀರಶೈವನಾದ. ಇದಕ್ಕಾಗಿ ಜಗಳ, ಯುದ್ಧ ಬಡಿದಾಟ, ರಾಜಕೀಯ. ಹೀಗೆ ತನಗರಿಯದಂತೆ ಇಲ್ಲದ ಸರಪಳಿಗಳು ತನ್ನನ್ನು ಬಂಧಿಯನ್ನಾಗಿ ಮಾಡಿವೆ. ಇದು ಬೇಕಾಗಿತ್ತೇ ಎಂದು ತನ್ನನ್ನು ತಾನು ಪ್ರಶ್ನಿಸಿಕೊಳ್ಳಲು ಕೂಡ ಸಮಯವಿಲ್ಲದಂತೆ ಒಂದು ಬಿಟ್ಟು ಮತ್ತೊಂದು, ಮಗದೊಂದು ತನ್ನನ್ನು ಕಾಡುತ್ತಲಿವೆ. ಭವದಲ್ಲಿ ಬಂಧಿಯನ್ನಾಗಿ ಮಾಡಿವೆ. ಅರಿವಿನಿಂದ ನೋಡಿದರೆ ಸಾಕು ಇಲ್ಲದ ಸರಪಳಿಗಳು ಪುಡಿ ಪುಡಿಯಾಗುತ್ತವೆ.

ಹೃದಯ ಕಮಲದಲ್ಲಿ ನಿಜವು ನೆಲೆಗೊಂಡ ಬಳಿಕ ಪುಣ್ಯ ಪಾಪ ವೆಂಬುದಕ್ಕೆ ಹೊರಗಾದೆನು :

ಬೆಳಕು ಬೆಳಕೇ. ಬೆಳಕಿದ್ದಲ್ಲಿ ಕತ್ತಲಿಗೆ ಅವಕಾಶವಿಲ್ಲ, ಅರಿವಿದ್ದಲ್ಲಿ ಮರೆವಿಗೆ ಅವಕಾಶವಿಲ್ಲ. ಪ್ರತಿಯೊಂದನ್ನು ಅರಿವಿನಿಂದ ನೋಡಿದಾಗ, ಕೇಳಿದಾಗ, ಸ್ಪರ್ಶಿಸಿ

ದಾಗ, ವಾಸಿಸಿದಾಗ,ರುಚಿಸಿದಾಗ ಪುಣ್ಯ ಪಾಪವೆಂಬ ಪದಕ್ಕೆ ಕತ್ತರಿ ಬೀಳುತ್ತದೆ.

ಶಬ್ದ ಅರಿವಿನಿಂದ ಕೇಳಿದರೆ ದೇಹ ಕುದಿಯುವುದಿಲ್ಲ, ಜಗಳವಿಲ್ಲ, ಹೊಡೆದಾಟ ಬಡಿದಾಟವೂ ಇಲ್ಲ, ಕೋಲೆಗೆ ಆಸ್ಪದವೂ ಇಲ್ಲ. ಪಾಪವೇ ಇಲ್ಲ. ಪುಣ್ಯವು ಮೊದಲೇ ಇಲ್ಲ, ಪದ ಪ್ರಯೋಗಿಸಿದ ಹೃದಯವೂ ಸಮಾಧಾನಿ !

ಒಂದು ದೇಹ ಮತ್ತೊಂದು ದೇಹಕ್ಕೆ ಪಾಪ ಮಾಡುವುದೆ? ಒಂದು ದೇಹ ಮತ್ತೊಂದು ದೇಹಕ್ಕೆ ಪುಣ್ಯ ಮಾಡುವುದೇ? ಪಾಪ ಪುಣ್ಯಗಳೆಲ್ಲ ಮರೆವಿನ ಕೆಲಸ ದಿಂದ. ದುಡಿದು ಶ್ರೀಮಂತನಾದ, ದುಡಿಯದೆ ಬಡವನಾದ. ಶ್ರೀಮಂತ ಬಡವನಿಗೆ ನೀಡುವುದು ಪುಣ್ಯವೇ? ಬಡತನ ಪಾಪವೇ? ಮರೆವು ಎನ್ನುವುದು ಮನುಷ್ಯನನ್ನೇ ನುಂಗುವ ಭೂತ, ಕತ್ತಲು. ಈ ಭೂತದಿಂದ ಪಾರಾದವನೇ ಭೂತನಾಥ, ನಿರಂತರ ಬೆಳಗುವ ನಿರಂಜನ ಜ್ಯೋತಿ.

ಭುವನ ಹದಿನಾಲ್ಕರೊಳಗೆ ಪರಿಪೂರ್ಣ ನಿರಂಜನ ಜ್ಯೋತಿಯಾಗಿ ಬೆಳಗುವ ಪ್ರಭುವ ಕಂಡು ಬದುಕಿದೆನು ಕಾಣಾ ಬಸವಣ್ಣಪ್ರಿಯ ಚೆನ್ನಬಸವಣ್ಣ:

ಹದಿನಾಲ್ಕು ಲೋಕಗಳಿಗೆ ಒಡೆಯ, ಹದಿನಾಲ್ಕು ಲೋಕಗಳು ಎಂದು ಹಿಂದಿ ನಿಂದಲೂ ಬಂದ ಮಾತು. ಈ ಮಾತನ್ನು ನಂಬಿ ಇದನ್ನೇ ಹೇಳುವವರುಂಟು. ಇದನ್ನು ಅರಿವಿನಿಂದ ಕೇಳಲಿಲ್ಲ, ಪ್ರಶ್ನಿಸಲಿಲ್ಲ,

ಎಂಟು ದಿಕ್ಕುಗಳು, ಐದು (ಪಂಚ) ಭೂತಗಳು, ತನ್ನನ್ನೂ ಸೇರಿದಂತೆ ಬೆಳ ಗುವ ಪರಿಪೂರ್ಣ ಬೆಳಕೇ ಅರಿವು. ಈ ಅರಿವಿನ ಬೆಳಕು ಕಂಡರೆ ಮರೆವಿನ ಕತ್ತಲೆ ಕಳೆಯುತ್ತದೆ. ಭವ ಬಂಧನದ ಸರಪಳಿ ಹರಿಯುತ್ತದೆ. ಪಾಪ ಪುಣ್ಯವೆಂಬ ಕೋಳ ಕೊಡವಿ ಬೆಳಕಿಂಗೆ ಬೆಳಕಾಗಿ ಬದುಕಿದೆನು ಎಂದು ಜ್ಞಾನಿ ಪುತ್ರ ಚೆನ್ನಬಸವಣ್ಣನಿಗೆ ತಾಯಿ ಅಕ್ಕನಾಗಮ್ಮ ಹೇಳಿದ ಅರಿವಿನ ಸೂತ್ರವಿದು. !

■

ಭವದ ಬಳ್ಳಿ ಮತ್ತು ಬೆಳಕಿನ ಬಳ್ಳಿ

ಎನ್ನ ಭವದ ಬಳ್ಳಿಯ ಬೇರು ಹರಿಯಿತ್ತಯ್ಯ
ಸಂಗನ ಬಸವಣ್ಣನ ಒಕ್ಕುದ ಕೊಂಡೆನಾಗಿ
ಎನ್ನ ಮನದ ಕಪಟವ ಹಿಂಗಿತ್ತಯ್ಯ
ಚೆನ್ನಬಸವಣ್ಣನ ಕರುಣ ಪಡೆದೆನಾಗಿ
ಎನ್ನಂತರಂಗದ ಸಂದ ಸಂಶಯ ತೊಲಗಿತ್ತಯ್ಯ
ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ, ಎನ್ನ ಪರಮ ಗುರು
ಅಲ್ಲಮ ಪ್ರಭು ದೇವರ ಶ್ರೀಚರಣವ ಕಂಡೆನಾಗಿ.

-ಅಕ್ಕನಾಗಮ್ಮ

ಎನ್ನ ಭವದ ಬಳ್ಳಿಯ ಬೇರು ಹರಿಯಿತ್ತಯ್ಯ ಸಂಗನ ಬಸವಣ್ಣನ ಒಕ್ಕುದ ಕೊಂಡೆನಾಗಿ :

ಸಂಪ್ರದಾಯದ ಗುರುವು ಶಿಷ್ಯನಿಗೆ ದೀಕ್ಷೆ ಕೊಟ್ಟು ತಾನುಂಡು ಉಳಿದ ಎಂಜಲು, ಕೈತೊಳೆದ ತಟ್ಟೆಯ ನೀರು ಕುಡಿಯಲು ಹೇಳುತ್ತಾನೆ. ದೀಕ್ಷೆ ತೆಗೆದುಕೊಂಡ ಶಿಷ್ಯ ಧನ್ಯನಾದೆನೆಂದು ಸ್ವೀಕರಿಸುತ್ತಾನೆ. ಇದು ಸಂಪ್ರದಾಯ. ಆದರೆ ಶರಣೆ ಅಕ್ಕನಾಗಮ್ಮ ಕೊಂಡ ಒಕ್ಕ ಪ್ರಸಾದ ಇದಲ್ಲ, ತಾನು ಸ್ವೀಕರಿಸಿದ್ದು ಭವದ ಬಳ್ಳಿ ಹರಿಯುವ ಪ್ರಸಾದ. ಅಜ್ಞಾನದ ಬಳ್ಳಿಯ ಬೇರು ಹರಿದು ಜ್ಞಾನಿಯಾಗುವ, ಬೆಳಕಿನ ಬಳ್ಳಿಯಾಗುವ ಪ್ರಸಾದ.

ತಾಯಿ-ತಂದೆ, ಮಕ್ಕಳು -ಮೊಮ್ಮಕ್ಕಳು, ಬಂಧು -ಬಳಗ, ರಾಜ ಪ್ರಜೆ, ನನ್ನವರು ತನ್ನವರು, ಗಂಡ ಹೆಂಡತಿ, ದೇಶ-ವಿದೇಶ. ಇದು ಭವದ ಬಳ್ಳಿ. ಈ ಪ್ರೀತಿಯಲ್ಲಿ ಸ್ವಲ್ಪ ವ್ಯತ್ಯಾಸವಾದರೆ ಸಾಕು ಕಾರಣವಾದವನು ದೂರವಾಗುತ್ತಾನೆ. ಮದುವೆಯಾಗಿ 20 ವರ್ಷಕಳೆದರೂ ಅನ್ಯರೊಂದಿಗೆ ಮಾತನಾಡುವ ಹೆಂಡತಿ ಗಂಡನಿಂದ ದೂರವಾಗುತ್ತಾಳೆ, ಕೊಲೆಯಾಗುತ್ತಾಳೆ. ಆಸ್ತಿಗಾಗಿ ಮಗ ತಂದೆಯನ್ನು, ತಂದೆ ಮಗನನ್ನು, ಅಣ್ಣ ತಮ್ಮನನ್ನು, ರಾಜ ಪ್ರಜೆಯನ್ನು ಕೊಲ್ಲುವುದರಲ್ಲಿ ಹೇಸುವುದಿಲ್ಲ, ಭವದ ಬಳ್ಳಿಯ ಅಪರಾಧಕ್ಕೆ ಕಾರಣವಾಗುವ ಮನವನ್ನು ಯಾರೂ ಶಿಕ್ಷಿಸುವುದಿಲ್ಲ, ಅಪರಾಧಕ್ಕೆ ಕಾರಣವಾದದ್ದು ದೇಹವೇ ಎಂದು ದೇಹಕ್ಕೆ ದಂಡಿಸುತ್ತಾರೆ. ಪೊಲೀಸರು ನ್ಯಾಯಾಲಯ, ಜೈಲರರು ಕೂಡಾ ದೇಹವನ್ನು ದಂಡಿಸುತ್ತಾರೆ. ಸಮಾಜ ಕೂಡಾ ದೇಹವನ್ನೇ ದಂಡಿಸುತ್ತದೆ.

ದೇಹಕ್ಕೆ ಜ್ಞಾನ ಮತ್ತು ಅಜ್ಞಾನ ವಾಹಿನಿಗಳಿವೆ. ದೇಹವು ವಾಹಿನಿ ಹೇಳಿದಂತೆ ಕೇಳುವ ಉಪಕರಣ. ಸಮಾಜ ಮತ್ತು ಸರಕಾರ ದೇಹಕ್ಕೆ ಶಿಕ್ಷೆ ಕೊಡುತ್ತದೆ. ಅಪರಾಧ ಮಾಡಿದ್ದು ಮನ. ಅದು ದೇಹದೊಂದಿಗೆ ಸುಖ ಪಡೆಯಲು ಹೋಗಿ ದುಃಖ ಅನುಭವಿಸಿ ಮತ್ತೆ ಅಪರಾಧ ವೆಸಗಲು ಸಜ್ಜಾಗುತ್ತದೆ. ಇಲ್ಲ ದುರ್ಬಲವಾಗಿದ್ದರೆ ದೇಹದೊಂದಿಗೆ

ಆತ್ಮಹತ್ಯೆ ಮಾಡಿಕೊಳ್ಳುತ್ತದೆ. ಮನಕ್ಕೆ ಶಿಕ್ಷೆ ಕೊಡುವ ಶಿಕ್ಷಣ ಸಮಾಜದಲ್ಲಿ, ಸರಕಾರದಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ , ವಿಶ್ವವಿದ್ಯಾಲಯಗಳಲ್ಲಿ ಇಲ್ಲ. ಬುದ್ಧ ಅಂಗುಲಿಮಾಲನ ಮನಕ್ಕೆ ಶಿಕ್ಷಣ ಕೊಟ್ಟು ಬುದ್ಧನನ್ನಾಗಿಸಿದ. ಅಂತೆಯೇ ಶರಣರು ಮನಕ್ಕೆ ಶಿಕ್ಷಣ ಕೊಟ್ಟು ಮನವನ್ನು ಘನಮನವಾಗಿಸಿದರು. ಮನವನ್ನು ಸತಿಯನ್ನಾಗಿಸಿ ಜ್ಞಾನವನ್ನು ಪತಿಯಾಗಿಸಿದರು (ಶರಣ ಸತಿ ಲಿಂಗ ಪತಿ). ಮನವನ್ನು ಲಿಂಗ ಮನವನ್ನಾಗಿಸಿ ಲಿಂಗಾಂಗ ಸಾಮರಸ್ಯ ಬೋಧಿಸಿದರು.

ಅಕ್ಕನಾಗಮ್ಮ ಬಸವಣ್ಣನವರ ಅಕ್ಕ. ಅಕ್ಕ-ತಮ್ಮ ಎನ್ನುವ ಭವದ ಬಳ್ಳಿಯ ಬೇರನು ಹರಿದು, ಬಸವಣ್ಣ ನೀಡಿದ ಅರಿವಿನ ಪ್ರಸಾದವನು ಕೊಂಡು ಬೆಳಕಿನ ಬಳ್ಳಿಯಾದಳು.

ಎನ್ನ ಮನದ ಕಪಟವ ಹಿಂಗಿತ್ತಯ್ಯ ಚೆನ್ನಬಸವಣ್ಣನ ಕರುಣ ಪಡೆದೆನಾಗಿ :

ಅಕ್ಕನಾಗಮ್ಮಳ ಮಗ ಚೆನ್ನಬಸವಣ್ಣ, ಈತ ಮಹಾಜ್ಞಾನಿ. ತಾಯಿ-ಮಗ ಅನ್ನುವುದೇ ಮನ. ಅದು ಕಪಟದ ಮನ. ಇವೆರಡೂ ಮನದ ಪಾತ್ರಗಳೇ. ಮಗುವಿದ್ದಾಗ ತಾಯಿ ಪಾತ್ರದ ಮನ ಮಲ ಮೂತ್ರ ತೊಳೆದು ಮುದ್ದಾಡುತ್ತದೆ. ದೊಡ್ಡವನಾದ ಮೇಲೆ ಅಸಹ್ಯ ಪಡುತ್ತದೆ. ಆಸ್ತಿಯಲ್ಲಿ, ಪ್ರೀತಿಯಲ್ಲಿ, ಮೋಹದಲ್ಲಿ ವ್ಯತ್ಯಾಸವಾದರೆ ತಾಯಿ ಮಗನನ್ನು, ಮಗ ತಾಯಿಯನ್ನು ಕೊಲ್ಲುತ್ತಾನೆ. ಮನದ ಕಪಟತನ ಕಳೆಯಲು ಜ್ಞಾನದಿಂದ ಮಾತ್ರ ಸಾಧ್ಯ. ಅಂತಹ ಜ್ಞಾನವನ್ನು ನನ್ನಲ್ಲೇ ಕರುಣಿಸಿದ ಚೆನ್ನಬಸವಣ್ಣನಿಂದ ನನ್ನಲ್ಲಿರುವ ಕಪಟದ ಮನ ಹಿಂಗಿ, ಮನ ಘನಮನವಾಯಿತು. ಜ್ಞಾನವಾಯಿತು. ಆಗ ಮಗನಾಗಿ ಕಾಣಲಿಲ್ಲ, ತಾನು ತಾಯಿಯಾಗಿ ಕಾಣಲಿಲ್ಲ, ಮಗನೂ ಬೆಳಕು, ತಾನೂ ಬೆಳಕು. ವಿಶ್ವವೇ ಬೆಳಕಾಗಿ ಕಂಡಿತು. ತನ್ನ ಮನದ ಕಪಟ ಹಿಂಗಿದ್ದಕ್ಕಾಗಿ.

ಎನ್ನಂತರಂಗದ ಸಂದ ಸಂಶಯ ತೊಲಗಿತ್ತಯ್ಯ ಬಸವಣ್ಣ ಪ್ರಿಯ ಚೆನ್ನಸಂಗಯ್ಯನಲ್ಲಿ ಎನ್ನ ಪರಮ ಗುರು ಅಲ್ಲಮ ಪ್ರಭುದೇವರ ಶ್ರೀ ಚರಣ ಕಂಡೆನಾಗಿ :

ದೇಹ ಜ್ಞಾನ ಮತ್ತು ಅಜ್ಞಾನ ದಿಂದ ಕೂಡಿದೆ. ಇವರೆಡೂ ದೇಹದ ವಾಹಿನಿಗಳು. ಮೊದಲನೆಯದು ದೇಹದೊಂದಿಗೆ ಬಂದಿದೆ. ಎರಡನೆಯದು ಸಮಾಜದಿಂದ ಬಂದಿದೆ. ಶಿವಶರಣೆ ಅಕ್ಕನಾಗಮ್ಮ ಜ್ಞಾನಕ್ಕೆ ಬಸವಣ್ಣ ಪ್ರಿಯ ಚೆನ್ನಸಂಗಯ್ಯನೆಂದು ನಾಮಕರಣ ಮಾಡಿದ್ದಾಳೆ. ಆ ಜ್ಞಾನದಿಂದ ಪರಮಗುರು ಮಹಾಜ್ಞಾನಿ ಅಲ್ಲಮ ಪ್ರಭುದೇವರ ಜ್ಞಾನದ ನುಡಿಗಳನ್ನು ಕೇಳಿದಾಗ ತಮ್ಮ ಬಸವಣ್ಣ, ಮಗ ಚೆನ್ನ ಬಸವಣ್ಣ, ಪರಮಗುರು ಅಲ್ಲಮಪ್ರಭುಗಳು ಒಂದಾಗಿ ಕಂಡರು. ತಾನು ಬೇರಲ್ಲ, ಮಗ,ತಮ್ಮ, ಗುರು ಇತರ ಶಿವಶರಣ ವರ್ಗ ಬೇರಲ್ಲ, ಸರ್ವಾಂಗದಲ್ಲಿ ಲೀನವಾದ ಜ್ಞಾನ, ಅದು ಬೆಳಕು. ಬೆಳಕಿಗೆ ಜಾತಿ, ಮತ ಪಂಥ ಬಂಧು ಬಳಗ ರಾಜ,ಪ್ರಜೆಯ ಸಂಬಂಧಗಳಿಲ್ಲ, ಅದು ಎಲ್ಲರನ್ನು ಎಲ್ಲವನ್ನೂ ಬೆಳಗುವುದು. ತಾನೇ ನಿರ್ಮಿಸಿಕೊಂಡ ಭವದ ಬಳ್ಳಿಯ ಬೇರನು ಹರಿದು ಬೆಳಕಿನ ಬಳ್ಳಿಯಾಗುವ ಅಕ್ಕನಾಗಾಯಿಯ ಸೂತ್ರ.

■

ನಂಬಿ ಕರೆದಡೆ ಓ ಎನ್ನನೇ ಶಿವನು

ನಂಬರು ನಚ್ಚರು ಬರಿದೆ ಕರೆವರು,
ನಂಬಲರಿಯರೀ ಲೋಕದ ಮನುಜರು !
ನಂಬಿ ಕರೆದಡೆ ಓ ಎನ್ನನೇ ಶಿವನು ?
ನಂಬದೆ ನೆಚ್ಚದೆ ಬರಿದೆ ಕರೆವರ
ಕೊಂಬ ಮೆಟ್ಟಿ ಕೂಗೆಂದ ಕೂಡಲ ಸಂಗಮದೇವ !

-ಬಸವಣ್ಣ

ನಂಬರು ನಚ್ಚರು ಬರಿದೆ ಕರೆವರು :

ದೇವರು ಸಾಕಾರನೆಂದು ನಂಬುತ್ತಾರೆ ಕೆಲವರು. ದೇವರು ನಿರಾಕಾರನೆಂದು ನಂಬುತ್ತಾರೆ ಕೆಲವರು. ಇದು ಪ್ರಪಂಚದ ತುಂಬಾ ಇರುವ ಜನ ದೇವರನ್ನು ಆರಾಧಿಸುವ ನಿಯಮ !

ಶಿವೋಪಾಸಕರೆ ಆಗಲಿ, ಶಕ್ತಿ ಉಪಾಸಕರೆ ಆಗಲಿ, ಸಾಕಾರ ನಿರಾಕಾರ ಉಪಾಸಕರೆ ಆಗಲಿ ಮಾಯಿಕ (ಇಲ್ಲದ) ದೇವರನ್ನೇ ನಂಬುತ್ತಾರೆ ಹೊರತು ಇದ್ದ ನಿಜ ದೇವರನ್ನು ನಂಬುವುದು ವಿರಳ.

ದೇವರು ಸಾಕಾರವೆಂದು ನಂಬಿ, ಅವನ ಆಕಾರಗಳನ್ನು ಕಲ್ಪಿಸಿ, ಕಲ್ಲೊ ಕಟ್ಟಿಗೆಯೋ ಲೋಹವನ್ನೊ ಕಲಾವಿದನಿಗೆ ಕೊಟ್ಟು, ಮೂರ್ತಿ ಮಾಡಿಸುತ್ತಾರೆ. ಆದಕ್ಕೆ ಗರ್ಭಗುಡಿ, ಗೋಪುರ, ಪೌಳಿ ನಿರ್ಮಿಸಿ, ರಥ ಎಳೆದು, ಅನ್ನದಾಸೋಹ ಮಾಡುತ್ತಾರೆ. ತಾವು ಕೊಟ್ಟ ಕಲ್ಲನ್ನೆ ಮರೆತು ಆ ಮೂರ್ತಿಗೆ ಛತ್ರಿ ಚಾಮರ, ಕಲ್ಯಾಣೋತ್ಸವ, ರುದ್ರಾಭಿಷೇಕ, ಕುಂಭಾಭಿಷೇಕ, ಕ್ಷೀರಾಭಿಷೇಕ, ಕುಂಕುಮಾರ್ಚನೆ, ಬಿಲ್ವಾರ್ಚನೆ, ಪುಷ್ಪಾರ್ಚನೆ ಮಾಡುತ್ತಾರೆ. ಸರಕಾರ ದೇವರನ್ನು ತನ್ನ ಸುಪರ್ದಿಗೆ ತೆಗೆದುಕೊಂಡು ಒಂದೊಂದು ಪೂಜೆಗೂ ಒಂದೊಂದು ದರ ನಿಗದಿ ಮಾಡಿ ಜನರಿಂದ ಹಣ ಸುಲಿಯುತ್ತದೆ. ಮಕ್ಕಳಿಗೆ ಪಾಲುಕೊಡದ ತಂದೆ ತಾಯಿಗಳು ದೇವರ ಹುಂಡಿಗೆ ದುಡಿದ ಸಂಪತ್ತು ಹಾಕಿ ಕಣ್ಮುಚ್ಚುತ್ತಾರೆ. ಇನ್ನೂ ಕೆಲವರು ದೇವರನ್ನು ತಾವು ಮಾಡುವ ವ್ಯವಹಾರದಲ್ಲಿ ಪಾಲುದಾರನನ್ನಾಗಿಸಿಕೊಂಡು ಬಂದ ಪಾಲಿನಲ್ಲಿ ಬಂಧುಗಳನ್ನು ಮಿತ್ರರನ್ನು ಕುಟುಂಬ ಸಮೇತ ತಿರುಪತಿಗೆ ಕರೆದೊಯ್ದು ಸಂತೋಷ ಪಡುತ್ತಾರೆ. ಇದು ಮೋಸವೆಂದು ಬಹುತೇಕರಿಗೆ ತಿಳಿದರೂ ಸರಕಾರವೇ ಇದರಲ್ಲಿ ಪಾಲುದಾರ !

ಮನುಷ್ಯ ಒಂದಕ್ಕೆ ಎರಡು ಪಟ್ಟು ಕೊಡುತ್ತೇನೆಂದು ಹೇಳಿ ವ್ಯವಹಾರ ಮಾಡುವವನನ್ನು ಸರಕಾರ ಜೇಲಿಗೆ ಹಾಕುತ್ತದೆ. ಏನೂ ಕೊಡದ ದೇವರನ್ನು ನೋಡುವುದಕ್ಕೆ,

ಪೂಜಿಸುವುದಕ್ಕೆ ಇಂತಿಷ್ಟು ರೇಟು ಎಂದು ಬೋರ್ಡ್ ಹಾಕುತ್ತದೆ. ಹಾಗೆಯೇ ಪವಿತ್ರವೆನಿಸಿದ ಸರಕಾರವನ್ನು ಜನ ಗೌರವಿಸುತ್ತದೆ. ಮುಖ್ಯಮಂತ್ರಿ ಯಡಿಯೂರಪ್ಪನಿಂದ ಹಿಡಿದು ಶ್ರೀರಾಮುಲು ಜನಾರ್ಧನರೆಡ್ಡಿ ಮುಂತಾದ ಸಚಿವರು ತಿಮ್ಮಪ್ಪನಿಗೆ ಕೋಟಿಗಟ್ಟಲೆ ಬೆಲೆಯ ಚಿನ್ನ ಕೊಟ್ಟು ಧನ್ಯವಾದೆವೆಂದು ಮೆರೆದರು. ಇವರು ಕಲ್ಲನ್ನು ನಂಬಿದರು. ಅರಿವನ್ನು ನಂಬಲಿಲ್ಲ, ತನ್ನನ್ನೂ ನಂಬಲಿಲ್ಲ.

ನಂಬಲರಿಯರೀ ಲೋಕದ ಮನುಜರು ! :

ತಾನೇ ಕಲ್ಲಿನಲ್ಲಿ ಮೂರ್ತಿ ಮಾಡಲು ಹಣ ಕೊಟ್ಟು, ಮಂದಿರ, ಪೌಳಿ, ರಥ ನಿರ್ಮಿಸಿ, ಪೂಜೆ ಮಾಡಲು ಅರ್ಚಕನನ್ನು ನಿಯಮಿಸಿ ಆತನಿಗೆ ಸಂಬಳ ಕೊಟ್ಟು ತಾನು ಕೊಟ್ಟ ಕಲ್ಲನ್ನೇ ನಂಬದೆ ದೇವರೆಂದು ನಂಬಿದರು. ಇದು ಲೋಕದ ಮನುಜರ ಕತೆ. ತಾನೇ ನಿರ್ಮಿಸಿಕೊಂಡ ಹುದಲಿನಲ್ಲಿ ತಾನೇ ಬೀಳುವ ಕತೆ. 'ರಾತ್ರಿ ಕಂಡ ಬಾವಿಯಲ್ಲಿ ಹಗಲು ಬಿದ್ದಂತೆ ' ಎಂಬ ಜನಪದರ ನುಡಿ ಸತ್ಯವೂ ಹೌದು.

ನಂಬಿ ಕರೆದಡೆ ಓ ಎನ್ನನೇ ಶಿವನು ? ನಂಬದೆ ನೆಚ್ಚದೆ ಬರಿದೆ ಕರೆವರ ಕೊಂಬ ಮೆಟ್ಟಿ ಕೂಗೆಂದ ಕೂಡಲ ಸಂಗಮ ದೇವ :

ಕಲ್ಲು ನೋಡಿ ದೇವರೆಂದು ಕಲ್ಪಿಸಿಕೊಂಡ ಮನುಷ್ಯ. ತಾನು ಕಲ್ಪಿಸಿಕೊಂಡ ಕಲ್ಪನೆ ಸತ್ಯವೊ ಎಂದು ಮತ್ತೊಮ್ಮೆ ಅರಿವಿನಿಂದ ನೋಡಲಿಲ್ಲ. ನೋಡಿದರೆ ಕಲ್ಪಿಸಿ ಕೊಂಡ ಕತೆಗಳೆಲ್ಲ ನುಚ್ಚುನೂರು. ಹೊರಗಣ್ಣು ಮೂರ್ತಿ ನೋಡಿ ದೇವರೆಂದು ಪೂಜಿ ಸುತ್ತದೆ. ಒಳಗಣ್ಣು ಮೂರ್ತಿ ನೋಡಿ ಕಲ್ಲು ಎಂದು ತಿಳಿದು ಪೂಜಿಸುವುದಿಲ್ಲ. ಕಲ್ಲನ್ನು ದೇವರೆಂದು ನಂಬುವುದಿಲ್ಲ. ಹೊರಗಣ್ಣು ಭ್ರಮೆ. ಒಳಗಣ್ಣು ಬ್ರಹ್ಮ. ಒಳಗಣ್ಣು ಹೊರ ಗಣ್ಣಿನ ಕೊಂಬು ಹಿಡಿದು ನೀನು ಪೂಜಿಸುವ ಮೂರ್ತಿ ದೇವರಲ್ಲ ಕಲ್ಲು. ಅದು ಕಲ್ಲೆಂದು ಪೂಜಿಸುವ ಸರ್ವರಿಗೂ ಕೂಗಿ ಹೇಳೆಂದು ಕಿವಿ ಹಿಂಡಿ ಎಚ್ಚರಿಸುತ್ತದೆ. ಒಳಗಣ್ಣು ನೋಡಿ ಕೊಂಡರೆ ಅರಿವು. ಆ ಅರಿವೆ ಗುರು. ಆ ಗುರುದೇವನೇ ಮಹಾದೇವ. ಆತನೇ ಸದಾ ಶಿವ, ಸಾಕ್ಷಾತ್ ಪರಬ್ರಹ್ಮ.

ಕಲ್ಲನ್ನು ಮೂರ್ತಿ ಮಾಡಿ ಕಲ್ಲೆಂದು ನಂಬಲರಿಯದೆ ದೇವರೆಂದು ನಂಬಿ ಅರ್ಚಿಸಿ ಪೂಜಿಸಿ ಆರಾಧಿಸುವ ಹೊರಗಣ್ಣಿನ ದೇವರು ಸತ್ಯವೊ ? ಮೂರ್ತಿಯನ್ನು ಕಲ್ಲೆಂದು ತಿಳಿದು ಅರ್ಚಿಸದೆ, ಪೂಜಿಸದೆ, ಆರಾಧಿಸದೆ ಹೊರಗಣ್ಣಿನ ಕಿವಿ ಹಿಂಡುವ ಒಳಗಣ್ಣಿನ ಅರಿವೆಂಬ ದೇವರು ಸತ್ಯವೊ ? ಇದು ನಂಬಲರಿಯದ ಲೋಕದ ಮನು ಜರಿಗೆ ಬೆಳಕು ನೀಡಿದ ಜಗಜ್ಯೋತಿ ಬಸವಣ್ಣನ ಸೂತ್ರ. ಅಜ್ಞಾನದ ಕಣ್ಣು ಭಸ್ಮ ಮಾಡಿ ಒಳಗಣ್ಣು ನೋಡಿಕೊಳ್ಳುವ ಸೂತ್ರ ! ಮರೆವು ಅರಿವಿನಲ್ಲಿ ಸಂಗಮವಾಗಿ ಕೂಡಲ ಸಂಗಮ ತಾನೇ ಆಗುವ ಸೂತ್ರ.

■

ರೂಹಿಲ್ಲದ ಸಂಗ

ತಾ ನಡೆದಡೆ ನಡೆಗೆಟ್ಟ ನಡೆಯ ನಡೆಯಬೇಕು.
ತಾ ನುಡಿದಡೆ ನುಡಿಗೆಟ್ಟ ನುಡಿಯ ನುಡಿಯಬೇಕು.
ರೂಹಿಲ್ಲದ ಸಂಗವ ಮಾಡಬೇಕು.
ಭವವಿಲ್ಲದ ಭಕ್ತಿ ಮಾಡಬೇಕು ಕೂಡಲ ಸಂಗಮದೇವಾ.

-ಬಸವಣ್ಣ

ತಾ ನಡೆದಡೆ ನಡೆಗೆಟ್ಟ ನಡೆಯ ನಡೆಯಬೇಕು :

ನಡೆ : ಸೊಸೆ ಅತ್ತೆಯ ಮನೆಗೆ ನಡೆಯಲು (ಸಂಸಾರ ಮಾಡಲು) ಬಂದಿದ್ದಾಳೆ. ಅತ್ತೆಯಿಂದ ಹಿಡಿದು ಮನೆಮಂದಿಯೆಲ್ಲ ನಡೆಯಲು ಬಂದ ಸೊಸೆಯನ್ನು ಬಿರು ನುಡಿಗಳಿಂದ ಬೈಯ್ಯುವವರೇ. ಸ್ವರ್ಗವಾಗಬೇಕಾದ ಮನೆ ಬಿರುನುಡಿಗಳಿಂದ ನರಕವಾಗುತ್ತದೆ. ಇದು ಎಲ್ಲರ ಮನೆಯ ಮಾತು. ಸೊಸೆ ಬಿರುನುಡಿ ಸಹಿಸಿಕೊಂಡು ಕುದ್ದೂ ಕುದ್ದೂ ಎಂಟ್ಹತ್ತು ವರ್ಷಗಳಾದ ಮೇಲೆ ಸೊಸೆಗೆ ಯಜಮಾನಿಯ ಪಟ್ಟ, ಮತ್ತೆ ಅತ್ತೆಯ ಪಟ್ಟ! ಅಲ್ಲಿಯವರೆಗೆ ಕಿವಿಗೆ ಕೇಳುವ ಬಿರುನುಡಿಗಳು, ನೋಡಿದರೆ ವಾರೆನೋಟದಿಂದ ಸುಡುವ ಕಣ್ಣುಗಳು, ಉಣ್ಣಲು ಹೋದರೆ ತಂಗಳು, ಸ್ಪರ್ಶ ಬಯಕೆಗೆ ಗಂಡನ ತಿವಿತ. ಇದು ಸೊಸೆಯ ಕತೆಯಾದರೆ, ನಡೆಯಲು ಹೋದ ರಾಜಕಾರಣಿಗಳ, ದುಡಿಯಲು ಹೋದ ನೌಕರರ ಕತೆಯೂ ಇಷ್ಟೆ.

ಕೆಲವರು ರಾಜಕೀಯವನ್ನು, ಕಾರ್ಯಾಲಯವನ್ನು ಶಿಕ್ಷಣ ಸಂಸ್ಥೆಗಳನ್ನು ರಣರಂಗ ಮಾಡುತ್ತಾರೆ. ಕೆಲವರು ಬಿರು ನುಡಿಗಳನ್ನು ಕೇಳಿ ತಾವೇ ಕುದ್ದು ಸೌಮ್ಯವಾಗಿರುತ್ತಾರೆ. ಇದು ಸಮಾಜದಲ್ಲಿ ಜನ ನಡೆಯುವ ಸಾಮಾನ್ಯ ನಡೆ. ನಡೆಗೆಟ್ಟ ನಡೆಯ ಶಿಕ್ಷಣ ಸೊಸೆಯಿಂದ ಹಿಡಿದು ಮನೆ ಮಂದಿಗೆ, ರಾಜಕಾರಣಿಗಳಿಗೆ, ನೌಕರ ವರ್ಗಕ್ಕೆ ಇಲ್ಲ, ಏಕೆಂದರೆ ಶಬ್ದದಿಂದ ಜಗಳವಾಡುತ್ತಾರೆ. ಇಲ್ಲ ಶಬ್ದ ಕೇಳಿ ತಾವು ಕುದಿದು ಸಮಾಧಾನಿಗಳಾಗುತ್ತಾರೆ.

ನಡೆಯಲು ಬಾರದ ನಡೆ : ಅತ್ತೆ ಬಿರುನುಡಿಗಳಿಂದ ನೀರು ತರಲು ಹೇಳಿದ ಶಬ್ದ ಸೊಸೆಯ ಕಿವಿ ಸ್ವೀಕರಿಸಿ ಶರೀರವನ್ನು ಕುದಿಸುತ್ತದೆ, ಕಣ್ಣು ಕಾದ ಕೆಂಡದಂತಾಗುತ್ತದೆ, ನಾಲಿಗೆ ನರ್ತನ ಮಾಡುತ್ತದೆ. ಅತ್ತೆಯೊಂದಿಗೆ ಮನೆಮಂದಿಯೆಲ್ಲ ಬಂದು ಸೊಸೆಯನ್ನು ಹೊಡೆದು ಬಡಿದು ಅತ್ತೆಗೆ ನೀರು ಕೊಡುವಂತೆ ಮಾಡುತ್ತಾರೆ. ಸೊಸೆಗೆ ನೀರು ಕೊಡುವುದೂ ತಪ್ಪಲಿಲ್ಲ, ಅತ್ತೆ ನೀರು ಕುಡಿಯುವುದೂ ತಪ್ಪಲಿಲ್ಲ, ಇದು ಮನೆಯ ಸೊಸೆಗೊಂದೇ ಅಲ್ಲ, ನಡೆಯಲು ಬಾರದ ರಾಜಕಾರಣಿಗಳಿಗೂ ನೌಕರರಿಗೂ

ಅನ್ವಯಿಸುತ್ತದೆ.

ನಡೆಗೆಟ್ಟ ನಡೆ : ಅತ್ತೆಯ ಜಿರುನುಡಿಗಳನ್ನು ಸೊಸೆ ಅರಿವಿನಿಂದ ಕೇಳಿ ಒಂದು ಗ್ಲಾಸ ಮಜ್ಜಿಗೆ ಒಂದು ಗ್ಲಾಸ್ ನೀರು ನಗುಮುಖದಿಂದ ಕೊಟ್ಟರೆ, ಸೊಸೆಯನ್ನು ಕಂಡ ಅತ್ತೆಯೂ ಮೌನ. ಸೊಸೆಯೂ ಮೌನ. ಜಗಳವಿಲ್ಲ. ನುಡಿಯಲ್ಲಿ ಬಲವಿದೆಯೋ ಕೇಳಿದ ಕಿವಿಯಲ್ಲಿ ದುರ್ಬಲವಿದೆಯೋ ಎಂದು ತಿಳಿಯುವ ಶಿಕ್ಷಣವಿಲ್ಲದಿದ್ದರೆ ನಡೆಗೆಟ್ಟ ನಡೆ, ನಡೆಯಲು ಯಾರಿಗೂ ಬರುವುದಿಲ್ಲ. ಅಲ್ಲಿ ಬರೀ ಜಗಳ.

ನುಡಿಯಲ್ಲಿ ಬಲವಿದೆಯೆಂದರೆ ಕೇಳಿಸಿಕೊಂಡ ಮನೆ ಮಂದಿಗೆಲ್ಲ ಆನಂದ. ಸೊಸೆಗೆ ಮಾತ್ರ ದುಃಖ. ಒಂದೇ ಶಬ್ದದಿಂದ ಹಲವರಿಗೆ ಸುಖ, ಒಬ್ಬರಿಗೆ ದುಃಖ. ಇವೆರಡೂ ಸುಖ ಮತ್ತು ದುಃಖ ತಿಳಿಯುವ ಕಿವಿಗಳು. ಈ ಕಿವಿಗಳು ಹೊರ ಕಿವಿಗಳು. ಶಬ್ದವನ್ನು ತಿಳಿಯುವ ಕಿವಿ ಒಳ ಕಿವಿ. ಒಳ ಕಿವಿಯಿಂದ ಕೇಳಿದರೆ ಶಬ್ದ ನಪುಂಸಕ. ಶಬ್ದದಲ್ಲಿ ಶಕ್ತಿಯಿಲ್ಲ. "ಶಬ್ದ ನೋಡಿದಡೆ ನಪುಂಸಕ, ಹರಿಹರ ಬ್ರಹ್ಮಾದಿಗಳನ್ನು ಮುರಿದು ಕಟ್ಟಿತ್ತು" ಎಂದಿದ್ದಾರೆ ಶರಣರು.

ಶಬ್ದ ತಿಳಿಯುವ ಶಿಕ್ಷಣ ವಿದ್ದರೆ ಸೊಸೆ ತಾನೂ ನಡೆಯುತ್ತಾಳೆ. ಸಂಸಾರವನ್ನೂ ನಡೆಸುತ್ತಾಳೆ. ರಾಜಕಾರಣಿ ತಾನೂ ನಡೆಯುತ್ತಾನೆ ಸಮಾಜವನ್ನೂ ನಡೆಸುತ್ತಾನೆ. ನೌಕರ ತಾನೂ ನಡೆಯುತ್ತಾನೆ ತಾ ನಡೆಯುವ ಸಂಸ್ಥೆಯನ್ನೂ ನಡೆಸುತ್ತಾನೆ. ಇದು ಅಣ್ಣ ಬಸವಣ್ಣನ ನಡೆಗೆಟ್ಟ ನಡೆ. ಶರಣರ ನಿಶಬ್ದವೇದಿಯ ಗುಟ್ಟು.

ತಾ ನುಡಿದಡೆ ನುಡಿಗೆಟ್ಟ ನುಡಿಯ ನುಡಿಯಬೇಕು :

ನಡೆ-ನುಡಿ, ಸುಖ-ದುಃಖಗಳಿಂದ ಕೂಡಿದೆ. ಒಂದು ಮಾತು ಒಬ್ಬರಿಗೆ ಸುಖ ತಂದರೆ ಅದೇ ಮಾತು ಮತ್ತೊಬ್ಬರಿಗೆ ದುಃಖ ತರುತ್ತದೆ. ಮಾತು ದುಃಖವೂ ಅಲ್ಲ ಸುಖವೂ ಅಲ್ಲ, ಮಾತೇ ಜ್ಯೋತಿರ್ಲಿಂಗ. ಮಾತೇ ಮಾಣಿಕ್ಯ. ಅಣ್ಣ ಬಸವಣ್ಣ ಒಳ್ಳೆಯ ಮಾತಿಗಾಗಿ ಈ ಮಾತು ಹೇಳಿದ್ದಲ್ಲ. ಮಾತಿಗಾಗಿ ಹೇಳಿದ್ದು. ಮಾತು ತಿಳಿಯು ಶಿಕ್ಷಣ ಬಂದರೆ, ಎಲ್ಲ ಮಾತುಗಳೂ ಒಳ್ಳೆಯವೆ. ಮಾತನ್ನು ಅರಿವಿನಿಂದ ಸ್ವೀಕರಿಸುತ್ತಾನೆ. ಕತ್ತೆ ಎನ್ನುವ ಮಾತೂ ಒಳ್ಳೆಯದೆ. ಕತ್ತೆ ತಾನೇ ಕತ್ತೆಯಲ್ಲ, ತಾನು ಹೆಸರಿಟ್ಟು ಕರೆದರೆ ಕತ್ತೆಯಾಗಿದೆ. ನಾ ಕರೆದರೆ ಅದಕ್ಕೆ ಅಲಕ್ಷ್ಯ. ನಾ ಕತ್ತೆಯಲ್ಲ ಅನ್ನುವ ಅರಿವು ಅದಕ್ಕಿದೆ. ನನಗೆ ಕರೆದರೆ ಕತ್ತೆ ನಾನಲ್ಲದಿದ್ದರೂ ನನಗೆ ಲಕ್ಷ್ಯ. ನನ್ನ ಹೃದಯ ಕುದಿಯುತ್ತದೆ. ಅಲ್ಲದ ಕತ್ತೆ ನಾನಾಗುತ್ತೇನೆ. ಜಗಳ, ಯುದ್ಧ, ಸಾವು-ನೋವು ಸಂಭವಿಸುತ್ತದೆ. ತಿಳಿದರೆ ಮಾತೆಲ್ಲವೂ ಜ್ಯೋತಿರ್ಲಿಂಗವೇ.

ರೂಹಿಲ್ಲದ ಸಂಗವ ಮಾಡಬೇಕು. ಭವವಿಲ್ಲದ ಭಕ್ತಿಯ ಮಾಡಬೇಕು ಕೂಡಲ ಸಂಗಮದೇವಾ :

ರೂಪುಳ್ಳ ಸಂಗ : ಗಿಡ, ಮರ, ಬಳ್ಳಿ, ಪ್ರಾಣಿ, ಪಶು, ಪಕ್ಷಿ ಸಸ್ಯ ಜಲವರ್ಗ

ಹೆಣ್ಣು ಗಂಡು ರೂಪುಳ್ಳದ್ದಾಗಿವೆ. ನಾನಾ ರೂಪಗಳಿಂದ ಕೂಡಿವೆ. ರೂಪ ನೋಡಿದರೆ ಸಾಕು ಬಯಕೆ, ಬೇಡಿಕೆ, ಸಂಗ್ರಹ, ಕಾಮ ಕ್ರೋಧ, ವ್ಯಾಮೋಹ ಮುಂತಾದ ಭಾವನೆಗಳು ಹುಟ್ಟುತ್ತವೆ. ಇದು ಹೊರ ಕಣ್ಣಿನ ದೋಷ. ಹೊರಕಣ್ಣು ಅಜ್ಞಾನದ ಕಣ್ಣು. "ನೋಡೂದನ್ನ ನೋಡಲರಿಯದೇ ಕೆಟ್ಟಿತ್ತೀ ಜಗವೆಲ್ಲ, ನೋಡೂದನ್ನ ನೋಡುವಡೆ ಕೂಡಲಿಲ್ಲ ಆಗಲಲಿಲ್ಲ" ಎಂದಿದ್ದಾರೆ ಅಲ್ಲಮ ಪ್ರಭುಗಳು.

ಹೆಂಡತಿ ಪರರೊಂದಿಗೆ ಮಾತನಾಡಿದರೆ ಸಾಕು ಕೇಳಿದ ಕಿವಿಗೂ ನೋಡಿದ ಕಣ್ಣಿಗೂ ರೋಗ; ಮಾತನಾಡುವ ನಾಲಿಗೆಗೆ, ಜಡ ಶರೀರಕ್ಕೂ ರೋಗ. ಹಿಂದೆ ಪ್ರೀತಿ ಇಂದು ರೋಗ. ಹಿಂದೆಯೂ ಅದೇ ರೂಪ ಇಂದೂ ಅದೇ ರೂಪ. ವಸ್ತು ಒಂದೇ ಆದರೂ ವಸ್ತುವನ್ನು ಹೊತ್ತ ರೂಪ ಶಬ್ದ ಬೇರೆ ಬೇರೆಯಾಗಿ ಗಮನಕ್ಕೆ ಬರುತ್ತದೆ ಇದು ರೂಪುಳ್ಳ ಸಂಗ.

ರೂಹಿಲ್ಲದ ಸಂಗ :

ಗಿಡ ಮರ ಬಳ್ಳಿಯಿಂದ ಹಿಡಿದು ಮನುಷ್ಯನ ಜನನ ನೀರಿನಿಂದ . ತಂದೆಯ ಗರ್ಭದ ನೀರಿನ ಒಂದು ಬಿಂದು ತಾಯಿಗರ್ಭ ಪ್ರವೇಶಿಸಿ ಆ ನೀರೇ ಚರ್ಮ, ಎಲುಬು, ರಕ್ತ, ಮಾಂಸ, ಮಜ್ಜೆ ಮೇದಸ್ಸಾಗಿದೆ. ಹೆಣ್ಣು ಗಂಡು ನೀರಿನಿಂದಲೇ ಜನನ. ಗಿಡ ಮರ ಬಳ್ಳಿ ಪಶು ಪಕ್ಷಿ ಜಲ ಚರಗಳು ನೀರಿನಿಂದಲೇ ಜನನ. ನೀರು ಸಕಲ ಜೀವರಾಶಿಗೂ ಆಧಾರ.

ಆಮ್ಲಜನಕದ ಒಂದು ಕಣ ಜಲಜನಕದ ಎರಡು ಕಣಗಳಿಂದ ನೀರು ಆಗಿದೆ. ನೀರು ಕಾಣುತ್ತದೆ. ಆಮ್ಲಜನಕ ಜಲಜನಕ ಕಾಣುವುದಿಲ್ಲ, ನೀರಿಗೆ ರೂಪ, ವಾಸನೆ, ರುಚಿಯಿಲ್ಲ, ಸಮಾನತೆಯಿಂದ ಕೂಡಿದೆ ಇದು ವಿಜ್ಞಾನ. ತನ್ನಂತೆ ನೀರುಳ್ಳ ಇತರೆ ಜೀವಿಗಳನ್ನೂ ಅರಿವಿದ್ದರೆ ತಿಳಿಯಬಲ್ಲ, ಪ್ರೀತಿಸಬಲ್ಲ, ಇದು ಭವ-ಬಂಧನಗಳಿಲ್ಲದ ಅರಿವಿನ ಭಕ್ತಿ. ತಾನು ತನ್ನ ಅರಿವಿನ ಮೇಲಿಟ್ಟ ಪ್ರೀತಿ. ಇದು ಬಸವಣ್ಣನ ರೂಹಿಲ್ಲದ ಸಂಗದ ಸೂತ್ರ. ನಡೆಗೆಟ್ಟ ನಡೆಯಲ್ಲಿ ನಡೆ ಸಂಗಮ. ನುಡಿಗೆಟ್ಟ ನುಡಿಯಲ್ಲಿ ನುಡಿ ಸಂಗಮವಾಗಿ, ನಡೆಗೆಟ್ಟ ನಡೆ, ನುಡಿಗೆಟ್ಟ ನುಡಿ ಸಿದ್ಧಿಸಿದ ಕೂಡಲ ಸಂಗಯ್ಯನ ಸೂತ್ರ.

■

ಜ್ಞಾನಕ್ಕೆ ಉಪದೇಶ ಬೇಕಿಲ್ಲ

ಬೆಟ್ಟಕ್ಕೆ ಚಳಿಯಾದಡೆ ಏನ ಹೊದಿಸುವರಯ್ಯ ?
ಬಯಲು ಬತ್ತಲೆ ಇದ್ದರೆ ಏನನುಡಿಸುವರಯ್ಯ ?
ಭಕ್ತನು ಭವಿಯಾದರೆ ಏನನುಪಮಿಸುವೆನಯ್ಯ ? ಗುಹೇಶ್ವರಾ.

-ಅಲ್ಲಮಪ್ರಭು

ಬೆಟ್ಟಕ್ಕೆ ಚಳಿಯಾದಡೆ ಏನ ಹೊದಿಸುವರಯ್ಯ ? :

ಚಿಕ್ಕ ಪ್ರಾಣಿಗಳಿಗೆ ಚಳಿಯಾದರೆ ಏನನ್ನಾದರೂ ಹೊದಿಸಬಹುದು. ಬೆಟ್ಟಕ್ಕೆ ಚಳಿಯಾಗಿದೆ. ಏನು ಹೊದಿಸಬೇಕು ಇದು ಮಹಾಜ್ಞಾನಿ ಅಲ್ಲಮಪ್ರಭುಗಳ ಪ್ರಶ್ನೆ.

ದೇಹದಲ್ಲಿ ಜ್ಞಾನವೂ ಇದೆ ಅಜ್ಞಾನವೂ ಇದೆ. ತಾನು ಮಾಡುವ ಪ್ರತಿಯೊಂದು ಕೆಲಸವೂ ತನ್ನ ಅರಿವಿಗಿದೆ. ಮರೆವಿನಿಂದ ಅಜ್ಞಾನದ ಕೆಲಸಗಳನ್ನು ಮಾಡಿ ಅಪರಾಧಿ ಸ್ಥಾನದಲ್ಲಿ ನಿಲ್ಲುತ್ತಾನೆ. ಮರೆವಿನ ಕೆಲಸ ಮಾಡುವಾಗ ಅರಿವು ಎಚ್ಚರಿಸಿದ್ದು ಗಮನಕ್ಕಿದೆ. ಅರಿವನ್ನು ಧಿಕ್ಕರಿಸಿ ಮರೆವಿನ ಕೆಲಸ ಮಾಡಿ ಶಿಕ್ಷೆ ಅನುಭವಿಸುವಾಗ ಪುನಹ ಅರಿವೆ ಸಂತೈಸಿ ಮತ್ತೊಮ್ಮೆ ಮಾಡಬೇಡವೆಂದು ಹೇಳಿದ ಉಪದೇಶವೂ ಗಮನಕ್ಕಿದೆ.

ಬಯಲು ಬತ್ತಲೆಯಿದ್ದರೆ ಏನನುಡಿಸುವರಯ್ಯ ? :

ಬೆಟ್ಟಕ್ಕೆ ಚಳಿಯಾದರೆ ಏನೂ ಹೊದಿಸುವಂತಿಲ್ಲ. ಬಯಲು ಬತ್ತಲೆಯಿದ್ದರೆ ಏನೂ ಉಡಿಸುವಂತಿಲ್ಲ.

ವ್ಯಕ್ತಿಯಲ್ಲಿ ತತ್ವ ಇದೆ. ಅಜ್ಞಾನವೂ ಇದೆ. ತನ್ನಲ್ಲಿರುವ ಆ ತತ್ವವೇ ಪುಸ್ತಕಕ್ಕೆ ಬಂದಿದೆ. ವ್ಯಕ್ತಿ ಅಜ್ಞಾನದ ಕೆಲಸಗಳಲ್ಲಿ ತೊಡಗಿದಾಗ ತತ್ವ ಅಡ್ಡಿ ಪಡಿಸಿದೆ. ತತ್ವ ಎಂದೂ ತಪ್ಪು ಮಾಡುವುದಿಲ್ಲ. ಅಜ್ಞಾನ ಎಂದೂ ಸರಿ ಕೆಲಸ ಮಾಡುವುದಿಲ್ಲ. ತತ್ವಕ್ಕೆ ಯಾರ ಉಪದೇಶವೂ ಬೇಕಿಲ್ಲ. ಅಜ್ಞಾನಕ್ಕೆ ಉಪದೇಶ ನಿಲ್ಲುವುದಿಲ್ಲ.

ತಪ್ಪು ಮಾಡಿದ್ದು ತತ್ವ ಅಲ್ಲ; ಅಜ್ಞಾನ. ದೇಹ ತತ್ವದ ಆಭರಣ. ಅಜ್ಞಾನ ದೇಹದಲ್ಲಿ ವಾಸವಾಗಿದೆ. ಬಾಡಿಗೆಗೆ ಇದೆ. ಕೋರ್ಟ್, ಕಛೇರಿ, ಸಮಾಜ ಅಜ್ಞಾನವನ್ನು ದೇಹದ ಮೂಲಕ ಗುರುತಿಸುತ್ತದೆ. ದೇಹವನ್ನು ದಂಡಿಸುತ್ತದೆ. ದೇಹ ದಂಡಿಸುವಾಗ ತತ್ವಕ್ಕೆ ದುಃಖವಿಲ್ಲ. ಅಜ್ಞಾನಕ್ಕೆ ನಾಚಿಕೆಯಿಲ್ಲ.

ಕೋರ್ಟ್, ಆರೋಪಿಗೆ ತತ್ವದ ಮೇಲೆ ಆಣೆ ಇಟ್ಟು ಸತ್ಯ ಹೇಳಲು ಸೂಚಿಸುತ್ತದೆ. ತನ್ನಿಂದ ಬಂದ ಈ ಕಿರು ತತ್ವಕ್ಕೆ ತಾನೇ ಆಣೆ ಇಡಬೇಕೆ ? ಈ ಕಿರು ತತ್ವದ ಹೊದಿಕೆ, ಜಗದಗಲ ಮುಗಿಲಗಲ ವ್ಯಾಪಿಸಿರುವ ಬಯಲು ತತ್ವಕ್ಕೆ ಸರಿ ಹೋದೀತೆ ?

ಭಕ್ತನು ಭವಿಯಾದರೆ ಏನನುಪಮಿಸುವೆನಯ್ಯ ? ಗುಹೇಶ್ವರಾ:

ಮನ ಅರಿವಿನ ಧ್ಯಾನದಲ್ಲಿದ್ದು ಭಕ್ತನಾಗಲೂ ಬಲ್ಲದು. ಅಜ್ಞಾನದ ಕೆಲಸದಲ್ಲಿದ್ದು ಭವಿಯಾಗಲೂ ಬಲ್ಲದು. ''ಬೆಳಕೂ ಇದೆ ಕತ್ತಲೂ ಇದೆ ಇದೇನು ಚ್ಯೋದ್ಯವೋ ? ಆನೆಯೂ ಸಿಂಹವೂ ಒಂದೆಡೆ ಉಂಬುವಂತೆ'' ಬೆಳಕಿದ್ದಲ್ಲಿ ಕತ್ತಲಿಗೆ ಅವಕಾಶವಿಲ್ಲ. ಆದರೆ ತನ್ನಲ್ಲಿ ಬೆಳಕೂ ಇದೆ ಕತ್ತಲೂ ಇದೆ. ಬೆಳಕಿಗಾಗಿ ಹೊರಗೆ ಹುಡುಕುವುದು ಬೇಡ. ಹೊರಗಿನ ಜ್ಞಾನ ಎಂಜಲು, ತನ್ನ ಜ್ಞಾನ ಮೀಸಲು. ತನ್ನ ಜ್ಞಾನವನು ತಾನೇ ಉಂಡು ಜ್ಞಾನಿಯಾಗಬೇಕಾದ (ಭಕ್ತ) ವನಿಗೆ ಯಾರು ಹೇಳಿದರೆ ಸರಿಹೋದೀತು. ಸರಿಹೋಗುವುದಿಲ್ಲ. ಬೆಟ್ಟಕ್ಕೆ ಬಯಲಿಗೆ ಬೋಧೆಯ ಆವಶ್ಯಕತೆಯಿಲ್ಲ. ಎಂದು ಜ್ಞಾನಿಯಾಗುವ ತಿರುಳು ಸರಳವಾಗಿ ವಿವರಿಸಿದ್ದಾರೆ ಅಲ್ಲಮ ಪ್ರಭುಗಳು.

■

ಜ್ಞಾನ ವರಿಯದ ಮನ ಸೂಳೆ

ಸುಖವರಿಯದ ಹೆಣ್ಣು ಸೂಳೆಯಾದಳು
ಲಿಂಗವರಿಯದಾತ ಶೀಲವಂತನಾದ
ಸುಖವಿಲ್ಲ ಸೂಳೆಗೆ, ಪಥವಿಲ್ಲ ಶೀಲಕ್ಕೆ
ಮಾಡಲಾಗದು ನೇಮವ, ನೋಡಲಾಗದು ಶೀಲವ
ಸತ್‌ಶೀಲವೇ ಸಹಜ ಶೀಲ ನಮ್ಮ ಗುಹೇಶ್ವನ ಅರಿಯ ಬಲ್ಲವಂಗೆ

- ಅಲ್ಲಮಪ್ರಭು

ಸುಖವರಿನಯದ ಹೆಣ್ಣು ಸೂಳೆಯಾದಳು :

ಹೆಣ್ಣು ಹೆಂಡತಿ, ಸೂಳೆ ಎನ್ನುವುದು ಜ್ಞಾನಿಗಳ ಬೆಡಗಿನ ಪದ. ದೇಹವನ್ನು ತನ್ನ ಬಯಕೆಗಾಗಿ ದುರ್ಬಳಕೆಮಾಡಿಕೊಳ್ಳುವ ಮನಕ್ಕೆ ಇಟ್ಟ ಹೆಸರು. ದೇಹ ಹೆಣ್ಣೂ ಅಲ್ಲ, ಗಂಡೂ ಅಲ್ಲ. ದೇಹದ ಜನನದೊಂದಿಗೆ ಬಂದ ಜ್ಞಾನ ಗಂಡು. ದೇಹ ಆವರಿಸಿ ಕೊಂಡ ಮನ ಹೆಣ್ಣು, ಸೂಳೆ, ಹೆಂಡತಿ. ಮನಕ್ಕೆ ದಾಸರು 'ಹೆಂಡತಿ ನೀ ಹೆಂಡತಿ ಕೊಂಡಕೋತಿಯಂಗ ಕುಣಿಸುತಿ' ಎಂದಿದ್ದಾರೆ. 'ಹೆಣ್ಣು ಸಾಕ್ಷಾತ್ ಕಪಿಲ ಸಿದ್ಧ ಮಲ್ಲಿಕಾರ್ಜುನ' ಎಂದು ಲೋಕದ ದೃಷ್ಟಿಯ ಹೆಣ್ಣು ಶಬ್ದ ಅಲ್ಲಗಳೆದು ಸಿದ್ಧರಾಮ ಶಿವ ಯೋಗಿಗಳು ಜ್ಞಾನಕ್ಕೆ ಕಪಿಲಸಿದ್ಧ ಮಲ್ಲಿಕಾರ್ಜುನನೆಂದು ಕರೆದಿದ್ದಾರೆ.

ಹೆಣ್ಣು ಮತ್ತು ಗಂಡು ಎನ್ನುವುದು ದೇಹ. ಇವೆರಡರಲ್ಲಿ ಮನವಿದೆ. ಮನಕ್ಕೆ ಸುಖವೆಂದರೇನೆಂದು ತಿಳಿಯುವುದಿಲ್ಲ, ದೇಹ ಆವರಿಸಿದ ಮನ ದೇಹವನ್ನು ಹೆಣ್ಣಾಗಿ ನೋಡುತ್ತದೆ, ಗಂಡಾಗಿಯೂ ನೋಡುತ್ತದೆ. ದೇಹದಲ್ಲಿರುವ ಚರ್ಮ, ರಕ್ತ, ಮೂಳೆ, ಮಾಂಸ, ಮಜ್ಜೆ ಮೇಧಸ್ಸುಗಳೆಲ್ಲ ಒಂದೆ. ಆದರೂ ಹೆಣ್ಣು, ಗಂಡು, ಮಗು, ಮುದುಕಿ, ಯೌವ್ವನ, ಶ್ರೀಮಂತ, ಬಡವ ತನಗೆ ತಿಳಿದ ರೀತಿಯಲ್ಲಿ ಆದರಿಸುತ್ತದೆ. ಹೀಯಾಳಿಸುತ್ತದೆ. ಕಾಮಿಸುತ್ತದೆ. ಹೀಗೆ ಮನ, ದೇಹದ ಪಂಚೇಂದ್ರಿಯಗಳಲ್ಲಿ ಬೆರೆತಿದೆ. ನಾಲಿಗೆಯಲ್ಲಿ ಬೆರೆತ ಮನಕ್ಕೆ ದಾಸರು 'ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ' ಎಂದರು.

ಕಣ್ಣಿನಲ್ಲಿ ಮನ ಬೆರೆತಿರುವುದರಿಂದ ವಸ್ತು ಅನ್ಯವಾಗಿ ಕಾಣುತ್ತದೆ. ಕಿವಿಯಲ್ಲಿ ಬೆರೆತಿರುವುದರಿಂದ ಶಬ್ದ ಸುಖ-ದುಃಖದಿಂದ ಕೇಳುತ್ತದೆ. ಮನ ಮೂಗಿನಲ್ಲಿ ಬೆರೆತಿರುವುದರಿಂದ ವಾಸನೆಯಲ್ಲಿ ದೋಷ ಗೋಚರಿಸುತ್ತದೆ. ಚರ್ಮದಲ್ಲಿ ಬೆರೆತಿರುವುದರಿಂದ ವಿಕೃತ- ಸುಕೃತವಾಗಿದೆ. ಮನ ನಾಲಿಗೆಯಲ್ಲಿ ಬೆರೆತಿರುವುದರಿಂದ ರುಚಿ-ಅರುಚಿಗಳಾಗಿವೆ. ಹೀಗಾಗಿ ಜ್ಞಾನವರಿಯದ ಮನ ಹೆಣ್ಣೂ ಹೌದು, ಸೂಳೆಯೂ ಹೌದು. ಜ್ಞಾನ ಗಂಡು !

ಲಿಂಗವರಿಯದಾತ ಶೀಲವಂತನಾದ :

ಲಿಂಗ (ಜ್ಞಾನ) ತಿಳಿಯದಾತ : ಜ್ಞಾನದಿಂದ ನೋಡಲು, ಕೇಳಲು, ತಿಳಿಯಲು ಬಾರದಿದ್ದರೆ, ಶೀಲವಂತನಾಗುತ್ತಾನೆ. ಜಪ, ತಪ, ಯಜ್ಞ, ಸಂಧ್ಯಾವಂದನೆ, ಮೂರು ಬಾರಿ ಸ್ನಾನ ಮಾಡುವುದು. ಮಡಿ, ಮೈಲಿಗೆ ಆಚರಣೆ ಮಾಡುವುದು, ಮುಟ್ಟಿದರೆ ಮತ್ತೊಮ್ಮೆ ಸ್ನಾನ. ತನ್ನ ಆಚರಣೆಗೆ ಸಹಕರಿಸದಿದ್ದರೆ ನಿಂದೆ.

ತನ್ನ ಶೀಲ ಆಚರಣೆಯಲ್ಲಿಲ್ಲ, ಮುಟ್ಟಿ ತಟ್ಟುವುದರಲ್ಲಿ ಇಲ್ಲ ಎಂದು ಗೋಚರಿಸುವುದಿಲ್ಲ. ಆತ ನಿತ್ಯನೇಮದಲ್ಲಿ ಲೋಕದ ದೃಷ್ಟಿಯಲ್ಲಿ ಮಾತ್ರ ಶೀಲವಂತ. ಜ್ಞಾನಿ ಅಲ್ಲ.

ಸುಖವಿಲ್ಲ ಸೂಳೆಗೆ, ಪಥವಿಲ್ಲ ಶೀಲಕ್ಕೆ. ಮಾಡಲಾಗದು ನೇಮವ, ನೋಡಲಾಗದು ಶೀಲವ :

ಸುಖ ಎನ್ನುವುದು ಗಂಡಿಗೆ ಮಾತ್ರ, ಜ್ಞಾನಿಗೆ ಮಾತ್ರ. ಜ್ಞಾನಿ ತನ್ನನ್ನು ತಿಳಿಯುತ್ತಾನೆ. ಇತರರನ್ನೂ ತನ್ನಂತೆ ತಿಳಿಯುತ್ತಾನೆ.

ಜ್ಞಾನ ಚಕ್ರವರ್ತಿ ಮಹಾವೀರರು ಗಂಡಿಗೆ ಮಾತ್ರ ಮುಕ್ತಿಯಿದೆ ಎಂದು ಬೆಡಗಿನಿಂದ ನುಡಿದರು. ಅದನ್ನು ಅಜ್ಞಾನದಿಂದ ಸ್ವೀಕರಿಸಿದ ಅನುಯಾಯಿಗಳು ಹೆಣ್ಣನ್ನು ಮುಕ್ತಿಯಿಂದ ಹೊರಗಿಟ್ಟರು. ಹೆಣ್ಣು ಸತ್ತು ಗಂಡಾಗಿ ಹುಟ್ಟಿದರೆ ಮಾತ್ರ ಮುಕ್ತಿ ಎಂದು ನಂಬಿದರು. ಇದು ಪ್ರಭುಗಳ ಸುಖವಿಲ್ಲದ ಸೂಳೆಯ ಕಥನವಲ್ಲದ ಕತೆ.

ಪಥವಿದ್ದಲ್ಲಿ ಶೀಲವಿಲ್ಲ, ಶೀಲವಿದ್ದಲ್ಲಿ ಪಥವಿಲ್ಲ, ತಿಳಿದು ನೋಡಿದರೆ ಜ್ಞಾನಿಗೆ ಯಾವ ಶೀಲಗಳೂ ಇಲ್ಲ, ಯಾವ ನಿಯಮಗಳೂ ಇಲ್ಲ.

ಸತ್‌ಶೀಲವೇ ಸಹಜ ಶೀಲ ನಮ್ಮ ಗುಹೇಶ್ವರನ ಅರಿಯ ಬಲ್ಲವಂಗೆ :

ತನ್ನಲ್ಲಿರುವ ಅರಿವನೇ ತಿಳಿದು ಆ ಅರಿವಿನ ಆಚರಣೆಯಲ್ಲಿರುವುದೇ ನೇಮ, ಶೀಲ. ಅದೇ ಸತ್ಯದ ನೇಮ, ಸತ್ಯದ ಶೀಲ, ಸಹಜ ಶೀಲ.

ದೇಹ ಹೆಣ್ಣೂ ಅಲ್ಲ ಗಂಡೂ ಅಲ್ಲ. ದೇಹ ಎನ್ನುವುದೇ ಗುಹೆ. ಅದರಲ್ಲಿ ಅರಿವೆಂಬ ಈಶ್ವರನಿದ್ದಾನೆ. ಆ ಅರಿವನ್ನು ಅರಿತವನೇ ಸತ್ಯ ಶೀಲನೆಂದು ಪ್ರಭುಗಳು ಜಗತ್ತಿಗೆ ಶೀಲವಂತರಾಗುವ ಸೂತ್ರ ಸಾರಿ ಹೇಳಿದ್ದಾರೆ.

ಮರೆವೇ ನರಜನ್ಮ-ಅರುವೇ ಹರ ಜನ್ಮ

ನರಜನ್ಮ ತೊಡೆದು ಹರಜನ್ಮ ಮಾಡಿದ ಗುರುವೆ !
ಭವ ಬಂಧನವ ಬಿಡಿಸಿ ಪರಮ ಸುಖವ ತೋರಿದ ಗುರುವೆ !
ಭವಿ ಎಂಬುದು ತೊಡೆದು ಭಕ್ತನೆಂದೆನಿಸಿದ ಗುರುವೆ !
ಚೆನ್ನಮಲ್ಲಿಕಾರ್ಜುನನ ತಂದು ಕೈವಶಕ್ಕೆ ಕೊಟ್ಟ ಗುರುವೆ !
ನಮೋ ನಮೋ ಎನುತಿರ್ದೆನು.

- ಅಕ್ಕಮಹಾದೇವಿ

ನರ ಜನ್ಮ ತೊಡೆದು ಹರ ಜನ್ಮ ಮಾಡಿದ ಗುರುವೆ :

ನರಜನ್ಮ : ಪಶು, ಪಕ್ಷಿ, ಪ್ರಾಣಿಗಳು ಆಹಾರ ನಿದ್ರೆ ಮೈಥುನಗಳಿಂದ ಸುಖಪಡುತ್ತವೆ.

ಕರೆನ್ಸಿ, ಚಿನ್ನ, ವಜ್ರ, ಭೂಮಿ, ವಾಹನ ಅರಿವೆ, ಮಸೀದಿ-ಮಂದಿರ-ಮಠ-ಪುಣ್ಯಕ್ಷೇತ್ರ ಇವು ಪ್ರಾಣಿಗಳಿಗೆ ಬೇಕಾಗಿಲ್ಲ.

ಇವುಗಳಲ್ಲಿ ಯಾವ ವಸ್ತುಗಳೂ ತಿನ್ನಲು ಸುಖಿಸಲು ಬರುವುದಿಲ್ಲವೆಂದು ಪ್ರಾಣಿಗಳಿಗೆ ಅಲಕ್ಷ್ಯ. ಮನುಷ್ಯನಿಗೆ ಲಕ್ಷ್ಯ.

ಕರೆನ್ಸಿ ಮತ್ತು ಭೂಮಿಗಾಗಿ ಚಿನ್ನ ಮತ್ತು ವಜ್ರದ ಕಿರೀಟಕ್ಕಾಗಿ ರಾಜ ಮತ್ತೊಬ್ಬ ರಾಜನನ್ನು ಕೊಲ್ಲುತ್ತಾನೆ. ಯುದ್ಧ ಮಾಡುತ್ತಾನೆ. ಅಪಾರ ಮನುಷ್ಯ ಮತ್ತು ಪ್ರಾಣಿವರ್ಗ ಸಂಕಷ್ಟಗಳಿಗೆ ಈಡಾಗುತ್ತವೆ. ಚಿನ್ನ ಮತ್ತು ವಜ್ರಕ್ಕಾಗಿ ಪ್ರಪಂಚದಲ್ಲಿ ಎಷ್ಟೋ ಯುದ್ಧಗಳು ನಡೆದವು.

ಬ್ರಿಟೀಷ ಸಾಮ್ರಾಜ್ಯ ನಾಲ್ಕು ಶತಕಗಳ ಪರ್ಯಂತ ಭಾರತ ಸೇರಿದಂತೆ ಪ್ರಪಂಚವನ್ನು ತನ್ನ ಕಪಿಮುಷ್ಠಿಯಲ್ಲಿ ಹಿಡಿದಿಟ್ಟುಕೊಂಡಿತ್ತು.

ವಸ್ತು ಮತ್ತು ಆಭರಣಗಳಿಗಾಗಿಯೇ ಅಣ್ಣ-ತಮ್ಮನನ್ನು, ತಾಯಿ-ಮಗನನ್ನು, ಹೆಂಡತಿ-ಗಂಡನನ್ನು ಮಕ್ಕಳು ತಂದೆ-ತಾಯಿಯನ್ನು ಕೊಲ್ಲಲು ಹೇಸುವುದಿಲ್ಲ.

ರೂಪ ಮತ್ತು ಶಬ್ಧ ಮನುಷ್ಯನನ್ನು ಹಿಂಡಿ ಹಿಪ್ಪೆ ಮಾಡುತ್ತವೆ. ಶಬ್ಧ ಹರಿತವಾದ ಆಯುಧವಲ್ಲದಿದ್ದರೂ ಕೈಕೇಯಿಯ ಎರಡು ಶಬ್ದಗಳಿಂದ ಶ್ರೀರಾಮ ವನವಾಸಕ್ಕೆ ಹೋದ. ರಾಮಾಯಣ ನಿರ್ಮಾಣವಾಯಿತು. ದ್ರೌಪದಿಯ ಒಂದು ಕುಹಕದ ನಗುವಿಗಾಗಿಯೇ ಯುದ್ಧವಾಯಿತು. * 18 ಅಕ್ಷೋಹಿಣಿ ಸೈನ್ಯ* ನಿರ್ನಾಮವಾಯಿತು.

ಮಸೀದಿ-ಮಂದಿರ-ಮಠ-ಪುಣ್ಯಕ್ಷೇತ್ರಗಳಲ್ಲಿಯೂ ಜಗಳ. ಕೋರ್ಟ ಕಛೇರಿ ರಾಜಕೀಯ ಕ್ಷೇತ್ರಗಳಲ್ಲಿಯೂ ಜಗಳ. ವಸ್ತುಗಳ ಬಯಕೆಗಾಗಿಯೇ ಕೊಲೆ ಸುಲಿಗೆ

ದರೋಡೆ, ಆತ್ಮಹತ್ಯೆ. ಇದು ನರ ಜನ್ಮ.

ಹರಜನ್ಮ : ಮೇಲ್ಕಂಡ ಎಲ್ಲಾ ವಸ್ತುಗಳನ್ನು ತಾನೇ ಸೃಷ್ಟಿಮಾಡಿ, ತಾನೆ ಅವುಗಳಿಗೆ ಚಿನ್ನ, ವಜ್ರ, ಆಭರಣಗಳೆಂದು ಹೆಸರು ಕೊಟ್ಟು ತನಗರಿಯದಂತೆ ಅವುಗಳಿಗೆ ತಾನೇ ಬಂಧಿಯಾಗಿದ್ದಾನೆ.

ಈ ಬಂಧನ ಬಿಡಿಸುವ ನೆಪದಲ್ಲಿ ಕೆಲ ಮಠ-ಮಂದಿರ-ಮಸೀದಿ ಗುರುವರ್ಗ ಪೀಠಾಧಿಪತಿಗಳು ತಮಗರಿಯದಂತೆ ಬಂಧಿಯಾಗಿದ್ದಾರೆ.

ಪಶು-ಪಕ್ಷಿ-ಪ್ರಾಣಿಗಳು ಆಹಾರಕ್ಕಾಗಿ ಸರಳ ಮಾರ್ಗ ಕಂಡುಕೊಂಡಿವೆ. ಮನುಷ್ಯನ ಆಹಾರ ಹುಡುಕುವ ಮಾರ್ಗ, ಬೆಟ್ಟ ಅಗೆದು ಇಲಿ ಬೇಟೆಯಾಡಿದಂತೆ.

ವಸ್ತುಗಳನ್ನು ಶಬ್ಧವನ್ನು ರೂಪ ರಸ ಗಂಧಾದಿಗಳನ್ನು ಅರಿವಿನಿಂದ ನೋಡಲು, ಕೇಳಲು, ಸ್ಪ ರ್ಶಿಸಲು ಬಂದರೆ ಇವೆಲ್ಲವುಗಳಿಂದ ಅವನಿಗೆ ಮುಕ್ತಿ. ವಸ್ತುಗಳಿಗೆ ದಾಸನಾಗಲಾರ. ಕಣ್ಣಿಗೆ ರೂಪ ಕಾಣುವುದಿಲ್ಲ ನಿರೂಪ ಕಾಣುತ್ತದೆ. ಕಿವಿ ಪ್ರತಿ ಶಬ್ಧವನ್ನು ಅರಿವಿನಿಂದ ಕೇಳುತ್ತದೆ. ಪ್ರತಿ ಸ್ಪ ರ್ಶವು ಹೂವಿನ ಸುಖ ನೀಡುತ್ತದೆ. ಪ್ರತಿ ಪದಾರ್ಥವು ರುಚಿಸುತ್ತದೆ. ಪ್ರತಿ ವಾಸನೆಯೂ ಅರಿವಿನಿಂದ ಕೂಡಿರುತ್ತದೆ. ಇದು ನಿರ್ವಾಣ, ಮುಕ್ತಿ. ತನ್ನ ಅರಿವೆಂಬ ಗುರುವೇ ತನಗೆ ಕರುಣಿಸಿದ ಹರ ಜನ್ಮ.

ಭವ ಬಂಧನವ ಬಿಡಿಸಿ ಪರಮ ಸುಖವ ತೋರಿದ ಗುರುವೆ :

ಕೌಶಿಕ ಮಹಾರಾಜ ಅಕ್ಕಮಹಾದೇವಿಯ ರೂಪ ನೋಡಿ ತನಗೆ ಹೆಂಡತಿ ಇದ್ದರೂ ಮದುವೆಯಾಗಿದ್ದ. ಅಕ್ಕಮಹಾದೇವಿ ರಾಜನ ಹೆಂಡತಿಯಾದರೂ ಕೌಶಿಕನ ಹರಿದು ತಿನ್ನುವ ಕಾಮದ ಕಣ್ಣುಗಳು ಆತ ಬಯಸಿದ ವಿಷಯಾಸಕ್ತಿ, ಚಿನ್ನ ಮತ್ತು ಭೂಮಿಯ ಮೇಲೆ ಇರುವ ಆತನ ಪ್ರೇಮ ಕಂಡು ಮಮ್ಮಲ ಮರುಗಿದಳು. ರಾಜನಿಗೆ ಮತ್ತು ಉಳಿದ ಜನ ವರ್ಗಕ್ಕೆ ಇರುವ ಆಸೆಯಲ್ಲಿ ಅಕ್ಕಳಿಗೆ ವ್ಯತ್ಯಾಸ ಕಾಣಲಿಲ್ಲ. ತಂದೆ-ತಾಯಿ, ಬಂಧು-ಬಳಗ ಇದಕ್ಕೆ ಹೊರತಾಗಿರಲಿಲ್ಲ.

ಜಗದ ಕಣ್ಣಿನ ವಿಷಯದ ಪೊರೆ ಕಳಚುವ ಪ್ರಯೋಗಕ್ಕಾಗಿ ಅಕ್ಕ ವಸ್ತ್ರ ಕಳಚಿ ಕೌಶಿಕನಿಗೆ ಎಸೆದು ನೀನೊಂದೆ ಈ ರೂಪಕ್ಕೆ ಮಾರುಹೋಗಿಲ್ಲ ನಿನ್ನಂತೆ ಜಗದ ಇತರ ಕಣ್ಣುಗಳು ರೂಪಕ್ಕೆ ಮಾರುಹೋಗಿವೆ. ಸಾಧ್ಯವಾದರೆ ಜಗದ ಕಣ್ಣುಗಳ ವಿಷಯದ ಪೊರೆಹರಿದು ನಿಚ್ಚಳವಾಗಲೆಂದು ಕೂಗಿ ಹೇಳಿ ಭವ ಬಂಧನವ ಬಿಡಿಸಿಕೊಂಡು ಪರಮ ಸುಖ ಅನುಭವಿಸಿದಳು.

ಈ ಸತ್ಯವು ತನ್ನಲ್ಲಿದ್ದ ಅರಿವೆಂಬ ಗುರುವಿನಿಂದಲೆ ಸಾಧ್ಯವಾಯಿತು. ಪರಮ ಸುಖಿಯಾದಳು. ತನ್ನಲ್ಲೆ ತೋರಿದ ತನ್ನ ಅರಿವಿನ ಆ ಗುರುವನ್ನು ಸ್ಮರಿಸಿದಳು.

ಭವಿ ಎಂಬುದು ತೊಡೆದು ಭಕ್ತನೆಂದೆನಿಸಿದ ಗುರುವೆ ! ಚೆನ್ನಮಲ್ಲಿಕಾರ್ಜುನನ ತಂದು ಕೈವಶಕ್ಕೆ ಕೊಟ್ಟ ಗುರುವೆ ! ನಮೋ ನಮೋ ಎನುತಿರ್ದೆನು :

ಮರೆವಿನಿಂದ ವಸ್ತುಗಳಿಗೆ ಸೆರೆಯಾಗಿ ಭವಿಯಾದ ನನ್ನನ್ನು, ಅರಿವಿನಿಂದ ವಸ್ತುಗಳನ್ನು ನೋಡಿ, ಅರಿವು ಮರೆವನ್ನು ಸೆರೆಮಾಡಿಕೊಂಡು ಭಕ್ತನೆಂದೆನಿಸಿದ ಶ್ರೀಗುರುವೆ.

ಆಸೆಯ ಕಣ್ಣುಗಳನ್ನು ಕಳೆದು ನಿಜ ಕಣ್ಣುಗಳನ್ನು ಎನ್ನ ಕೈವಶಕ್ಕೆ ಕೊಟ್ಟ ಗುರುವೆ. ಶಬ್ದವನ್ನು ಸುಖ ದುಃಖ ದಿಂದ ಕೇಳುವ ಕಿವಿಗೆ ನಿಜ ಕಿವಿ ಕೊಟ್ಟ ಗುರುವೆ. ವಿಷಯ ಸುಖಗಳನ್ನು ಸ್ಪ ರ್ಶಿಸುವ ಚರ್ಮಕ್ಕೆ ಅರಿವು ಕೊಟ್ಟ ಗುರುವೆ. ರುಚಿ ಅರುಚಿಗಳನ್ನು ಭೋಗಿಸುವ ನಾಲಿಗೆಗೆ ನಿಜ ರುಚಿ ಕೊಟ್ಟ ಗುರುವೆ. ಮೂಗಿಗೆ ವಾಸನೆಯ ನಿಜವನ್ನು ತಿಳಿಹೇಳಿದ ಗುರುವೆ. ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ಗುರುವೆ, ನನ್ನ ಹೃದಯದಲ್ಲಿಯೇ ವಾಸ ಮಾಡಿ ನೀನೇ ನನ್ನ ಕೈ ವಶಕ್ಕೆ ಬಂದ ಗುರುವೆ, ಶ್ರೀಗುರುವೆ. ಎಂದು ಹರಜನ್ಮ ಹೊಂದಿದ ಅಕ್ಕಮಹಾದೇವಿ ಶ್ರೀಗುರುವಿಗೆ ನಮೋ ನಮೋ ಎಂದು ತನ್ನ ಅರಿವಿಗೆ ಚೆನ್ನ ಮಲ್ಲಿಕಾರ್ಜುನನೆಂದು ನಾಮಕರಣ ಮಾಡಿ ಸ್ತುತಿಸಿದ್ದಾಳೆ. ತಾನು ನಿರ್ವಾಣ ಹೊಂದಿ ಹರಜನ್ಮ ಮಾಡಿದ ಅರುವೆಂಬ ಗುರುವಿನ ಸೂತ್ರವನ್ನು ಜಗಕ್ಕೆ ಅರುಹಿದ್ದಾಳೆ.

---

* ಒಂದು ಅಕ್ಷೋಹಿಣಿ ಸೈನ್ಯ		* 18 ಅಕ್ಷೋಹಿಣಿ ಸೈನ್ಯ
21,870 ರಥಗಳು	X	18 = 3,93,660 ರಥಗಳು
21,870 ಆನೆಗಳು	X	18 = 3,93,660 ಆನೆಗಳು
65,610 ಕುದುರೆಗಳು, ಸೈನಿಕರು	X	18 = 11,80,980 ಕುದುರೆಗಳು, ಸೈನಿಕರು
1,09,350 ಕಾಲಾಳುಗಳು	X	18 = 19,68,300 ಕಾಲಾಳುಗಳು

ಕೊಡುವುದು ತೆಗೆದುಕೊಳ್ಳುವುದು ಕೇಡು

ತನುವ ಕೊಡವಡೆ ಗುರುವಿನದು.

ಮನವ ಕೊಡುವಡೆ ಲಿಂಗದದು.

ಧನವ ಕೊಡುವಡೆ ಜಂಗಮದದು.

ಅವರ ಪದಾರ್ಥ ಅವರಿಗೆ ಕೊಟ್ಟು ಭಕ್ತ ನಾದೆನೆಂಬವರ

ಹಿರಿಯತನದ ಕೇಡು ನೋಡಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ.

-ಸಿದ್ಧರಾಮ ಶಿವಯೋಗಿ

ತನುವ ಕೊಡುವಡೆ ಗುರುವಿನದು :

ಗೆಳೆಯನಿಗೆ, ಪ್ರೇಯಸಿಗೆ, ಹೆಂಡತಿಗೆ ಪ್ರಾಣ ಕೊಡುವುದಾಗಿ ಹೇಳುವ ಪದ ರೂಢಿಯಲ್ಲಿದೆ. ಗುರು ಶಿಷ್ಯನಿಗೆ ದೀಕ್ಷೆ ಕೊಟ್ಟು ಈ ದೇಹ ನನ್ನದು ಎನ್ನುವ ಮಾತೂ ರೂಢಿಯಲ್ಲಿದೆ.

ತನುವಿನ ತುಂಬಾ ಅರಿವು ತನ್ಮಯವಾಗಿದೆ. ತನುವು (ದೇಹ) ಅರಿವಿನ ಸೊತ್ತು; ಅರಿವಿನ ಆಭರಣ. ಅರಿವು ತನುವು ಒಂದನ್ನೊಂದು ಬಿಟ್ಟು ಅಗಲುವುದಿಲ್ಲ, ಅರಿವಿನ ಸುಳುಹು ಹೇಳಲು ಬಂದ ಗುರುವಿಗೆ ತನುವನ್ನು ಕೊಡುವುದೆ ? ಇದು ಹಿರಿಯತನದ ಕೇಡು.

ಮನವ ಕೊಡುವಡೆ ಲಿಂಗದದು:

ತನುವಿದೆ,ಅರಿವಿದೆ,ಮನ ಇಲ್ಲದ್ದು. ಆದರೂ ಇದೆ ಎಂದು ಭಾಸವಾಗುತ್ತದೆ. ಭೂಮಿ ಇದೆ. ಬೆಳಕಿದೆ. ಕತ್ತಲು ಇಲ್ಲದ್ದು. ಆದರೂ ಇದೆ ಎಂದು ಭಾಸವಾಗುತ್ತದೆ. ಸೂರ್ಯನ ಬೆಳಕು ಸದಾ ಇದೆ. ಭೂಮಿಯೂ ಇದೆ. ಭೂಮಿ ಚಂಡಿನಂತೆ ದುಂಡಗಿದೆ. ಸೂರ್ಯ ಭೂಮಿಯ ಒಂದು ಭಾಗ ಬೆಳಕು ಮಾಡಿದರೆ, ಆ ಬೆಳಕಿನ ನೆರಳು ಮತ್ತೊಂದು ಭಾಗ ಕತ್ತಲು ಮಾಡಿದೆ. ಕತ್ತಲು ಇಲ್ಲದ್ದು. ಅದು ಬೆಳಕಿನ ಸ್ವತ್ತು. ಹಾಗೆ ಮನ ಇಲ್ಲದ್ದು. ಅರಿವಿನಿಂದ ಮನ ಸೃಷ್ಟಿಯಾಗಿದೆ. ಅರಿವಿನಲ್ಲಿಯೇ ಮನ ಲೀನವಾಗುತ್ತದೆ. ದಟ್ಟವಾದ ಕತ್ತಲಿನಲ್ಲಿ ಬೆಳಕು ಹಾಕಿದರೆ ಆ ಕತ್ತಲು ಬೆಳಕಿನಲ್ಲಿ ಲೀನವಾಗಿ ಬೆಳಕೇ ಆಗುತ್ತದೆ.

ಮನ ಲಿಂಗದ (ಅರಿವಿನ) ಸ್ವತ್ತು ,ಮನವನ್ನು ಗುರುವಿಗೆ ಕೊಡುವುದು ಹಿರಿಯತನದ ಕೇಡು.

ಧನವ ಕೊಡುವಡೆ ಜಂಗಮದದು:

ಬೆಳಕು ಕತ್ತಲನ್ನು ಬೆಳಗುತ್ತದೆ. ಅಲ್ಲಿರುವ ವಸ್ತುಗಳನ್ನು ಬೆಳಗುತ್ತದೆ. ಅರಿವು

ವಸ್ತುಗಳನ್ನು ನೋಡುತ್ತದೆ. ಅಪ್ಪಿಕೊಳ್ಳುವುದಿಲ್ಲ, ಬಯಕೆ ಮಾಡುವುದಿಲ್ಲ. ಬಯಕೆ ಇರುವುದು ಮನಕ್ಕೆ. ಕತ್ತಲಿನಲ್ಲಿ ವಸ್ತುಗಳು ಇದ್ದರೂ ಕಾಣುವುದಿಲ್ಲ. ಮನಕ್ಕೆ ವಸ್ತುಗಳು ಬೇರೆ ರೂಪದಲ್ಲಿ ಕಾಣುತ್ತದೆ. ಅರಿವಿಗೆ ಕಾಗದವಾದದ್ದು ಮನಕ್ಕೆ ಕರೆನ್ಸಿಯಾಗಿ ಕಾಣುತ್ತದೆ. ಅರಿವಿಗೆ ಹಳದಿ ಲೋಹವಾದದ್ದು ಮನಕ್ಕೆ ಚಿನ್ನವಾಗಿ ಕಾಣುತ್ತದೆ. ಚಿನ್ನ , ಕರೆನ್ಸಿ ತನ್ನದು ಇತರರದು ಎನ್ನುವಂತಿಲ್ಲ. ಅದು ಯಾರ ಬಳಿಯಿದ್ದರೂ ಸುಮ್ಮನೆ ಇದೆ. ಚಿನ್ನಕ್ಕೆ ಆಭರಣ ವೆಂದರೂ ಸುಮ್ಮನೆ ಇದೆ. ಚಿನ್ನವೆಂದರೂ ಸುಮ್ಮನೆ ಇದೆ. ಅರಿವಿನಿಂದ ನೋಡಿದಾಗ ವಸ್ತುವೂ ಅರಿವಾಗಿದೆ. ಅದರಲ್ಲಿರುವ ಮರೆವು ಮಾಯವಾಗಿ ಅರಿವಿನ (ಜಂಗಮದ) ಸ್ವತ್ತಾಗಿದೆ. ಕತ್ತಲಿನಲ್ಲಿರುವ ವಸ್ತುವನ್ನು ಬೆಳಗಿದ ಬೆಳಕು ಆ ವಸ್ತುವನ್ನು ಬೇಡುವಂತಿಲ್ಲ. ಅಂತಹ ವಸ್ತುವನ್ನು ಗುರುವಿಗೆ ಕೊಡುವುದ ಕೇಡು ಎಂದಿದ್ದಾರೆ ಸಿದ್ಧರಾಮ ಶರಣರು.

ಅವರ ಪದಾರ್ಥ ಅವರಿಗೆ ಕೊಟ್ಟು ಭಕ್ತನಾದೆನೆಂಬವರ ಹಿರಿಯತನದ ಕೇಡು ನೋಡಯ್ಯ ಕಪಿಲ ಸಿದ್ಧ ಮಲ್ಲಿಕಾರ್ಜುನ:

ಪದಾರ್ಥಗಳನ್ನು ಸಂಗ್ರಹಿಸಿ ಕುಬೇರನೆಂದೆನಿಸಿ ಕೊಳ್ಳುವುದು, ಕೊಟ್ಟು ದಾನಿ, ಭಕ್ತನೆಂದೆನಿಸಿಕೊಳ್ಳವುದು, ಪಡೆದು ಸ್ವಾಮಿ ಭಿಕ್ಷುಕನೆಂದೆನಿಸಿಕೊಳ್ಳುವುದು ಇದು ಜಗದ ನಿಯಮ.

ಲಿಂಗ,ಜಂಗಮ, ತನು, ಮನ,ಧನದ ವಿವರವನ್ನು ಅರಿವಿಗೆ ತಂದುಕೊಡುವ ಗುರುವಿಗೆ ಶಿಷ್ಯ ತನು,ಮನ,ಧನಕೊಟ್ಟು ಸಂತುಷ್ಟ ಗೊಳಿಸಬಹುದೆ? ಹಾಗೆ ಕೊಡುವವನು ಶಿಷ್ಯನೂ ಅಲ್ಲ ತೆಗೆದುಕೊಳ್ಳುವವನು ಗುರುವೂ ಅಲ್ಲ. ಇದು ಹಿರಿಯತನದ ಕೇಡು.

ಅರಿವಿನಿಂದ ಪದಾರ್ಥ ನೋಡಿದಾಗ ಆ ಅರಿವಿನಲ್ಲಿ ವಸ್ತು ಮರೆಯಾಗಿ ಕೊಡಲು ತೆಗೆದುಕೊಳ್ಳಲು ನಾಚಿಕೆಯಾಗುತ್ತದೆ.

ಗುರು ಪದಾರ್ಥವನ್ನು ಅರಿವಿನಿಂದ ನೋಡಲು ಭಕ್ತನಿಗೆ ಹೇಳಿದ. ಭಕ್ತ ಅರಿವಿನಿಂದ ಆಭರಣ ನೋಡಿದ, ಹಳದಿ ಲೋಹವಾಗಿ ಕಂಡಿತು. ಪುನಃ ಅದನ್ನೇ ಗುರುವಿಗೆ ಚಿನ್ನವೆಂದು ಕೊಟ್ಟು ಧನ್ಯನಾದೆನೆಂದರೆ ಅದು ಕೇಡಲ್ಲದೆ ಮತ್ತೇನು?

ಅರಿವು ತಾನೇ ಆದ ಗುರುವಿಗೆ ಬಯಕೆಯೂ ಇಲ್ಲ, ಭ್ರಮೆಯೂ ಇಲ್ಲ, ಇಂತಹ ಗುರುವರ್ಗಕ್ಕೆ ತನು, ಮನ, ಹಣ, ಆಭರಣ, ಭೂಮಿ ಕೊಟ್ಟು ಹಿರಿಯತನವನ್ನು ಮೆರೆಯುವುದು ಕೇಡು ಎಂದು ಹೇಳಿದ್ದಾರೆ ಸಿದ್ಧರಾಮ ಶಿವಯೋಗಿಗಳು.

■

ಸುಳಿದೆಗೆದು ಬೆಳೆಯುವ ಅರಿವಿನ ಸೂತ್ರ

ಬೆಳೆಯ ಭೂಮಿಯಲ್ಲೊಂದು ಪ್ರಳಯದ ಕಸ ಹುಟ್ಟಿ
ತಿಳಿಯಲೀಯದು, ಎಚ್ಚರ ಲೀಯದು, ಎನ್ನ ಅವಗುಣವೆಂಬ
ಕಸ ಕಿತ್ತಿ ಸಲುಹಯ್ಯ ಲಿಂಗತಂದೆ.
ಸುಳಿದೆಗೆದು ಬೆಳೆವೆನು ಕೂಡಲಸಂಗಮದೇವಾ.

- ಬಸವಣ್ಣ

ಭೂಮಿ ತಾನೇ ಬೆಳೆದರೆ ಮನುಕುಲಕ್ಕಾಗುವಷ್ಟು, ಪಶು ಪಕ್ಷಿ ಪ್ರಾಣಿ, ಕೀಟಗಳಿಗಾಗುವಷ್ಟು ಹುಲುಸಾಗಿ ಬೆಳೆಯುತ್ತದೆ. ಮುಗಿಲು ಚುಂಬಿಸುವಷ್ಟು ಎತ್ತರಕ್ಕೂ ಬೆಳೆದು, ಚಿಗುರು, ಎಲೆ, ಹೂ, ಕಾಯಿ, ಹಣ್ಣು, ರೆಂಬೆ, ಕೊಂಬೆ ಕಾಂಡ ತೊಗಟೆ ಬೇರು ಹೀಗೆ ಭೂಮಿ ಬೆಳೆದ ಬೆಳೆಯೆಲ್ಲ ಸದ್ಬಳಕೆಯಾಗುತ್ತದೆ. ಕಸ ಎನ್ನುವುದೇ ಇಲ್ಲ, ಇಲ್ಲಿ ಎಲ್ಲವೂ ರಸವೇ. ಅಲ್ಲಿ ಪ್ರಾಣಿ ಪಶು-ಪಕ್ಷಿ ಮನುಕುಲದ ಸಮೃದ್ಧಿಯೇ ಸಮೃದ್ಧಿ.

ಮನುಷ್ಯ ತನಗೆ ಬೇಕಾದ ಬೀಜ ಬಿತ್ತಿ ಬೆಳೆಯುತ್ತಾನೆ. ಭೂಮಿ ತನಗೆ ಬೇಕಾದಷ್ಟು ಕಾಲ ಮಾತ್ರ ಬೆಳೆಯುತ್ತದೆ. ನಂತರ ಬರೀ ಕಸ, ಪ್ರಳಯದ ಕಸ. ಬೆಳೆಯುವ ಭೂಮಿಯಲ್ಲಿ ಹಣಕ್ಕಾಗಿ ವಿಷ ಬಿತ್ತಲೂ ಮನುಷ್ಯ ಹೇಸುವುದಿಲ್ಲ. ಮನುಷ್ಯ ಬಿತ್ತಿದ ಬೆಳೆ ನಿಲ್ಲುತ್ತದೆ. ಭೂಮಿ ತಾನು ಬೆಳೆಯುವುದನ್ನೂ ನಿಲ್ಲಿಸುತ್ತದೆ. ಆಗ ಬರೀ ಬರುಡು.

ದೇಹ ಕೂಡ ಭೂಮಿಯೇ. ಇಲ್ಲಿ ಅರಿವು ಬೆಳೆಯಲು ಮಾತ್ರ ಅವಕಾಶ. ಅರಿವು ಅಮೃತಕ್ಕೆ ಸಮಾನವಾದುದು. ಅರಿವಿನ ಬೆಳೆಗಾಗಿಯೇ ಈ ದೇಹದ ಜನನ. ಆದರೆ ಅಜ್ಞಾನ ಅವಗುಣವೆಂಬ ಕಸ ಬೆಳೆದಿದೆ. ಇದು ನಾನು ಬೆಳೆದ ಬೆಳೆ. ನನ್ನ ಅಜ್ಞಾನದ ಗುಣಾವಗುಣದ ಬೆಳೆ.

ಮನುಷ್ಯ ಉಣ್ಣಲು, ಉಡಲು, ತೊಡಲು ಬೇಕಾದುದನ್ನು ಪಡೆಯುವ ವಿನಿಮಯಕ್ಕಾಗಿ ಹಳದಿಲೋಹ ಗುರುತಿಸಿದ. ಮರೆವೆಂಬ ಕಸದಿಂದ ಅದು ಚಿನ್ನವಾಯಿತು. ರಾಜನಿಗೆ ಕಿರೀಟವಾಯಿತು.

ಚಿನ್ನಕ್ಕಾಗಿ, ಕಿರೀಟಕ್ಕಾಗಿ, ಯುದ್ಧ, ಜಗಳ, ಸಾವು-ನೋವುಗಳ ಪ್ರಳಯದ ಕಸ ದೇಹದಲ್ಲಿ ಸೃಷ್ಟಿಯಾಯಿತು. ತಂದೆ-ತಾಯಿ ಬಂಧು ಬಳಗ ತಾನೇ ಕಟ್ಟಿಕೊಂಡ ಸಂಬಂಧವೂ ಈ ಕಸದಲ್ಲಿ ಹೂತು ಹೋಯಿತು.

ಜನನಕ್ಕಾಗಿ ಮಿಲನ. ಇದು ನಿಸರ್ಗದ ನಿಯಮ. ಈ ಮಿಲನ ವಿಷಯ ಸುಖವಾಗಿ ಪರಿವರ್ತನೆಯಾಯಿತು. ವಿಷಯ ಸುಖಕ್ಕಾಗಿ ಕರೆನ್ಸಿ, ಚಿನ್ನ ಬಳಕೆಯಾದವು.

ಮತ್ತು ಅವುಗಳ ಸಂಗ್ರಹಕ್ಕಾಗಿ ವಿಷಯ ಸುಖವೂ ಮಾರಾಟದ ಸರಕಾಯಿತು. ಅರಿವೆಂಬ ಅಮೃತ ಬೆಳೆಯುವ ದೇಹದಲ್ಲಿ ಪ್ರಳಯದ ಕಸ ಹುಟ್ಟಿತು. ಇದು ಅವಗುಣದ ಕಸ.

ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿಯು ನಿನ್ನವಳಲ್ಲ, ಇವು ಜಗಕ್ಕಿಕ್ಕಿದ ವಿಧಿ. ನಿನ್ನದೆಂಬುದು ಜ್ಞಾನರತ್ನ. ಆ ಜ್ಞಾನ ರತ್ನ ಕೆಡಗೊಡದೆ ಅಲಂಕರಿಸು ಎನ್ನುವ ಅಲ್ಲಮಪ್ರಭುವಿನ ಮಾತು ಕೂಡಾ ಮಾರಾಟದ ಸರಕಾಯಿತು.

ಇದು ಅಂಗದಲ್ಲಿ ಹುಟ್ಟಿದ ಪ್ರಳಯದ ಕಸ. ಅಂಗದಲ್ಲಿರುವ (ಅರಿವಿನ) ಲಿಂಗ ತಂದೆ ಮಾತ್ರ ಈ ಕಸವನ್ನು ಕಿತ್ತಿ ಸಲುಹಬಲ್ಲ. ಆಗ ಸುಳಿದೆಗೆದು ಅರುವಿನ ಬೆಳೆ ಬೆಳೆಯಲು ಸಾಧ್ಯ ಎನ್ನುತ್ತಾರೆ ಬಸವಣ್ಣ. ಇದು ಅಂಗ ಅರಿವಿನೊಂದಿಗೆ ಸಂಗ ಮಾಡಿ ಪ್ರಳಯದ ಕಸ ಕಿತ್ತುವ ಸೂತ್ರ. ಕೂಡಲ ಸಂಗಮ ತಾನೇ ಆಗುವ ಬಸವಣ್ಣನ ಸೂತ್ರ.

■

ಸುಖ ದುಃಖಗಳಿಗೆ ಹೊರತಾದ ನಿಃಶಬ್ದ ಸುಖ

ಸುಖವ ಬಲ್ಲಾತ ಸುಖಿಯಲ್ಲ, ದುಃಖವ ಬಲ್ಲಾತ ದುಃಖಿಯಲ್ಲ,
ಸುಖ ದುಃಖವೆರಡನು ಬಲ್ಲಾತ ಜ್ಞಾನಿಯಲ್ಲ,
ಹುಟ್ಟಿದ ಮುನ್ನ ಸತ್ತವರ ಕುರುಹ ಬಲ್ಲಡೆ ಅದೆ ಜ್ಞಾನ.
ಅದೆ ಬಲ್ಲತನದ ಕುಳ ಕಾಣಾ ಗುಹೇಶ್ವರಾ.

-ಅಲ್ಲಮಪ್ರಭು

ಶಬ್ದ ಸ್ಪರ್ಶ ರೂಪ ರುಚಿ ವಾಸನೆ ಇವು ಸುಖ ದುಃಖಗಳಿಗೆ ಕಾರಣ. ಕೇಳಿದ ಒಂದು ಶಬ್ದ ಸುಖವನ್ನು ತರುತ್ತದೆ, ದುಃಖವನ್ನೂ ತರುತ್ತದೆ.

ಎರಡು ವರ್ಷದ ಮಗು ಅತ್ತೆಗೆ ಕತ್ತೆ ಎಂದರೆ ಅತ್ತೆಗೆ ಸಂತೋಷವಾಗುತ್ತದೆ. ಸೋದರಳಿಯನನ್ನು ಎತ್ತಿ ಮುದ್ದಾಡುತ್ತಾಳೆ. ಮಾತನಾಡಲು ಬಂದಿತೆಂದು ಹಿಗ್ಗುತ್ತಾಳೆ. ತನ್ನಲ್ಲಿರುವ ಹಣ ಆಭರಣ ಮಗುವಿಗೆ ಕೊಟ್ಟು ಮುತ್ತಿಡುತ್ತಾಳೆ. ಸಿಹಿ ಉಂಡು ಎಂಟು ದಿನ ತವರಿನಲ್ಲಿದ್ದು, ಅಣ್ಣ ಉಡಿಸಿದ ಸೀರೆ ಉಟ್ಟು ತನ್ನ ಮನೆಗೆ ಹೋಗುತ್ತಾಳೆ.

ಇದು ಕತ್ತೆ ಎನ್ನುವ ಶಬ್ದ ಸುಖ ತಂದ ಬಗೆ.

ಮನೆಯಲ್ಲಿ ಎಂಟೆತ್ತಿನ ಸಂಸಾರ. ಮಗನಿಗೆ ಮದುವೆ ಮಾಡಿ ಮೂರು ತಿಂಗಳಾಗಿದೆ. ಸೊಸೆಗೆ ಎಂಟು ದಿನ ದೊಡ್ಡ ಸಂಸಾರ ನಿಭಾಯಿಸುವುದು ಕಷ್ಟವಾಯಿತು. ಅತ್ತೆ ಬರುವುದೊಂದೆ ತಡ ಜಗಳಕ್ಕೆ ಬಿದ್ದಳು. ನೀನು ಅತ್ತೆಯೊ ಕತ್ತೆಯೋ ಎಂದು ಪ್ರಶ್ನಿಸಿದಳು. ಸೊಸೆ ಅತ್ತೆಗೆ ಆಡಿದ ಶಬ್ದ ಮನೆಮಂದಿಯೆಲ್ಲ ಕೇಳಿದರು. ಕಿವಿಯಲ್ಲಿ ಕಾದ ಸೀಸ ಹೊಯ್ದಂತಾಯಿತು. ತವರಿನಲ್ಲಿ ಪಟ್ಟ ಸುಖ ಸರ‍್ರನೇ ಇಳಿಯಿತು. ಮಕ್ಕಳು ಗಂಡ ಸಭೆ ಸೇರಿದರು. ಅತ್ತೆಗೆ ಕತ್ತೆ ಎಂದ ಸೊಸೆಯನ್ನು ಮುಗಿಸಲು ಹೊಂಚು ಹಾಕಿದರು. ಪೆಟ್ರೋಲ್ ಸುರಿದು ಸೊಸೆಯನ್ನು ಸುಟ್ಟು ಹಾಕಿದರು.

ಇದು ಕತ್ತೆ ಎನ್ನುವ ಶಬ್ದ ದುಃಖ ತಂದ ಬಗೆ.

ಕತ್ತೆ ಎನ್ನುವ ಶಬ್ದ ತವರಿನಲ್ಲಿ ಮನೆ ಮಂದಿಗೆಲ್ಲ ಸುಖ ತಂದಿತು. ಅದೇ ಶಬ್ದ ತನ್ನ ಮನೆಯಲ್ಲಿ ಮನೆ ಮಂದಿಗೆಲ್ಲ ದುಃಖ ತಂದು ಸಾವಿಗೆ ಕಾರಣವಾಯಿತು.

ಶಬ್ದದ ಹಾಗೆ ಸ್ಪರ್ಶ, ರುಚಿ, ವಾಸನೆಗಳು ಕೂಡಾ ಸುಖ ಮತ್ತು ದುಃಖಗಳನ್ನು ಉಂಟುಮಾಡುತ್ತದೆ. ಶಬ್ದ ಕೇಳಿ ದೇಹದಲ್ಲಿ ಸುಖ ಅರಳಿತು. ಶಬ್ದ ಕೇಳಿ ದೇಹ ಕತಕತನೆ ಕುದಿದು ದುಃಖಕ್ಕೆ ಈಡಾಯಿತು. ಮನ ಶಬ್ದ ಸ್ವೀಕರಿಸಿ ದೇಹ ಸುಖಿಸುವಂತೆ,

ದುಃಖಿಸುವಂತೆ ಮಾಡಿತು. ಎರಡೂ ಹುರುಳಿಲ್ಲದ ಕೆಲಸಗಳು.

ಶಬ್ದದಲ್ಲಿ ಶಕ್ತಿ ಇದೆಯೋ ದೇಹದಲ್ಲಿ ದುರ್ಬಲವಿದೆಯೋ ಎಂದು ಕಂಡು ಕೊಳ್ಳುವ ಶಿಕ್ಷಣದ ಅವಶ್ಯಕತೆ ಸರ್ವರಿಗೂ ಇದೆ. ಸರಕಾರ ಶಿಕ್ಷಣ ಸಂಸ್ಥೆಗಳು ಮಠ, ಮಂದಿರ, ಆಶ್ರಮಗಳು, ಗುರುಪೀಠಗಳು ಇದನ್ನು ಯೋಚಿಸಲೇ ಬೇಕು. ಶಬ್ದ ಕುಟುಂಬಗಳಿಗೆ ಮಾತ್ರ ಸುಖ ದುಃಖಿಗಳನ್ನು ಉಂಟುಮಾಡಿಲ್ಲ, ಈ ಎಲ್ಲಾ ಸಂಸ್ಥೆಗಳು ಇದರಿಂದ ಹೊರತಾಗಿಲ್ಲ.

ಸುಖವು ಸುಖವೂ ಅಲ್ಲ, ದುಃಖವು ದುಃಖವೂ ಅಲ್ಲ. ಸುಖ ದುಃಖಿಗಳಿಗೆ ಹೊರತಾದ ಸುಖವನ್ನು ಪ್ರಭುಗಳು ತಮ್ಮ ವಚನದಲ್ಲಿ ಪರಿಚಯಿಸಿದ್ದಾರೆ. ಸುಖ ದುಃಖ ಎರಡು ಬಲ್ಲಾತ ಜ್ಞಾನಿ ಅಲ್ಲ ಎಂದು ಎಚ್ಚರಿಸಿದ್ದಾರೆ. ಸುಖ ದುಃಖ ಹುಟ್ಟದ ಮುನ್ನ ಸತ್ತವರ ಕುರುಹು ಬಲ್ಲವನೇ ಜ್ಞಾನಿ ಎಂದು ವಿವರಿಸಿದ್ದಾರೆ. ಅವನನ್ನು ಬಲ್ಲತನದ ಕುಳ ಜಾಣ ಎಂದಿದ್ದಾರೆ. ಸುಖವು ದುಃಖವು ಅವನಿಗೆ ಸಮಾನ. ಇವೆರಡೂ ಶಬ್ದಗಳೇ. ಈ ಎರಡು ಶಬ್ದಗಳನ್ನು ನಿಃಶಬ್ದಮಾಡಿ ಸ್ವೀಕರಿಸಿದ ಆತ ನಿಃಶಬ್ದಯೋಗದ ಜ್ಞಾನವಿಜ್ಞಾನಿ.

ಜ್ಞಾನಿಗೆ ಶಬ್ದ ಕೇಳುತ್ತದೆ. ಸುಖ ದುಃಖ ಉಂಟಾಗುವುದಿಲ್ಲ. ಸುಖ ದುಃಖ ಉಂಟಾಗದ ಮುನ್ನ ಶಬ್ದ ಅರಿವಿಗೆ ಬಂದು ನಷ್ಟವಾಗುತ್ತದೆ.

ಕತ್ತೆ ಎನ್ನುವ ಪ್ರಾಣಿ ಕತ್ತೆಯಲ್ಲ. ಕತ್ತೆ ತನಗೆ ತಾನು ಇಟ್ಟುಕೊಂಡ ಹೆಸರೂ ಅಲ್ಲ. ಆ ಪ್ರಾಣಿಗೆ ಕತ್ತೆ ಎಂದು ನಾನೇ ನಾಮಕರಣ ಮಾಡಿದ್ದೇನೆ. ಅದು ಕತ್ತೆಯಲ್ಲ. ಆ ಕತ್ತೆ ನಾನೂ ಅಲ್ಲ. ಕತ್ತೆ ಎನ್ನುವ ಶಬ್ದ ಜ್ಞಾನಿಗೆ ಹುಟ್ಟದ ಮುನ್ನ ಸತ್ತು ಹೋಯಿತು. ಶಬ್ದ ಕಿವಿಗೆ ಬಡಿಯಿತು. ಆದರೆ ದೇಹದಲ್ಲಿ ಮೂಡಲಿಲ್ಲ. ದೇಹಕ್ಕೆ ಸುಖವು ಆಗಲಿಲ್ಲ ದುಃಖವೂ ಆಗಲಿಲ್ಲ. ಶಬ್ದ ಸತ್ತು ಹೋಯಿತು, ಕುರುಹು (ದೇಹ) ಉಳಿಯಿತು. ದೇಹ ಗುಹೇಶ್ವರನ ಆಭರಣ. ಜ್ಞಾನದ ಸ್ವತ್ತು.

ಅಣು ರೇಣು ತೃಣ ಕಾಷ್ಟದಲ್ಲಿ ಅರಿವೆ ತುಂಬಿದೆ. ಶಬ್ದಗಳೆಲ್ಲವೂ ಅರಿವೆ. ಶಬ್ದದಲ್ಲಿ ಜ್ಞಾನ ತುಂಬಿದೆ. ಆದಕ್ಕಾಗಿಯೇ ಶರಣರು ಮಾತೇ ಜ್ಯೋತಿರ್ಲಿಂಗವೆಂದರು. ಶರಣರ ನಿಃಶಬ್ದಯೋಗದ ಈ ಶಿಕ್ಷಣವನ್ನು ಸರಕಾರ ಶಿಕ್ಷಣ ಸಂಸ್ಥೆಗಳಲ್ಲಿ ಜಾರಿಗೆ ತಂದರೆ ಎಲ್ಲರೂ ಪರಮಸುಖಿಗಳಾಗುತ್ತಾರೆ. ಸುಖ ದುಃಖಕ್ಕೆ ಹೊರತಾದ ಸುಖವನ್ನು ಪಡೆಯುತ್ತಾರೆ.

■

ಎಲ್ಲ ವಸ್ತುಗಳು ಬಯಲಿನ ಸೃಷ್ಟಿ

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ.
ಸುಳಿದು ಬೀಸುವ ಗಾಳಿ ನಿಮ್ಮ ದಾನ.
ನಿಮ್ಮ ದಾನವ ನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ರಾಮನಾಥ

- ಜೇಡರ ದಾಸಿಮಯ್ಯ

ಶರಣರು ವಿಜ್ಞಾನಿಗಳು. ದೇಹ ಮನಸ್ಸು ಜ್ಞಾನದ ಬಗ್ಗೆ, ಗಾಳಿ ನೀರು ಭೂಮಿ ಬೆಂಕಿ ಬಯಲಿನ ಬಗ್ಗೆ ಆಳವಾಗಿ ಅಭ್ಯಾಸ ಮಾಡಿದವರು. ಪಂಚ ಭೂತಗಳ ಕ್ರಿಯೆ ದೇಹದಲ್ಲಿ ಯಾವ ರೀತಿ ನಡೆಯುತ್ತದೆ, ಹೊರಗೆ ಯಾವರೀತಿ ಕಾಣುತ್ತದೆ ಎಂದು ಅವುಗಳನ್ನು ಗಮನಿಸಿ ಒಂದು ನಿರ್ಧಾರಕ್ಕೆ ಬಂದವರು. ತಾವು ಕಂಡುಕೊಂಡ ವಿಜ್ಞಾನವನ್ನು ತಾವೇ ಪ್ರಯೋಗಿಸಿಕೊಂಡು ಸಮಾಧಾನಿಯಾಗಿದ್ದವರು. ಆ ವಿಜ್ಞಾನವನ್ನೇ ಶರಣರು ಸೂತ್ರ ರೂಪದ ಬೆಡಗಿನಲ್ಲಿ ಮಾನವ ಕಲ್ಯಾಣಕ್ಕಾಗಿ ನೀಡಿದ್ದಾರೆ.

ಈ ಭೂಮಿಯಲ್ಲಿ ದೇವರನ್ನು ಅನಂತ ಕಾಲದಿಂದ ನೆನೆಯುತ್ತಾ ನಂಬುತ್ತಾ ಬಂದಿದ್ದೇವೆ. ದೇವರೆಂದರೆ ಯಾರು ಎಂದು ಪ್ರಶ್ನಿಸಿದರೆ ಸಂತರು, ದಾಸರು, ಶರಣರು, ಅನುಭಾವಿಗಳನ್ನು ಬಿಟ್ಟು ವೈಜ್ಞಾನಿಕವಾಗಿ ಖಚಿತವಾಗಿ ಯಾರಿಗೂ ಹೇಳಲು ಬರುವುದಿಲ್ಲ, ಅವರು ಮಾನವನೇ ಮಹಾದೇವ ಎಂದರು. ನಾವು ಆ ಶಿಕ್ಷಣವನ್ನು ಪಡೆಯುವ ಗೋಜಿಗೆ ಹೋಗಲಿಲ್ಲ. ದಾಸಿಮಾರ್ಯರು ತಮ್ಮ ವಚನದಲ್ಲಿ ಪಂಚ ಭೂತಗಳನ್ನು ಬಳಸಿಕೊಂಡು ವೃಕ್ಷದ ಮಾದರಿಯಲ್ಲಿ ಯಾರ ಹಂಗಿಲ್ಲದಂತೆ ಮನುಷ್ಯ ಕೂಡಾ ಸುಖಿಯಾಗಿರಬಲ್ಲ ಎನ್ನುವ ಸೂತ್ರವನ್ನು ವೈಜ್ಞಾನಿಕವಾಗಿ ಹೇಳಿದ್ದಾರೆ.

ಭೂಮಿ, ನೀರು, ಗಾಳಿ, ಅಗ್ನಿ ಈ ನಾಲ್ಕು ಭೂತಗಳನ್ನು ಆಶ್ರಯಿಸಿಕೊಂಡು ಬೆಳೆ ಯಾರ ಹಂಗಿಲ್ಲದೆ ನಳನಳಿಸುತ್ತದೆ. ಭೂಮಿ ಸೇರಿದಂತೆ ಗಾಳಿ, ನೀರು, ಬೆಂಕಿ ಬಯಲಿನ (Space) ಆಶ್ರಯ ಪಡೆದಿವೆ. ಬಯಲೇ ಪ್ರಧಾನ ! ಭೂಮಿ ಗಟ್ಟಿಗೊಳ್ಳಲು ನೀರೆ ಪ್ರಧಾನ ! ನೀರು ಪಾಕಗೊಂಡು ಭೂಮಿ ಗಟ್ಟಿಯಾಗಿದೆ.

ದೇಹವೂ ಒಂದು ಭೂಮಿಯೇ. ಜ್ಞಾನವೇ ಅದರ ಬೆಳೆ. ನೀರಿನ ಬಿಂದು ಗರ್ಭ ಪ್ರವೇಶ ಮಾಡಿ ಪಾಕವಾಗಿ ಆ ನೀರೆ ಎಲುಬು, ತೊಗಲು, ಮಾಂಸ, ರಕ್ತ, ಮಜ್ಜೆ ಮೇದಸ್ಸು ಆಗಿ ಭೂಮಿಯಂತೆ ಗಟ್ಟಿಗೊಂಡು ಚಲನಶೀಲವು ಚೇತನಶೀಲವೂ ಆಗಿದೆ.

ಪ್ರಾಣಿ, ಪಶು, ಪಕ್ಷಿ, ಜಲಚರದಿಂದ ಹಿಡಿದು ಮನುಷ್ಯನ ಜನ್ಮಕ್ಕೆ ಜಲವೇ ಪ್ರಧಾನ. ಜಲ ಕೂಡಾ ಸ್ವತಂತ್ರವಲ್ಲ, ಎರಡು ಜಲಜನಕದ ಕಣಗಳು ಒಂದು ಆಮ್ಲಜನಕದ ಕಣದಿಂದ (H_2O) ಜಲ ನಿರ್ಮಾಣವಾಗಿದೆ. ಜಲಜನಕ ಆಮ್ಲಜನಕಗಳೆರಡು ಬಯಲ ಆಶ್ರಯ

ಹೊಂದಿವೆ. ಬಯಲು ಇವೆರಡೂ ಕಣಗಳನ್ನು ಕೂಡಿಸಿ ತಾನೂ ಅದರಲ್ಲಿ ಮಿಳಿತವಾಗಿದೆ. ಬಯಲು (Space) ಸಕಲ ಪ್ರಾಣಿಗಳಲ್ಲಿ, ಪ್ರಾಣವಾಗಿ, ಚೇತನವಾಗಿ, ಮನುಷ್ಯನಲ್ಲಿ ಜ್ಞಾನಚೇತನವಾಗಿ ಸೇರಿಕೊಂಡಿದೆ. ಒಳಗೂ ಇದೆ, ಹೊರಗೂ ಇದೆ. ಎಲ್ಲ ವಸ್ತುಗಳಿಗೆ ಆಧಾರವಾಗಿದೆ.

ಬಯಲಿನ ಹಿಡಿತ ಸಡಲಿದಾಗ ಗಟ್ಟಿಗೊಂಡ ವಸ್ತುಗಳೆಲ್ಲ ಬಯಲಾಗುತ್ತವೆ. ಭೂಮಿ, ನೀರು, ಬೆಂಕಿ, ಗಾಳಿ ಯಾವೂ ಉಳಿಯುವುದಿಲ್ಲ, ಎಲ್ಲ ಭೂತಗಳ ಜನನಕ್ಕೂ ಬಯಲೇ ಕಾರಣ. ಅದಕ್ಕಾಗಿಯೇ ಪುರಾತನರು ಬಯಲಿಗೆ ಭೂತನಾಥನೆಂದರು. ಸರ್ವಭೂತಗಳಿಗೂ ಒಡೆಯನೆಂದರು. ದೇವರೆಂದರು. ಮಹಾದೇವ, ಸದಾಶಿವ, ಪರಬ್ರಹ್ಮನೆಂದರು. ಶರಣರು ಗುರುಲಿಂಗ ಜಂಗಮವೆಂದರು, ಬಳಕೆ ಮಾಡಿಕೊಂಡು ಪಾದೋದಕ ಪ್ರಸಾದವೆಂದರು.

"ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು ಬಯಲು ಬಯಲಾಗಿ ಬಯಲಾಯಿತ್ತಯ್ಯ. ಬಯಲು ಜೀವನ, ಬಯಲು ಭಾವನೆ, ಬಯಲು ಬಯಲಾಗಿ ಬಯಲಾಯಿತ್ತಯ್ಯ . ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು. ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರ " ಎಂದು ಮಹಾಜ್ಞಾನಿ ಅಲ್ಲಮ ಪ್ರಭುಗಳು ಬಯಲನೆ ಬಿತ್ತಿ ಬಯಲನೆ ಬೆಳೆದು ಬಯಲನೆ (ಜ್ಞಾನ) ನಂಬಿ, ಬಯಲನೆ ಪೂಜಿಸುವ ಸೂತ್ರ ಮನುಜರಿಗೆ ಕರುಣಿಸಿದರು. ಸಕಲ ಪ್ರಾಣಿಗಳಲ್ಲಿ ಬಯಲು ; ಆಹಾರ ನಿದ್ರೆ ಭಯ ಮೈಥುನಗಳನ್ನು ಪಡೆಯುವ ಜ್ಞಾನಕ್ಕೆ ಮಾತ್ರ ನೆರವಾದರೆ, ಮನುಷ್ಯನಿಗೆ ಜ್ಞಾನ ಬೋಧೆಗೆ ಗುರುವಾಗಿ, ಅರಿವಾಗಿ ಜ್ಞಾನವೇ ತಾನಾಗಿ ನೆರವಾಗಿದೆ. ಈ ನಾಲ್ಕು ಭೂತಗಳಿಗೂ, ಸಕಲ ಚರಾಚರಕ್ಕೂ ಕಾರಣವಾದ ಈ ಬಯಲನ್ನು ಪಾಶ್ಚಿಮಾತ್ಯರು ಗಾಡ್ ಎಂದರು. ಪೂರ್ವದವರು ದೇವರೆಂದರು ನಿರಾಕಾರವೆಂದರು, ಮೂರ್ತಿಮಾಡಿ ಅದರಲ್ಲಿ ನಿರಾಕಾರ ಕಂಡು ದೈವವೆಂದು ಆರಾಧಿಸಿದರು. ಇದು ತಿಳಿದರೆ ಜ್ಞಾನ. ತಿಳಿಯದಿದ್ದರೆ ಅಜ್ಞಾನ.

ದೇಹ ಬಯಲಿನ ದಾನ. ದೇಹದಲ್ಲಿ ಬೆಳೆಯುವ ಜ್ಞಾನದ ಬೆಳೆಯೂ ಬಯಲಿನ ದಾನ. ದೇಹದಲ್ಲಿ ಸುಳಿದು ಬೀಸುವ ಗಾಳಿಯೂ ಬಯಲಿನ ದಾನವೇ. ಈ ಬಯಲಿನ ಜ್ಞಾನ ದಾನವನುಂಡು ಜ್ಞಾನಿಯೇ ತಾನಾಗಿದ್ದಾನೆ. ಇದನ್ನು ಮರೆತು ಅಜ್ಞಾನದಿಂದ ತನ್ನಂತೆ ಇರುವ ಇತರರು ಹಣ, ಆಭರಣ, ಆಹಾರ, ಭೂಮಿ, ಮನೆ ಕೊಟ್ಟು ಸಹಕರಿಸಿದರೆಂದು ಹೊಗುಳುತ್ತಾನೆ. ಇತರರು ಪಡೆದದ್ದು ಬಯಲಿನಿಂದಲೇ, ತಾನು ಪಡೆದದ್ದು ಬಯಲಿನಿಂದಲೆ. ಅಜ್ಞಾನದಿಂದ ಪಡೆದವ ಕೊಟ್ಟವನನ್ನು ದಾನಿಯೆನ್ನುತ್ತಾನೆ. ಕೊಟ್ಟುವನು ಧನಿಕನಾಗಿ ಪಡೆದವನಿಗೆ ಭಿಕ್ಷುಕನೆನ್ನುತ್ತಾನೆ. ಕೊಟ್ಟವನು ವಸ್ತುಗಳನ್ನು ಸೃಷ್ಠಿಸಲಿಲ್ಲ, ಆ ಎಲ್ಲ ವಸ್ತುಗಳು ಬಯಲಿನ ಸೃಷ್ಠಿಯಿಂದ ಆದವು. ಕೊಟ್ಟವನಿಗೂ ಪಡೆದವನಿಗೂ ದಾನಿ ಒಬ್ಬನೇ. ಆತನೇ ರಾಮನಾಥ. ಆ ರಾಮನಾಥ (ಬಯಲು-ದೇವರು-ಜ್ಞಾನ)ನ ದಾನವನುಂಡು ಅನ್ಯರನ್ನು ಹೊಗುಳುವವರಿಗೆ ದಾಸಿಮಾರ್ಯರು ಕುನ್ನಿಗಳೆಂದು ಕರೆದಿದ್ದಾರೆ.

■

ಅಕ್ಷರಾಕ್ಷರವ ಮೀರಿದ ಅಕ್ಷರೋತ್ತಮ

ಜಗಭರಿತ ನೆನ್ನದೇವ, ಜಗವ ಹೊದ್ದ ನೆನ್ನದೇವ.
ಭಕ್ತನ ಕರಕಮಲಕ್ಕೆ ಬಂದನೆನ್ನದೇವ, ಭಕ್ತನವಗ್ರಹಿಸಿಕೊಂಡ ನೆನ್ನದೇವ.
ಇದು ಕಾರಣ ಕೂಡಲ ಚೆನ್ನಸಂಗಮದೇವರು
ಅಕ್ಷರಾಕ್ಷರವ ಮೀರಿದ ಘನ.

- ಚೆನ್ನಬಸವಣ್ಣ

ಜ್ಞಾನ ಸರ್ವಾಂಗದಲ್ಲಿಯೂ ಭರಿತವಾಗಿದೆ. ಜಗದ ಮನುಜರೆಲ್ಲರ ದೇಹದಲ್ಲಿಯೂ ಭರಿತವಾಗಿದೆ. ಎಲ್ಲೆಲ್ಲೂ ಭರಿತವಾದ ಜ್ಞಾನಕ್ಕೆ ಚೆನ್ನಬಸವಣ್ಣನವರು ದೇವನೆಂದು, ಅಕ್ಷರಾಕ್ಷರವ ಮೀರಿದ ಘನವೆಂದು ಕರೆದಿದ್ದಾರೆ.

ಜ್ಞಾನ ಪಡೆಯಲು ಜಗದ ಜನ ತುದಿಗಾಲ ಮೇಲೆ ನಿಂತಿದೆ. ಅಕ್ಷರ ಕಲಿತು ತತ್ವಶಾಸ್ತ್ರಗಳನೆಲ್ಲ ತಿರುವಿಹಾಕಿ ಜಾಣರಾದೆವೆಂದು ವಾದ, ವಿವಾದ, ತರ್ಕ, ವಿತರ್ಕಗಳಲ್ಲಿ ತೊಡಗುತ್ತೇವೆ. ಪುಸ್ತಕವ ಕುರಿತು ಮಾತನಾಡುತ್ತೇವೆಯೇ ಹೊರತು ಪುಸ್ತಕಕ್ಕೆ ಆ ತತ್ವ ಎಲ್ಲಿಂದ ಬಂತು ? ಅದರ ಮೂಲ ಯಾವುದು ಎಂದು ಕಂಡುಕೊಳ್ಳಲು ಅಸಮರ್ಥರಾಗುತ್ತೇವೆ. ಶರಣರ, ದಾಸರ, ಸಂತರ, ಬುದ್ಧ, ಮಹಾವೀರರ ಚಿಂತನೆ ತನುವಿನಿಂದ ಪ್ರಾರಂಭವಾಗುತ್ತದೆ. ಅವರು ಪುಸ್ತಕ ನೋಡುವುದೇ ಇಲ್ಲ, ಪುಸ್ತಕದಲ್ಲಿದ್ದ ಅಕ್ಷರಗಳು ತನುವಿನಿಂದ ಬಂದ ಎಂಜಲು. ತನುವಿನಲ್ಲಿರುವ ಸಂಪತ್ತು ಅಕ್ಷರಾಕ್ಷರವ ಮೀರಿದ ಘನ. ಅದೆಷ್ಟು ತತ್ವದ ಪುಸ್ತಕಗಳು ಆ ತನುವಿನಲ್ಲಡಗಿವೆಯೋ ಅದಾರು ಬಲ್ಲರು ?

ಬಸವಣ್ಣನವರು ತನುವಿನಲ್ಲಿದ್ದ ವಸ್ತುವನ್ನು *"ಜಗದಗಲ, ಮುಗಿಲಗಲ, ಮಿಗೆಯಗಲ, ನಿಮ್ಮಗಲ. ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ. ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ. ಅಗಮ್ಯ ಅಗೋಚರ, ಅಪ್ರಮಾಣ ಲಿಂಗವೇ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ ಕೂಡಲಸಂಗಮದೇವಾ"* ಎಂದು ದೇಹದಲ್ಲಿ ಭರಿತವಾದ ಜ್ಞಾನ ದೇವನನ್ನು ಕುರಿತು ಹಾಡಿದ್ದಾರೆ.

ಬಸವಣ್ಣನವರು ಎನ್ನ ಕರ(ದೇಹ)ಸ್ಥಲದಲ್ಲಿ ಬಂದು ಚುಳುಕಾದಿರಯ್ಯ ಎಂದರೆ, ಚೆನ್ನಬಸವಣ್ಣನವರು ಭಕ್ತನ ಕರಕಮಲಕ್ಕೆ ಬಂದನೆನ್ನದೇವ ಎನ್ನುತ್ತಾರೆ.

ಜ್ಞಾನ ಕುರಿತು ಗಮನಿಸುವ ಸರ್ವರ ಹೃದಯದಲ್ಲಿಯೂ ಜ್ಞಾನವಿದೆ.

ಭಗವದ್ಗೀತೆಯಿಂದ ಹಿಡಿದು ಎಲ್ಲ ತತ್ವ ಶಾಸ್ತ್ರ ಪುಸ್ತಕಗಳನ್ನು ಓದಿದಾಗ ಕೇಳಿದಾಗ ಪ್ರತಿಯೊಬ್ಬರಿಗೂ ಸಂತೋಷವಾಗುತ್ತದೆ. ಆದರೆ ಆ ತತ್ವ ತನುವಿನಲ್ಲಿಯೇ

ಇರುವುದರಿಂದ ಹೀಗಾಗುತ್ತದೆ ಎಂಬ ಭಾಸವಾಗುವುದಿಲ್ಲ. ಭಕ್ತನವಗ್ರಹಿಸಿಕೊಂಡ ನೆನ್ನದೇವ; ಎಂದು ಚೆನ್ನಬಸವಣ್ಣನವರು ದೇಹವನ್ನು ಅವಗ್ರಹಿಸಿಕೊಂಡ ಜ್ಞಾನದೇವನ ಬಗ್ಗೆ ಹೇಳುತ್ತಾರೆ.

ಅಕ್ಷರವನ್ನು ತಾನೇ ಬರೆದು ತಾನೇ ಕಲಿತು ತಾನೇ ಅಕ್ಷರಗಳನ್ನು ಪುಸ್ತಕದಲ್ಲಿ ಹಿಡಿದಿಟ್ಟು ಆ ತತ್ವ ಪುಸ್ತಕಗಳಿಗೆ ತಾನೇ ಪ್ರಧಾನನಾಗಿ, ತಾನೇ ಮರೆತು ತಾನೇ ಆ ಪುಸ್ತಕಗಳನ್ನು ಅಕ್ಷರವನ್ನು ಕೊಂಡಾಡುತ್ತಾನೆ. ಆ ಅಕ್ಷರಗಳಿಂದಲೇ ದೇವನನ್ನು ಸ್ಮರಿಸುತ್ತಾನೆ. ಅಕ್ಷರಾಕ್ಷರವ ಮೀರಿದ ಘನನು ಅಕ್ಷರೋತ್ತಮನು ತಾನೇ ಎನ್ನುವುದನ್ನು ಮರೆಯುತ್ತಾನೆ.

ತಾನೇ ಮರೆತ ತನ್ನ ತನುವಿನಲ್ಲಿರುವ ಆ ಜ್ಞಾನವನ್ನು ನೆನಪಿಸುವುದಕ್ಕಾಗಿ ಜ್ಞಾನ ಚಕ್ರವರ್ತಿ ಚೆನ್ನಬಸವಣ್ಣನವರು, ಜಗಭರಿತನು, ಜಗವ ಹೊದ್ದು ; ಭಕ್ತನ ತನುವನವಗ್ರಹಿಸಿಕೊಂಡು ; ಅಕ್ಷರಾಕ್ಷರವ ಮೀರಿದ ಜ್ಞಾನ ಘನನು ; ಜಗದ ಸರ್ವರ ತನುವಿಗೆ ಬಂದು ಅವಗ್ರಹಿಸಿದ್ದಾನೆ ಎಂದಿದ್ದಾರೆ.

■

ಒಂದೆರಡೆನ್ನದೆ ತನುವಿನಲ್ಲಿ ತನ್ಮಯವಾದ ಅರಿವು

ಒಂದೆಂಬೆನೆ ? ಆಕಾರವಿಲ್ಲ, ಎರಡೆಂಬೆನೆ ? ದರ್ಶನ ನಿರ್ಣಯವಾಗದು.
ಮೂರೆಂಬೆನೆ ? ಮೂರುತಿಯಾಗಿ ತೋರದು.
ಸುಗುಣ ನಿರ್ಗುಣ, ಸ್ಥೂಲ ಸೂಕ್ಷ್ಮವಾವುದು ? ಅಲ್ಲದುದೇನಯ್ಯ
ಕೂಡಲ ಚೆನ್ನ ಸಂಗಯ್ಯ. ದರ್ಪಣದೊಳಗಣ ಪ್ರತಿಬಿಂಬದಂತೆ
ತನ್ನೊಳಗಿರ್ದುದ ಭಿನ್ನದಲರಸುವದೇನಯ್ಯ.

– ಚೆನ್ನಬಸವಣ್ಣ

ಸಂಪತ್ತು ಎಂದು ಹೇಳಲ್ಪಡುವ ಎಲ್ಲ ವಸ್ತುಗಳು, ಮುದ್ರಣಗೊಂಡು ಓದಲು ಬಳಕೆಯಾಗುತ್ತಿರುವ ಎಲ್ಲ ಪುಸ್ತಕಗಳು ಮನುಷ್ಯನಿಂದಲೇ ನಿರ್ಮಾಣಗೊಂಡಿವೆ. ವಸ್ತುಗಳನ್ನು ಪಡೆಯುವ ದುಃಖವೂ, ಪುಸ್ತಕಗಳನ್ನು ಓದುವ ಹಂಬಲವೂ ತನ್ನಲ್ಲಿಯೆ ಉಂಟಾಗಿದೆ. ಅವೆಲ್ಲ ಹೊರಗಿನ ವಸ್ತುಗಳು. ಪಡೆದಷ್ಟು ಪಡೆಯಬೇಕೆನ್ನುವ ಆಸೆ, ಓದಿದಷ್ಟೂ ಓದಬೇಕೆನ್ನುವ ಹಂಬಲಕ್ಕೆ ಕಡಿವಾಣ ಬೀಳುತ್ತಿಲ್ಲ. ತಾನು ಬಿಂಬ. ದರ್ಪಣದೊಳಗಿದ್ದುದು ತನ್ನ ಪ್ರತಿ ಬಿಂಬ. ತನ್ನಿಂದ ಕನ್ನಡಿಯಲ್ಲಿ ಪ್ರತಿಬಿಂಬ ಸೃಷ್ಟಿಯಾಗಿದೆ. ಏನಾದರೂ ಹುಡುಕಿದರೆ ತನ್ನಲ್ಲಿ ಹುಡುಕಬೇಕು. ಪ್ರತಿಬಿಂಬದಲ್ಲಿ ಹುಡುಕುವುದು ಸೂಕ್ತವೆ ? ಎಂದು ಚೆನ್ನಬಸವಣ್ಣನವರು ಪ್ರಶ್ನಿಸುತ್ತಾ ತನ್ನಲ್ಲಿ ಅರಿವು ಹೇಗೆ ಕಾರ್ಯನಿರ್ವಹಿಸುತ್ತದೆ ಎನ್ನುವುದನ್ನು ವಿವರಿಸಿದ್ದಾರೆ.

ಒಂದೆಂಬೆನೆ ? ಆಕಾರವಿಲ್ಲ :

ಅಂಗದಲ್ಲಿ ಅರಿವಿದೆ. ಅರಿವು ಬಯಲು, ನಿರಹಂಕಾರಿ. ಅರಿವಿದ್ದಲ್ಲಿ ಅಂಗ. ಅಂಗವಿದ್ದಲ್ಲಿ ಅರಿವು. ಅಂಗ ಅರಿವು ಒಂದೆಂಬೆನೆ ? ಅಲ್ಲ, ಅಂಗಕ್ಕೆ ರೂಪವಿದೆ. ಹೆಸರಿದೆ. ಪದವಿ ಅಧಿಕಾರಗಳಿವೆ. ಅರಿವು ಬಯಲು. ಅಂಗದೊಳಗೆ ಹೊರಗೆ ಎನ್ನದೆ ಎಲ್ಲೆಲ್ಲೂ ತುಂಬಿದೆ, ಆಕಾರವಿಲ್ಲದೆ.

ಎರಡೆಂಬೆನೆ ? ದರ್ಶನ ನಿರ್ಣಯವಾಗದು :

ಶಿಷ್ಯನೂ ಅರಿವೆ, ಅರಿವು ಹೇಳುವ ಗುರುವೂ ಅರಿವೆ. ಗುರುವು ಗುರುವಾಗಿದ್ದಾನೆ. ಶಿಷ್ಯ ಸದಾ ಶಿಷ್ಯನಾಗಿದ್ದಾನೆ. ಗುರುಶಿಷ್ಯರಿಬ್ಬರು ಅರಿವಿನಿಂದ ಕೂಡಿದ್ದರೂ ಶಿಷ್ಯ ಅರಿವು ಕೇಳುವವನಾಗಿದ್ದಾನೆ, ಗುರುವು ಹೇಳುವವನಾಗಿದ್ದಾನೆ. ಗುರು–ಶಿಷ್ಯರೆಂದು ಎರಡೆನ್ನಲು ಹೋದರೆ ಅರಿವಿನ ದರ್ಶನ ನಿರ್ಣಯವಾಗದು.

ಮೂರೆಂಬೆನೆ ಮೂರುತಿಯಾಗಿ ತೋರದು :

ತಾನು ಭಕ್ತನಾಗಿ ಗುರು–ಲಿಂಗ–ಜಂಗಮನೆಂದು ಮೂರೆನ್ನಲು ಹೋದರೂ

ಅರಿವು ಮೂರುತಿಯಾಗಿ ತೋರದು. ತಾನು ಅರಿವೆ, ಗುರು-ಲಿಂಗ-ಜಂಗಮವೂ ಅರಿವೆ ಆದುದರಿಂದ ಇಲ್ಲಿ ಮೂರ್ತಿಗೂ ಅವಕಾಶವಿಲ್ಲ.

ಅರಿವು ಸಗುಣವೂ ಅಲ್ಲ, ನಿರ್ಗುಣವೂ ಅಲ್ಲ, ಸ್ಥೂಲವೂ ಅಲ್ಲ. ಬಯಲಿನಿಂದ (ಅರಿವು) ಬಿಂಬ (ದೇಹ) ಸೃಷ್ಟಿಯಾಗಿದೆ. ಬಿಂಬ ದರ್ಪಣದಲ್ಲಿ ಪ್ರತಿಬಿಂಬವಾಗಿ ಕಾಣುತ್ತದೆ. ಬಿಂಬವೂ ತಾನೇ, ಪ್ರತಿಬಿಂಬವೂ ತಾನೇ, ಬಯಲೂ (ಅರಿವು) ತಾನೇ ಆಗಿದ್ದು ಸುಖವನ್ನು ಭಿನ್ನ ಭಿನ್ನ ವಸ್ತುಗಳಲ್ಲಿ ಹುಡುಕಲು ಹೋದರೆ ದುಃಖ ಕಟ್ಟಿಟ್ಟ ಬುತ್ತಿ ಎನ್ನುತ್ತಾರೆ ಜ್ಞಾನಿ ಚೆನ್ನಬಸವಣ್ಣ. ಅಕ್ಕಮಹಾದೇವಿ ಅವರು ಕೂಡಾ ತಮ್ಮ ವಚನದಲ್ಲಿ :

"ಗಟ್ಟಿ ತುಪ್ಪ, ತಿಳಿತುಪ್ಪಕ್ಕೆ ಭೇದವೆ ಅಯ್ಯ, ದೀಪಕ್ಕೆ ದೀಪ್ತಿಗೆ ಭೇದವೆ ಅಯ್ಯ, ಅಂಗಕ್ಕೆ ಆತ್ಮಕ್ಕೆ ಭೇದವೆ ಅಯ್ಯ, ಎನ್ನಂಗವನು ಶ್ರೀಗುರು ಮಂತ್ರ ಮಾಡಿ ತೋರಿದನಾಗಿ, ಸಾವಯವ ನಿರವಯಕ್ಕೆ ಭೇದವಿಲ್ಲಯ್ಯ ಚೆನ್ನಮಲ್ಲಿಕಾರ್ಜುನ" ಎನ್ನುತ್ತಾರೆ. ಅರಿವು ಅಂಗದಲ್ಲಿ ಮಿಳಿತವಾಗಿ ಅರಿವೇ ತಾನಾಗಿದೆ. ಆ ಅರಿವೇ ಶ್ರೀ ಗುರುವಾಗಿ ತೋರಿ ತನ್ನಂಗದಲ್ಲಿ ಬೋಧೆಯೂ ಆಗುತ್ತದೆ. ಒಂದೆರಡೆಂಬ ಭಿನ್ನವಿಲ್ಲದೆ ಅರಿವಿನಿಂದ ನೋಡಿದಾಗ ಆ ಅರಿವೇ ತಾನಾಗುತ್ತಾನೆ ಎನ್ನುವ ಅರಿವಿನ ಸೂತ್ರವನ್ನು ಉಭಯ ಜ್ಞಾನಿಗಳೂ ವಿವರಿಸಿದ್ದಾರೆ.

■

ಅರಿವಿನ ಪರಿಮಳ

ತನ್ನೊಳಗಣ ಅರಿವು ತನ್ನಲ್ಲಿಯೆ ತೋರುವುದಲ್ಲದೆ
ಅನ್ಯರಲ್ಲಿ ತೋರಬಲ್ಲುದೆ ? ತನ್ನಲ್ಲಿ ತಾನೆ ಇದ್ದಿತ್ತು.
ತನ್ನಲ್ಲಿ ತಾನೆ ಪಕ್ವಕ್ಕೆ ಬಂದು, ತನ್ನಲ್ಲಿ ಹುಟ್ಟಿದ
ನೆನಹಿನ ಬಿನ್ನಾಣವ ನೇನೆಂಬೆನಯ್ಯ ರಾಮನಾಥ.

– ದೇವರ ದಾಸಿಮಯ್ಯ

ಅರಿವೇ ಬೆಳಕು. ಬೆಳಕಿದ್ದಲ್ಲಿ ಕತ್ತಲಿಗೆ ಅವಕಾಶವಿಲ್ಲ. ಆದರೆ ಮರೆವಿನಿಂದ ತನುವಿನಲ್ಲಿ ಇರುವ ಬೆಳಕು; ಬೆಳಕು ಹುಡುಕಲು ಹೊರಟಿದೆ. "ಕೋಟಿ ಸೂರ್ಯಂ ಸಮಪ್ರಭ" ತಾನು ಕೋಟಿ ಸೂರ್ಯರನ್ನು ಬೆಳಗುವ ಬೆಳಕು ಎನ್ನುತ್ತದೆ ಶಾಸ್ತ್ರ "ಬೆಳಗಿಂಗೆ ಬೆಳಗಾಗಿ ಬೆಳಗುವ ಬೆಳಕು" ಎನ್ನುತ್ತಾರೆ ಅಲ್ಲಮ ಪ್ರಭುಗಳು. ಹೀಗೆ ಹಲವಾರು ಶಾಸ್ತ್ರಗಳು , ಜ್ಞಾನಿಗಳು, ಶರಣರು, ಸಂತರು ಹೇಳಿದ ಅರಿವು ತನ್ನಲ್ಲಿಯೇ ತೋರಿ ಸುಖ ನೀಡುತ್ತದೆ.

ಸಂಗೀತಕಾರರು ಹಾಡಿದ ಹಾಡು, ನುಡಿಸಿದ ಸಂಗೀತ ತನ್ನ ತನುವಿನಲ್ಲಿಯೇ ಸುಖ ನೀಡುತ್ತದೆ. ಪಂಡಿತರ ಪ್ರವಚನ, ಜಗದ್ಗುರುಗಳ ಆಶೀರ್ವಚನ ತನ್ನ ತನುವಿನಲ್ಲಿಯೇ ಸುಖ ನೀಡುತ್ತದೆ. ಆಯಾ ಕ್ಷೇತ್ರಗಳಲ್ಲಿ ಸಾಧಿಸಿದ ಸಾಧಕರ ಮಾತುಗಳು ಕೂಡಾ ತನ್ನ ತನುವಿನಲ್ಲಿಯೇ ಸುಖ ನೀಡುತ್ತವೆ.

ಸಂಗೀತಗಾರ ಸೂರು ತಪ್ಪಿದಾಗ ಕೇಳುಗ ತಲೆ ಕೊಡುವುತ್ತಾನೆ. ಪಂಡಿತನ ಪ್ರವಚನದಲ್ಲಿ, ಜಗದ್ಗುರುಗಳ ಆಶೀರ್ವಚನದಲ್ಲಿ ಎಳೆ ತಪ್ಪಿದರೂ ಕೇಳುಗ ತಲೆ ಕೊಡುವುತ್ತಾನೆ.

ಸಂಗೀತಗಾರನ ಹಾಡು ಪಂಡಿತನ ಪ್ರವಚನ ಸಾಧನೆಯಿಂದ ಬಂದದ್ದು. ಆದರೆ ಕೇಳುಗನದು ಯಾವುದೇ ಸಾಧನೆಯಿಲ್ಲ, ತನ್ನಲ್ಲಿದ್ದು ತನ್ನಿಂದ ತಾನೇ ಬಂದದ್ದು. ಆದರೆ ಕೇಳುಗ ಮರೆತು ಹಾಡುವವನನ್ನು, ಆಡುವವನ್ನು ಹೊಗಳುತ್ತಾನೆ.

ಹೇಳುವ ಆನಂದ, ಕೇಳುವ ಆನಂದ ಒಂದೇ. ಅವೆರಡೂ ತನ್ನಲ್ಲಿಯೇ ಇವೆ. ತನ್ನಲ್ಲಿ ಇದ್ದ ಅರಿವು ತನ್ನ ಗಮನಕ್ಕೆ ಬಂದು ಧೃಢವಾಗುತ್ತಿಲ್ಲ. ತನ್ನಲ್ಲಿದ್ದ ಆ ಅರಿವು ತನ್ನ ಗಮನಕ್ಕೆ ಬಂದರೆ ಸಾಕು ತಾನೆ ಪಕ್ವಕ್ಕೆ ಬಂದ ಫಲ. ಅನ್ಯರು ಹೇಳುವ ಅರಿವಿನ ಮಾತು, ಕೇಳುವ ತಾನೂ ಒಂದೇ. ಅನ್ಯರು ಹಾಡುವ ಆನಂದದ ಹಾಡು ಕೇಳುವ ತಾನೂ ಒಂದೇ. ಅನ್ಯರು ನುಡಿಸುವ ಸಂಗೀತ ಕೇಳುವ ತಾನು ಒಂದೇ.

ತನ್ನಲ್ಲಿ ತಾನೇ ಹುಟ್ಟಿದ ಪಕ್ವದ ಅರಿವಿನ ಪರಿಮಳ, ನೆನಹಿನ ಬಿನ್ನಾಣವು

ವರ್ಣನೆಗೆ ನಿಲುಕದ್ದು ಎಂದಿದ್ದಾರೆ ದಾಸಿಮಾರ್ಯರು.

ತನ್ನೊಳಗಣ ಅರಿವು ತನ್ನಲ್ಲಿಯೇ ತೋರಿದ ಆ ಅರಿವು *"ಸಸಿಯೊಳಗಣ ರಸದ ರುಚಿಯಂತಿದ್ದಿತ್ತು. ನನೆಯೊಳಗಣ ಪರಿಮಳದಂತಿದ್ದಿತ್ತು. ಕನ್ನೆಯೊಳಗಣ ಸ್ನೇಹದಂತಿದ್ದಿತ್ತು"* ಎಂದಿದ್ದಾರೆ ಬಸವಣ್ಣನವರು.

ತನುವಿನೊಳಗೆ ತನ್ಮಯವಾದ ಅರಿವು ತನಗೆ ತೋರಿದರೆ ಪರಿಮಳ. ಅನ್ಯರು ಹೇಳಿದರೆ ಅದು ಸಂಗ್ರಹ. ಸಂಗ್ರಹಿಸಿದ್ದು ಸುಖ ನೀಡಲಾರದು. ತನ್ನಲ್ಲಿ ತಾನೆ ಇದ್ದ, ತನ್ನಲ್ಲಿ ಹುಟ್ಟಿದ ಆ ಬೆಳಕು ಕತ್ತಲನ್ನು ಬೆಳಗುವುದು, ತನ್ನಂತೆ ಬೆಳಕು ಮಾಡಿಕೊಳ್ಳುವು ದು. ಇದು ತನ್ನೊಳಗೆ ತನ್ನನ್ನೇ ಬೆಳಗಿ ಪಕ್ವಕ್ಕೆ ಬಂದ ಅರಿವಿನ ಪರಿಮಳ.

■

ಕಣ್ಣ ಕತ್ತಲ ಕಳೆಯುವ ಅಂಜನ

ಕಣ್ಣಿಂಗೆ ಸತ್ವ ರಜ ತಮವೆಂಬ ತಿಮಿರ ಕವಿದು
ಅಜ್ಞಾನ ವಶನಾದಲ್ಲಿ, ಸದ್ಗುರುವನುಪಥಾವಿಸಿ ಔಷಧವ ಬೇಡಲೊಡನೆ,
ಶಿವಜ್ಞಾನವೆಂಬ ಅಂಜನವ ಹಚ್ಚಿ, ಎನ್ನ ಕಣ್ಣ ಮುಸುಕಿಹ
ಅಜ್ಞಾನ ಕಾಳಿಕೆಯ ಬೇರ್ಪಡಿಸಿ, ತನ್ನ ಪಾದವನರುಹಿಸಿಕೊಂಡನಯ್ಯ
ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನ.

– ಸಿದ್ಧರಾಮ ಶಿವಯೋಗಿ

ಕಣ್ಣಿಗೆ ಪೊರೆ ಬಂದರೆ, ದೃಷ್ಟಿಹೀನನಾದರೆ ಕಣ್ಣಿನ ವೈದ್ಯರ ಹತ್ತಿರ ಹೋಗುತ್ತೇವೆ. ಶಸ್ತ್ರ ಚಿಕಿತ್ಸೆ ಮಾಡಿ, ಕನ್ನಡಕ ಹಾಕಿ ಕಣ್ಣು ಕಾಣುವಂತೆ ಮಾಡುತ್ತಾರೆ. ಓದಲು ಬರೆಯಲು ಅನುಕೂಲವಾಗುತ್ತದೆ. ಆದರೆ ಕಾಣುವ ಕಣ್ಣಿಗೆ ಸತ್ವ ರಜ ತಮವೆಂಬ ಕತ್ತಲೆ ಆವರಿಸಿರುವುದರಿಂದ ತನ್ನಂತೆ ಇರುವ ಮನುಷ್ಯ ಬ್ರಾಹ್ಮಣ, ಚಾಂಡಾಲನಾಗಿ ಹಿಂದು ಮುಸಲ್ಮಾನ ಕ್ರೈಸ್ತನಾಗಿ ಕಾಣುತ್ತಾನೆ. ಶ್ರೀಮಂತ ಬಡವನಾಗಿ, ಸ್ನೇಹಿತ ವೈರಿಯಾಗಿ, ಕಾಣುತ್ತಾನೆ. ತನ್ನಂತೆ ಇರುವ ರೂಪ, ಚರ್ಮ ನೋಡಿ ಕಾಮುಕನಾಗುತ್ತಾನೆ. ಹಳದಿ ಲೋಹ ನೋಡಿ ಚಿನ್ನ-ಆಭರಣವೆನ್ನುತ್ತಾನೆ. ತನಗೆ ಸಮಪಾಲು ಬಾರದಿದ್ದರೆ ತಂದೆ ತಾಯಿ ಬಂಧು-ಬಳಗ ಅಣ್ಣ ತಮ್ಮಂದಿರನ್ನೂ ಕೊಲ್ಲುತ್ತಾನೆ. ಘಾಸಿಗೊಳಿಸುತ್ತಾನೆ.

ಕಲ್ಲು ಕೊಟ್ಟು ಮೂರ್ತಿ ಮಾಡಿಸಿ ದೇವರೆನ್ನುತ್ತಾನೆ. ಮಸೀದಿ, ಮಂದಿರ, ಚರ್ಚ್‌ಗಳು ಒಂದೇ ವಸ್ತುವಿನಿಂದಾದರೂ ಬೇರೆ ಬೇರೆ ಹೆಸರಿನಿಂದ ಕರೆಯುತ್ತಾನೆ. ಇದೆಲ್ಲ ಕಾಣುವ ಕಣ್ಣಿಗೆ ಕತ್ತಲು ಕವಿದು ಅಜ್ಞಾನ ಸೃಷ್ಟಿಯಾಗಿದೆ. ಕಲ್ಲು ಒಂದೇ ; ಅದರಲ್ಲಿ ತನ್ನ ದೇವರಿದ್ದರೆ ಭಕ್ತಿ, ಅನ್ಯದೇವರಿದ್ದರೆ ಕ್ರೋಧ. ಕಣ್ಣು ಸತ್ಯ ನೋಡದೆ ಕ್ರೌರ್ಯ, ಭಕ್ತಿ, ಜಾತಿ, ಮತ, ಪಂಥ, ಆಭರಣ, ಹಣ , ರೂಪ ಎಂಬ ಕತ್ತಲು ತುಂಬಿಕೊಂಡು ಅಜ್ಞಾನದ ವಶದಲ್ಲಿದೆ ಎಂದು ಸಿದ್ಧರಾಮ ಶಿವಯೋಗಿಗಳು ತಮ್ಮ ವಚನದಲ್ಲಿ ಹೇಳಿದ್ದಾರೆ.

ರೂಪ, ಆಭರಣ, ವಸ್ತುಗಳನ್ನು ನೋಡಿದರೆ ಬಯಕೆ ಹುಟ್ಟುತ್ತದೆ. ದೊರೆಯದಿದ್ದರೆ ದೇಹ ವಿಕೃತಗೊಳ್ಳುತ್ತದೆ. ಕೊಲೆ-ಆತ್ಮಹತ್ಯೆಗೆ ಎಳೆಸುತ್ತದೆ. ಯಾಕೆ ಹೀಗಾಗುತ್ತದೆ ಎಂದು ಕಣ್ಣಿನ ವೈದ್ಯರಿಗೆ ತೋರಿಸಿ ಔಷಧಿ ಪಡೆಯುವಂತಿಲ್ಲ, ಕಣ್ಣಿನ ಗುಣ ಧರ್ಮ ನೋಡುವುದು ಮಾತ್ರ. ಆದರೆ ವಸ್ತುಗಳಲ್ಲಿಯ ಸತ್ಯ ಕಣ್ಣಿನ ಅರಿವಿಗೆ ಬರುತ್ತಿಲ್ಲ. ಔಷಧಿಯ ಬೇಡುವ ಅರಿವು ಕೂಡಾ ಕಣ್ಣಿನಲ್ಲಿ ಹುಟ್ಟಿಲ್ಲ, ಕಣ್ಣಿನ ಕತ್ತಲೆ ಕಳೆದು

ಕೊಳ್ಳುವ ಬಯಕೆ ಕಣ್ಣಿಗೆ ಆದಾಗ ಸದ್ಗುರುವೆಂಬ ವೈದ್ಯನ ಹುಡುಕಾಟ ! ಈತ ಕಣ್ಣಿ ಕತ್ತಲೆ ಕಳೆಯುವ ಭವರೋಗದ ವೈದ್ಯ.

ಸದ್ಗುರುವು ಕತ್ತಲೆ ಮುಸುಕಿದ ಕಣ್ಣನು ನೋಡಿ, ಜ್ಞಾನವೆಂಬ ಬೆಳಕಿನ ಔಷಧ ಭರಿತ ಅಂಜನವ ಹಚ್ಚಿ ಕಣ್ಣಿಗೆ ಅಂಟಿದ ಅಜ್ಞಾನವನು ಬೇರ್ಪಡಿಸುತ್ತಾನೆ.

ಕಣ್ಣು ನೋಡುತ್ತದೆ. ಆದರೆ ನೋಡುವುದನ್ನು ನೋಡುವುದಿಲ್ಲ. ಆಭರಣ ನೋಡಿ ಬಯಕೆ ಮಾಡುತ್ತದೆ, ಲೋಹ ನೋಡಿ ಸುಮ್ಮನಾಗುವುದಿಲ್ಲ, ಮೂರ್ತಿ ನೋಡಿ ಪುಣ್ಯ ಕ್ಷೇತ್ರಕ್ಕೆ ಹೋಗುತ್ತದೆ ; ಕಲ್ಲು ನೋಡಿ ಸುಮ್ಮನಾಗುವುದಿಲ್ಲ, ರೂಪ ನೋಡಿ ವಿಷಯಾಸಕ್ತಿ ಹೊಂದುತ್ತದೆ ನಿರೂಪ ನೋಡಿ ಸುಮ್ಮನಾಗುವುದಿಲ್ಲ. ಆಭರಣ, ರೂಪ, ದೇವರು, ಹಣದ ಮೂಲವಸ್ತುವಿನ ಅನಾವರಣ ಕಣ್ಣಿಗೆ ಆಗದಿದ್ದರೆ ದಾನ-ಧರ್ಮದ ಸೋಗು, ಪುಣ್ಯ-ಪಾಪದ ಸೋಗು ಹಾಕುತ್ತದೆ. ಜಗಳ- ಕ್ರೌರ್ಯ-ಕೊಲೆ-ಸುಲಿಗೆ-ಸಾವು ನೋವುಗಳು ಸಂಭವಿಸುತ್ತವೆ.

ಇದೆಲ್ಲ ಕಣ್ಣಿನ ಕತ್ತಲು, ಕಣ್ಣಿನಲ್ಲಿಯೇ ಸೃಷ್ಟಿಯಾದ ಕತ್ತಲು. ಸತ್ವ ರಜ ತಮ ವೆಂಬ ಕತ್ತಲು ತಾನೇ ಕಳೆದುಕೊಳ್ಳಬೇಕು. ಸದ್ಗುರು ವಸ್ತುವಿನ ಮೇಲೆ ಬೆಳಕು ಮೂಡಿ ಸುತ್ತಾನೆ. ಅದಕ್ಕಾಗಿಯೇ ಅಲ್ಲಮ ಪ್ರಭುಗಳು "ನೋಡೂದನ್ನ ನೋಡಲರಿಯದೆ ಕೆಟ್ಟಿತ್ತೀ ಜಗವೆಲ್ಲ ನೋಡೂದ ನೋಡುವಡೆ ಕೂಡಲಿಲ್ಲ, ಅಗಲಲಿಲ್ಲ." ಎಂಬ ದಿವ್ಯ ಅಂಜನವನು ಕತ್ತಲು ಕವಿದ ಕಣ್ಣುಗಳಿಗೆ ನೀಡಿದ್ದಾರೆ. ಈ ಉಭಯ ಶರಣರ ದಿವ್ಯ ಔಷಧಿಯ ಬಗ್ಗೆ ಕಾಣದ ಕಣ್ಣುಗಳು ಚಿಂತಿಸಬೇಕಿದೆ.

■

ತನು ಮನ ಧನ ಏಕ ಮಾಡಿದ ಜ್ಞಾನ

ತನು ಮನ ಧನ ಏಕಾರ್ಥವಾದ ಕಾರಣ
ಉದಯದಲ್ಲಿ ಲಿಂಗವೆ ಶರಣು. ಜಂಗಮವೆ ಶರಣು.
ಪ್ರಸಾದವೆ ಶರಣು ಕಂಡಯ್ಯ. ಈ ತ್ರಿವಿಧ
ಗುಣ ಸಂಪನ್ನರು ಕೂಡಲಚೆನ್ನಸಂಗನ ಶರಣರು
ಮಹಾ ಘನವಯ್ಯ.

-ಚೆನ್ನಬಸವಣ್ಣ

ತನು ಮನ ಧನ ಇವು ಮೂರು ಏಕಾರ್ಥವಾಗುವುದು ಜಟಿಲ. ಮನ ತನ್ನ ಸುಖಕ್ಕಾಗಿ ತನುವನ್ನು ಬಳಕೆ ಮಾಡಿಕೊಳ್ಳುತ್ತದೆ. ತಾನು ಬಯಸಿದ ವಸ್ತುವಿನೆಡೆಗೆ ಮನ ತನುವಿನೊಂದಿಗೆ ಹೋಗಿ ಸುಖಿಸುತ್ತದೆ. "ಭೂಮಿ, ಹೇಮ, ಕಾಮಿನಿ ನಿನ್ನದಲ್ಲ ಇವು ಜಗಕ್ಕಿಕ್ಕಿದ ವಿಧಿ" ಎಂದರು ಅಲ್ಲಮ ಪ್ರಭು. ಮನಕ್ಕೆ ಭೂಮಿ, ಚಿನ್ನ (ಧನ), ವಿಷಯ ಈ ಮೂರು ವಸ್ತುಗಳು ಅತ್ಯಂತ ಪ್ರಿಯಕರವಾದುವು. ಇವುಗಳನ್ನು ಮನ ತನುವಿನ ಮೂಲಕ ಪಡೆಯುತ್ತದೆ. ಪಡೆದಷ್ಟೂ ಅದಕ್ಕೆ ಬಯಕೆ ತೀರದು. ಇವುಗಳಿಗಾಗಿಯೇ ಮನ ತನುವನ್ನು ಬಳಸಿಕೊಂಡು ಜಗಳ, ಕೊಲೆ, ಯುದ್ಧ, ಹಗಲಿರುಳೂ ದುಡಿಯುವುದು. ದೇಶ ಕೋಶಗಳ ರಚನೆ, ಸಂಘ ಸಂಸ್ಥೆಗಳ ಸಂಘಟನೆ, ಸರಕಾರ, ನ್ಯಾಯಾಲಯ, ಠಾಣೆಗಳ ರಚನೆ, ಮನ ಬಯಸಿದಲ್ಲಿಗೆ ತನುವಿನ ಪಯಣ.

ಮನ ದೇವಾಲಯ, ಪುಣ್ಯ ಕ್ಷೇತ್ರಗಳ ದರ್ಶನ ಬಯಸಿದರೆ ತನುವಿಗೆ ಗೌರವ. ಕಾವಿ ಪೀತಾಂಬರ, ಸಿಂಹಾಸನ ಪೀಠಗಳು ಬಯಸಿದರೆ ತನುವಿಗೆ ಭಕ್ತಿ. ಕಾಕಿ ಖಾದಿಗಳು ಬಯಸಿದರೆ ತನುವಿಗೆ ದರ್ಪ. ಮನ ತನುವ ಬಳಸಿಕೊಂಡು ಹಾದರ ಕಳುವು ತುಡುಗು ಮಾಡಿದರೆ ತನುವಿಗೆ ಶಿಕ್ಷೆ.

ಹೀಗೆ ಮನ ತನುವನ್ನು ಬಳಸಿ ನಾನಾ ರೀತಿಯ ಹಾದರ ಮಾಡುತ್ತದೆ. ಮನ ತನುವಿಗೆ ಯಾವ ವೇಷ ಹಾಕಿದರೂ ಅದು ಹಾದರವೆ. ತನುವನ್ನು ಬಳಸಿ ಮನ ಮಾಡುವ ಕೆಲ ಹಾದರಗಳಿಗೆ ಸಮಾಜ, ಸರಕಾರ, ಕೋರ್ಟ್ ಠಾಣೆಗಳಿಂದ ತನುವಿಗೆ ಶಿಕ್ಷೆಯಾಗುತ್ತದೆ.

ಮನ ತನುವಿಗೆ ಕಾವಿ, ಕಾಕಿ, ಖಾದಿ ಹಾಕಿ ಹಾದರ ಮಾಡಿದರೆ ಅದು ಸಮಾಜದಲ್ಲಿ ಗೌರವ, ಶಿಕ್ಷೆಯಿಲ್ಲ, ಆದರೆ ತನುವಿನಲ್ಲಿರುವ ಅರಿವು (ಉದಯ) ಮನಕ್ಕೆ ಶಿಕ್ಷೆ ಕೊಡುತ್ತದೆ. ಅದು ಗಮನಕ್ಕೆ ಬರುವುದಿಲ್ಲ,

ಮನ ತನುವನ್ನು ಭ್ರಮೆಗೂ ಒಳ ಪಡಿಸುತ್ತದೆ. ಉದಾ : ಸಂಜೆ ಕತ್ತಲಲ್ಲಿ

ಪ್ರಯಾಣ ಮಾಡುವಾಗ ಹಗ್ಗ ಹಾವಾಗಿ ಕಾಣುತ್ತದೆ. ಮನ ಭ್ರಮೆಯಲ್ಲಿ ಸಿಲುಕಿ ತನುವನ್ನು ಘಾಸಿಗೊಳಿಸುತ್ತದೆ. ಅದರ ಮೇಲೆ ಬೆಳಕು ಹಾಕಿದಾಗ ಅದು ಹಾವಲ್ಲ ಹಗ್ಗ ! ಹಗ್ಗ ನೋಡಿದ ಮನದ ಭ್ರಮೆ ಮಾಯವಾಯಿತು, ತನುವಿನ ಭಯವೂ ಹೋಯಿತು. ಬೆಳಕು ತನುಮನವನ್ನು ಒಂದು ಮಾಡಿತು.

ತನು ಮನ ಧನ ಏಕಾರ್ಥವಾಗುವುದು ಅರಿವಿನಿಂದ, ಜ್ಞಾನದ (ಉದಯ) ಬೆಳಕಿನಿಂದ. ಆ ಬೆಳಕು ಲಿಂಗವೂ ಹೌದು, ಜಂಗಮವೂ ಹೌದು ಆ ಅರಿವನ್ನು ಬಳಕೆ ಮಾಡಿದಲ್ಲಿ ಪ್ರಸಾದವೂ ಹೌದು. ಅದು ಹಳಸದ ಸವೆಯದ ಪ್ರಸಾದ. ಆ ಬೆಳಕಿನ ಪ್ರಸಾದಕ್ಕೆ ಅಲ್ಲಮ ಪ್ರಭುಗಳು *''ನಿನ್ನದೆಂಬುದು ಜ್ಞಾನ ರತ್ನ ಕಾಣಾ ಅದನ್ನು ಕೆಡಗೊಡದೆ ಅಲಂಕರಿಸಿದೆಯಾದಡೆ ನಿನ್ನಂಥ ಸಿರಿವಂತರು ಯಾರೂ ಇಲ್ಲ''* ಎಂದಿದ್ದಾರೆ. ಆ ಜ್ಞಾನದ ಬೆಳಕಿನಿಂದ ನೋಡಿದಾಗ ತನು ಲಿಂಗ, ಮನ ಜಂಗಮ, ಧನ ಪ್ರಸಾದವಾಗಿ ತ್ರಿವಿಧ ಗುಣ ಸಂಪನ್ನನಾಗುತ್ತಾನೆ. ಕೂಡಲ ಚೆನ್ನಸಂಗಯ್ಯನಾಗುತ್ತಾನೆ, ಘನಕ್ಕೆ ಘನವೇ ತಾನಾಗಿ ಮಹಾ ಘನನಾಗುತ್ತಾನೆ ಎಂದು ಚೆನ್ನಬಸವಣ್ಣನವರು ತನು ಮನ ಧನವನ್ನು ಏಕ ಮಾಡುವ ಅರಿವಿನ ಸೂತ್ರ ಹೇಳಿದ್ದಾರೆ.

■

ಕಾಯದ ವ್ಯಾಧಿ ಕಳೆದು ಜ್ಞಾನಿಯಾಗುವ ಸೂತ್ರ

ಹೆಗ್ಗಣವನಿಕ್ಕಿ ನೆಲಗಟ್ಟು ಕಟ್ಟಿದಂತಾಯಿತ್ತು ಕಾಯಗುಣ.
ಅಹಂಕಾರ ಪ್ರಬೋಧಗಳೇಕಯ್ಯ. ಕಾಮ ಕ್ರೋಧ ಲೋಭ
ಮೋಹ ಮತ್ಸರಗಳನಿಕ್ಕಿ ಎನ್ನ ಮಾಡಿದಿರಿ, ಎನ್ನ ಬಾಧಿಸಲೆಂದು
ಲಿಂಗಯ್ಯ ತಂದೆ. ಆದಿ ವ್ಯಾಧಿಗಳೆಲ್ಲವ ಕಳೆದು, ನಿರ್ವಾಣವಪ್ಪ
ಪದವ ಕರುಣಿಸಯ್ಯ ಕೂಡಲ ಸಂಗಮದೇವಾ.

-ಬಸವಣ್ಣ

ಬುನಾದಿ ಹಾಕಿ ಮನೆ ಕಟ್ಟುವಾಗ, ಬುನಾದಿಯಲ್ಲಿ ಹೆಗ್ಗಣ ಬಿಟ್ಟು ಮನೆ ಕಟ್ಟಿದರೆ ಮನೆ ಉಳಿಯುವುದಿಲ್ಲ. ಹೊರಾವರಣ ಒಳಾವರಣಕ್ಕೆ ಶೃಂಗರಿಸಿದರೆ ಬುನಾದಿಯಲ್ಲಿರುವ ಹೆಗ್ಗಣ ನೆಲಸಮ ಮಾಡದೆ ಬಿಡುವುದಿಲ್ಲ.

ಮನೆ ಕಟ್ಟುವ ವಾಸ್ತು ಶಿಲ್ಪಿ ಜಾಣನೆ. ಗಾಳಿ ಬೆಳಕು ಪ್ರವೇಶಿಸಲು ಸುಂದರವಾದ ಕಿಟಕಿ ಬಾಗಿಲುಗಳನ್ನಿಟ್ಟು ನೋಡಿದರೆ ಮರುಳಾಗುವಂತೆ ಮನೆಯನ್ನು ಶೃಂಗರಿಸಿದ್ದಾನೆ. ಆದರೆ ಕಟ್ಟುವಾಗ ಬುನಾದಿಯಲ್ಲಿ ಹೆಗ್ಗಣಗಳನ್ನು ಬಿಟ್ಟಿದ್ದಾನೆ. ಸುಭದ್ರವಾದ ಮನೆಗೆ ಹೆಗ್ಗಣ ಬಿದ್ದರೆ ಉಳಿಯುವುದಿಲ್ಲ. ಕಟ್ಟುವಾಗಲೆ ಹೆಗ್ಗಣಗಳನ್ನು ಹಾಕಿ ಕಟ್ಟಿದರೆ ಮನೆ ಉಳಿದೀತೆ ?

ಕಾಯ ಸುಂದರ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳೆಂಬ ಹೆಗ್ಗಣಗಳಿವೆ. ಸುಂದರವಾದ ಕಾಯವನ್ನು ವಿಕೃತಗೊಳಿಸಿ ರಾಕ್ಷಸನನ್ನಾಗಿಸುತ್ತವೆ. ಮನೆ ಕಟ್ಟಿದ ಶಿಲ್ಪಿಯೇ (ಜ್ಞಾನಿ) ಹೆಗ್ಗಣಗಳನ್ನು ಹಾಕಿ ಮನೆ ಕಟ್ಟಿದ್ದಾನೆ, ಕಾಯವೆಂಬ ಮನೆಯನ್ನು ಬಾಧಿಸಲೆಂದು ಅರಿಷಡ್ವರ್ಗಗಳು (ಹೆಗ್ಗಣ) ಕಾಯವನ್ನು ಬಾಧಿಸುತ್ತವೆ. ಸುಖಕ್ಕಾಗಿ ಕಾಯವನ್ನೆ ಅವಲಂಬಿಸಿವೆ. ಸುಖ ದೊರೆಯದಿದ್ದರೆ ಕಾಯಕ್ಕೆ ದುಃಖ. ಕಾಮಾದಿ ಅರಿಷಡ್ವರ್ಗಗಳು ಕಾಯವನ್ನು ಬಳಸಿಕೊಂಡು ಪಡುವ ಸುಖ, ಕೊಡುವ ವ್ಯಾಧಿ ಅಷ್ಟಿಷ್ಟಲ್ಲ, ನರಕಯಾತನೆ.

ಕಾಯದ ಆದಿ ವ್ಯಾಧಿಗಳೆಲ್ಲವ ಕಳೆದು ನಿರ್ವಾಣ ಪದವಿ ಕರುಣಿಸು ಎಂದು ಬಸವಣ್ಣನವರು ಕಾಯ ರಚಿಸಿದ (ಜ್ಞಾನಿ) ಶಿಲ್ಪಿಗೆ ಮೊರೆ ಹೋಗಿದ್ದಾರೆ.

ಕಾಯಕ್ಕೆ ಆದಿಯಿಂದ ಈ ಅಜ್ಞಾನದ ವ್ಯಾಧಿ ಬಂದಿದೆ. ಕಾಯ ರಚಿಸಿದ (ಜ್ಞಾನಿ) ಶಿಲ್ಪಿ ಅನಾದಿ.! ಅರಿಷಡ್ವರ್ಗಗಳು (ಅಜ್ಞಾನ) ಆದಿಯಿಂದ ಬಂದವು, ಅದರ ಜನನ ಕಾಯದಲ್ಲಿ, ಕಾಮ ಕಾಯದಲ್ಲಿ ಹುಟ್ಟಿ ಅದು ಸುಖ ಪಡಲು ಕಾಯವನ್ನೆ ಬಳ

ಸಿಕೊಳ್ಳುತ್ತದೆ. ದೊರೆಯದಿದ್ದರೆ ಕಾಯವನ್ನು ಕೊಲ್ಲುತ್ತದೆ. ಇಲ್ಲ ಕಾಯದೊಂದಿಗೆ ಆತ್ಮ ಹತ್ಯೆಗೆ ಯತ್ನಿಸುತ್ತದೆ. ಕಾಯಗಳೊಂದಿಗೆ ಸಂಘಟಿಸಿ ಕ್ರೋಧದಿಂದ ಜಗಳ ಕಾಯುತ್ತದೆ. ಯುದ್ಧ ಮಾಡುತ್ತದೆ. ಕಾಯದಲ್ಲಿರುವ ಈ ಹೆಗ್ಗಣಗಳು ರಾಮಾಯಣ ಮಹಾಭಾರತಕ್ಕೆ ನಾಂದಿ ಹಾಡಿದವು. ಈ ಹೆಗ್ಗಣಗಳನ್ನು ತಿಳಿದ ಕಾಯ ರಾಮನಾಯಿತು. ತಿಳಿಯದ ಕಾಯ ರಾವಣ ದುರ್ಯೋಧನನಾಯಿತು. ಕಾಯಕ್ಕೆ ಶಿಕ್ಷೆಯಾದರೆ ಹೆಗ್ಗಣ ಸಾಯುವುದಿಲ್ಲ. "ಹುತ್ತವ ಬಡಿದರೆ ಹಾವು ಸಾಯಬಲ್ಲುದೆ ಅಯ್ಯ" ಆದಿಯ ಕಾಲದಲ್ಲಿ ಕಾಯಕ್ಕೆ ಶಿಕ್ಷೆಯಾಯಿತು. ಹೆಗ್ಗಣ ಹಾಗೆ ಉಳಿಯಿತು.

ಶರಣರು ಮಹಾಜ್ಞಾನಿಗಳು. ಕಾಯದಲ್ಲಿ ಆದಿಯಿಂದಲೂ ವ್ಯಾಧಿಗಳನ್ನುಂಟು ಮಾಡುವ ಹೆಗ್ಗಣಗಳನ್ನು ಕೊಲ್ಲಲು ಅನಾದಿಯ ಜ್ಞಾನ ಸೂತ್ರವನ್ನು ಬಳಸಿದರು. ಕಾಯವನ್ನು ಕೊಲ್ಲಲಿಲ್ಲ, ಹೆಗ್ಗಣ ಕೊಂದರು. ಕಾಯದಲ್ಲಿ ಹೆಗ್ಗಣಗಳೂ ಇವೆ. ಅದನ್ನು ಕೊಲ್ಲುವ ಜ್ಞಾನ ಸೂತ್ರವೂ ಇದೆ.

ಕಾಯದಲ್ಲಿ ಕಾಮ ಹುಟ್ಟಿ ಸುಖಕ್ಕಾಗಿ ಕಾಯವನ್ನೇ ಬಳಸಿತು. ಕಾಯ ಕಾಯವನ್ನೇ ಮೋಹಿಸಿತು. ಕಾಯದ ಮೇಲೆಯೆ ಕ್ರೋಧಿಸಿತು. ಕಾಯದಲ್ಲಿ ಲೋಭ ಹುಟ್ಟಿ ಕಾಯವನ್ನೇ ಸೆರೆಯಾಳಾಗಿಸಿತು. ದೊರೆಯದಿದ್ದಾಗ ಕಾಯದಲ್ಲಿ ಮತ್ಸರ ಹುಟ್ಟಿ ಕಾಯದ ಮೇಲೆ ಯುದ್ಧ ಮಾಡಿತು.

ಕಾಯ ಕಾಯದೊಂದಿಗೆ ಸುಖಿಸುವ ಮುನ್ನ ಕಾಯದ ಸುಖದ ದ್ರವ ಕಳೆದರೆ ಕಾಯ ಸುಖಿಸಲು ಮತ್ತೆ ಕಾಯಬೇಡ. ಸುಖ ತನ್ನ ಕಾಯದಲ್ಲಿತ್ತೊ ? ಅನ್ಯ ಕಾಯದಲ್ಲಿತ್ತೊ ? ಎಂದು ತಿಳಿಯದ ಹೆಗ್ಗಣವೂ ಕಾಯದಲ್ಲಿಯೇ ಹುಟ್ಟಿದೆ.

ಕಾಯದಲ್ಲಿದ್ದ ಸುಖ ಕಾಯವೆ ಸ್ರವಿಸಿ, ಕಾಯವೇ ಸುಖ ಪಟ್ಟು ಅನ್ಯ ಕಾಯದಿಂದಲೇ ಕಾಯಕ್ಕೆ ಸುಖವಾಯಿತೆಂದು ತಿಳಿಯುವ ಕಾಯದ ಗುಣ ಇದು ಕಾಯದ ಗುಣವಲ್ಲ ಹೆಗ್ಗಣದ ಗುಣ; ಅಜ್ಞಾನದ ಗುಣ.

ಇದು ಕಾಯಕ್ಕೆ ಅಂಟಿದ ಆದಿಯಿಂದ ಬಂದ ಅಜ್ಞಾನದ ವ್ಯಾಧಿ. ಕಾಯಕ್ಕೆ ಅಂಟಿದ ಈ ಅಜ್ಞಾನದ ಆದಿಯ ವ್ಯಾಧಿ ಕಳೆಯುವ ಅನಾದಿ ಎಂಬ ಸೂತ್ರ ರೂಪೀ ಜ್ಞಾನ ಪದವೂ ಕಾಯದಲ್ಲಿಯೇ ಇದೆ. ಆ ಸೂತ್ರ ರೂಪೀ ಜ್ಞಾನ ಪದ ದೊರೆತರೆ ಸಾಕು ವಾಸ್ತು ಶಿಲ್ಪಿ ತಾನೆ. ಕಾಯ-ಜ್ಞಾನ ಬೆರೆತು ಜ್ಞಾನ ಸಂಗಮವಾದ ಸಂಗಮನಾಥನು ತಾನೆ. ಇದು ಕಾಯದ ವ್ಯಾಧಿ ಕಳೆಯುವ ಅಣ್ಣ ಬಸವಣ್ಣನ ಸೂತ್ರ !

■

ಚಂದಿಮರಸರ ಸುಖೀ ಸೂತ್ರ

ಸಾವು ತಡವಲ್ಲ, ನರಕ ದೂರವಲ್ಲ,
ಕೆಮ್ಮನೆ ಕೆಡಬೇಡ, ವಿಷಯವ ಬಿಡು.
ಗುರುಭಕ್ತಿಯ ನಂಬು. ಸುಖಿಯಪ್ಪೆ ಸಿಮ್ಮಲಿಗೆಯ ಚೆನ್ನರಾಮ

- ಚಂದಿಮರಸ

ಚಂದಿಮರಸರು ಮಹಾಜ್ಞಾನಿಗಳು. ಜ್ಞಾನದಿಂದ ಲೋಕದ ಆಟ ನೋಡಿದರು. ಅದು ಸಾವ ಕೆಡುವ ಆಟ, ನರಕದ ಆಟ. ವಿಷಯದ ಆಟ. ಆಸೆ ಆಮಿಷ ಸುಖ ದುಃಖಗಳ ವ್ಯರ್ಥ ಆಟ. ಈ ಆಟದಿಂದ ಸುಮ್ಮನೆ ವ್ಯರ್ಥ ಕೆಡಬೇಡ. ಆಸೆಯ ಬಿಟ್ಟು ಒಮ್ಮೆಯಾದರೂ ಜ್ಞಾನ (ಗುರು)ವ ನಂಬು. ಸುಖಿಯಪ್ಪೆ, ಸಿಮ್ಮಲಿಗೆಯ ಚೆನ್ನರಾಮ (ಜ್ಞಾನಿ)ನಾಗುವಿ ಎಂದು ಹೇಳಿದ್ದಾರೆ.

ಮಕ್ಕಳು ಮನೆ ಕಟ್ಟಿ ಗಂಡ-ಹೆಂಡತಿ-ಮಕ್ಕಳ ಪಾತ್ರ ಮಾಡಿ ಆಡುತ್ತಾರೆ. ಕಳ್ಳ-ಪೋಲೀಸ್, ದೇವರ ಆಟವೂ ಆಡುತ್ತಾರೆ. ಮಕ್ಕಳಿಗೆ ಬೋಕಿ ಕಲ್ಲಿನ ತುಂಡುಗಳೇ ನಾಣ್ಯ, ಹರಿದ ನ್ಯೂಸ್ ಪೇಪರ್‌ಗಳೆ ಕರೆನ್ಸಿ, ಅಳಿದುಳಿದ ಪದಾರ್ಥಗಳೇ ಪ್ರಸಾದ. ಆಟದಲ್ಲಿ ಹೆಂಡತಿ ಪಾತ್ರ ಮಾಡಿದ ಹುಡುಗಿ ಬಾರದಿದ್ದಲ್ಲಿ ಮತ್ತೊಂದು ಹುಡುಗಿ, ಒಪ್ಪದಿದ್ದಲ್ಲಿ ಮತ್ತೊಂದು ಹುಡುಗ ವಸ್ತ್ರ ಹೊದ್ದು ಹೆಂಡತಿ ಪಾತ್ರ ಮಾಡುತ್ತಾನೆ. ಹೀಗೆಯೇ ಕಳ್ಳ-ಪೋಲೀಸ್, ಪೋಲೀಸ್-ಕಳ್ಳನ ಪಾತ್ರ. ಇದೆಲ್ಲ ಮಕ್ಕಳಿಗೆ ಸುಖದ ಆಟ. ಪೋಲೀಸ್ ಆಗಿ ಕಳ್ಳನಾದೆನಲ್ಲ, ಗಂಡನಾಗಿ ಹೆಂಡತಿಯಾದೆನಲ್ಲ, ನನ್ನ ಹಣ ಕಳ್ಳ ಕದ್ದನಲ್ಲ ಎಂಬ ಚಿಂತೆಯೇ ಇಲ್ಲ.

ದೊಡ್ಡವರಾದ ಮೇಲೆ ಈ ಆಟವೇ ನಿಜದ ಆಟವಾಗುತ್ತದೆ. ಆಸೆಗೆ ಬಲ ಬರುತ್ತದೆ. ತೋರಿಕೆಗೆ ಪಾತ್ರ ಬದಲಿಯಾಗುವುದಿಲ್ಲ, ಮನದ ಹಾದರ ನಿಲ್ಲುವುದಿಲ್ಲ, ವೃತ್ತಿ ಪೋಲಿಸನದು ಪ್ರವೃತ್ತಿ ಕಳ್ಳನದು, ವೃತ್ತಿಯಲ್ಲಿ ರಾಜಕಾರಣಿಗೆ ಪ್ರವೃತ್ತಿಯಲ್ಲಿ ಕಳ್ಳ, ವೃತ್ತಿಯಲ್ಲಿ ಅಧಿಕಾರಿ ಪ್ರವೃತ್ತಿಯಲ್ಲಿ ಲಂಚ ಬಡಕ.

ಮಕ್ಕಳಿಗೆ ಹರಿದ ನ್ಯೂಸ್‌ಪೇಪರೇ ಕರೆನ್ಸಿಯಾಗಿತ್ತು. ದೊಡ್ಡವರಿಗೂ ಪೇಪರೇ ಕರೆನ್ಸಿ. ಇದರ ಮೇಲೆ ಗೌರ್ನರ್ ಸಹಿ ಇದೆ. ಆಗ ಕದ್ದರೆ ಶಿಕ್ಷೆ ಇಲ್ಲ, ಈಗ ಕದ್ದರೆ ಜೈಲು ಶಿಕ್ಷೆ. ಕರೆನ್ಸಿ ಪಡೆಯಲು ಕೊಲೆ, ಸುಲಿಗೆ, ಸಾವು-ನೋವಿನ ನರಕ.

ಹೀಗೆ ಗಂಡನ ಪಾತ್ರವೂ ಕೂಡಾ ನರಕವೇ. ವೃತ್ತಿಯಲ್ಲಿ ಗಂಡ ಪ್ರವೃತ್ತಿಯಲ್ಲಿ ವಿಷಯಲಂಪಟ. ಗಂಡ ವಿಷಯಾಸಕ್ತಿಗಾಗಿ ಹೆಂಡತಿಯನ್ನು ಅವಲಂಬಿಸಬೇಕು. ಗಂಡನ ಪಾತ್ರ ಖಾಯಂ ಪಾತ್ರ. ಆದರೆ ಮನ ಕೇಳಬೇಕಲ್ಲ ಅದರ ಬಲ ಹೆಚ್ಚು. ರೂಪ ಕಂಡರೆ

ನಾಕು ಕಣ್ಣಿನಲ್ಲಿ ಆಸೆ, ನಾಲಿಗೆಯಲ್ಲಿ ಜೊಲ್ಲು, ಸುಖಿಸಲು ಹೋದರೆ ಸಮಾಜದ ಭಯ. ಧೈರ್ಯ ಮಾಡಿದರೆ ವಿಟನ ಪಟ್ಟ. ಆದರೂ ಮನ ಕೇಳುವುದಿಲ್ಲ, ನೋಡಿದ ರೂಪ ಕಾಡುತ್ತದೆ. ಹೆಂಡತಿಯೊಂದಿಗೆ ಸುಖಿಸಲು ಬಯಸಿ ತಾನು ನೋಡಿದ ರೂಪದೊಂದಿಗೆ ಸುಖಿಸುತ್ತಾನೆ. ಹೆಂಡತಿಯನ್ನು ಮರೆಯುತ್ತಾನೆ. ಹೆಂಡತಿ ಜಡ, ನೋಡಿದ ರೂಪ ಚೇತನ !

ಗಂಡನಿಗೆ ಸಮಾಜದಲ್ಲಿ ಏಕಪತ್ನೀವ್ರತಸ್ಥನೆಂಬ ಪಟ್ಟ ಬೇರೆ. ಮನದಲ್ಲಿ ಹಾದರಿಗ. ಈ ವಿಷಯ ಹೆಂಡತಿಗೂ ಗೊತ್ತಾಗುವುದಿಲ್ಲ. ಹೇಳಿದರೆ ಮನೆ ನರಕ. ಹೇಳದಿದ್ದರೆ ತನಗೆ ನರಕಯಾತನೆ. ಸುಖಿಸುವಾಗೊಮ್ಮೆ ತನ್ನರಿವೇ ತನಗೆ ನಾಯಿ ಎಂದು ಕೂಗಿ ಕರೆಯುತ್ತದೆ. ತನ್ನಲ್ಲಿಯೇ ಇರುವ ಆ ಅರಿವು ತಾನು ಭೋಗಿಸುವ ವಿಷಯ ಸುಖದಲ್ಲಿ ಭಾಗಿಯಲ್ಲ, ನೋಡಿದ ರೂಪದೊಂದಿಗೆ ಸುಖಿಸುವ ಮನವೆಂಬ ಸೊಣಗ ನನ್ನು ತನ್ನತ್ತ ಸೆಳೆಯಲೇಬೇಕೆಂಬ ಬಯಕೆ ಅರಿವಿಗೆ. ತನ್ನ ಸುಖದ ರುಚಿ ತೋರಿಸಿ ಮನವನ್ನು ತನ್ನಲ್ಲಿ ಲೀನ ಮಾಡಿಕೊಳ್ಳುವ ತವಕ ಅರಿವಿಗೆ. ಆದರೆ ಅರಿವಿನ ಉಪದೇಶ ಮನಕ್ಕೆ ಬೇಕಿಲ್ಲ.

ದೇಹ ಅರಿವಿನ ಮನೆ, ಗುರುವಿನ ಮನೆಯೂ ಹೌದು. ಶರಣರು ಇದಕ್ಕೆ ಅನುಭವ ಮಂಟಪ ಎಂದು ಕರೆದಿದ್ದಾರೆ. ಮನ ಈ ಅರುವಿನ ಮನೆಯನ್ನೇ ನರಕದ ಮನೆಯಾಗಿ ಮಾಡಿಕೊಂಡಿದೆ. ವಿಷಯ ಸುಖಕ್ಕೆ ಬಳಕೆ ಮಾಡಿಕೊಂಡು ಕೆಮ್ಮನೆ ಕೆಡು ತ್ತಲಿದೆ. ಇದನ್ನು ಕಂಡು ಚಂದಿಮರಸರು ಮಮ್ಮಲ ಮರುಗಿದ್ದಾರೆ.

ಸಾವು ಇದರಲ್ಲಿಯೇ ಇದೆ. ನರಕವೂ ಇದರಲ್ಲಿಯೇ ಇದೆ. ವಿಷಯವೂ ಇದರಲ್ಲಿಯೇ ಇದೆ. ಇವೆಲ್ಲವುಗಳನ್ನು ತಿಳಿಯುವ ಅರಿವೂ ದೇಹದಲ್ಲಿಯೇ ಇದೆ. ಮನ ಅರಿವೆಂಬ ಗುರುವಿಗೆ ಭಕ್ತಿ ಮಾಡಿದರೆ ಸಾಕು ಅಂದರೆ ತಿಳಿದು ಅರಿವನ್ನೇ ನಂಬಿದರೆ ಸಾಕು, ಸುಖಿಯಾಗಿ ಸಿಮ್ಮಲಿಗೆಯ ಚೆನ್ನರಾಮನು ನೀನೆ ಆಗುವಿ ಎಂದು ಚಂದಿಮರಸರು ಸುಖೀ ಸೂತ್ರ ಬರೆದಿದ್ದಾರೆ.

■

ತೋರುವುದೆಲ್ಲಸಂಗ್ರಹ ಜ್ಞಾನ

ತಾನಿದಿರೆಂಬುದು ಮಾಯೆ, ತೋರಿತ್ತಾಗಿ ತಾನಲ್ಲ,
ಈ ತೋರುವುದು ಉಳುಮೆ ಜ್ಞಾನಾನಂದ.
ತಾನೆಂಬುದು ಆರೂ ಅರಿಯರಲ್ಲ, ನೋಡಲೇನೂ ಇಲ್ಲವಾಗಿ,
ನಿಜ ಸಿದ್ಧ ನೀನೆ ಸಿಮ್ಮಲಿಗೆಯ ಚೆನ್ನರಾಮ.

- ಚಂದಿಮರಸ

ಶರಣ-ಚಂದಿಮರಸರು ತಮ್ಮ ನಾಲ್ಕು ಸಾಲಿನ ಈ ವಚನದಲ್ಲಿ ಅಜ್ಞಾನದ ಬೇರು ಕಿತ್ತಿ ಸುಜ್ಞಾನಿಯಾಗುವ ಸೂತ್ರ ಹೆಣೆದಿದ್ದಾರೆ.

ತನಗೆ ತೋರುವ ವಸ್ತುಗಳೆಲ್ಲ ಮಾಯೆ. ಅವು ನಿಜವಲ್ಲ. ತೋರುವ ತಾನೂ ತಾನಲ್ಲ. ತೋರುವುದೆಲ್ಲ ನನ್ನಲ್ಲುಳಿದ ಜ್ಞಾನ. ಅದನ್ನು ಪಡೆದ ಆನಂದ. ತಾನೆಂಬುವನು ತಿಳಿಯುತ್ತಿಲ್ಲ. ನೋಡಲು ಹೋದರೆ ಏನೂ ಇಲ್ಲವಾಗಿ ನಿಜ ಸಿದ್ಧ ಪುರುಷ ತಾನೆ. ಸಿಮ್ಮಲಿಗೆಯ ಚೆನ್ನರಾಮನು ತಾನೆ ಎಂದು ಸರಳವಾಗಿ ಹೇಳಿದ್ದಾರೆ ಚಂದಿಮರಸರು.

ತಾನು ನೋಡುವ ವಸ್ತುಗಳೆಲ್ಲ ಮಾಯೆ ಎನ್ನುವ ಅರಿವು ಪ್ರಯೋಗದ ಮೂಲಕ ಆಗಬೇಕಲ್ಲ, ಅಂತಹ ಒಂದು ಪ್ರಯೋಗ ಇಲ್ಲಿದೆ.

ಕಾಡು, ಒಂದು ಮರದ ಕೆಳಗೆ ಯತಿರಾಜನೆಂಬ ವ್ಯಕ್ತಿ ಕುಳಿತಿದ್ದಾನೆ. ಪ್ರಶಾಂತ ವಾತಾವರಣ. ಮರ ಸುಂದರ, ಮರದಂತೆ ವ್ಯಕ್ತಿಯೂ ಸುಂದರ. ಆರೂ ಋತುಗಳಲ್ಲಿಯೂ ಮರ ಆನಂದದಿಂದ ಇದೆ. ಆಹಾರದ ಬೇಡಿಕೆಯಿಲ್ಲ, ಆಹಾರಕ್ಕಾಗಿ ಕೈಚಾಚುತ್ತಿಲ್ಲ, ತಾನು ಸಿದ್ಧಪಡಿಸಿದ ಆಹಾರವನ್ನು ತಾನೂ ತಿನ್ನುತ್ತಿಲ್ಲ. ತಾನುಳಿಯಲು ಭೂಮಿಯಲ್ಲಿ ಬೇರು ಬಿಟ್ಟಿದೆ. ಬೇರಿನ ಗುಂಟ ನೀರು ಬಿಟ್ಟು ಮಣ್ಣು ಜಗಿಮಾಡಿ ತಾನು ನಿಂತಿದೆ. ಇದು ಬೇರಿದ್ದ ಮರ. ಸದಾ ಸಂತೋಷ. ಆನಂದ.

ಮರದ ಕೆಳಗೆ ಕುಳಿತ ಯತಿರಾಜನೆಂಬ ವ್ಯಕ್ತಿಯೂ ಮರದಂತೆಯೇ ಇದ್ದಾನೆ. ಸದಾ ಹಸನ್ಮುಖಿ. ಮರದಂತೆ ಬೇರಿಲ್ಲದಿದ್ದರೂ ಸದಾ ಹಸಿರು !

ರಾಜನಿಗೆ ಯತಿರಾಜನ ಸುದ್ದಿ ತಲುಪಿತು. ಜ್ಞಾನಿಯನ್ನು ನೋಡಲು ರಾಜನಿಗೆ ತವಕ. ಪ್ರಧಾನಿಯನ್ನು ಸುಂದರವಾದ ರಥದೊಂದಿಗೆ ಆಸ್ಥಾನಕ್ಕೆ ಗೌರವದಿಂದ ಕರೆತರಲು ಸೂಚಿಸಿದರು.

ಯತಿರಾಜರೆ ತಮ್ಮನ್ನು ಈ ನಾಡಿನ ಮಹಾರಾಜ ಕರೆತರಲು ಹೇಳಿದ್ದಾರೆ. ದಯವಿಟ್ಟು ಬನ್ನಿ ಎಂದರು ಪ್ರಧಾನಿ. ನಾನು ಯತಿರಾಜನಲ್ಲ, ಆ ಹೆಸರಿನವರು ಯಾರೂ ಇಲ್ಲ. ಈ ನಾಡಿಗೆ ಮಹಾರಾಜರೆಂಬುವವರು ಯಾರೂ ಇಲ್ಲ. ಎಂದು

ಮೌನವಾದರು. ಪ್ರಧಾನಿ ಮಹಾರಾಜರಿಗೆ ಯತಿಗಳ ಮಾತು ಒಪ್ಪಿಸಿದರು. ಹೇಗಾದರೂ ಮಾಡಿ ಕರೆದುಕೊಂಡು ಬನ್ನಿ ಎಂದು ಮತ್ತೆ ಸೂಚಿಸಿದರು. ಪ್ರಧಾನಿಗಳು, ದಯಮಾಡಿ ಬನ್ನಿ ಎಂದು ಪ್ರಸ್ತಾಪಿಸಿ ಕರೆತಂದರು. ಮಹಾರಾಜ ಗೌರವದಿಂದ ಎದುರುಗೊಂಡು ಯತಿರಾಜರನ್ನು ಸ್ವಾಗತಿಸಿದರು. ತಾವು ಯತಿರಾಜರಲ್ಲ ಮಹಾರಾಜನೂ ರಾಜನಲ್ಲ ಎಂದಿರಂತೆ ಹಾಗಾದರೆ ತಾವು ಯಾರು ? ನಾನು ಯಾರು ಎಂದು ಪ್ರಶ್ನಿಸಿದರು.

ನನ್ನನ್ನು ಇದೀಗ ಕರೆತಂದಿರಲ್ಲ ಅದೇನು? ಕರೆತಂದವರು ಯಾರು ಎಂದರು ಯತಿಗಳು. ಇದು ರಥ, ಇವರು ಪ್ರಧಾನಿ, ಇವನು ರಥಿಕ ಎಂದರು ರಾಜ.

ಇದು ರಥವಲ್ಲ, ಇವರು ಪ್ರಧಾನಿಗಳೂ ಅಲ್ಲ, ಇದನ್ನು ಓಡಿಸಿದವನು ರಥಿಕನೂ ಅಲ್ಲ ಎಂದರು ಯತಿಗಳು.

ಹಾಗಾದರೆ ಇದೇನು ?

ರಥದಿಂದ ಕುದುರೆ ಬೇರ್ಪಡಿಸಿ ಇದೇನೆಂದು ಪ್ರಶ್ನಿಸಿದರು ಯತಿ, ಇದು ಕುದುರೆ ಎಂದರು ರಾಜ. ಚಕ್ರ ಬೇರ್ಪಡಿಸಿದರು ಯತಿ. ಅದಕ್ಕೆ ಚಕ್ರವೆಂದರು ರಾಜ. ರಥದಿಂದ ಬೇರ್ಪಡಿಸಿದ ವಸ್ತುಗಳಿಗೆಲ್ಲ ಬೇರೆ ಬೇರೆ ಹೆಸರು ಹೇಳಿದರು ರಾಜ. ಕೊನೆಗೆ ರಥ ಉಳಿಯಲೇ ಇಲ್ಲ. ಆ ಯಾವ ವಸ್ತುಗಳೂ ರಥವಲ್ಲ, ಆ ವಸ್ತುಗಳನ್ನು ರಥವೆಂದು ಮೋಹಿಸುವುದಿಲ್ಲ. ಆದರೆ ರಥಕ್ಕಾಗಿ ಪ್ರಾಣ ಕೊಡಲೂ ಸಿದ್ಧ, ತೆಗೆಯಲೂ ಸಿದ್ಧ . ಅನುಭವದಿಂದ ರಥಿಕನಾದ. ಕಾಲಾಳೇ ಪ್ರಧಾನಿಯಾದ, ರಾಜನೂ ಆದ.

ತೋರುವುದೆಲ್ಲ ಸಂಗ್ರಹ ಜ್ಞಾನ. ಒಮ್ಮೆ ಆನಂದ, ಒಮ್ಮೆ ಸಿಟ್ಟು . ನೋಡಲು ಏನೂ ಇಲ್ಲವಾಗಿ ನಿಜವಸ್ತು ಅರಿವಿಗೆ ಬರುವುದು. ಆಗ ವಸ್ತುಗಳ ಮೇಲೆ ಮೋಹ, ರಾಗ, ದ್ವೇಷಗಳು ಹುಟ್ಟುವುದಿಲ್ಲ. ತನಗಂಟಿದ ಹೆಸರಿನ ರೋಗ ಕಳೆದು ಜ್ಞಾನ ಸಿದ್ಧಿಯಾಗಿ ನಿಜಸಿದ್ಧ ತಾನೇ ಆಗುತ್ತಾನೆ. ಮರದಂತೆ ಸದಾ ಪರಿಮಳ ಚೆಲ್ಲುತ್ತಾನೆ. ಇದು ಅಜ್ಞಾನದ ಬೇರು ಕಿತ್ತುವ ಶರಣ ಚಂದಿಮರಸರ ಸೂತ್ರ.

■

ಪೂಜಿಸಲಿಲ್ಲ - ಆಶಿಸಲಿಲ್ಲ

ಮಡಕೆಯ ಮಾಡುವಡೆ ಮಣ್ಣೆ ಮೊದಲು;
ತೊಡಿಗೆಯ ಮಾಡುವಡೆ ಹೊನ್ನೆ ಮೊದಲು;
ಶಿವ ಪಥವ ನರಿವಡೆ ಗುರುಪಥ ಮೊದಲು;
ಕೂಡಲ ಸಂಗಮದೇವರ ನರಿವಡೆ ಶರಣರ ಸಂಗವೆ ಮೊದಲು.

-ಬಸವಣ್ಣ

ಬಸವಣ್ಣನವರ ಈ ನಾಲ್ಕು ಸಾಲಿನ ಸೂತ್ರದಲ್ಲಿ ಜ್ಞಾನದ ತಿರುಳು ಇದೆ. ಕಣ್ಣಿಗೆ ಅಂಟಿದ ಕುರುಡುತನ ನಿವಾರಿಸಿಕೊಳ್ಳುವ ಅಂಜನವೂ ಇದೆ.

ಮಡಕೆಯ ಮಾಡುವಡೆ ಮಣ್ಣೆ ಮೊದಲು :

ಇದು ಅತ್ಯಂತ ಸರಳ ಮಾತು ಆದರೂ ಜಟಿಲ. ಮಡಿಕೆ ಮಾಡಲು ಮಣ್ಣು ಬೇಕು. ಮಣ್ಣಿನಿಂದಲೇ ಮಡಿಕೆ, ಮುಚ್ಚಳ, ಊಜಿ, ಮಗಿ, ತತ್ರಾಣಿ ಮುಂತಾದ ಮಣ್ಣಿನ ಪರಿಕರಗಳನ್ನು ಮಾಡುತ್ತಾರೆ.

ಈ ಪುಟ್ಟ ಮಾತಿನಲ್ಲಿ ಜಗತ್ತಿನ ಅಜ್ಞಾನದ ಕುರುಡುತನ ನಿವಾರಿಸಿಕೊಳ್ಳುವ ಔಷಧಿ ಇಟ್ಟಿದ್ದಾರೆ ಬಸವಣ್ಣ.

ಮೂರ್ತಿ ಮಾಡುವುದಕ್ಕೆ, ಮಡಕೆ ಮಾಡುವುದಕ್ಕೆ ಮಣ್ಣು ಬೇಕು. ಪಾರ್ವತಿ ಪರಮೇಶ್ವರ, ವೆಂಕಟರಮಣ, ಗಾಂಧಿ, ಅಂಬೇಡ್ಕರ, ಕ್ರಿಸ್ತ, ವಾಲ್ಮೀಕಿ, ಕನಕದಾಸ ಮುಂತಾದ ಮೂರ್ತಿಗಳನ್ನು ಆರಾಧಿಸುವ ಫ್ಯಾನ್‌ಗಳು ಮಣ್ಣು, ಕಟ್ಟಿಗೆ, ಕಲ್ಲು, ಲೋಹ ಕೊಟ್ಟು ಕಲಾವಿದನಿಂದ ಮೂರ್ತಿ ಮಾಡಿಸುತ್ತಾರೆ.

ಆಯಾ ಫ್ಯಾನ್‌ಗಳ ಯೋಗ್ಯತೆಗೆ ಅನುಗುಣವಾಗಿ ಮೂರ್ತಿಯ ಬೆಲೆ ಒಂದು ಲಕ್ಷದಿಂದ ಕೋಟಿ ರೂಪಾಯಿಗಳವರೆಗೆ ನಿಗದಿಯಾಗುತ್ತದೆ. ದೇವಸ್ಥಾನದಲ್ಲಿ, ರಸ್ತೆಯಲ್ಲಿ, ವೃತ್ತದಲ್ಲಿ ಮೂರ್ತಿ ಪ್ರತಿಷ್ಠಾಪಿಸಿ ಕಾರ್ಯಕ್ರಮ ಮಾಡುತ್ತಾರೆ.

ಒಂದು ಮೂರ್ತಿಯ ಫ್ಯಾನ್‌ಗಳು ಮತ್ತೊಂದು ಮೂರ್ತಿಯನ್ನು ಸೇರುವುದಿಲ್ಲ, ಜಗಳ ಕಾಯಲು ತುದಿಗಾಲ ಮೇಲೆ ನಿಂತಿರುತ್ತಾರೆ. ಒಂದು ಬಣ ಮೂರ್ತಿಗೆ ಕಪ್ಪು ಬಳಿದು, ರಾಡಿ ಹಚ್ಚಿ, ಚಾಳಿಸು ಕಿತ್ತಿ, ಚಪ್ಪಲಿ ಹಾರ ಹಾಕಿದರೆ, ಮತ್ತೊಂದು ಬಣ ಶಾಲಾ ಕಾಲೇಜು ಬಂದ್ ಮಾಡಿ ಬಸ್ಸು ಸುಟ್ಟು ವಿರೋಧ ವ್ಯಕ್ತ ಪಡಿಸುತ್ತದೆ. ಪೋಲೀಸರು ಲಾಟಿ ಚಾರ್ಜ್ ಮಾಡಿ ಗುಂಡು ಹಾರಿಸಿ ಗುಂಪು ಚದರಿಸುತ್ತಾರೆ. ಸಾವು ನೋವುಗಳು ಸಂಭವಿಸುತ್ತವೆ. ಪಕ್ಷಿ ಹೇತರೂ, ನಾಯಿ ಮೂತ್ರ ಮಾಡಿದರು ಜಗಳವಿಲ್ಲ, ಪಕ್ಷಿ ಪ್ರಾಣಿಗಳಿಗೆ ಮೂರ್ತಿಗಳು ವಸ್ತುಗಳಾಗಿಯೇ ಕಾಣುತ್ತವೆ. ಮನುಷ್ಯ ಮೂರ್ತಿಯ

ಮೂಲ ವಸ್ತುವಾದ ಮಣ್ಣು ಮರೆತು ಮೂರ್ತಿ ನೋಡುತ್ತಾನೆ. ತನ್ನ ದೇವರನ್ನು ನಾಯಕನನ್ನು ನೋಡುತ್ತಾನೆ.

ಮೂಲ ವಸ್ತುಗಳಾದ ಮಣ್ಣು, ಕಲ್ಲು, ಕಟ್ಟಿಗೆ, ಲೋಹಗಳನ್ನು ಯಾರೂ ಪೂಜಿಸುವುದಿಲ್ಲ. ಮೂರ್ತಿ ಮಾಡಿದ ಮೇಲೆ ಮೂಲ ವಸ್ತುಗಳನ್ನು ಯಾರೂ ನೋಡುವುದಿಲ್ಲ. ಕಣ್ಣು ಕಾಣುತ್ತದೆ ಆದರೆ ಕಣ್ಣಿನಲ್ಲಿ ಮೂಲ ವಸ್ತುವನ್ನು ನೋಡದ ಕುರುಡುತನ ನಿರ್ಮಾಣವಾಗಿದೆ.

ತೊಡಿಗೆಯ ಮಾಡುವಡೆ ಹೊನ್ನ ಮೊದಲು :

ಆಭರಣಗಳನ್ನು ಮಾಡಲು ಹಳದಿ ಲೋಹ ಬೇಕು. ಲೋಹಕ್ಕೆ ಒಂದೇ ಹೆಸರು. ಆಭರಣಕ್ಕೆ ಹಲವಾರು ಹೆಸರು : ಉಂಗುರ, ನೆಕ್ಲೆಸ್, ಬೋರಮಳ, ಕಾಸಿನಸರ ಹೀಗೆ ಒಂದೊಂದು ಹೆಸರಿನ ಆಭರಣವು ಕಣ್ಣನಲ್ಲಿ ಸೂರೆಗೊಂಡು ಕಳವು,ಮೋಸ, ಸಾವು, ದರೋಡೆಗೆ ದಾರಿ ಮಾಡಿಕೊಡುತ್ತದೆ. ವಸ್ತುವಿನಲ್ಲಿ ದೋಷವಿಲ್ಲ. ಅದು ಕೈ ಮಾಡಿ ಯಾರನ್ನು ಕರೆಯುವುದಿಲ್ಲ. ಆದರೆ ಕಣ್ಣನಲ್ಲಿ ಲೋಹ ನೋಡದ ಕುರುಡುತನ ನಿರ್ಮಾಣವಾಗಿರುವುದೆ ಆಸೆ ಮತ್ತು ದುಃಖಕ್ಕೆ ಕಾರಣ.

ಮೂರ್ತಿಯ ಮೂಲ ಮಣ್ಣು ತಿಳಿಯಲು, ಆಭರಣದ ಮೂಲ ಹಳದಿ ಲೋಹ ತಿಳಿಯಲು ಅರಿವು ಬೇಕು. ಕಣ್ಣಿನಲ್ಲಿ ಮೂರ್ತಿಯ ಮೂಲ ಮಣ್ಣು ತಿಳಿಯುವ ಬೆಳಕೂ ಇದೆ. ಶಿವನೆಂದು ನಾಯಕನೆಂದು ಪೂಜಿಸುವ ಅಜ್ಞಾನವೂ ಇದೆ.

ಶಿವ ಪಥವ ನರಿವಡೆ ಗುರುಪಥ ಮೊದಲು :

ಗುರು ಪಥವದು ಅರಿವಿನ ಪಥ. ಅರಿವೆ ಗುರುವು. ಮೂಲ ವಸ್ತುಗಳನ್ನು ನೋಡುವ ಜ್ಞಾನ ಕಣ್ಣಿಗೆ ಬಂದರೆ ಮೂರ್ತಿಯನ್ನು ಪೂಜಿಸುವುದಿಲ್ಲ. ಮೂರ್ತಿಯಲ್ಲಿಯ ಮಣ್ಣು ನೋಡಿ ಮೌನವಾಗುತ್ತಾನೆ. ಮೂರ್ತಿ ಮಣ್ಣು ನಿಂತ ನೆಲ ಮಣ್ಣು, ಮಣ್ಣಿನಲ್ಲಿಯೇ ಹುಟ್ಟಿದ ಹಳದಿ ಲೋಹ !

ಮೂಲ ವಸ್ತು ನೋಡಿದ ಆಭರಣವೆಂದು ಆಸೆ ಪಡಲಿಲ್ಲ, ಮೂರ್ತಿಯೆಂದು ಪೂಜಿಸಲಿಲ್ಲ, ಆರಾಧಿಸಲಿಲ್ಲ. ಮೂರ್ತಿ - ಆಭರಣ ಅರಿವಿನಲ್ಲಿ ಸಂಗಮವಾಯಿತು. ಇದನ್ನು ತಿಳಿದರೆ ಸರ್ವರೂ ಸುಖಿಗಳು. ತಿಳಿಯಲು ಜ್ಞಾನಿಗಳ ಸಂಗವೇ ಮೊದಲು ಎಂದಿದ್ದಾರೆ ಬಸವಣ್ಣ.

■

ನೀರು ಬೆಳಗುವ ಬಗೆ

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವನೆಂತೊಲಿವನಯ್ಯ.

-ಬಸವಣ್ಣ

ಬಸವಣ್ಣನವರು ತಮ್ಮ ವಚನದಲ್ಲಿ ಮುತ್ತು ಮಾಣಿಕ್ಯ ಸ್ಫಟಿಕ ಲಿಂಗ ಬಳಸಿದ್ದಾರೆ. ಮಾನವ ಅದರಂತೆ ಬೆಳಗುವ ಬಗೆಯನ್ನೂ ವಿವರಿಸಿದ್ದಾರೆ.

ಮುತ್ತು ನೀರಿನಿಂದಾಯಿತು. ಹೊಳಪಿನಿಂದ ಆಕರ್ಷಣೆಗೊಳಗಾಯಿತು. ಮತ್ತೆ ನೀರಾಗಲಿಲ್ಲ, ಥಳ ಥಳ ಹೊಳೆಯುವುದೇ ಅದರ ನುಡಿ. ನುಡಿದು ಆಕರ್ಷಣೆ ಮಾಡಲಿಲ್ಲ, ನೀರಿನಿಂದ ಮುತ್ತಾಗಿ ಬೆಳಗಿ ಆಕರ್ಷಿಸಿತು.

ಮಾಣಿಕ್ಯ ನೀರಿನಿಂದಾಯಿತು. ಅದರ ದೀಪ್ತಿ ಕೈ ಮಾಡಿ ಕರೆಯಿತು. ಮಾಣಿಕ್ಯವೂ ನುಡಿಯಲಿಲ್ಲ, ಆದರ ನುಡಿ ದೀಪ್ತಿ ಮಾತ್ರ.

ನೀರು ಗಟ್ಟಿಗೊಂಡು ಸ್ಫಟಿಕವಾಯಿತು. ಸ್ಫಟಿಕದ ನುಡಿ ಅದರ ಹೊಳಪು ಮಾತ್ರ.

ನೀರೆಲ್ಲ ಮುತ್ತು ಮಾಣಿಕ್ಯ ಸ್ಫಟಿಕಗಳಾಗಲಿಲ್ಲ, ಇವು ಮೂರೂ ಮತ್ತೆ ನೀರಾಗಲಿಲ್ಲ, ಇವುಗಳ ನುಡಿ ನುಡಿಯಲ್ಲದ ನುಡಿ. ಬೆಳಗಿನ ನುಡಿ. ಹಾರದಲ್ಲಿದ್ದರೂ ಬೆಳಗುವುದು. ತಿಪ್ಪೆಯಲ್ಲಿದ್ದರೂ ಬೆಳಗುವುದು. ಬೆಳಗುವ ಮೂಲಕ ನುಡಿಯುವುದೆ ಮುತ್ತು ಮಾಣಿಕ್ಯ ಸ್ಫಟಿಕದ ಕೆಲಸ.

ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು, ನುಡಿಯೊಳಗಾಗಿ ನಡೆಯದಿದ್ದರೆ ಕೂಡಲ ಸಂಗಮದೇವನೆಂತೊಲಿವನಯ್ಯ :

ಮನುಷ್ಯನೂ ನೀರಿನಿಂದಾದವನು. ತಂದೆಯ ಒಂದು ನೀರಿನ ಬಿಂದು ತಾಯಿ ಗರ್ಭ ಪ್ರವೇಶಿಸಿ ಪಾಕದ ಪಿಂಡವಾಯಿತು. ರಕ್ತ, ಮೂಳೆ, ಚರ್ಮ ಮಾಂಸ ಮಜ್ಜಾ ಮೇಧಸ್ಸಾಯಿತು. ನೀರು ಗಟ್ಟಿಗೊಂಡು ತಾಯಿಗರ್ಭದಿಂದ ಹೊರಬಂದು ಮನುಷ್ಯನಾದ.

ಮನುಷ್ಯನೊಂದಿಗೆ ಜ್ಞಾನವೂ (ಲಿಂಗ) ಜನ್ಮ ತಳೆಯಿತು. ನಂತರ ಜ್ಞಾನದ ಸಂಗ್ರಹ (ಮನ) ಅಜ್ಞಾನವೂ ಲೀನವಾಯಿತು.

ಮುತ್ತು ಮಾಣಿಕ್ಯ ಸ್ಫಟಿಕ ಮತ್ತು ಮನುಷ್ಯ ನೀರಿನಿಂದ ಗಟ್ಟಿಗೊಂಡು

ಬೆಳಗುವ ಕೆಲಸಕ್ಕೆ ಜನ್ಮ ಪಡೆದವು. ಮೂರು ವಸ್ತುಗಳು ಬೆಳಗುವ ಕೆಲಸದಲ್ಲಿ ನಿರತವಾದರೆ, ಮನುಷ್ಯ ಮಾತ್ರ ಬೆಳಗುವ ಹಾಗೂ ಅಜ್ಞಾನದ (ಕತ್ತಲೆ) ಕೆಲಸದಲ್ಲಿ ನಿರತನಾದ. ನುಡಿತಪ್ಪಿದ ನುಡಿ ನುಡಿದಾಗ, ತನ್ನಲ್ಲೇ ಉದಯವಾದ ನುಡಿ ಎಚ್ಚರಿಸುತ್ತದೆ, ಅದೇ ಲಿಂಗ ! ಮನುಷ್ಯನನ್ನು ಬೆಳಗುವ ಜ್ಞಾನ. !!

ತಾನು ನುಡಿದರೆ ತನ್ನೊಳಗಿರುವ ಜ್ಞಾನ ಮೆಚ್ಚಿ ಅಹುದಹುದೆನಬೇಕು. ಜ್ಞಾನದ ನುಡಿಯೊಳಗಾಗಿ ನಡೆಯದಿದ್ದರೆ ಜ್ಞಾನ ಎಂತೊಲಿ ಯುವುದು ? ತನ್ನಲ್ಲಿಯೇ ಉದಯವಾದ ಜ್ಞಾನ, ತನ್ನಲ್ಲಿಯೇ ಬೆಳೆದ ಅಜ್ಞಾನ ಸಂಗಮವಾಗಿ ಜ್ಞಾನಿ ತಾನಾಗುವುದೇ ಕೂಡಲ ಸಂಗಮ ದೇವನ ಸಾಕ್ಷಾತ್ಕಾರ.!

ಬೆಳಗುವ ಶಕ್ತಿಯೂ ತನ್ನಲ್ಲಿಯೇ ಇದೆ. ಬೆಳಗುವ ವಸ್ತುವನ್ನು ಕತ್ತಲು ಮಾಡಿಕೊಳ್ಳುವ ಅಜ್ಞಾನವೂ ತನ್ನಲ್ಲಿಯೇ ಇದೆ. ಮುತ್ತು ಮಾಣಿಕ್ಯ ಸ್ಫಟಿಕ ಮೂರು ವಸ್ತುಗಳು ಬೆಳಗುತ್ತವೆ ಕತ್ತಲಾಗಲರಿಯವು. ಮನುಷ್ಯನೂ ಸೂರ್ಯನಂತೆ ಸದಾ ಬೆಳಗುತ್ತಾನೆ, ಬೆಳಗಿಂಗೆ ಬೆಳಗಾಗಿ ಬೆಳಗುತ್ತಾನೆ. ಆದರೆ ಮೋಡ (ಮನ) ಅಡ್ಡಿಯಾಗಿದೆ. ಬೆಳಕು ಇಲ್ಲವೆಂದಲ್ಲ,

■

ಅಜ್ಞಾನದ ಕೋಪ ಅವುಡಿಗೆ ಮೃತ್ಯು

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದಡೆ
ಹಿಡಿದಿರ್ದ ಲಿಂಗವು ಘಟಸರ್ಪವಯ್ಯಾ.
ನುಡಿಯಲು ಬಾರದು, ನಡೆಯಲು ಬಾರದು,
ಲಿಂಗದೇವನೆ ದಿಬ್ಯವೊ ಅಯ್ಯಾ.
ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ.
ಕಡೆದಾಂಟದು ಕಣಾ ಕೂಡಲ ಸಂಗಮದೇವ

- ಬಸವಣ್ಣ

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದಡೆ ಹಿಡಿದಿರ್ದ ಲಿಂಗವು ಘಟಸರ್ಪವಯ್ಯಾ :

ಮಾತೆ ಮಾಣಿಕ್ಯ, ಮಾತೇ ಮುತ್ತು, ಮಾತೇ ಜ್ಯೋತಿರ್ಲಿಂಗ, ಮಾತೇ ಸ್ಫಟಿಕ. ಮಾತಿನಿಂದಲೇ ಯುದ್ಧ, ಮಾತಿನಿಂದಲೇ ಜಗಳ, ಕೊಲೆ ರಣರಂಗ. ಮಾತು ಬಲು ಸುಖಕರವಾದದ್ದು-ದುಃಖಕರವಾದದ್ದೂ ಹೌದು.

ಎಚ್ಚರದಿಂದ ಮತ್ತೊಬ್ಬರಿಗೆ ಮಾತು ಕೊಡುವಾಗ ದೇಹ ಮನದೊಂದಿಗೆ ಸುಖಿಸಿತು. ಅದನ್ನು ನೆರವೇರಿಸುವ ಸಮಯ ಬಂದಾಗ ಮನ ದೇಹದೊಂದಿಗೆ ನಕಾರಾತ್ಮವಾಗಿ ವರ್ತಿಸಿ ಮಾತು ತಪ್ಪುವಂತೆ ಮಾಡಿತು. ದೇಹದಲ್ಲಿ ಮನ ಎರಡು ಪಾತ್ರಗಳನ್ನು ಅಭಿನಯಿಸಿತು. ನುಡಿದು ದೇಹಕ್ಕೆ ಸುಖವನ್ನುಂಟು ಮಾಡಿತು. ನುಡಿದಂತೆ ನಡೆಯದೆ ದುಃಖವನ್ನುಂಟು ಮಾಡಿತು.

ನುಡಿಯುವಾಗ, ನುಡಿದಂತೆ ನಡೆಯುವಾಗ ದೇಹ ಮನದ ಮಾತು ಆಲಿಸಿತೆ ವಿನಹ ಜ್ಞಾನ (ಲಿಂಗ)ದ ಮಾತು ಆಲಿಸಲಿಲ್ಲ. ದೇಹ ತನ್ನನ್ನು ಆವರಿಸಿದ್ದ ಮನದ ಮಾತು ಕೇಳಿ ಸುಖಿಸಿತು-ದುಃಖಿಸಿತು. ದೇಹವನ್ನು ಹಿಡಿದಿರ್ದ ಜ್ಞಾನದ ಮಾತು ಕೇಳಲಿಲ್ಲ.

ಕೊಡುವ-ಪಡೆಯುವ ಮಾತುಗಳನ್ನು ಜನ ಮರೆಯುತ್ತದೆ. ದೇಹ ಆವರಿಸಿದ ಮನವೂ ಮರೆಯುತ್ತದೆ. ದೇಹ ಹಿಡಿದಿರ್ದ ಜ್ಞಾನ (ಲಿಂಗ) ಮರೆಯುವುದಿಲ್ಲ. ಜ್ಞಾನದ ದಾರಿಗೆ ದೇಹ ಬರುವವರೆಗೆ ಅಥವಾ ದೇಹ ಇರುವವರೆಗೆ ಜ್ಞಾನ ಘಟಸರ್ಪದಂತೆ ಕುಕ್ಕುತ್ತಾ ನುಡಿದು ತಪ್ಪಿದುದನ್ನು ನೆನಪಿಸುತ್ತದೆ.

ನುಡಿಯಲು ಬಾರದು, ನಡೆಯಲು ಬಾರದು, ಲಿಂಗದೇವನೆ ದಿಬ್ಯವೊ ಅಯ್ಯಾ :

ದೇಹ ಜ್ಞಾನದ ಆಭರಣ. ಜ್ಞಾನದ ನುಡಿ ನುಡಿಯಲ್ಲ, ಅದು ನುಡಿಯಲು ಬಾರದ ನುಡಿ. ನಡೆಯಲು ಬಾರದ ನಡೆ. * ಈ ವಿಷಯವನ್ನು ಆನಂದಿಸಬಹುದು.

ಸ್ವಲ್ಪ ಮಟ್ಟಿಗೆ ಚರ್ಚಿಸಬಹುದು. ಬರೆಯಲಾಗುವುದಿಲ್ಲ, ಬಸವಣ್ಣನವರು ವಿಸ್ತರಿಸದೆ ಇದಕ್ಕೆ ಲಿಂಗದೇವನೆ (ಜ್ಞಾನವೇ) ಸಾಕ್ಷಿ ಎಂದಿದ್ದಾರೆ.

ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ ಕಡೆದಾಂಟದು ಕಾಣಾ ಕೂಡಲ ಸಂಗಮದೇವಾ :

ಸಾಯುವವರೆಗೆ ಹಲವಾರು ಬಾರಿ ನುಡಿಯುತ್ತಾನೆ. ಹಲವಾರು ಬಾರಿ ತಪ್ಪುತ್ತಾನೆ, ನುಡಿಯುವುದು ನುಡಿದಂತೆ ನಡೆಯದಿರುವುದು ಸುಖವಾಗಿ ದುಃಖವಾಗಿ ಪರಿಣಮಿಸುತ್ತದೆ. ನುಡಿ-ನಡೆ ಎರಡೂ ತನ್ನ ಜ್ಞಾನದ ಸಾಫ್ಟ್‌ವೇರ್‌ನಲ್ಲಿ ರೆಕಾರ್ಡಾಗುತ್ತದೆ. ಘಟಸರ್ಪದಂತೆ ಸಮಯ ಬಂದಾಗಲೆಲ್ಲ ನೆನಪಿಸಿ ತನ್ನನ್ನೇ ಕಚ್ಚುತ್ತದೆ. ವಿಚಲಿತನಾಗುತ್ತಾನೆ. ತನ್ನಿಂದಾದ ಪಾಪ-ಪುಣ್ಯಗಳು, ಹಾದರ ವಿಷಯ ಲಂಪಟತನ, ಭ್ರಷ್ಟಾಚಾರ, ಸುಲಿಗೆ ದರೋಡೆಗಳು ತನ್ನ ಮೃತ್ಯುವಿಗೆ ಕಾರಣವಾಗುತ್ತದೆ. ಸಾಯುವುದಿಲ್ಲ ಇದ್ದಾಗಲೇ ನೆನಪಿಸಿ ನೆನಪಿಸಿ ಸಾಯುವಂತೆ ಮಾಡುವುದು ಜ್ಞಾನವೆಂಬ ಸರ್ಪದ ಕೆಲಸ. ತನುವು ತನ್ನದೆ, ಕೋಪವು ತನ್ನದೆ, ತನುವಿನ ಕೋಪ ತನುವಿಗೆ ಮೃತ್ಯುವಾದಂತೆ. ತಿಳಿಯದೆ ಅಪರಾಧ ಮಾಡಿ ಸುಖ ಪಟ್ಟ, ತಿಳಿದು ದುಃಖ ಪಟ್ಟ. ಇದಕ್ಕೆ ಕೊನೆ ಮೊದಲಿಲ್ಲ, "ಬೆಟ್ಟದನಿತಪರಾಧವನು ಒಂದು ಬೊಟ್ಟಿನಲ್ಲಿ ತೊಡುವ" ಎನ್ನುವಂತೆ ತನ್ನಲ್ಲಿರುವ (ಅರಿವು) ಕೂಡಲ ಸಂಗಮದೇವನೇ ಇದಕ್ಕೆ ಪರಿಹಾರ ಎಂದಿದ್ದಾರೆ ಬಸವಣ್ಣನವರು.

■

ದುಗ್ಗಾಣಿಯ ಲೋಭ ಕೋಟಿ ಲಾಭ ಕೆಡಿಸಿದ ಬಗೆ

ಕಾಣಿಯ ಲೋಭ ಕೋಟಿಯ ಲಾಭವ ಕೆಡಿಸಿದುದನಾ ನರಿಯೆನಯ್ಯಾ.
ಭಕ್ತಿಯ ಕುಳವನರಿಯದೆ ಮತಿಗೆಟ್ಟ ಪರಿಯನಾ ನರಿಯೆನಯ್ಯಾ.
ಕೂಡಲ ಸಂಗನ ಶರಣರ ಸಂಗದಿಂದ ಅರಿದಡೆ ನಾನು ಬದುಕುವೆನಯ್ಯಾ.

-ಬಸವಣ್ಣ

ಕಾಣಿಯ ಲೋಭ ಕೋಟಿಯ ಲಾಭವ ಕೆಡಿಸಿದುದನಾ ನರಿಯೆನಯ್ಯಾ :

ರಾಜ, ಮಂತ್ರಿ ಪದವಿಗಳು ಬುದ್ಧ ಮಹಾವೀರ ಬಸವಣ್ಣನವರಿಗೆ ದುಗ್ಗಾಣಿಯ ಲಾಭವಾಗಿ ಕಂಡವು. ಗೌತಮ, ವರ್ಧಮಾನರು ರಾಜರಾಗಿ, ಬಸವಣ್ಣನವರು ಮಂತ್ರಿಯಾಗಿ ಪದವಿಗಳಿಂದ ದೂರ ಉಳಿದರು. ಜ್ಞಾನಕ್ಕೆ ಹತ್ತಿರವಾದರು.

ಅಧಿಕಾರದಿಂದ ಮನ ಪರಿವರ್ತನೆಯಾಗುವುದಿಲ್ಲ. ಹಣ, ಒಡವೆ, ಮನೆ, ಭೂಮಿ ವಿಷಯ ಸಂಗ್ರಹಕ್ಕಾಗಿ ಆಯುಷ್ಯ ಸವೆದು ಹೋಗುತ್ತದೆ. ರಾಜ್ಯ ವಿಸ್ತಾರಕ್ಕಾಗಿ ರಕ್ಷಣೆಗಾಗಿ ಸಾವು ನೋವುಗಳು ಸಂಭವಿಸುತ್ತವೆ. ಚಿನ್ನ ಭೂಮಿ ಕರೆನ್ಸಿಗಳೇ ಪ್ರಧಾನವಾಗುತ್ತವೆ. ಧನಿಕನಿಗೆ ಗಳಿಸುವ ಆಸೆ, ಬಡವನಿಗೆ ಧನಿಕನಾಗಬೇಕೆಂಬ ಬಯಕೆ. ಬಯಕೆ ವಸ್ತು ಒಡವೆಗಳನ್ನು ಹತ್ತಿರ ಮಾಡಿ ಸಮಾಧಾನ ಸಂತೋಷಗಳನ್ನು ದೂರ ಮಾಡುತ್ತವೆ.

ಚಿನ್ನ, ಕರೆನ್ಸಿ, ಮಣ್ಣು ವಿಷಯ ಸುಖಗಳೆಂಬ ದುಗ್ಗಾಣಿಯ ಲಾಭ ದೇಹದಲ್ಲಿರುವ ಜ್ಞಾನದ ಹತ್ತಿರ ಸುಳಿಯದಂತೆ ಮಾಡುತ್ತದೆ. ಜ್ಞಾನವದು *"ಜಗದಗಲ ಮುಗಿಲಗಲ, ಮಿಗೆಯಗಲ ನಿಮ್ಮಗಲ. ಪಾತಾಳದಿಂದತ್ತತ್ತ ನಿಮ್ಮ ಶ್ರೀಪಾದ, ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ. ಅಗಮ್ಯ-ಅಗೋಚರ-ಅಪ್ರಮಾಣ ಲಿಂಗವೇ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ"* ಜಗದಗಲ ಮುಗಿಲಗಲ, ಪಾತಾಳ ಬ್ರಹ್ಮಾಂಡದಿಂದತ್ತತ್ತ, ಗಮನಕ್ಕೂ ಗೋಚರಕ್ಕೂ ಪ್ರಮಾಣಕ್ಕೂ ನಿಲುಕದ ಜ್ಞಾನ ಎನ್ನ ಕರಸ್ಥಲವೆಂಬ ದೇಹದಲ್ಲಿ ಬಂದು ಚುಳುಕಾಗಿದೆ. ಇಂತಹ ಜ್ಞಾನವನ್ನು ದುಗ್ಗಾಣಿಯ ಲೋಭ ಕೆಡಿಸಿ ಹಾಕಿರುವುದು ತಿಳಿಯದಂತಾಗಿದೆ ಎಂದಿದ್ದಾರೆ ಬಸವಣ್ಣನವರು.

ಭಕ್ತಿಯ ಕುಳವನರಿಯದೆ ಮತಿಗೆಟ್ಟ ಪರಿಯ ನಾನರಿಯೆನಯ್ಯಾ :

ವಸ್ತುಗಳಿಗೆ ಆಸೆಪಟ್ಟು, ದಾಸನಾದೆ. ವಸ್ತುಗಳಲ್ಲಿಯ ಸತ್ಯ ನೋಡಲಿಲ್ಲ. ವಸ್ತುಗಳ ಮೇಲಿರುವ ಆಸೆ ಮತ್ತು ವಸ್ತುಗಳಲ್ಲಿರುವ ಸತ್ಯ ನೋಡುವ ಅರಿವು ತನ್ನಲ್ಲಿಯೇ

ಇದೆ. ವಸ್ತುಗಳನ್ನು ಆಶಿಸಿ ಅನೇಕ ರಾಜ ಮಹಾರಾಜರು ಮಣ್ಣು ಸೇರಿದರು. ಪ್ರಜೆಗಳನ್ನು, ಸೈನಿಕರನ್ನು ಬಲಿತೆಗೆದುಕೊಂಡರು. ರಾಮಾಯಣ, ಮಹಾಭಾರತ, ಜಾಗತಿಕ ಮಹಾ ಯುದ್ಧಗಳಾದವು. ಈಗಿನ ಪ್ರಜಾಪ್ರಭುತ್ವವೂ ಇದಕ್ಕೆ ಹೊರತಾಗಿಲ್ಲ. ವಸ್ತುಗಳ ಮೇಲಿರುವ ಆಸೆ-ಅವುಗಳ ಸತ್ಯ ತಿಳಿಯುವ ಶಿಕ್ಷಣ ಪೂರೈಸದೆ ಮತಿ ಹೀನವಾಗಿದೆ.

ಬುದ್ಧ, ಮಹಾವೀರ, ಬಸವಣ್ಣನವರು ವಸ್ತುವಿನ ಮೂಲ ತಿಳಿದರು. ಅವರಿಗೆ ಚಿನ್ನ ಹಳದಿ ಲೋಹವಾಯಿತು, ಕರೆನ್ಸಿ ಕಾಗದವಾಯಿತು. ಆಸೆ ಚಿನ್ನದಲ್ಲಿದೆ, ಲೋಹದಲ್ಲಿಲ್ಲ, ಆಸೆ ಕರೆನ್ಸಿಯಲ್ಲಿದೆ, ಕಾಗದದಲ್ಲಿಲ್ಲ. ಅದಕ್ಕಾಗಿಯೇ "ಅಡಕೆಗೆ ಹೋದ ಮಾನ ಆನೆ ಕೊಟ್ಟರು ಬರುವುದಿಲ್ಲ" ಎಂದರು ಜನಪದರು.

ವಸ್ತುಗಳನ್ನು ಕುರುಡು ಕಣ್ಣಿನಿಂದ ನೋಡಿದರೆ ದುಗ್ಗಾಣಿಯ ಲಾಭಕ್ಕಾಗಿ ವಸ್ತುಗಳು ತನ್ನನ್ನು ಬಲಿತೆಗೆದುಕೊಳ್ಳುತ್ತವೆ. ಅರಿವಿನಿಂದ ನೋಡಿದರೆ ವಸ್ತುಗಳಲ್ಲಿ ಹುರುಳಿಲ್ಲ. ಜ್ಞಾನಕ್ಕೆ ಭಕ್ತಿ ಮಾಡಿ ಆ ಜ್ಞಾನವೇ ತಾವಾದವರು ಬುದ್ಧ, ಬಸವ, ಮಹಾವೀರ. ಅವರಿಗೆ ರಾಜ-ಮಂತ್ರಿ ಪದವಿಗಳೆಂಬ ದುಗ್ಗಾಣಿಯ ಲೋಭ ದೂರವಾಯಿತು. ಕೋಟಿ ಲಾಭದ ಜ್ಞಾನ ಹತ್ತಿರವಾಯಿತು.

ಕೂಡಲ ಸಂಗನ ಶರಣರ ಸಂಗದಿಂದ ಅರಿದಡೆ ನಾನು ಬದುಕುವೆನಯ್ಯಾ:

ವಸ್ತು ವಿಷಯಗಳ ಮೇಲಿನ ಆಸೆಯೂ ತನ್ನಲ್ಲಿಯೇ ಇದೆ. ಅವುಗಳನ್ನು ಅರಿಯುವ ಜ್ಞಾನವೂ ತನ್ನಲ್ಲಿಯೇ ಇದೆ. ಅರಿದಡೆ ಜ್ಞಾನಿ, ಮರೆದಡೆ ಮಾನವ. ಜ್ಞಾನಿಗಳ ಸಂಗದಿಂದ ಅರಿದಡೆ ಜ್ಞಾನಿಯಾಗಿ ಬದುಕುವುದು ಸಹಜ ಎಂದಿದ್ದಾರೆ ಮಹಾತ್ಮಾ ಬಸವಣ್ಣನವರು.

■

ಕಳಬೇಡ

ಕಳಬೇಡ, ಕೊಲ್ಲಬೇಡ, ಹುಸಿಯ ನುಡಿಯಲು ಬೇಡ ;
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ ;
ತನ್ನ ಬಣ್ಣಿಸಬೇಡ, ಇದರ ಹಳಿಯಲು ಬೇಡ ;
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ.

– ಬಸವಣ್ಣ

ಕಳಬೇಡ :

ಮಗುವಿಗೆ ಮಾತು ಬರುವಾಗಲೇ ತಾಯಿ-ತಂದೆ ಈ ಪದ ಬೋಧಿಸುತ್ತಾರೆ. ಶಾಲೆಗೆ ಹೋದ ಮೇಲೆ ಗುರು-ಹಿರಿಯರು ಅಕ್ಕ- ಪಕ್ಕದವರು ಬೋಧಿಸುತ್ತಾರೆ. ಆದರೂ ಕಳುವು ನಿಂತಿಲ್ಲ, ವಸ್ತುಗಳ ಕಳುವಲ್ಲದಿದ್ದರೇನಂತೆ ? ಕಣ್ಣು, ಕಿವಿ, ಚರ್ಮ, ನಾಲಿಗೆ ಮೂಗಿನಿಂದ ಕಳುವು ನಡೆಯುತ್ತದೆ. ಈ ಕಳುವು ಯಾರ ಗಮನಕ್ಕೂ ಬರು ವುದಿಲ್ಲ, ತನ್ನ ಗಮನಕ್ಕೆ ಬಾರದೇ ಇರುವುದಿಲ್ಲ.

ಬಸವಣ್ಣನವರು ಈ ವಚನದಲ್ಲಿ ಕಳುವಿನ ಬೇರಿಗೇ ಕೈ ಹಾಕಿ ಕಿತ್ತೆಸೆದಿದ್ದಾರೆ.

ಮನ ಕದಿಯುವುದು ಪ್ರಮುಖವಾಗಿ ಭೂಮಿ, ಹೇಮ ಮತ್ತು ವಿಷಯ ವೆಂಬ ಮೂರು ವಸ್ತುಗಳನ್ನು :

ತಾನು ತಯಾರಿಸಿದ ವಸ್ತುಗಳು ಕಳುವಾದರೆ ಕಳುವೆನ್ನಬಹುದು. ಈ ಮೂರೂ ವಸ್ತುಗಳು ತನ್ನ ಪ್ರೊಡಕ್ಟ್ ಅಲ್ಲ, ಭೂಮಿ ಇಲ್ಲಿಯೇ ಇದ್ದದ್ದು ; ಅದರ ಭೋಗ್ಯದಾರ ತಾನು. ಕೋಟಿಗಟ್ಟಲೆ ವರ್ಷಗಳಿಂದ ಕೋಟಿಗಟ್ಟಲೆ ಜನ ಭೂಮಿ, ಭೂಮಿಯೊಳ ಗಿದ್ದ ಚಿನ್ನ-ಬೆಳ್ಳಿ ಇತರ ಲೋಹಗಳನ್ನು ಭೋಗಿಸುತ್ತಾ ಬಂದಿದ್ದಾರೆ. ಭ್ರಮೆಯಿಂದ ಹೆಸರು ಬರೆದು ರಜಿಸ್ಟ್ರಿ ಮಾಡಿಸಿ ಕರಕಟ್ಟುತ್ತಾ ತನ್ನದಾಗಿಸಿಕೊಂಡಿದ್ದಾರೆ ಇಂದು ನನ್ನದು ನಾಳೆ ಮತ್ತೊಬ್ಬರದು !

ಭೂಮಿ-ಹೇಮ-ವಿಷಯ ಸುಖ ತನ್ನದಾಗಿಸಿಕೊಂಡರೂ ಮನ ಮತ್ತೊಂದು ಭೂಮಿ-ಹೇಮ-ವಿಷಯ ಸುಖಕ್ಕೆ ಎಳಸದೇ ಇರದು. ಭೂಮಿ-ಹೇಮದ ಕಳುವು ನಿಯಂತ್ರಿಸಬಹುದು. ಆದರೆ ವಿಷಯ ಸುಖದ ಕಳುವು ನಿಯಂತ್ರಿಸುವುದು ಅಸಾಧ್ಯ. ಕಣ್ಣಿನಿಂದ, ಚರ್ಮದಿಂದ, ಕಿವಿಯಿಂದ, ಹಾದರ ನಡೆದೇ ಇರುತ್ತದೆ. ಶರಣರ ಶಿಕ್ಷಣ ಗೊತ್ತಿಲ್ಲದ ಸ್ವಾಮಿಗಳು, ಪೀಠಾಧಿಪತಿಗಳು ಆಶ್ರಮವಾಸಿಗಳಿಗೂ ಇದು ತಪ್ಪಿದ್ದಲ್ಲ.

ಕಳಬೇಡ ಎನ್ನುವುದೊಂದು ಶರಣರ ಶಿಕ್ಷಣ. ಈ ಶಿಕ್ಷಣದಲ್ಲಿ ಪಂಚೇಂದ್ರಿಯ

ಗಳಿಂದ ಮಾಡಲ್ಪಡುವ ಕಳುವಿನ ಬೇರು ಸಂಪೂರ್ಣ ಕಿತ್ತಿಹಾಕುವ ಶಕ್ತಿಯಿದೆ.

"ಭೂಮಿ ನಿನ್ನದಲ್ಲ ಹೇಮ ನಿನ್ನದಲ್ಲ ಕಾಮಿನ ನಿನ್ನವಳಲ್ಲ ಇವು ಜಗಕ್ಕಿಕ್ಕಿದ ವಿಧಿ" ಭೂಮಿ, ಹೇಮ, ವಿಷಯುಗಳೆಂಬ ಬೇತಾಳ ಜನರ ಬೆನ್ನು ಹತ್ತಿದೆ. "ನಿನ್ನದೆಂಬುದು ಜ್ಞಾನ ರತ್ನ ಕಾಣಾ ಅದನ್ನು ಕೆಡಗೊಡದೆ ಅಲಂಕರಿಸಿದೆಯಾದಡೆ ನಿನ್ನಂತ ಸಿರಿವಂತರು ಯಾರೂ ಇಲ್ಲ" ಎಂದಿದ್ದಾರೆ ಅಲ್ಲಮ ಪ್ರಭುಗಳು.

ಭೂಮಿ ಹೇಮ ವಿಷಯ ಇವು ನಿನ್ನವಲ್ಲ. ಯಾರ ಬಳಿ ಇರುವವೊ ಅವರು ತಮ್ಮವೆಂದು ಭಾವಿಸಿದ್ದಾರೆ. ತನ್ನದೆಂಬುದು ಜ್ಞಾನವೊಂದೆ. ಜ್ಞಾನದಿಂದ ನೋಡಿದರೆ ಭೂಮಿ, ಹೇಮ, ವಿಷಯ ಯಾರ ವಸ್ತುಗಳೂ ಅಲ್ಲ.

ಭೂಮಿ, ಹೇಮ, ವಿಷಯದ ಕಳುವು ಕಳುವಲ್ಲ, ಅದು ಇಂದಲ್ಲ ನಾಳೆ ಹೋಗುತ್ತದೆ. ಕಳುವು ಮಾಡಿದಾತನಿಗೆ ಅರಿವಿದೆ, ಇದು ನನ್ನದಲ್ಲ ಎನ್ನುವುದು. ಆದರೆ ತನ್ನದೆನ್ನುವ ಜ್ಞಾನವನ್ನೂ ಕಳುವು ಮಾಡುತ್ತಾನೆ. ಮಠ ಮಂದಿರಗಳಲ್ಲಿ ಆಶ್ರಮಗಳಲ್ಲಿ ಗುರುಶಿಷ್ಯ ಪರಂಪರೆಯಲ್ಲಿ ಜ್ಞಾನ ಮಾರಾಟದ ಸರಕಾಗಿದೆ. ರಾಮಾಯಣ, ಮಹಾಭಾರತ, ಭಗವದ್ಗೀತೆ, ವೇದ ಉಪನಿಷತ್‌ಗಳು ತನ್ನಿಂದ ಬಂದ ನುಡಿಗಳು. ಅಂದರೆ ತನ್ನಂತಹ ದೇಹದಿಂದ ಬಂದು ಪುಸ್ತಕ ಸೇರಿವೆ.

ದೇಹ ಋಷಿ ಮುನಿಗಳದಾದರೇನು, ಸಂತರದಾದರೇನು, ಶರಣ ದಾಸರದಾದರೇನು ದೇಹದ ಪ್ರೊಡೆಕ್ಟ್ ಒಂದೇ ಆಗಿರಬೇಕಲ್ಲ. ದೇಹದಲ್ಲಿರುವ ವಸ್ತು ಒಂದೇ ಆಗಿರಬೇಕಲ್ಲ. ಹಸು ಅಮೇರಿಕದಲ್ಲಿದ್ದರೇನು ಭಾರತ ಮತ್ತು ಇತರ ದೇಶಗಳಲ್ಲಿದ್ದರೇನು ಹಾಲು ಕರೆಯುವುದೇ ಅದರ ಧರ್ಮ. ಅಂತೆಯೇ ದೇಹದ ಧರ್ಮ ಜ್ಞಾನವೇ ಆಗಿದೆ.

ಋಷಿ ಮುನಿಗಳ, ಶರಣ, ಸಂತ, ದಾಸವರೇಣ್ಯರ ಮನ ಜ್ಞಾನಕ್ಕೆ ದಾಸನಾಯಿತು. ಜ್ಞಾನಕ್ಕೆ ಶರಣು ಹೋಯಿತು. ಮನ ಭೂಮಿ ಹೇಮ ವಿಷಯಗಳಿಗೆ ದಾಸನಾಗಿ ಶರಣು ಹೋದರೆ. ತನು ಕಳ್ಳ ವಿಷಯಲಂಪಟ, ಹಾದರಿಗ ಭ್ರಷ್ಟ ಎಂದು ಕರೆಯಿಸಿಕೊಳ್ಳುತ್ತದೆ. ಜ್ಞಾನಕ್ಕೆ ದಾಸನಾಗಿ ಶರಣು ಹೋದರೆ ತನು, ಶರಣ, ಸಂತ, ದಾಸನೆಂದು ಕರೆಯಿಸಿಕೊಳ್ಳುತ್ತದೆ.

ತನ್ನದಲ್ಲದ ಅನ್ಯ ವಸ್ತುಗಳನ್ನು ಕಳುವು ಮಾಡುವುದು ಸಹಜ. ತನ್ನಲ್ಲಿರುವ ತನ್ನದೆನ್ನುವ ಜ್ಞಾನವನ್ನೂ ಕಳುವು ಮಾಡುವುದು "ಬೇಲಿಯೇ ಎದ್ದು ಹೊಲ ಮೇಯ್ದಂತೆ" ಆಗಲಿಲ್ಲವೆ ? ಇತರ ಪುಸ್ತಕ ನೋಡಿ ಕದ್ದು ಬರೆದು ತನ್ನ ಮುದ್ರೆ ಒತ್ತುವ ಸಾಹಿತಿ, ಲೇಖಕ, ಕವಿಗಳು. ಭಗವದ್ಗೀತೆ, ರಾಮಾಯಣ, ಮಹಾಭಾರತ ಉದಾಹರಿಸಿ ಹೇಳುವ ಪಂಡಿತರು, ಪ್ರವಚನಕಾರರು ಆ ಪುಸ್ತಕಗಳ ಕುರಿತು ಹೇಳಿದರು. ಅದನ್ನು ಬರೆದವರ ಕುರಿತು ಹಾಡಿ ಹೊಗಳಿದರು. ಮಂದಿರ, ಮಠ, ಚರ್ಚ್ ನಿರ್ಮಿ

ಿದರು, ರಥ ಉತ್ಸವಗಳನ್ನು ಮಾಡಿ ಶರಣ ಸಂತರ ಪಾತ್ರಗಳ ಗುಣಗಾನ ಮಾಡಿದರು. ಪುಸ್ತಕಗಳಲ್ಲಿಯ ಆ ಪಾತ್ರಗಳಂತೆ ಹೇಳುವವನೂ ಕೇಳುವವನೂ ಒಂದೇ ಎನ್ನುವ ಶಿಕ್ಷಣ ನೀಡಲಿಲ್ಲ. ಪುಸ್ತಕಗಳಲ್ಲಿಯ ಸಾಹಿತ್ಯ ಕದ್ದವನಿಗೆ ಪಂಡಿತ ಎಂದು ಬಿರುದು ನೀಡಿದರೆ, ವಸ್ತುಗಳನ್ನು ಕದ್ದವನಿಗೆ ಸರಕಾರ ಸಮಾಜ ಕಳ್ಳ ಎಂದು ಶಿಕ್ಷೆ ನೀಡುತ್ತದೆ. ವಸ್ತುಗಳು ತನ್ನವೂ ಅಲ್ಲ ಇತರರವೂ ಅಲ್ಲ ಆ ವಸ್ತು ಕದ್ದವನಿಗೆ ಶಿಕ್ಷೆ ! ಶರಣ ಸಂತರಲ್ಲಿದ್ದ ಜ್ಞಾನ ತನ್ನಲ್ಲಿಯೇ ಇದೆ. ಆದರೂ ಇತರ ಪುಸ್ತಕಗಳಿಂದ ಕದ್ದು ತನ್ನದೆಂದು ಮುದ್ರೆ ಹಾಕಿದವನಿಗೆ ಪುರಸ್ಕಾರ. "ಸತ್ತವರು ಬರೆದ ಪತ್ರ ಓದಿದಡೆ ನಿನಗೆತ್ತಣ ಮುಕ್ತಿ ಗುಹೇಶ್ವರ" ಎಂದು ಶರಣರು ಖಂಡಿಸಿದ್ದಾರೆ. ಜ್ಞಾನವೆನ್ನುವುದು ನಿನ್ನ ವಸ್ತುವಾದರೂ ಅದನ್ನು ಕಳುವು ಮಾಡುವುದೆ ? ಎಂದು ಅಂಗಲಾಚಿ ಒಮ್ಮೆ ಜ್ಞಾನದಿಂದ ಭೂಮಿ, ಹೇಮ, ವಿಷಯ ವಸ್ತುಗಳನ್ನು ನೋಡು ಕಳುವು ತಾನೇ ನಿಲ್ಲುತ್ತದೆ. ಜ್ಞಾನವನ್ನು ಕದಿಯುವ ಕಳುವೂ ನಿಲ್ಲತ್ತದೆ ಎಂದು "ಕಳಬೇಡ" ಎನ್ನುವ ಸೂತ್ರ ದಯಪಾಲಿಸಿದ್ದಾರೆ ಬಸವಣ್ಣ.

■

ಕೊಲ್ಲಬೇಡ

ಹುಟ್ಟು-ಸಾವು ಸಹಜ. ಹುಟ್ಟಿದವನು ಸಾಯಲೇಬೇಕು. ಮರಣ ಸಹಜ ವಾಗಿ ಬರಬಹುದು, ಅಸಹಜವಾಗಿ ಬರಬಹುದು. ಬಸವಣ್ಣನವರು "**ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ, ಮರಣವೇ ಮಹಾನವಮಿ**" ಎನ್ನಬೇಕಾದರೆ ಕೊಲ್ಲಬೇಡ ಎನ್ನುವ ಅವರ ಶಬ್ದದಲ್ಲಿ ವಿಶೇಷ ಅರ್ಥವಿದೆ.

ಶ್ರೀ ಕ್ರಿಷ್ಣನ ನೇತೃತ್ವದ ಮಹಾಭಾರತ ಯುದ್ಧದಲ್ಲಿ ಹದಿನೆಂಟು ಅಕ್ಷೋಹಿಣಿ ಸೈನ್ಯ ಹತವಾಯಿತು. ರಕ್ತದ ಕಾಲುವೆಯೇ ಹರಿಯಿತು. ಅರ್ಜುನನಿಗೆ ಶ್ರೀಕೃಷ್ಣ ಸಾವು ಸಹಜ ಆತ್ಮಕ್ಕೆ ಸಾವಿಲ್ಲ. ಅಂದು ಇಂದು ಎಂದೆಂದೂ ಇದೆ ಎಂದು ಬೋಧಿಸಿದರು.

ಮರ್ಯಾದಾ ಪುರುಷ ಶ್ರೀರಾಮ ವಾಲಿಯನ್ನು, ರಾವಣನನ್ನು ಕೊಂದ.

ಅಂಗುಲಿಮಾಲ ಸಾವಿರಾರು ಜನರನ್ನು ಕೊಂದು ಸತ್ತವರ ಬೆರಳು ಕೊರಳಲ್ಲಿ ಧರಿಸಿದ್ದ. ಬುದ್ಧ ಅಂಗುಲಿಮಾಲನನ್ನು ಸಂದರ್ಶಿಸಿ ಅವನೊಳಗಿರುವ ಬುದ್ಧನೊಂದಿಗೆ ಮಾತನಾಡಿದ. ಅಂಗುಲಿಮಾಲ ಇಲ್ಲವಾದ ಬುದ್ಧ ಪ್ರಕಟವಾದ. ಬುದ್ಧನಿಂದ ಅಂಗುಲಿಮಾಲನಿಗೆ ತನ್ನೊಳಗಿರುವ ಬುದ್ಧ ಪರಿಚಯವಾದ. ಅಂಗದಲ್ಲಿ ಆವರಿಸಿದ್ದ (ಅಜ್ಞಾನ) ಅಂಗುಲಿಮಾಲ ಕೊಲೆಯಾಗಿದ್ದ. ಬುದ್ಧ ಉಳಿದ.

ಕನ್ನಮಾರಿ ಮಾರಯ್ಯ ಆತ ಒಬ್ಬ ಕಳ್ಳ. ಬಿಜ್ಜಳನ ಅರಮನೆ, ಬಸವಣ್ಣನವರ ಮಹಾಮನೆಯಲ್ಲಿ ಕನ್ನ ಹೊಡೆದ. ಬಸವಣ್ಣನವರು ಮಂತ್ರಿಯಾಗಿದ್ದೂ ಮಾರಯ್ಯನಿಗೆ ತಲೆದಂಡ ವಿಧಿಸಲಿಲ್ಲ.

"ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಕೂಡಲಸಂಗಯ್ಯನಲ್ಲದೆ ಬೇರಲ್ಲ. ಕೊಡು ಕೊಡೆಲೆ ಚಾಂಡಾಲಗಿತ್ತಿ ಎನ್ನಯ್ಯನ ಕೈಯ್ಯಿ ನೊಂದಾವು" ಎಂದು ಹೆಂಡತಿಗೆ ಗದರಿಕೊಂಡ ಬಸವಣ್ಣ. ಸತಿ ಗಂಗಮ್ಮನವರು ಮಾರಯ್ಯ ಕಳುವು ಮಾಡುವಾಗ ರೆಡ್ ಹ್ಯಾಂಡ್ ಹಿಡಿದಿದ್ದಳು. ಆದರೂ ಬಸವಣ್ಣನವರು ತನ್ನನ್ನು ಹೆಂಡತಿಯನ್ನೂ ನಿಂದಿಸಿಕೊಂಡು ಮಾರಯ್ಯನನ್ನು ಸಂಗಮನಾಥನಿಗೆ ಹೋಲಿಸಿದರು.

ನಾನು ಕಳ್ಳ, ಮಹಾ ಸತಿ ಗಂಗಮ್ಮ ತಾಯಿಯನ್ನು ನಿಂದಿಸಬೇಡಿ ನನ್ನ ಕೊರಳಲ್ಲಿರುವುದು ಬದನೇಕಾಯಿ ಲಿಂಗವಲ್ಲ, ನನ್ನನ್ನು ಬಂಧಿಸಿ ಎಂದು ಮಾರಯ್ಯ ಅಂಗಲಾಚಿದರೂ, ನೀನು ಕಳ್ಳನಲ್ಲ ; ಚಿನ್ನ ಸಂಗ್ರಹ ಮಾಡಿದ ನನ್ನನ್ನು ಎಚ್ಚರಿಸಲು ಬಂದ ಸಂಗಮನಾಥ ಎಂದು ಮಾರಯ್ಯನ ಪಾದ ಹಿಡಿದರು ಬಸವಣ್ಣ.

ಕನ್ನಮಾರಿ ಮಾರಯ್ಯನ ಅಂಗದಲ್ಲಿ ಶರಣನನ್ನು ಮಾತ್ರ ನೋಡಿದರು ಬಸವಣ್ಣ. ಶರಣನೊಂದಿಗೆ ಮಾತನಾಡಿದರು. ಶರಣನ ಪಾದ ಹಿಡಿದರು. ಕನ್ನಮಾರಿ ಮಾರಯ್ಯ ಕೊಲೆಯಾಗಿದ್ದ. ಮಾರಯ್ಯ ಶರಣ ಉದಯವಾಗಿದ್ದ.

"ದೇಹವೆಲ್ಲ ಒಂದೇ: ಅಂಗನೆಯರ ಆಶ್ರಯಿಸಿ ಭವಕ್ಕೆ ಬೀಜವಾಯಿತ್ತು. ಲಿಂಗವ ಆಶ್ರಯಿಸಿ ಭವಾರಣ್ಯಕ್ಕೆ ದಾವಾನಿಲವೆನಿಸಿತ್ತು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ". ದೇಹವೆಲ್ಲ ಒಂದೇ : ಜ್ಞಾನ ಬಳಸಿ ಶರಣ, ಸಂತ, ಬುದ್ಧ, ಮಹಾವೀರನಾಯಿತು. ಅಜ್ಞಾನ ಬಳಸಿ ಅಂಗುಲಿಮಾಲ, ರಾವಣ, ದುರ್ಯೋಧನನಾಯಿತು.

"ಎಡದ ಕೈಯಲಿ ಕತ್ತಿ, ಬಲದ ಕೈಯಲಿ ಮಾಂಸ, ಬಾಯಲಿ ಸುರೆಯ ಗಡಿಗೆಯಿರಲು ಅವರ ಲಿಂಗನೆಂಬೆ, ಸಂಗನೆಂಬೆ, ಕೂಡಲಸಂಗಮದೇವಾ ಅವರ ಮುಖಲಿಂಗಗಳೆಂಬೆನು"

ದೇಹ ಜ್ಞಾನದ ಆಭರಣ. ಜ್ಞಾನ-ಅಜ್ಞಾನ ದೇಹದ ಮಾಧ್ಯಮ. ಅಜ್ಞಾನ ಪ್ರದರ್ಶನಕ್ಕೆ ದೇಹವನ್ನು ದಂಡಿಸುವುದು ತರವಲ್ಲ. ಜ್ಞಾನದೊಂದಿಗೆ ಮಾತನಾಡಿದರೆ ಅಜ್ಞಾನ ಇಲ್ಲವಾಗುವುದು. ಇದು ಶರಣರ ಶಿಕ್ಷಣ. ಸರ್ವರ ಶಿಕ್ಷಣ. ಮನುಕುಲದ ಶಿಕ್ಷಣ. ಅಳವಡಿಸಿಕೊಳ್ಳಲು ಬರುವುದಿಲ್ಲ, ಎಲ್ಲರ ದೇಹದಲ್ಲಿಯೂ ಇದೆ. ನೋಡಿಕೊಳ್ಳುವ ಚಾಕಚಕ್ಯತೆ ಬೇಕು. ಜಾಣತನ ಬೇಕು. ದೇಹದಲ್ಲಿಯೇ ಜ್ಞಾನ ಇದೆ ಎಂದು ಸೂಚಿಸುವ ಸಾಮರ್ಥ್ಯದ ಗುರುವೂ ಬೇಕು.

"ಎಲವೊ, ಎಲವೋ ಪಾಪಕರ್ಮಂಗಳ ಮಾಡಿದವನೇ, ಎಲವೊ, ಎಲವೋ, ಬ್ರಹ್ಮಹತ್ಯೆವ ಮಾಡಿದವನೇ ಒಮ್ಮೆ ಶರಣೆನ್ನೆಲವೋ ! ಒಮ್ಮೆ ಶರಣೆಂದರೆ ಪಾಪಕರ್ಮ ಓಡುವವು. ಸರ್ವಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದುವವು; ಒಬ್ಬಗೆ ಶರಣೆನ್ನು, ನಮ್ಮ ಕೂಡಲಸಂಗಮದೇವಂಗೆ !"

ದೇಹದಲ್ಲಿ ಬ್ರಹ್ಮವೂ ಇದೆ ಭ್ರಮೆಯೂ ಇದೆ. ಭ್ರಮೆಯ ಸುಖ ಇನಸ್ಟೆಂಟ್ ಸುಖ. ಈ ಸುಖ ಬಾಲ್ಯದಿಂದ ಸಾಯುವವರೆಗೂ ನರಕದಂತೆ ಬಾಧಿಸುತ್ತದೆ. ಭ್ರಮೆಯಲ್ಲಿ ಲೀನವಾದ ದೇಹಕ್ಕೆ ಬ್ರಹ್ಮನ ಪರಿಚಯವೇ ಆಗುವುದಿಲ್ಲ, ಎಷ್ಟೋ ದೇಹಗಳು ಬ್ರಹ್ಮ ಹತ್ಯೆ (ಜ್ಞಾನ)ಗೈದು ಪಾಪಕರ್ಮಗಳಿಗೆ ಗುರಿಯಾಗುತ್ತವೆ. ತನ್ನೊಳಗಿನ ಜ್ಞಾನ ಬಳಕೆ ಮಾಡಿಕೊಳ್ಳದೆ ಕೊಲೆ ಮಾಡುವುದು ಅದು ಬ್ರಹ್ಮ ಹತ್ಯೆ. ಒಮ್ಮೆ ಜ್ಞಾನಕ್ಕೆ ಶರಣೆನ್ನು ತಿಳಿಯದೆ ಅದನ್ನು ಬಳಸದೆ ಜ್ಞಾನವನ್ನೇ ಕೊಲೆ ಮಾಡಬೇಡ. ಸರ್ವಾಂಗದಲ್ಲಿಯೂ ಭರಿತವಾದ ಜ್ಞಾನ ಅಂಗ ಇರುವಾಗಲೇ ತಿಳಿಯಬೇಕು. ದೇಹಕ್ಕೆ ಸಾವು ನಿಶ್ಚಿತ. ಸಾಯುವ ಮುನ್ನ "ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ ಚೆಲುವ" ಜ್ಞಾನಿಯನ್ನು ಕೊಲ್ಲಬೇಡ ಅದು ಬ್ರಹ್ಮಹತ್ಯೆ, ಶ್ರೀಗುರುವಿನಕೊಲೆ ಸಂಗಮನಾಥನ ಕೊಲೆ ಎಂದಿದ್ದಾರೆ ಬಸವಣ್ಣನವರು.

■

ಹುಸಿಯ ನುಡಿಯಲು ಬೇಡ

ಸತ್ಯವ ನುಡಿವುದೇ ಸ್ವರ್ಗಲೋಕ ಮಿಥ್ಯವ ನುಡಿವುದೇ ಮರ್ತ್ಯಲೋಕ. ದೇಹ ಸ್ವರ್ಗದ ಮನೆ. ಇಲ್ಲಿ ಸತ್ಯದ ಹೊರತು ಮತ್ತೊಂದಿಲ್ಲ. ಸತ್ಯ ಸಹಜ. ಹುಸಿ ಅಸಹಜ. ದೇಹದಲ್ಲಿ ಸತ್ಯ ಸಹಜವಾಗಿದೆ. ಮನ ದೇಹವನ್ನು ಆವರಿಸಿಕೊಂಡಿದೆ. ಮನಕ್ಕೆ ಹುಸಿಯ ಹಸಿರು ಹಿತವಾದದ್ದು, ಸುಖ ಕರವಾದದ್ದು. ಸುಖಿಸುವುದಕ್ಕಾಗಿ ಮನ ಹುಸಿ ನುಡಿದಾಗ ತನುವಿನಲ್ಲಿರುವ ಸಹಜವಾದ ಸತ್ಯ ರೆಡ್‌ಲೈಟ್ ತೋರಿಸುತ್ತದೆ. ಹುಸಿ ನುಡಿಗೆ ಕಡಿವಾಣ ಹಾಕುತ್ತದೆ. ಮತ್ತೊಮ್ಮೆ ನುಡಿಯದಿರಲು ಮೈದಡುವುತ್ತದೆ. ಹುಸಿ ನುಡಿಯುವುದು ಮನ ತನ್ನ ಸುಖಕ್ಕಾಗಿ. ತಾನು ಆವರಿಸಿಕೊಂಡ ತನುವಿನೊಂದಿಗೆ ಹುಸಿ ನುಡಿದು ಸುಖಿಸುತ್ತದೆ. ಸತ್ಯದ ಪಾಠ ಸುಳ್ಳಿಗೆ ಅರಿವಾಗುವುದಿಲ್ಲ. ಸುಳ್ಳಿಗೆ ಬಾಧೆಯೂ ಇಲ್ಲ. ಸುಳ್ಳನ್ನು ಯಾರೂ ಗುರುತಿಸುವುದಿಲ್ಲ. ಸುಳ್ಳಿನಿಂದ ತನುವಿಗೆ ಕ್ಷಣಿಕ ಸುಖವಾದರೂ ಶಾಶ್ವತ ಹಿಂಸೆಯಾಗುತ್ತದೆ. ತನುವಿನ ಸಹಜ ಗುಣ ಸತ್ಯ. ಸತ್ಯವೆಂಬ ಸಹಜನು ತನುವಿನ ತುಂಬಾ ತನ್ಮಯನಾಗಿದ್ದಾನೆ.

ಮನ ತನ್ನ ಸುಖಕ್ಕಾಗಿ ಆಡುವ ಹುಸಿ ಯ ನಾಟಕಗಳೆಲ್ಲ ತನುವಿನ ಸಹಜನಲ್ಲಿ ಸಂಗ್ರಹವಾಗುತ್ತವೆ. ಹುಸಿ ನುಡಿದಾಗೊಮ್ಮೆ ಸಹಜನ ಸತ್ಯದ ನುಡಿ ಕುಕ್ಕುತ್ತದೆ. ತನುವಿನ ಶಿಕ್ಷಣ ಬಲ್ಲಾತ ಈ ಸಹಜನ ನುಡಿ ಆಲಿಸಿ ಸಹಜನಾಗುತ್ತಾನೆ. "*ಎನ್ನ ತಪ್ಪು ಅನಂತ ಕೋಟಿ ನಿಮ್ಮ ಸೈರಣೆಗೆ ಲೆಕ್ಕವಿಲ್ಲ*" ಎಂದು ಬಸವಣ್ಣನವರು ತನುವಿನ ಸಹಜನ ಕುರಿತು ಹಾಡಿದ್ದಾರೆ. ಸಹಜ: ಆತ ಮನೆಯೊಡೆಯ. "*ಮನೆಯೊಳಗೆ ಮನೆಯೊಡೆಯ ನಿದ್ದಾನೊ ಇಲ್ಲವೊ ? ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ, ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲ ಸಂಗಮದೇವಾ*"

ಹುಸಿಯ ಸುಖವೇ ಅಧಿಕವಾಗಿ ಮನೆಯೊಡೆಯನ ಮಾತು ಕೇಳದಾದಾಗ ತನುವು ಹುಸಿಯ ವಶವಾಗಿ ಮಾನಸಿಕ ವ್ಯಾಕುಲತೆಯಿಂದ ಹುಚ್ಚು ಆವರಿಸಿಕೊಳ್ಳುತ್ತದೆ. ಮನೋ ವೈದ್ಯರು ಮನಸ್ಸಿಗೆ ಚಿಕಿತ್ಸೆ ನೀಡಬಲ್ಲರೆ ಹೊರತು ಮನದೊಡೆಯನ ಪರಿಚಯವಿರುವುದಿಲ್ಲ. ಜ್ಞಾನಿಗಳು ಸಹಜನ ಪರಿಚಯ ಉಳ್ಳವರು, ಸಹಜರು.

ಸಹಜ : "*ಸತ್ತು ಹುಟ್ಟುವನಲ್ಲ, ಸಂದೇಹಿ ಸೂತಕಿಯಲ್ಲ ಆಕಾರ ನಿರಾಕಾರ ನೋಡಯ್ಯ ! ಕಾಯವಂಚಕನಲ್ಲ, ಜೀವ ವಂಚಕನಲ್ಲ, ನಿರಂತರ ಸಹಜ ನೋಡಯ್ಯ ! ಶಂಕೆಯಿಲ್ಲದ ಮಹಾ ಮಹಿಮನು ನೋಡಯ್ಯ, ಕೂಡಲಸಂಗನ ಶರಣನು ಉಪಮಾತೀತ ನೋಡಯ್ಯ*" ಎಂದು ಮನೆಯೊಡೆಯನ ಪರಿಚಯ ಮಾಡಿದ್ದಾರೆ ಬಸವಣ್ಣ.

ಹುಸಿ ತನುವನ್ನು ಕಾಡುವ ವಿಷ. "ಹುಸಿ ಎಂಟೆಲೆಯಾಯಿತ್ತು ವ್ಯವಹಾರಿ

ಯಲ್ಲಿ, ಹುಸಿ ಸಸಿಯಾಗಿತ್ತು ಹಾದರಿಗನಲ್ಲಿ, ಹುಸಿ ಗಿಡವಾಯಿತ್ತು ಮದ್ಯ ಪಾನಿಯಲ್ಲಿ, ಹುಸಿ ಮರನಾಯಿತ್ತು ಜೂಜುಗಾರನಲ್ಲಿ, ಹುಸಿ ಹೂವಾಯಿತ್ತು ಡೊಂಬನಲ್ಲಿ, ಕಾಯಾಗಿತ್ತು ಅಕ್ಕ ಸಾಲಿಗನಲ್ಲಿ ಹಣ್ಣಾಯಿತ್ತು ಸೂಳೆಯಲ್ಲಿ, ಹಣ್ಣಾಗಿ ತೊಟ್ಟು ಬಿಟ್ಟಿತ್ತು ಅರಸನಲ್ಲಿ ಇಂತೀ ಹುಸಿಯ ನುಡಿವವರಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕ ಪ್ರಸಾದ ವಿಲ್ಲವಾಗಿ, ಅವರಿಗೆ ಮೋಕ್ಷವಿಲ್ಲಾದ ಕಾರಣ, ನಮ್ಮ ಕೂಡಲ ಚೆನ್ನ ಸಂಗಯ್ಯನ ಶರಣರು ಹುಸಿಯ ಬಿಟ್ಟು ನಿಜ ಲಿಂಗೈಕ್ಯರಾದರು'' ಎಂದು ಮಹಾಜ್ಞಾನಿ ಚೆನ್ನಬಸವಣ್ಣ ನವರು ಹುಸಿ ತುಂಬಿದ ತನುವಿನ ಬಗ್ಗೆ ವಿವರಿಸಿದ್ದಾರೆ.

ಹುಸಿ ತುಂಬಿದ ತನುವಿನ ಕಿವಿ ಜ್ಞಾನ ಕೇಳುವುದಿಲ್ಲ, ಕಣ್ಣು ಜ್ಞಾನಿಗಳನ್ನು ನೋಡುವುದಿಲ್ಲ, ಹುಸಿಯ ಸುಖದಲ್ಲಿ ನಿರತವಾದ ತನುವು ಜ್ಞಾನದ ನುಡಿ ಕೇಳಿದರೆ ಕಿವಿಯಲ್ಲಿ ಕಾದ ಸೀಸ ಹೊಯ್ದಂತೆ ಭಾಸವಾಗುತ್ತದೆ.

''ಸಟೆಯ ಬಳಸಿದೊಡೆ ಆತನು ತ್ರಿವಿಧಕ್ಕೆ ದ್ರೋಹಿ, ಅಘೋರ ನರಕಿ, ಉಂಬುವುದೆಲ್ಲ ಕಿಲ್ಬಿಷ, ತಿಂಬುದೆಲ್ಲ ಅಡಗು, ಕುಡಿವುದೆಲ್ಲ ಸುರೆ. ಹುಸಿ ಎಂಬುದೇ ಹೊಲೆ. ಶಿವಭಕ್ತರಿಗೆ ಹುಸಿ ಎಂಬುದುಂಟೆ ಅಯ್ಯ? ಹುಸಿಯನಾಡಿ ಲಿಂಗವ ಪೂಜಿಸಿದೊಡೆ ಹೊಳ್ಳ ಬಿತ್ತಿ ಫಲವನರಸುವಂತೆ ಕಾಣಾ ಚೆನ್ನಮಲ್ಲಿಕಾರ್ಜುನಾ'' ಎಂದಿದ್ದಾರೆ ಅಕ್ಕ ಮಹಾದೇವಿ. ಹುಸಿಯನಾಡಿ ಜ್ಞಾನ(ಲಿಂಗ)ದೆಡೆಗೆ ಹೋಗಲು ಬರುವುದಿಲ್ಲ, ಜ್ಞಾನಿ ಸಟೆ-ದಿಟವೆರಡನ್ನೂ ಸಹಜದಿಂದಲೇ ನೋಡುವನು. ಸಹಜನಿಂದಲೇ ತನುವು. ಆ ಸಹಜನಿಂದಲೇ ಸಟೆ-ದಿಟ. ಸಹಜನಿಗೆ ಹುಟ್ಟು ಸಾವುಗಳಿಲ್ಲ, ಹುಸಿಯ ನುಡಿದರೆ ನುಡಿಗೆಟ್ಟ ನುಡಿಯ ನುಡಿದವನ ಪರಿಚಯವಾಗುವುದಿಲ್ಲ, ಸಹಜನ ಪರಿಚಯವಾಗುವುದಿಲ್ಲ, ಹುಸಿ ಸುಖವಲ್ಲ, ಸುಖದ ಸುಖ ಸಹಜತೆ. ಆ ಸಹಜತೆ ಪಡೆದು ಸಹಜ ನೀನಾಗಲು ಹುಸಿಯ ನುಡಿಯಲು ಬೇಡ ಎಂದಿದ್ದಾರೆ ಬಸವಣ್ಣ.

■

ಮುನಿಯಬೇಡ

"ಅಂಗವೆಂದರೆ ಅಜ್ಞಾನ,ಲಿಂಗವೆಂದರೆ ಸುಜ್ಞಾನ. ಲಿಂಗವಿಡಿದು ಆಚರಿಸುವುವಲ್ಲದೆ ಅಂಗವಿಡಿದು ಆಚರಿಸಬಾರದು. ಕಪಿಲಸಿದ್ಧ ಮಲ್ಲಿಕಾರ್ಜುನಾ"

ಸಿಟ್ಟು ಬರುವುದು ಅಂಗನೋಡಿ, ಅಂಗದ ಶಬ್ದ ಕೇಳಿ. ಅಂಗದಲ್ಲಿ ಅಜ್ಞಾನವೂ ಇದೆ. ಜ್ಞಾನವೂ ಇದೆ. ಜ್ಞಾನದಿಂದ ಅಂಗ ನೋಡಿದರೆ ಅದು ತನ್ನಂತೆ ಇರುವ ಅಂಗ ! ಅಂಗ ಚರ್ಮ ರಕ್ತ ಮೂಳೆ ಮಾಂಸ ಮಜ್ಜಾ ಮೇಧಸ್ಸಿನಿಂದ ಕೂಡಿದೆ. ಅಜ್ಞಾನದಿಂದ ಅಂಗಕ್ಕೆ ಗಂಡು ಹೆಣ್ಣೆನ್ನುವ ಹೆಸರು ಇಡಲಾಗಿದೆ. ಹೆಣ್ಣೆನ್ನುವ ಅಂಗ, ಗಂಡೆನ್ನುವ ಅಂಗದಲ್ಲಿ ಕೇಳುವ ಕಿವಿ, ಸ್ಪರ್ಶಿಸುವ ಚರ್ಮ, ರುಚಿಸುವ ನಾಲಿಗೆ, ವಾಸಿಸುವ ಮೂಗಿನಲ್ಲಿ ಭೇದವಿಲ್ಲ.

ನೋಡುವ ಕಣ್ಣಿನಲ್ಲಿ ಜ್ಞಾನವೂ ಇದೆ. ಅಜ್ಞಾನವೂ ಇದೆ. ಚರ್ಮ, ರೂಪ, ರೂಪಕ್ಕಿಟ್ಟಿರುವ ಹೆಸರು ನೋಡಿ ಕ್ರೋಧ, ಸಿಟ್ಟು ನೆನಪುಗಳು ಮರುಕಳಿಸಿ ಕೆಂಡಾಮಂಡಲವಾಗುತ್ತಾನೆ.

ಸಿಟ್ಟು ಮೊದಲು ತನ್ನನ್ನು ಕುದಿಯುವಂತೆ ಮಾಡುತ್ತದೆ. ನಂತರ ತನ್ನ ಕೋಪದ ಕಣ್ಣಿಗೆ ಗುರಿಯಾದ ಅಂಗವನ್ನು ಕುದಿಯುವಂತೆ ಮಾಡುತ್ತದೆ. ಕೋಪಗೊಂಡ ಅಂಗ, ಕೋಪಕ್ಕೆ ಗುರಿಯಾದ ಅಂಗ ಎರಡೂ ಕುದಿಯುತ್ತವೆ.

ಸುಣ್ಣದ ಕಲ್ಲು ಮಡಕೆಯಲ್ಲಿ ಹಾಕಿ ನೀರು ಬೆರೆಸಿದಂತೆ , ನೀರು ಬೆರಸದಿದ್ದರೆ ಕಲ್ಲು-ನೀರು ಕುದಿಯುವುದಿಲ್ಲ. ಸುಣ್ಣದ ಕಲ್ಲು ಕಲ್ಲಾಗಿಯೇ ಉಳಿಯುತ್ತದೆ. ನೀರು ನೀರಾಗಿಯೇ ಉಳಿಯುತ್ತದೆ.

ಅಂಗವೂ ಮಡಕೆಯೇ. ಅಂಗಕ್ಕೆ ಶಬ್ಧ ತಾಕಿದರೆ ಕತಕತನೆ ಕುದಿಯುತ್ತದೆ. ಶಬ್ಧವನ್ನು ಕಿವಿ ಜ್ಞಾನದಿಂದ ಕೇಳಿ ಅಂಗಕ್ಕೆ ರವಾನಿಸಲಿಲ್ಲ. ಕಿವಿಯಲ್ಲಿ ಜ್ಞಾನವಿಲ್ಲ. ಕಿವಿಯ ಕಿವಿಯಲ್ಲಿ ಜ್ಞಾನವಿದೆ. ಕಿವಿ ಅದು ಹೊರ ಕಿವಿ. ಕಿವಿಯ ಕಿವಿ ಅದು ಒಳಕಿವಿ. ಒಳಕಿವಿಗೆ ಶಬ್ಧಗಳೆಲ್ಲ ಜ್ಞಾನವೇ. ಸರ್ವ ಶಬ್ಧಗಳೂ ಜ್ಞಾನದಿಂದಲೇ ತುಂಬಿವೆ. ಶಬ್ಧ ಬ್ರಹ್ಮ. ಶಬ್ಧವನ್ನು ಜ್ಞಾನದಿಂದ ಕೇಳುವವನೇ ಬ್ರಹ್ಮ. ಜ್ಞಾನಿಗೆ ಶಬ್ಧದಿಂದ ಸುಖ-ದುಃಖಗಳಿಲ್ಲ. ಶಬ್ಧ ಕೇಳಿ ಅರಳುವುದಿಲ್ಲ. ಕೆರಳುವುದಿಲ್ಲ. ಮಕ್ಕಳ ಮಾತು ಹಿರಿಯರು ಕೇಳಿದಂತೆ ಅವು ಹೇಗೆ ಇರಲಿ ಹಸನ್ಮುಖಿಗಳಾಗುತ್ತಾರೆ.

"ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯಾ? ತನಗಾದ ಆಗೇನು? ಅವರಿಗಾದ ಚೇಗೇನು? ತನುವಿನ ಕೋಪ ತನ್ನ ಹಿರಿತನದ ಕೇಡು ! ಮನದ ಕೋಪ ತನ್ನ ಅರಿವಿನ ಕೇಡು ! ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆ ಮನೆಯ ಸುಡುವುದೆ ಕೂಡಲಸಂಗಮದೇವಾ !"

ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯಾ? ಇದು ಹಿರಿತನದ ಮಾತು. ಶರಣರ ಮಾತು. ಬ್ರಹ್ಮಜ್ಞಾನಿಯ ಮಾತು. ತನ್ನ ಅಂತರಾಳದಲ್ಲಿರುವ ಮಾತು. ಇದು ಶರಣರ ಶಿಕ್ಷಣ ! ಕಲಿತರೆ ಸರ್ವರ ತೋಳ್ತೆಕ್ಕೆಗೆ ಬರುವ ಶಿಕ್ಷಣ ! ಮಾತಿನಿಂದ ತನಗಾದ ಲಾಭವೇನು? ಅವರಿಗಾದ ನಷ್ಟವೇನು? ತನುವಿನ ಕೋಪ ಹಿರಿತನದ ಕೇಡು : ಮನದ ಕೋಪ ತನ್ನ ಅರಿವಿನ ಕೇಡು : ಮಾತು ಮನ ಸ್ವೀಕರಿಸಿದರೆ ಕೋಪ. ಅರಿವು, ಸ್ವೀಕರಿಸಿದರೆ ನಪುಂಸಕ.''*ಶಬ್ಧ ನೋಡಿದರೆ ನಪುಂಸಕ, ಹರಿ ಹರ ಬ್ರಹ್ಮಾದಿಗಳನ್ನು ಮುರಿದು ಕಟ್ಟಿತ್ತು* '' ಎನ್ನುತ್ತಾರೆ ಶರಣರು. ಮುನಿಯುವುದು ತನುವಿನ ಹಿರಿತನದ ಕೇಡು. ಅರಿವಿನ ಕೇಡು. ತನುವಿನ ಕೋಪ ತನುವನ್ನೇ ಸುಡುವುದು. ಮುನಿಯಬೇಡ ಮುನಿದು ತನುವನ್ನು ಸುಡಬೇಡವೆಂದು ಮನಕ್ಕೆ ಬುದ್ಧಿವಾದ ಹೇಳಿದ್ದಾರೆ ಬಸವಣ್ಣ.

■

ಅನ್ಯರಿಗೆ ಅಸಹ್ಯ ಪಡಬೇಡ

ಅನ್ಯರಿಗೆ ಅಸಹ್ಯಪಡಬೇಡ ಇದು ಬಸವಣ್ಣನವರ ಸೂತ್ರದ ಮಾತು. ಈ ಮಾತನ್ನು ಅಳವಡಿಸಿಕೊಂಡರೆ ನಿಲ್ಲುವುದಿಲ್ಲ. ಅಸಹ್ಯಪಡಬಾರದೆಂದು ಪ್ರಯಾಸ ಪಟ್ಟರೂ ತನುವಿನಿಂದ ಇಣಿಕಿ ಹಾಕುತ್ತದೆ. ಧ್ವನಿ,ಕಣ್ಣು ಮುಖ ಮೂಗು ಅಸಹ್ಯ ಬಚ್ಚಿಟ್ಟುಕೊಳ್ಳುವುದಿಲ್ಲ.

ತನುವು ಶಬ್ದ ಕೇಳಿ ಅಸಹ್ಯ ಪಡುತ್ತದೆ. ಮೂಗಿನಿಂದ ವಾಸಿಸಿ ಅಸಹ್ಯ ಪಡುತ್ತದೆ. ಕಣ್ಣಿನಿಂದ ನೋಡಿ ಅಸಹ್ಯಪಡುತ್ತದೆ. ಚರ್ಮದಿಂದ ಸ್ಪರ್ಶಿಸಿ ಅಸಹ್ಯ ಪಡುತ್ತದೆ. ನಾಲಿಗೆಯಿಂದ ರುಚಿಸಿ ಅಸಹ್ಯಪಡುತ್ತದೆ. ಇವೆಲ್ಲವು ಗಳನ್ನು ಭಾವಿಸಿ ಅಸಹ್ಯ ಪಡುತ್ತದೆ. ತನುವು ತನ್ನ ಇಂದ್ರಿಯಗಳಿಗಾದ ಅಸಹ್ಯವನ್ನು ತನುವಿನಲ್ಲಿ ಸ್ಟೋರ್ ಮಾಡಿಕೊಂಡು ತನಗೆ ಬೇಕಾದಾಗೆಲ್ಲಾ ನೆನಪು ಮಾಡಿಕೊಂಡು ತನುವಿರುವವರಿಗೆ ಅಸಹ್ಯ ಪಡುತ್ತದೆ.

ಅರುಸ್ವರೂಪದ ಚೇತನ ತನುವನ್ನು, ಮನ ಆವರಿಸಿ ತನ್ನಂತೆ ಮಾಡಿಕೊಂಡಿದೆ. ವೇದಿಕೆಯ ಮಾತಗಳನ್ನು ಪುಸ್ತಕದ ಮಾತುಗಳನ್ನು ಮನ ಸಂಗ್ರಹಿಸಿ ತನುವಿನ ಮೂಲಕ ಪಾಂಡಿತ್ಯ ಪ್ರದರ್ಶಿಸುತ್ತದೆ. ಜೊತೆಗೆ ಅಸಹ್ಯವನ್ನೂ ಇನ್ನುಳಿದ ನೀಚಬುದ್ಧಿಯನ್ನು ಪ್ರದರ್ಶಿ ಸುತ್ತದೆ. ಒಂದಕ್ಕೊಂದು ಸಂಬಂಧವಿಲ್ಲ. ಅದಕ್ಕಾಗಿಯೇ ದಾಸರು 'ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ' ಎಂದು ಹಾಡಿದರು. ಎಷ್ಟೇ ಹೇಳಲಿ ಮನ ಒಡೆದ ಮಡಕೆಯಿದ್ದಂತೆ.

"ಒಡೆದ ಮಡಕೆಗೆ ಒತ್ತು ಮಣ್ಣು ನಿಲ್ಲಬಲ್ಲುದೆ ಅಯ್ಯಾ" ಪುಸ್ತಕ ಓದಿ ಕೇಳಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡುತ್ತೇವೆ. ಮಾತು ಆಡುವುದಕ್ಕೆ ಕೇಳುವುದಕ್ಕೆ ಸುಂದರ. ಅಳವಡಿಸಿಕೊಳ್ಳುವುದು ಕಠಿಣ. ಪ್ರಯೋಗಿಸಿಕೊಳ್ಳುವ ಸೂತ್ರಗಳೆಲ್ಲ ಮಾತಿಗೆ ಬಳಕೆಯಾಗಿವೆ. ಮಡಕೆ ಮಣ್ಣಿನಲ್ಲೇ ಹುಟ್ಟಿದೆ. ಮಣ್ಣಿನ ಜಿಗಿಯಿಂದ ಜನ್ಮತಾಳಿದೆ. ಒಡೆಯಲ್ಪಟ್ಟಾಗ ಅಥವಾ ಜಿಗಿಬಿಟ್ಟು ಒಡೆದಾಗ ಮತ್ತೆ ಹೊರಮಣ್ಣಿನಿಂದ ಜೀವಪಡೆಯಲಾರದು. ಏಕೆಂದರೆ ಮಣ್ಣಿನ ಎಲ್ಲ ಅಂಶ ಒಳಗೊಂಡು ತನುವಿನ ಜನ್ಮವಾಗಿದೆ. ತನುವಿನಿಂದ ಅರಿವಿನ ಅಂಶ ಪುಸ್ತಕಕ್ಕೆ ಬಂದಿದೆ. ಪುಸ್ತಕದ ಮಾತು ತನುವಿಗೆ ಹೊಂದುವುದಿಲ್ಲ. ಏನಿದ್ದರೂ ಅದು ನುಡಿಯಲು ಮಾತ್ರ. ಆಚರಣೆಗೆ ಅಲ್ಲ. ಆಚರಣೆಗೆ ಬೇಕಾದ ಅರಿವೆಲ್ಲ ತನುವಿನಲ್ಲಿಯೇ ಇದೆ. ಅದಕ್ಕಾಗಿಯೇ ತನುವು ತಾನು ಅಳವಡಿಸಿಕೊಂಡ ಖಾದಿ,ಖಾಕಿ, ಕಾವಿ,ಕಪ್ಪು ವಸ್ತ್ರದ ನಿಯಮಗಳನ್ನೆಲ್ಲ ಮುರಿಯುತ್ತದೆ. ಈ ವಸ್ತ್ರ ಧರಿಸಿದವರೂ ಪಾಲಿಸುವುದಿಲ್ಲ. ಈ ವಸ್ತ್ರ ಧರಿಸಿ ಆಡುವ ಮಾತುಗಳನ್ನು ಕೇಳುವವರೂ ಪಾಲಿಸುವುದಿಲ್ಲ. ಒಡೆದ ಮಡಕೆಗಳು !

ಕಾವಿ ಹೊದ್ದ ತನುವು ವೇದಿಕೆಯ ಮೇಲೆ ಜಾತಿ ಮತ ಪಂಥ ಕಳೆಯುವ ಮಾತನಾಡುತ್ತದೆ. ಕೇಳಿದ ತನುವುಗಳು ಆಶೀರ್ವಾದ ಪಡೆಯಲು ಹೋದಾಗ ಜಾತಿ ಕೇಳಿ ಅಸಹ್ಯಪಟ್ಟುಕೊಳ್ಳುತ್ತದೆ. ನಿಂದಿಸುತ್ತದೆ. ಮಾತಿಗೂ ಕೃತಿಗೂ ಸಂಬಂಧವೇ ಇಲ್ಲ. ತನುವಿನಲ್ಲಿ ಇದ್ದ ಅರಿವು, ಆಡಿದ ಮಾತನ್ನು, ನಡೆದು ಕೊಂಡ ರೀತಿಯನ್ನು ಖಂಡಿಸಿ ತನ್ನ ಅರು ಸ್ವರೂಪ ಮೆರೆಯುತ್ತದೆ. ತನುವಿನ ಮನಕ್ಕೆ ಅಸಹ್ಯ. ತನುವಿನ ತನುವಾದ ಅರು ಸ್ವರೂಪಕ್ಕೆ ಎಲ್ಲವೂ ಸಹ್ಯ. ಅಸಹ್ಯವೇ ಇಲ್ಲ, ಕಾಣುವುದೆಲ್ಲವೂ ತನ್ನ ಸ್ವರೂಪವೇ.

ಮಗು ಮಲವಿಸರ್ಜನೆ ಮಾಡಿದಾಗ ತಾಯಿ ಅಸಹ್ಯ ಪಡುವುದಿಲ್ಲ. ಮಗ ದೊಡ್ಡವನಾಗಿ ಮಲ ವಿಸರ್ಜಿಸಿದರೆ ತಾಯಿ ಅಸಹ್ಯಪಡುತ್ತಾಳೆ. ತಾಯಿಗೆ ಮನ ಮಗುವಿನ ಮಲ, ಮಗನ ಮಲವಾಗಿ ತೋರಿತು. ಅನ್ಯರಿಗೆ ಮಲವಾಗಿ ತೋರಿತು. ಅರು ಸ್ವರೂಪದ ಜ್ಞಾನಿ, ಎಲೆಯಲ್ಲಿಟ್ಟ ಭೋಜನ ಜೀರ್ಣವಾಗಿ ಮಲ ಅನ್ಯಜೀವಿಗಳಿಗೆ ಮೃಷ್ಟಾನ್ನವಾದುದನ್ನು ನೋಡಿ ಆನಂದ ಪಟ್ಟ. ಅಸಹ್ಯಪಡಲಿಲ್ಲ. ತಾನು ಉಣ್ಣುವಾಗ ಕಣ್ಣಿನಲ್ಲಿ, ಮೂಗಿನಲ್ಲಿ, ನಾಲಿಗೆಯಲ್ಲಿ ಮುಖದಲ್ಲಿ ಉಂಟಾದ ಆನಂದ ಮಲತಿನ್ನುವ ಜೀವಿಗಳಲ್ಲಿಯೂ ಕಂಡು ಸಂತೋಷ ವಾಯಿತು. ಎಲೆ ಹಾಕಿದಾಗ ಆಹಾರಕ್ಕಾಗಿ ತಾನು ಕಾಯುವಂತೆ ಮಲವಿಸರ್ಜಿಸುವಾಗ ಹಂದಿ ನಾಯಿ ಕೂಡಾ ಕುತೂಹಲದಿಂದ ತನ್ನಂತೆ ಕಾಯುವುದನ್ನು ನೋಡಿದ.

ಅರಿವಿನಿಂದ ನೋಡಿದರೆ, ಕೇಳಿದರೆ, ಸ್ಪರ್ಶಿಸಿದರೆ,ರುಚಿಸಿದರೆ,ವಾಸಿಸಿದರೆ ಅಸಹ್ಯ ಪಡುವುದಿಲ್ಲ. ಎಲ್ಲವೂ ಸಹ್ಯವೇ. ಆದರೆ ಅರಿವು ತನುವಿನಲ್ಲಿ ಮರೆಯಾಗಿದೆ. *"ಕಂಡಿಹರೆಂದು ಕಣ್ಗೆ ಮರೆಮಾಡಿದ. ಕೇಳಿಹರೆಂದು ಕಿವಿಗೆ ಮರೆಮಾಡಿದ. ಮುಟ್ಟಿಹರೆಂದು ಕೈಗೆ ಮರೆಮಾಡಿದ. ಸೋಂಕಿಹರೆಂದು ತನುವಿಂಗೆ ಮರೆಮಾಡಿದ. ನೆನೆದಿಹರೆಂದು ಮನಕ್ಕೆ ಮರೆಮಾಡಿದ. ಅರಿದಿಹರೆಂದು ಅಂತರಂಗದಲ್ಲಿ ಮರೆಮಾಡಿದ. ಪೂಜಿಸಿಹರೆಂದು ಕ್ರೀಗೆ ಮರೆಮಾಡಿದ. ಕೂಡಲಸಂಗಮದೇವರೊಡನೆ ಅಹಂಕಾರ ಮಾಡಿ ಕೆಟ್ಟಕೇಡನೇನೆಂದುಪಮಿಸುವೆನು?"*

ಸರ್ವಾಂಗದಲ್ಲಿ ಮರೆಯಾದ ಅರಿವನ್ನೇ ಸಂಗಮನಾಥನನ್ನಾಗಿ ಮಾಡಿ ಹಾಡಿದ್ದಾರೆ ಬಸವಣ್ಣ. ತಾನು ಸಂಗಯ್ಯನೇ ! ಇತರ ತನುಗಳೂ ಸಂಗಮ ನಾಥರೇ ಯಾರಿಗೆ ಅಹಂಕಾರ ಮಾಡುವುದು? ಯಾರ ಮೇಲೆ ಅಸಹ್ಯ ಪಡುವುದು? ಅಜ್ಞಾನಕ್ಕೆ ವಶವಾದ ತನ್ನ ತನುವಿನ ಮನದ ಮೇಲೆ ಅಸಹ್ಯಪಡಬೇಕು ಎನ್ನುತ್ತಾರೆ ಬಸವಣ್ಣ.

ತನ್ನ ಬಣ್ಣಿಸಬೇಡ

ಮಾಡಬೇಕೆನ್ನುವ ತವಕ, ಮಾಡಿದ ಮೇಲೆ ಪ್ರಚಾರ ಪಡೆಯಬೇಕೆನ್ನುವ ತವಕ. ಮಾಡಿದ ಕೆಲಸ ಗೆಳೆಯರಿಗೆ ಹೇಳುವುದು, ಸಂಬಂಧಿಕರಿಗೆ ಹೇಳುವುದು, ಸನ್ಮಾನ ಮಾಡಿಸಿಕೊಳ್ಳುವುದು. ಬಣ್ಣನೆಗಾಗಿ ಮಾಡುವ ಕೆಲಸ ನೋಡುವ ಕಣ್ಣುಗಳಿಗೂ ಕೇಳುವ ಕಿವಿಗಳಿಗೂ ವಾಕರಿಕೆ ಬರುವಷ್ಟು ಆಯುಷ್ಯ ಪರ್ಯಂತ ನಡೆಯುತ್ತದೆ.

ಇದು ತನಗರಿಯದ ರೋಗ ! ಮಾಡುವುದೊಂದು ರೋಗ. ಮಾಡಿದೆನೆಂದು ಪಟ್ಟಿ ಮಾಡಿ ಸಾಯುವ ಪರ್ಯಂತ ಬಣ್ಣಿಸಿಕೊಳ್ಳುವುದೊಂದು ಮಹಾ ರೋಗ ! *"ಬಲಿಯ ಭೂಮಿ, ಕರ್ಣನ ಕವಚ, ಖಚರನ ಅಸ್ಥಿ, ಶಿಬಿಯ ಮಾಂಸ ವೃಥಾ ಹೋಯಿತ್ತಲ್ಲಾ. ಕೂಡಲಸಂಗನ ಶರಣನರಿಯದೆ ಕೀರ್ತಿವಾರ್ತೆಗೆ ಮಾಡಿದವನ ಧನವು ವೃಥಾ ಹೋಯಿತ್ತಲ್ಲಾ"*

ಶರಣರ ಶಿಕ್ಷಣ ಬೇಗುದಿಯಿಲ್ಲದ ಶಿಕ್ಷಣ. ಸಹಜ ಶಿಕ್ಷಣ. ಮರದಂತೆ ಸುಂದರವಾಗಿ ಸಹಜವಾಗಿ ಸದಾ ತನ್ನರಿವಿನಲ್ಲಿರುವ ಶಿಕ್ಷಣ. ಮರ, ಹೂ ಹಣ್ಣು ಕಾಯಿ ಬಿಡುತ್ತದೆ. ತನಗಾಗಿ ಒಂದನ್ನೂ ಬಳಕೆ ಮಾಡಿಕೊಳ್ಳುವುದಿಲ್ಲ, ಕೊಟ್ಟೆನೆಂದು ಬಣ್ಣಿಸಿಕೊಳ್ಳುವುದಿಲ್ಲ, ಅದು ಆರೂ ಋತುಗಳಲ್ಲಿ ಸುಂದರ. ಯಾರನ್ನೂ ನೀರು ಕೇಳುವುದಿಲ್ಲ, ಬೆಳೆದದ್ದನ್ನು ತಾನು ತಿನ್ನುವುದಿಲ್ಲ, ಬಿಟ್ಟರೆ ನೂರಾರು ವರ್ಷ ಬಾಳುತ್ತದೆ. ಕಡಿದರೆ ತೊಲೆಯಾಗಿ ನೂರಾರು ವರ್ಷ ಬದುಕುತ್ತದೆ. ಇದು ಬೇರಿದ್ದ ಮರ. ಇದ್ದಲ್ಲಿಯೇ ಫಲ, ಪರಿಮಳ ಬೀರುತ್ತದೆ. ತನುವು ಕೂಡಾ ಬೇರಿಲ್ಲದ ಮರ ! ಸದಾ ಹಸಿರು. ಸುತ್ತಾಡಿದಲ್ಲೆಲ್ಲಾ ಪರಿಮಳವೇ ಬೀರಬೇಕು. ಶರಣರು *"ವಾಸಿಸದ ಪರಿಮಳ"*, *"ನೆನೆಯೊಳಗಣ ಪರಿಮಳದಂತಿದ್ದಿತ್ತು"* ತನುವಿನ ಪರಿಮಳ ಎಂದಿದ್ದಾರೆ.

ಶರಣರು ಬಣ್ಣನೆ ಮಾಡಿಕೊಳ್ಳಲಿಲ್ಲ, ತನುವಿನಲ್ಲಿರುವ ಸಂಪತ್ತನ್ನು ಬಣ್ಣನೆ ಮಾಡಿದರು. ತನುವಿನ ಸಂಪತ್ತು ಬಳಕೆ ಮಾಡಿಕೊಂಡು ಸುಖಿಗಳಾಗುವ ಶಿಕ್ಷಣ ಲೋಕಕ್ಕೆ ನೀಡಿದರು. ನಾವು ಶರಣರಂತಿರುವ ನಮ್ಮ ತನುವನ್ನು ನೋಡಿಕೊಳ್ಳುತ್ತಿಲ್ಲ, ಶರಣರ ಶಿಕ್ಷಣಕ್ಕೂ ಸ್ಪಂದಿಸುತ್ತಿಲ್ಲ, ಶರಣರ-ದಾಸವರೇಣ್ಯರ ತನುವಿನ ಬಣ್ಣನೆ ಮಾಡುತ್ತೇವೆ. ಬಣ್ಣನೆ ಮಾಡಿಕೊಳ್ಳುವ-ಬಣ್ಣಿಸುವ ರೋಗ ನಮಗೆ. ತನ್ನ ಬಣ್ಣಿಸಬೇಡವೆಂದವರನ್ನೇ ಬಣ್ಣಿಸುವ ರೋಗ ನಮಗೆ !

ತನ್ನ ಬಣ್ಣಿಸಬೇಡ : ಇದು ತನುವಿಗಂಟಿದ ಆರನೆಯ ಮಹಾರೋಗ. ಕುಷ್ಟರೋಗ, ಏಡ್ಸ್‌ಗಿಂತಲೂ ಭಯಾನಕ 'ಹೊಗಳಿ ಕೆಟ್ಟ ಕೂಚು ಭಟ್ಟ' ಎನ್ನುವಂತೆ. ಕೊಡುವ ತನುವು ಧನಿಕ, ಬೇಡುವ ತನುವು ಭಿಕ್ಷುಕ ! ತಾನು ಕೊಟ್ಟ ವಸ್ತು ತನ್ನ ಪ್ರೊಡಕ್ಟ್ ಅಲ್ಲ,

ಬೇಡುವ ವಸ್ತುವೂ ಕೊಡುವ ತನುವಿನದಲ್ಲ. ಎಲ್ಲ ಭೂಮಿಯಿಂದ ಪಡೆದದ್ದು. *"ಕೊಡುವವನು ಭಕ್ತನೆ ? ಬೇಡುವವನು ಜಂಗಮನೆ ? ಬೇಡುವವನಿಗೂ ಬೇಡಿಸಿ ಕೊಂಬುವವನಿಗೂ ಮುಕ್ತಿಯಿಲ್ಲ"* ಎಂದರು ಶರಣರು.

ಜಂಗಮ ಜ್ಞಾನಿ. ತನುವಿನ ತಳಮಳ ಕಳೆದುಕೊಂಡವನು. ಭಕ್ತ ತನ್ನ ತಳಮಳ ಕಳೆಯುವಂತೆ ಬೇಡಲು ಬಂದವನು. ಬೇಡಲು ಬಂದ ಭಕ್ತನನ್ನೇ ಜಂಗಮ ಬೇಡುವುದೇ ? ಕೊಟ್ಟ ಭಕ್ತನನ್ನು ಬಣ್ಣಿಸುವುದೆ ? ಅವನೇನು ಕೊಟ್ಟ ? ಇವನೇನು ಪಡೆದ ! ಬೇಡಲರಿಯದ ಭಕ್ತನಿಗೂ ಕೊಡಲರಿಯದ ಜಂಗಮನಿಗೂ ಮುಕ್ತಿಯಿಲ್ಲ. ಇವೆರಡೂ ಬಣ್ಣನೆಗೆ ಸಿಲುಕಿದ ಕಾಯಗಳು ಎಂದಿದ್ದಾರೆ ಶರಣರು.

ತನುವು ಜ್ಞಾನದ ಆಭರಣ. ಮನ ತನುವನ್ನು ಆವರಿಸಿದೆ. ಬೇಡುವುದು, ಕೊಡುವುದು, ಬಣ್ಣಿಸಿಕೊಳ್ಳುವುದು ಮನದ ಕೆಲಸ. ಮನ ಭಿಕ್ಷುಕನಾಗಿ ಬೇಡುತ್ತದೆ. ಧನಿಕನಾಗಿ ಕೊಡುತ್ತದೆ. ಕೊಟ್ಟೆನೆಂದು ಬಣ್ಣಿಸಿಕೊಳ್ಳುತ್ತದೆ. ಈ ಮೂರೂ ಕೆಲಸಗಳನ್ನು ಸಾಕ್ಷಿಯಾಗಿ ನೋಡುವ ಜ್ಞಾನ ಮನವನ್ನು ಖಂಡಿಸುತ್ತದೆ. "ಮಾಡಿದೆನೆಂಬುದು ಮನ*ದಲ್ಲಿ ಹೊಳೆವಡೆ ಏಡಿಸಿಕಾಡಿತ್ತು ಶಿವನ ಡಂಗುರ, ಮಾಡಿದೆ ನೆನ್ನದಿರಾ ಲಿಂಗಕ್ಕೆ ಮಾಡಿದೆ ನೆನ್ನದಿರಾ ಜಂಗಮಕ್ಕೆ"* ಬೇಡುವವನೂ ತನುವುಳ್ಳ ಲಿಂಗವೇ, ನೀಡುವವನೂ ತನುವುಳ್ಳ (ಜ್ಞಾನಿ) ಲಿಂಗವೆ. ಮಾಡುವ ನೀಡುವ ಬೇಡುವ ಮನ ಬಣ್ಣನೆಗೆ ಸಿಲುಕಿದೆ. ನೀಡುವ ಬೇಡುವ ಮಾಡುವ ತನುವಿನಲ್ಲಿರುವ ಜ್ಞಾನ ಒಂದೇ. ಅದು ಬಣ್ಣನೆಗೆ ಸಿಲುಕದ್ದು.

ಅದು *"ಜಗದಗಲ ಮುಗಿಲಗಲ, ಮಿಗೆಯಗಲ ನಿಮ್ಮಗಲ, ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ. ಬ್ರಹ್ಮಾಂಡದಿತ್ತತ್ತ ನಿಮ್ಮ ಶ್ರೀಮುಕುಟ. ಅಪ್ರಮಾಣ, ಅಗಮ್ಯ ಅಗೋಚರ ಅಪ್ರತಿಮ ಲಿಂಗ(ಜ್ಞಾನ)ವೇ ಕೂಡಲಸಂಗಮದೇವಯ್ಯ ಎನ್ನ ಕರಸ್ಥಲಕ್ಕೆ (ಅಂಗ) ಬಂದು ಚುಳುಕಾದಿರಯ್ಯ"*. ಜಗದಗಲ, ಮುಗಿಲಗಲ, ಪಾತಾಳ ಬ್ರಹ್ಮಾಂಡದಿಂದತ್ತತ್ತಲಿರುವ ಅಳತೆಗೆ ಮೀರಿದ ವಸ್ತುವು ತಾನೇ ಇರುವಾಗ ಪ್ರಮಾಣಕ್ಕೂ ಗಮನಕ್ಕೂ ಗೋಚರಕ್ಕೂ ಸಿಲುಕದ ಅಪ್ರತಿಮ ಲಿಂಗ (ಜ್ಞಾನ)ವು ತಾನೇ ಇರುವಾಗ ತನ್ನನ್ನು ತಾನು ಏನೆಂದು ಬಣ್ಣಿಸಿಕೊಳ್ಳುವುದು ? ಮಾಡಿದವನೆಂದು ಬಣ್ಣಿಸುವುದೆ ? ನೀಡಿದವನೆಂದು ಬಣ್ಣಿಸುವುದೆ ? ಉಪಮೆಗೆ ಮೀರಿದ ತನ್ನ ತನುವಿನ ತನುವನ್ನು ಬಣ್ಣಿಸಲು ಸಾಧ್ಯವೆ ? *"ತನ್ನ ಬಣ್ಣಿಸಬೇಡ"* ಇದು ಬಸವಣ್ಣನ ಶಿಕ್ಷಣ !

ಶರಣರ ಶಿಕ್ಷಣವದು ತನ್ನ ಶಿಕ್ಷಣ. ತನ್ನ ತನುವಿನ ಶಿಕ್ಷಣ. ಬಣ್ಣನೆಗೆ ಸಿಲುಕದ ಶಿಕ್ಷಣ. ಬಸವಣ್ಣನ ಶಿಕ್ಷಣ.

■

ಇದಿರ ಹಳಿಯಲು ಬೇಡ

ಇದಿರ ಹಳಿಯಲು ಬೇಡ :

ಹೀಗೆ ಯಾರಾದರೂ ಬೋಧಿಸಿದರೆ ಹೃದಯದಲ್ಲಿ ನಿಲ್ಲುವ ಮಾತಲ್ಲ. ಇದು ಬ್ರಹ್ಮಜ್ಞಾನದ ಮಾತು. ಮಾತನಳಿದವರ ಮಾತು. "ಮಾತು ಬಲ್ಲವನಿಗೆ ಜಗಳವಿಲ್ಲ" ಇದು ಸರಳವಾದ ಮಾತಾದರೂ ಅಷ್ಟೇ ಕಠಿಣ.

ಇದಿರ ಹಳಿಯುವುದು ಮನದ ಏಳನೆಯ ರೋಗ ಇದನ್ನು ಶೀಲವೆಂದು ಆಚರಿಸಲು ಬರುವುದಿಲ್ಲ. ಮಾತು ತನುವಿಗೆ ಬಡಿದಾಗ ಇದಿರ ಹೇಳದೆ ಮೌನಿಯಾದರೆ ತನುವು ಕುದಿಯದೆ ಬಿಡುವುದಿಲ್ಲ.

ಶಬ್ದ ಬಡಿದರೂ ಘಾಸಿಗೊಳ್ಳದೆ ಅರಿವಿನಿಂದ ಶಬ್ದ ಸ್ವೀಕರಿಸಿ ಹಸನ್ಮುಖಿಯಾಗುವ ಶಿಕ್ಷಣ ಇದಿರ ಹಳಿಯಲು ಬೇಡ ತತ್ವದಲ್ಲಿ ಅಡಗಿದೆ.

"ಮಾತಿನ ಮಾತಿನಲ್ಲಿಪ್ಪುದೆ ಭಕ್ತಿ ? ಮಾಡಿ ತನು ಸವೆಯದನ್ನಕ್ಕ ಮನ ಸವೆಯದನ್ನಕ್ಕ ಧನ ಸವೆಯದನ್ನಕ್ಕ ಅಪ್ಪುದೆ ಭಕ್ತಿ ? ಕೂಡಲ ಸಂಗಮದೇವನೆಲುಮೋರೆ ಸರಸವಾಡುವನು; ಸೈರಿಸದನ್ನಕ್ಕ ಅಪ್ಪುದೆ ಭಕ್ತಿ ?" ಮಾತಿಗೆ ಮಾತು ಹೇಳುವುದು ಜಾಣತನವಲ್ಲ. ಮಾತು ಮನದಲ್ಲಿ ತನುವಿನಲ್ಲಿ ಅರ್ಥದಲ್ಲಿ ಪ್ರಯೋಗಕ್ಕೊಳಗಾಗಬೇಕು. ಮಾತು ತನುವಿನಲ್ಲಿ ಸಿದ್ಧವಾಗಬೇಕು. ದೃಢವಾಗಬೇಕು. ಆಗ ಮಾತನಳಿಯುವ ಮಾತು, ಮಾತು ಸ್ವೀಕರಿಸಿ ಹಸನ್ಮುಖಿಯಾಗುವ ಮಾತು ಬರುತ್ತದೆ. ಇದಕ್ಕೆ ತನು -ಮನ ಸವೆಯಲೇಬೇಕು. ಜ್ಞಾನಿಗಳೊಂದಿಗೆ ಚರ್ಚಿಸಲೇಬೇಕು. ಇದೇ ಸತ್ಸಂಗ. ಜ್ಞಾನಿ ತನ್ನ ತನುವಿನ ಸತ್ಯದೊಂದಿಗೆ ಸಂಗಮಾಡುವ ವಿಧಾನ ಹೇಳಿಕೊಡುತ್ತಾನೆ. ಸತ್ಯವದು ಅರಿವು, ಬೆಳಕು. ಅರಿವು ತನುವಿಗೆ ಬಡಿದ ಮಾತುಗಳನೆಲ್ಲ ಸ್ವೀಕರಿಸಿ ಬೆಳಕಾಗಿಸುತ್ತದೆ.

"ಮಾತಿಲ್ಲ ನುಡಿಯಿಲ್ಲ ಏತಕ್ಕೆ ಮುನಿದಿರಿ ? ಮಾತಾಡಿದಡೆ ಕೆಯ್ಯ ಬೆಳೆಸೆಂಬುದನರಿಯಿರೆ ಅಯ್ಯಾ ? ಮಾತು ಗೆಟ್ಟಲ್ಲದೆ ತಾನಾಗಬಾರದು. ಕೂಡಲ ಸಂಗಮದೇವಯ್ಯಾ ಮಾತಿಂದ ಬರ್ಕು ಭವಭಾರ ಘೋರ" ಮಾತು ತಿಳಿದರೆ ಮಾಣಿಕ್ಯ, ಜೋತಿರ್ಲಿಂಗ, ಮುತ್ತು! ತಿಳಿಯದಿದ್ದರೆ ಮೃತ್ಯು!! ಕೈಕೇಯಿಯ ಎರಡು ಮಾತುಗಳನ್ನು ರಾಮ ತಿಳಿದು ಸಂತೋಷದಿಂದ ಸ್ವೀಕರಿಸಿ ನಗುನಗುತ ಕಾಡಿಗೆ ಹೋದ. ಮಾತನಾಡಿದ ಕೈಕೇಯಿ ಜೀವನ ಪರ್ಯಂತ ನರಕಯಾತನೆ ಅನುಭವಿಸಿದಳು. ಇಲ್ಲಿ ಮಾತನಾಡಿದ ತನುವು ಕುದಿಯಿತು. ಕೇಳಿದ ತನುವು ಕುದಿಯಲಿಲ್ಲ ಸಂತೋಷಪಟ್ಟಿತು.

ಕಠಿಣ ಎನ್ನುವ ಮಾತುಗಳನ್ನೂ ಕೇಳಿ ತಿಳಿದು ಸಂತೋಷ ಪಡುವುದು ಮಾತು ಕೆಡಿಸುವ ಕಲೆ. ಆ ಕಲೆ ಬಲ್ಲ ಜ್ಞಾನಿ ಮಾತಿಂಗೆ ಮಾತನಾಡಿ ಭವಭಾರ ಘೋರಕ್ಕೆ ಗುರಿಯಾಗುವುದಿಲ್ಲ. ಇತರರನ್ನು ಗುರಿಪಡಿಸುವುದಿಲ್ಲ. ಅರ್ಥ ಪ್ರಾಣ ಅಭಿಮಾನ

ವಿಷಯ ಸುಖಕ್ಕಾಗಿ ಆಡುವ (ಸಂಗ್ರಹ) ಎಂಜಲು ಮಾತುಗಳನ್ನು ಕೆಡಿಸಿ, ಮೀಸಲು ಮಾತಿನತ್ತ ಕರೆದುಕೊಂಡು ಹೋಗುತ್ತಾನೆ.

ಇದಿರ ಹಳಿಯಲು ಬೇಡ ಇದು ಬಸವಣ್ಣನವರ ಏಳನೆಯ ಸೂತ್ರ. ಇದರಲ್ಲಿ ಒಂದು ಸೂತ್ರ ಹೊಳೆದರೆ ಎಲ್ಲ ಸೂತ್ರಗಳೂ ಹೊಳೆಯುತ್ತವೆ. ಇದರ ವಿಸ್ತಾರ ಆಗಮ್ಯ ಆಗೋಚರ. ಪ್ರಮಾಣಕ್ಕೂ ನಿಲುಕದ ತತ್ವ ಈ ಏಳು ಬೆಡಗಿನ ಮಾತಿನಲ್ಲಿ ಅಡಗಿವೆ. ಸವಿದಷ್ಟೂ ಸವಿಯಬೇಕೆನ್ನುವ ಅಮೃತದ ರುಚಿಯಡಗಿದೆ. ಇದರ ಅಂತರಂಗವೂ ವಿಶಾಲ, ಬಹಿರಂಗವೂ ವಿಶಾಲ.

ಬಸವಣ್ಣನವರ ಈ ಏಳು ಮಾತುಗಳು ಬರೀ ಮಾತುಗಳಲ್ಲ. ಕಣ್ಣ ಮುಂದಿನ ಕಾಮ ಕೊಲ್ಲುವ ಮಾತು, ಮನದ ಮುಂದಣ ಆಸೆ ಕೊಲ್ಲುವ ಮಾತು, ಅಂತರಂಗ ಬಹಿರಂಗದ ಶುದ್ಧಿ ಗೋಚರಕ್ಕೆ ಬರುವ ಮಾತು. ಇದು ಮಾತಿನ ಸೂತಕ ಕಳೆಯುವ ಬಸವಗೀತೆಯ ಮಾತು.

■

ನಂಜು ತನ್ನದೆ ಔಷಧಿ ತನ್ನದೆ

ಶಬ್ದವೆಂಬೆನೆ ಶ್ರೋತ್ರದೆಂಜಲು. ಸ್ಪರ್ಶವೆಂಬೆನೆ-ತ್ವಕ್ಕಿನೆಂಜಲು.
ರೂಪೆಂಬೆನೆ - ನೇತ್ರದೆಂಜಲು. ರುಚಿಯೆಂಬೆನೆ - ಜಿಹ್ವೆಯೆಂಜಲು.
ಪರಿಮಳವೆಂಬೆನೆ - ಘ್ರಾಣದೆಂಜಲು. ನಾನೆಂಬೆನೆ - ಅರುಹಿನೆಂಜಲು.
ಎಂಜಲೆಂಬ ಭಿನ್ನ ಸೂತಕವಳಿದು. ಬೆಳಗಿನ ಬೆಳಗು ಗುಹೇಶ್ವರಾ ನಿಮ್ಮ ಶರಣ.

- ಅಲ್ಲಮಪ್ರಭು

ಶಬ್ದವೆಂಬೆನೆ ಶ್ರೋತ್ರದೆಂಜಲು :

ಮಗು, ಪ್ರಾಣಿ ಪಶು ಪಕ್ಷಿ ಶಬ್ದಗಳನ್ನು ಸಂಗ್ರಹಿಸಿಕೊಂಡು ಸಿಟ್ಟು ಬಂದಾಗ, ಪ್ರೀತಿಸುವಾಗ, ಬಲಪ್ರದರ್ಶಿಸುವಾಗ ಅವೇ ಶಬ್ದ ಬಳಕೆ ಮಾಡುತ್ತದೆ. ಇದು ಸಹಜ.

ಹೀಗೆ ಸಾಹಿತ್ಯ ಪುರಾಣ ಪುಣ್ಯ ಕತೆ ಕೇಳಿದ ಶಬ್ಧಗಳೆಲ್ಲ ತನುವಿನಲ್ಲಿ ಸಂಗ್ರಹ. ಸಂದರ್ಭಕ್ಕನುಗುಣವಾಗಿ ಸಂಗ್ರಹಿಸಿದ್ದನ್ನೆ ನುಡಿಯುವುದು. ನುಡಿಯುವ ನುಡಿಗೂ ನಡೆಗೂ ಸಂಬಂಧವೆ ಇರುವುದಿಲ್ಲ. ನುಡಿದಂತೆ ನಡೆಯಲಿಲ್ಲವೆನ್ನುವುದು ತನುವಿನ ಗಮನಕ್ಕೆ ಬರುತ್ತದೆ. ನುಡಿದವನು ನುಡಿದಂತೆ ನಡೆಯಲಿಲ್ಲವೆಂದು ಮರುಗುತ್ತಾನೆ. ಒಮ್ಮೊಮ್ಮೆ ಆತ್ಮಹತ್ಯೆಯು ನಡೆಯುತ್ತದೆ. ನುಡಿದದ್ದು ಸಂಗ್ರಹ ಮಾಡಿಕೊಂಡ ಕಿವಿಯ ಎಂಜಲಿನ ಮಾತೆ ಹೊರತು ಅಂತರಾಳದ ಮೀಸಲ ಮಾತಲ್ಲ. ಕಿವಿ ಕೇಳುವಾಗ ಮಾತು ಒರೆಗಲ್ಲಿಗೆ ಹಚ್ಚುವಂತೆ ಅಂತರಾಳ ಎಚ್ಚರಿಸಿದರೂ ಕಿವಿ ಕೇಳುವುದಿಲ್ಲ. ಗುಸು ಗುಸು ಎಂಜಲಿನ ಮಾತೇ ಕಿವಿಗೆ ಸುಖ. ಸಂಗ್ರಹಿಸಿಕೊಂಡು ಧ್ವನಿಯ ಮೂಲಕ ನುಡಿಯುವ ತವಕ. ನುಡಿಯುವಾಗಲೂ ಅಂತರಾಳ ಎಚ್ಚರಿಸುತ್ತದೆ. ಆದರೂ ಬಾಯಿ ಕೇಳಬೇಕಲ್ಲ? ನುಡಿದು ಸುಖಿಸುವ ಆಸೆ ಬಾಯಿಗೆ ! ಅಂತರಾಳದ ಮೀಸಲ ಮಾತು ಹಾಗೆ ಉಳಿಯಿತು. ಕಿವಿ ಎಂಜಲು, ಕಿವಿಯ ಕಿವಿ ಮೀಸಲು. ಶಬ್ದ ಎಂಜಲು, ಶಬ್ದದ ಶಬ್ದ ಮೀಸಲು. ಎಂಜಲು ಬಳಕೆಯಾಯಿತು. ತನುವಿನ ಮೀಸಲ ಜ್ಞಾನ ಹಾಗೆ ಉಳಿಯಿತು.

ಸ್ಪರ್ಶವೆಂಬೆನೆ-ತ್ವಕ್ಕಿನೆಂಜಲು :

ಚರ್ಮಕ್ಕೆ ನೋಡುವ ರುಚಿಸುವ ವಾಸಿಸುವ ಕೇಳುವ ಶಕ್ತಿ ಇಲ್ಲ. ಇವೆಲ್ಲವುಗಳಿಗಿಂತಲೂ ಬಲವಾದ ಸ್ಪರ್ಶಿಸುವ ಶಕ್ತಿ ಇದೆ. ತಿಳಿದರೆ ನಾಲ್ಕು ಇಂದ್ರಿಯಗಳಿಗಿಂತಲೂ ಶ್ರೇಷ್ಠವಾದದ್ದು. ತಿಳಿಯದಿದ್ದರೆ ರಾವಣ ಕೀಚಕನಂತೆ.

ಬಾಲ್ಯ ಯೌವನ ವೃದ್ಧಾಪ್ಯವನ್ನು ಚರ್ಮ ಸಂಗ್ರಹಿಸಿಕೊಂಡಿದೆ. ಚರ್ಮ ಎಂಬುದು ಜ್ಞಾನ. ಆದರೆ ಚರ್ಮ, ಚರ್ಮದೊಂದಿಗೆ ಸುಖಿಸಿ ಸ್ಪರ್ಶಿಸಿ ಆನಂದ ಪಡುತ್ತದೆ. ಚರ್ಮದ ಮೀಸಲು ಜ್ಞಾನ ಬಳಕೆ ಆಗುವುದಿಲ್ಲ. ರಕ್ತ ಮೂಳೆ ಮಾಂಸ ಮಜ್ಜಾ ಮೇದಸ್ಸುಗಳನ್ನು ತನ್ನ ಗರ್ಭದಲ್ಲಿಟ್ಟುಕೊಂಡು ಸುಂದರವಾದ ಕವಚವನ್ನೇ

ನಿರ್ಮಿಸಿಕೊಂಡಿದೆ ಚರ್ಮ. ಐದು ಧಾತುಗಳು ಹೊರಬರದಂತೆ ಪ್ಯಾಕ್ ಮಾಡಿದ ಚರ್ಮವನ್ನು ಚನ್ನಬಸವಣ್ಣನವರು ಓಂ ಕಾರವೆಂದು ಕರೆದಿದ್ದಾರೆ. ಪ್ರಾಣಿ ಪಶು ಪಕ್ಷಿ ಗಿಡ ಮರ ಬಳ್ಳಿ ಉರುಗ ಜಲಚರಗಳನ್ನು ಸುಂದರಗೊಳಿಸಿದ ಚರ್ಮ ಓಂ ಕಾರವೇ ಆಗಿದೆ. ಚರ್ಮವಿಲ್ಲದ ಜೀವಕುಲವೇ ಇಲ್ಲ. ತಾನು ಚರ್ಮ. ಮತ್ತೊಂದು ಕೂಡಾ ಚರ್ಮ !

ಎಂಜಲ ಚರ್ಮಕ್ಕೆ ಅಣ್ಣ-ತಮ್ಮ, ಅಕ್ಕ-ತಂಗಿ, ತಂದೆ-ತಾಯಿ, ಬಂಧು-ಬಳಗವೆಂಬ ಜ್ಞಾನವಿಲ್ಲ. ಎಲ್ಲವೂ ಗೌಣ. ಸುಖವೇ ಅದಕ್ಕೆ ಪ್ರಧಾನ! ಚರ್ಮಕ್ಕೆ ಅಂಟಿದ ರುಂಡ ಉರುಳಿದರು ಅಡ್ಡಿಯಿಲ್ಲ. ಅದಕ್ಕೊಂದೆ ಚಿಂತೆ ; ಸ್ಪರ್ಶಿಸಿ ಸುಖಿಸುವ ತವಕ ! ಚರ್ಮ ಎಂಜಲು, ಚರ್ಮದ ಚರ್ಮ ಮೀಸಲು. ಮೀಸಲ ಜ್ಞಾನವನ್ನು ಚರ್ಮ ಬಳಸಿಕೊಳ್ಳುವುದೆ ಇಲ್ಲ, ಬಳಕೆಯಾದರೆ ಚರ್ಮ ಸ್ಪರ್ಶಿಸಿದ್ದೆಲ್ಲ ಜ್ಞಾನವೆ. ತಾನೂ ಜ್ಞಾನ. ಮತ್ತೊಂದು ಜ್ಞಾನ !

ರೂಪೆಂಬೆನೆ - ನೇತ್ರದೆಂಜಲು :

ಎಂಜಲು ನೇತ್ರ, ಮೀಸಲು ನೇತ್ರವೆಂದು ನೋಡುವ ಕಣ್ಣನ್ನು ವಿಭಜಿಸಿದ್ದಾರೆ ಪ್ರಭುಗಳು. ಬರೀ ಎಂಜಲು ತುಂಬಿಕೊಂಡದ್ದು ಕಣ್ಣಾದರೆ, ಮೀಸಲು ಜ್ಞಾನ ತುಂಬಿಕೊಂಡದ್ದು ಕಣ್ಣಿನ ಕಣ್ಣು. ಅದು ಜ್ಞಾನದ ಕಣ್ಣು.

ಎಂಜಲ ಕಣ್ಣು ರೂಪ ತುಂಬಿಕೊಂಡು ಅದರೊಂದಿಗೆ ಸುಖಿಸಲು ದೇಹಕ್ಕೆ ಆದೇಶ ರವಾನಿಸುತ್ತದೆ. ಕಣ್ಣು ಹೇಳಿದ್ದನ್ನೆ ಇಡೀ ದೇಹ ನಂಬಬೇಕು. ಕಣ್ಣಿನ ಹೊರತಾಗಿ ದೇಹಕ್ಕೆ ನೋಡುವ ಉಪಕರಣವಿಲ್ಲ. ತನ್ನದಲ್ಲದ ವಸ್ತುವಿನೊಂದಿಗೆ ಸುಖಿಸಲು ಹೋದ ಹೆಡ್ಡ ದೇಹ ಸಿಕ್ಕಿ ಬಿದ್ದು ದಂಡನೆಗೆ ಗುರಿಯಾಗುತ್ತದೆ. ದಂಡಿಸುವವರಿಗೇನು ಗೊತ್ತು ಇದು ಕಣ್ಣಿನ ತಪ್ಪೆಂದು ? ರೂಪ ನೋಡಿ ಕಾಮಿಸುವಂತೆ ದೇಹಕ್ಕೆ ಮೆಸೇಜ್ ಕಳಿಸಿದ ಕಣ್ಣು ಸೇಫ್ ! ಪೆಟ್ಟು ತಿಂದು ಅಪಮಾನಕ್ಕೆ ಗುರಿಯಾದ ದೇಹದ ತಳಮಳ ಅದರ ನರಕಯಾತನೆ ಎಂಜಲ ಕಣ್ಣಿಗೆ ಆಗುವುದೇಯಿಲ್ಲ. ಈ ಕಣ್ಣಿನ ಗುಣ ನಾಯಿ ಬಾಲದಂತೆ. ಮತ್ತೆ ತನ್ನ ಕೆಲಸ ಮರುಕ್ಷಣದಲ್ಲಿಯೇ ಪ್ರಾರಂಭಿಸುತ್ತದೆ.

ಎಂಜಲ ಕಣ್ಣು ರೂಪ ನೋಡಿದರೆ, ಮೀಸಲ ಕಣ್ಣು ರೂಪ ಹೊತ್ತ ನಿರೂಪ ನೋಡುತ್ತದೆ. ರೂಪದಲ್ಲಿಯ ನಿರೂಪದಿಂದಲೆ ರೂಪದ ಸೌಂದರ್ಯ! ನಿರೂಪ ಹೋದರೆ ರೂಪ ಶವ ! ಶವವನ್ನು ಕಣ್ಣು ಕಾಮಿಸುವದಿಲ್ಲ ! ರೂಪದಲ್ಲಿಯ ನಿರೂಪವನ್ನು ಕಣ್ಣು ನೋಡುವುದಿಲ್ಲ ! ಕಣ್ಣಿನಲ್ಲಿಯ ಎಂಜಲು ಬಳಕೆಯಾಗಿ ಮೀಸಲು ಹಾಗೇ ಉಳಿಯಿತು. *"ನೋಡೂದ ನೋಡಲರಿಯದೇ ಕೆಟ್ಟಿತ್ತೀ ಜಗವೆಲ್ಲ; ನೋಡೂದ ನೋಡುವಡೆ ಕೂಡಲಿಲ್ಲ ಆಗಲಲಿಲ್ಲ"* .

ರೂಪ :

ಜಲಜನಕದ ಎರಡು ಕಣ, ಆಮ್ಲಜನಕದ ಒಂದು ಕಣ (H_2O) ಸೇರಿ ನೀರಾಯಿತು! ನೀರಿನ ಬಿಂದು ತಂದೆ ಗರ್ಭದಿಂದ ತಾಯಿ ಗರ್ಭ ಹೊಕ್ಕು ಪಾಕವಾಗಿ

ರೂಪವಾಯಿತು! ಜಲಜನಕ-ಆಮ್ಲಜನಕ ಇವೆರಡೂ ನಿರೂಪವೇ! ರೂಪದ ಮೂಲ ಕೂಡಾ ನಿರೂಪವೇ! ರೂಪ ನೋಡುವ ಕಣ್ಣು ಎಂಜಲು ಕಣ್ಣು! ನಿರೂಪ ನೋಡುವ ಕಣ್ಣು ಮೀಸಲು ಕಣ್ಣು!

ನೋಡೂದ ನೋಡಲರಿಯದ ನಂಜು ತುಂಬಿದ ಜಗದ ಕೆಟ್ಟ ಕಣ್ಣುಗಳಿಗೆ ನೋಡೂದನ್ನೆ (ನಿರೂಪ) ನೋಡುವ ದಿವ್ಯ ಔಷಧಿಯ ಸೂತ್ರ ನೀಡಿದರು ಅಲ್ಲಮಪ್ರಭುಗಳು. ರೂಪ ನೋಡುವ ನಂಜು ತನ್ನದೆ, ನಿರೂಪ ನೋಡುವ ಔಷಧಿಯೂ ತನ್ನದೆ !

ರುಚಿಯೆಂಬೆನೆ-ಜಿಹ್ವೆಯೆಂಜಲು :

ಅಡಿಗೆ ರುಚಿಯಾಗಿಲ್ಲವೆಂದು ಸಾಫ್ಟ್‌ವೇರ್ ಇಂಜಿನಿಯರನೊಬ್ಬ ಟೇಬಲ್ ನೈಫ್ ಬಳಸಿ ತಾಯಿಯನ್ನೇ ಕೊಂದ. ಇದು ಇತ್ತೀಚೆಗೆ ರಾಜಸ್ಥಾನದಲ್ಲಿ ನಡೆದ ಘಟನೆ. "ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬರುವುದಿಲ್ಲ" ಮಾನವೊಂದೇ ಅಲ್ಲ ರುಚಿಗಾಗಿ ಪ್ರಾಣವೂ ಹೋಗುತ್ತದೆ. ಇತ್ತೀಚಿನ ಸಮೀಕ್ಷೆಯ ಪ್ರಕಾರ ರುಚಿಕರ ಅಡಿಗೆ ಮಾಡಲು ಬರುವುದಿಲ್ಲ ವೆಂದು ನಿಂದೆಯ ಮಾತು ಕೇಳಿ ನವ ವಿವಾಹಿತ ತರುಣಿಯರು ಶೇ. 10 ಆತ್ಮಹತ್ಯೆ ಮಾಡಿಕೊಂಡರೆ ಶೇ. 15 ಜನ ಕೊಲೆಗೀಡಾತ್ತಾರೆ.

ರುಚಿ ನಾಲಿಗೆಯಲ್ಲಿದ್ದೆಯೋ ಪದಾರ್ಥದಲ್ಲಿಯೋ ಎನ್ನುವ ವಿಷಯ ಗಮನಕ್ಕೆ ಬಾರದಿದ್ದಲ್ಲಿ ಅನಾಹುತ ಕಟ್ಟಿಟ್ಟ ಬುತ್ತಿ. ರುಚಿ ಎನ್ನುವುದು ನಾಲಿಗೆಯ ಅಜ್ಞಾನ. ನಾಲಿ ಗೆಯ ಅಂತರಾಳದ ಜ್ಞಾನ ಹೊಳೆಯದೇ ಇರುವುದುರಿಂದ ರುಚಿಯೆನ್ನುವ ನಾಲಿಗೆಯ ಅಜ್ಞಾನಕ್ಕೆ ತುತ್ತಾಗಿದ್ದೇವೆ.

ಪದಾರ್ಥದಲ್ಲಿ ರುಚಿ ಇದೆಯೇ ? ಅಥವಾ ನಾಲಿಗೆಯಲ್ಲಿ ರುಚಿ ಇದೆಯೇ ? ಎಂದು ಪ್ರಶ್ನಿಸಿಕೊಳ್ಳಲಿಲ್ಲ. ಪದಾರ್ಥದಲ್ಲಿ ರುಚಿಯಿದ್ದರೆ ಸದಾ ರುಚಿಯಿರಬೇಕಲ್ಲ ? ಮೂರು ನಾಲ್ಕು ತುತ್ತು ತಿನ್ನುವುದರಲ್ಲಿಯೇ ಪದಾರ್ಥ ರುಚಿ ಕಳೆದು ಕೊಳ್ಳುತ್ತದೆ. ನಾಲಿಗೆ ಕೂಡಾ ರುಚಿ ಕಳೆದು ಕೊಳ್ಳುತ್ತದೆ. ಅರ್ಥಶಾಸ್ತ್ರಜ್ಞರು ಇದನ್ನು ತುಷ್ಟಿಗುಣವೆಂದು ಕರೆದಿದ್ದಾರೆ. ಅಂದರೆ ಕ್ರಮೇಣ ರುಚಿ ಕಡಿಮೆಯಾಗುವಿಕೆ. ಈ ಶಬ್ದ ಜ್ಞಾನದ ಒರೆಗಲ್ಲಿಗೆ ಹಚ್ಚಿ ನೋಡಿದರೆ ಹೋಲುವುದಿಲ್ಲ.

ಪದಾರ್ಥ ನೀರಿನಿಂದ ಆಗಿದೆ. ಕಬ್ಬಿನಲ್ಲಿಯ ಸಿಹಿ, ಮೆಣಸಿನಕಾಯಿಯಲ್ಲಿಯ ಕಾರ, ಬೆಳ್ಳೊಳ್ಳಿಯ ಘಾಟು, ಈರುಳ್ಳಿಯ ಕಾಕು, ಹುಣಸೆಯ ಹುಳಿ, ಉಪ್ಪು, ತೈಲ ತುಪ್ಪ, ಹಾಲು, ಮೊಸರು ಹೀಗೆ ಎಲ್ಲ ಪದಾರ್ಥಗಳೂ ನೀರಿನಿಂದಲೇ. ರುಚಿಸುವ ನಾಲಿಗೆ, ನಾಲಿಗೆ ಹೊತ್ತ ದೇಹ ನೀರಿನಿಂದಲೇ ಆಗಿದೆ. ಚರ್ಮ, ರೋಮ, ಎಲುಬು, ರಕ್ತ ಮಾಂಸ ಎಲ್ಲವೂ ನೀರಿನಿಂದಲೇ. ಇದು ಉದಕ ಬಚ್ಚಿಟ್ಟುಕೊಂಡ ದೇಹ. ಇದರ ತೂಕ 1ರಿಂದ 100ರ ಮೇಲೆ ! ಅರ್ಧ ಕೆ.ಜಿ. ಪದಾರ್ಥ 100 ಕೆ.ಜಿ. ನೀರಿಗೆ ಬೆರೆಸಿದರೆ ಪದಾರ್ಥವನ್ನು ನೀರು ತನ್ನಂತೆ ಮಾಡಿಕೊಳ್ಳುತ್ತದೆ. ಪದಾರ್ಥವೂ ನೀರೆ, ದೇಹವೂ ನೀರೆ!

ನೀರು ನೀರಿನಲ್ಲಿ ಸೇರಿ ರುಚಿ ಕಳೆದುಕೊಂಡಂತೆ. "ಹೊಳೆಯಲ್ಲಿ ಹುಣಸೇ ಹಣ್ಣು ತೊಳೆದಂತೆ" ಎನ್ನುವ ಜನ ಪದರ ಮಾತಿನಂತೆ.

ನೀರಿಗೆ ರುಚಿಯಿಲ್ಲ, ರೂಪವಿಲ್ಲ, ವಾಸನೆಯಿಲ್ಲ, ತನ್ನ ಮಟ್ಟ ತಾನು ಕಾಯ್ದುಕೊಳ್ಳುತ್ತದೆ. ಎಂದು ಓದಿ ತಿಳಿದುಕೊಂಡ ಜ್ಞಾನ, ನಾಲಿಗೆಯಲ್ಲಿ ಸಂಗ್ರಹವಾಗಿರುವುದರಿಂದ ಸಂದರ್ಭಕ್ಕನುಗುಣವಾಗಿ ನುಡಿಯುತ್ತದೆ. ಪ್ರಯೋಗಕ್ಕೆ ಅಣಿಯಾಗುವುದಿಲ್ಲ. ನಾಲಿಗೆಯ ಜ್ಞಾನ ಬಳಕೆಯಾಗುವುದಿಲ್ಲ. ಆದಕ್ಕಾಗಿಯೇ ಅಲ್ಲಮಪ್ರಭುಗಳು ರುಚಿ ಎಂಬುದು ನಾಲಿಗೆಯ ಎಂಜಲು ಎಂದಿದ್ದಾರೆ.

ಪರಿಮಳವೆಂಬೆನೆ-ಘ್ರಾಣದೆಂಜಲು :

ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು ಇವು ದೇಹದ ಐದು ಇಂದ್ರಿಯಗಳು. ಇವುಗಳ ಕೆಲಸ ಬೇರೆ ಬೇರೆ. ಪರಿಮಳದ ವಾಸನೆ ಕೂಡಾ ಮೂಗಿನ ಎಂಜಲು ಎಂದಿದ್ದಾರೆ ಪ್ರಭುಗಳು. ಒಂದು ಮೂಗಿಗೆ ಮೀನು ಪರಿಮಳವಾದರೆ ಮತ್ತೊಂದು ಮೂಗಿಗೆ ಮಲ್ಲಿಗೆ ಪರಿಮಳ. ಒಂದು ಮೂಗಿಗೆ ಸೆಗಣಿಯ ಗಂಜಳ ಪರಿಮಳವಾದರೆ ಮತ್ತೊಂದು ಮೂಗಿಗೆ ವಾಕರಿಕೆ. ಪರಿಮಳವೆಂಬುದು ಮೂಗಿನ ಅಜ್ಞಾನ, ಎಂಜಲು. "ವಾಸಿಸದ ಪರಿಮಳ"ವೆಂಬುದು ಮೂಗಿನ ನಿಜ ಜ್ಞಾನ. ಜ್ಞಾನಕ್ಕೆ ಶರಣರು ವಾಸಿಸದ ಪರಿಮಳವೆಂದಿದ್ದಾರೆ.

ನಾನೆಂಬೆನೆ -ಅರುಹಿನೆಂಜಲು :

ಐದು ಇಂದ್ರಿಯಗಳ ರುಚಿ ಬೇರೆ ಬೇರೆಯಾದರೂ ರುಚಿಗಳೆಲ್ಲ ತನುವಿನ ಕೇಂದ್ರವಾದ ಅರಿವಿನಿಂದಲೇ ಬಂದದ್ದು. ಅರಿವನ್ನು ಶರಣರು ಬಯಲು, ನಿರೂಪವೆಂದು ಕರೆದಿದ್ದಾರೆ. ಬಯಲಿಗೆ ರೂಪವಿಲ್ಲ. ಆದು ಚಂಚಲಗೊಳಿಸುವುದಿಲ್ಲ. ಅದಕ್ಕೆ ಭಾವನೆಯಿಲ್ಲ. ಭೋರ್ಗರೆಯುವ ಮಳೆಗೆ, ಬಿರುಗಾಳಿಗೆ, ಗುಡುಗು ಮಿಂಚು, ಉರಿಯುವ ದಾವಾಗ್ನಿಗೆ, ಬಿರಿಯುವ ಭೂಮಿಗೆ ಬಯಲು ಅಂಜುವುದಿಲ್ಲ. ಅಳುಕುವುದಿಲ್ಲ.

ಭೂಮಿ, ಗಾಳಿ, ಬೆಂಕಿ, ನೀರು ಆಕಾಶದ ಚೇಷ್ಟೆಗಳೆಲ್ಲ ಬಯಲಿನ ಗರ್ಭದಲ್ಲಿಯೇ ಲೀನ. ಬಸಿರೆ ಮಗುವನ್ನು ತನ್ನ ಗರ್ಭದಲ್ಲಿ ಬಂಧಿಸಿದಂತೆ ! ಮಗು ಒದ್ದರೂ, ಸುತ್ತಿದರೂ ಬಸಿರೆಗೆ ಸಂತೋಷವೆ ! ಹಾಗೆಯೇ ದೇಹದ ಐದು ಇಂದ್ರಿಯಗಳ ಜನನ ಅರಿವಿನಿಂದಲೇ. ಅರಿವಿನ ಎಂಜಲಿನಿಂದ ಚೇಷ್ಟೆ ಮಾಡುತ್ತವೆ. ಅರಿವಿನಿಂದ ಉದಯವಾದ ಅರಿವೆ ನಾವು ಎಂದು ಇಂದ್ರಿಯಗಳಿಗೆ ತಿಳಿದರೆ ಸಾಕು ಕೇಳುವ ಕಿವಿ ಜ್ಞಾನ, ಸ್ಪರ್ಶಿಸುವ ಚರ್ಮ ಜ್ಞಾನ, ನೋಡುವ ಕಣ್ಣು ಜ್ಞಾನ, ರುಚಿಸುವ ನಾಲಿಗೆ ಜ್ಞಾನ, ವಾಸಿಸುವ ಮೂಗು ಕೂಡಾ ಜ್ಞಾನ. ಇಂದ್ರಿಯಗಳು ಎಂಜಲೆಂಬ ಭಿನ್ನ ಭಿನ್ನ ಸೂತಕಗಳನ್ನು ಕಳೆದುಕೊಂಡು ಅರಿವಿನಲ್ಲಿ ಲೀನವಾಗಿ ಅರಿವೇ ತಾವಾಗಿ ಬೆಳಗುತ್ತವೆ. ಬೆಳಗಿಂಗೆ ಬೆಳಗಾಗಿ ಬೆಳಗುತ್ತವೆ.

■

ತನುವಿನಲ್ಲಿ ಮರೆಯಾದ ಜ್ಞಾನ

ಮೂರು ಲಿಂಗಕ್ಕೆ ಮೂಲ ಮಂತ್ರವಾದಾತ ಗುರು
ಮೂರು ವಿದ್ಯೆಗೆ ವಿದ್ಯಾರೂಪವಾದಾತ ಗುರು
ಹೊದ್ದಿದ್ದ ಪ್ರಪಂಚವನತಿಗಳೆದು ರೂಪಿಯು ರೂಪಾದಾತ ಗುರು
ಲೋಕತ್ರಯಕ್ಕೆ ಕಪಿಲಸಿದ್ಧ ಮಲ್ಲಿಕಾರ್ಜುನನೆ ಗುರು.

- ಸಿದ್ಧರಾಮ ಶಿವಯೋಗಿ

ಮೂರು ಲಿಂಗಕ್ಕೆ ಮೂಲ ಮಂತ್ರವಾದಾತ ಗುರು :

ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಇವು ಮೂರು ಲಿಂಗಗಳು. ಈ ಮೂರು ಲಿಂಗಗಳಿಗೆ ಸೂತ್ರವಾದವನೇ ಗುರು, ಜ್ಞಾನ.

ಇಷ್ಟಲಿಂಗ : ದೇಹ . ಪ್ರಾಣಲಿಂಗ : ದೇಹದಲ್ಲಿರುವ ಪ್ರಾಣ. ಭಾವಲಿಂಗ : ದೇಹ - ಪ್ರಾಣದಲ್ಲಿರುವ ಭಾವ. ಈ ಮೂರು ಲಿಂಗಕ್ಕೆ ಸೂತ್ರವಾದ ಜ್ಞಾನವೇ ಗುರುದೇವ.

ಮೂರು ವಿದ್ಯೆಗೆ ವಿದ್ಯಾರೂಪವಾದಾತ ಗುರು :

ಅಪರ ವಿದ್ಯೆ, ಪರ ವಿದ್ಯೆ, ಪರಾತ್ಪರ ವಿದ್ಯೆ . ಈ ಮೂರು ವಿದ್ಯೆಗಳು. ಹೆಸರು, ಅಧಿಕಾರ, ಕೀರ್ತಿಗಾಗಿ ಮಾಡುವ ಮುಂತಾದ ಅರಿವಿನ ಮೂಲದ ವಿದ್ಯೆಗಳಿಗೂ ಸೂತ್ರವಾದಾತ ಗುರು.

ಅಕ್ಷರದ ಮೂಲಕ ಕಲಿಯುವ ಪದವಿ ಪುರಸ್ಕಾರದ ಎಲ್ಲ ವಿದ್ಯೆಗಳ ಮೂಲ ರೂಪವಾದಾತ ಗುರುವು.

ಎಲ್ಲವನ್ನೂ ತಿಳಿಯುವ ಆ ಅರಿವೇ ತಾನಾಗುವ ಅಕ್ಷರೋತ್ತಮ ವಿದ್ಯೆಗೂ ಮೂಲವಾದಾತ ಗುರುವು, ತನುವಿನಲ್ಲಿ ಮರೆಯಾದ ಅರಿವು.

ಪಂಡಿತ ಪಾಮರನಾಗಿ ಸಂಸಾರಿಯಾಗಿ, ಅಧಿಕಾರ ಹಿಡಿದು ಆಡಳಿತಗಾರನಾಗಿ, ಶಿಕ್ಷಕನಾಗಿ, ಉಪನ್ಯಾಸಕನಾಗಿ, ರಾಜಕಾರಣಿಯಾಗಿ, ಪೀಠ ಹಿಡಿದು ಗುರುವಾಗಿ , ಕಾವಿಹೊದ್ದು ಸನ್ಯಾಸಿಯಾಗಿ, ಈ ವೇಷದ ರೂಪವನು ಅತಿಗಳೆದು ಆ ರೂಪದ ರೂಪ ನಿರೂಪನಾದಾತ ಕೂಡಾ ಗುರುವು. ತನ್ಮಯವಾದ ಅರಿವು ತಿಳಿದು, ಆ ಅರಿವಿನ ಮರೆವಿನ ಆಟದ ಮೂಲವಾದಾತ ಗುರುವು. ಈ ಲೋಕತ್ರಯಗಳಿಗೂ ಗುರುವಾದಾತ.

ಲೋಕತ್ರಯ :

ಸ್ವರ್ಗ, ಮರ್ತ್ಯ , ಪಾತಾಳಲೋಕ. ಸ್ವರ್ಗಲೋಕ : ಜ್ಞಾನಿಲೋಕ.

ಮರ್ತ್ಯಲೋಕ : ಮಧ್ಯಭಾಗವಾದ ಅಂತರಾತ್ಮ ಲೋಕ. ಪಾತಾಳ ಲೋಕ : ವಿಷಯ ಸುಖಕ್ಕಾಗಿ ಮಾತ್ರ ಜೀವಿಸುವ ಲೋಕ.

ತನುವಿನಲ್ಲಿ ತನ್ಮಯವಾದ ಅರಿವು ತಿಳಿದು ಆ ಅರಿವೇ ತಾವಾಗುವ ಆ ಅರುವರ್ಗಕ್ಕೂ ಗುರುವಾದಾತ.

ತನುವಿನ ಸುಖಕ್ಕಾಗಿ ಅರಿವು ಹಿಡಿಯುವ, ಬಿಡುವ, ಉಪದೇಶ ಪಡೆಯುವ ಕೀರ್ತಿ, ವಾರ್ತೆಗಾಗಿ ಆಚಾರದಲ್ಲಿ ತೊಡಗುವ ಭಕ್ತ ವರ್ಗಕ್ಕೂ ಗುರುವಾದಾತ.

ತನುವು ತನುವಿನ ಸುಖಕ್ಕಾಗಿ ಜೀವಿಸುವ ಅಧೋಭಾಗವಾದ ಭವಿವರ್ಗಕ್ಕೂ ಗುರುವಾದಾತ. ಹೀಗೆ ಭೂಮಿಯ ಮೇಲೆ ಜೀವಿಸುವ ಮೂರು ವರ್ಗದ ಜನರಿಗೆ ಕಪಿಲ ಸಿದ್ಧ ಮಲ್ಲಿಕಾರ್ಜುನನೇ ಗುರು. ತನುವಿನಲ್ಲಿ ತನ್ಮಯವಾಗಿ ಆ ತನುವಿಗೆ ಮೂಲವಾಗಿರುವ ಜ್ಞಾನವೇ ಗುರು.

ಗುರುಪುತ್ರರಿಗೂ, ಉಪಾಸಕರಿಗೂ, ಭಕ್ತವೃಂದಕ್ಕೂ, ನಿಷ್ಕಾಮಕರ್ಮಿಗಳಿಗೂ ಮೂಲವಾದದ್ದೂ ಜ್ಞಾನ.

"ತನುವಿಡಿದಿಹುದು ಪ್ರಕೃತಿ, ಪ್ರಕೃತಿವಿಡಿದಿಹುದು ಪ್ರಾಣ, ಪ್ರಾಣವಿಡಿದಿಹುದು ಜ್ಞಾನ, ಜ್ಞಾನವಿಡಿದಿಹುದು ಗುರು. ಇಂತೀ ಗುರು ಲಿಂಗ ಜಂಗಮ ಪ್ರಸಾದ ಸಗುಣವೆಂದು ಹಿಡಿದು, ನಿರ್ಗುಣವೆಂದು ಕಂಡ ಸಂದೇಹಿ ವ್ರತಗೇಡಿಗಳ ನೇನೆಂಬೆ, ಅವರ ಮುಖವ ತೋರದಿರು ಕೂಡಲ ಸಂಗಮದೇವಾ" ಎಂದಿದ್ದಾರೆ ಬಸವಣ್ಣ.

ತನ್ನ ಅರಿವು ತಾನು ತಿಳಿಯಲು ಸಿದ್ಧರಾಮ ಶರಣರು ನಾಲ್ಕು ಸಾಲಿನ ಸೂತ್ರ ಬರೆದರು. ಬಸವಣ್ಣ ಮೊದಲಾಗಿ ಮುಂತಾದ ಶರಣರು ಅರಿವು ತಿಳಿಸಲು ಪ್ರಯಾಸ ಪಟ್ಟಿದ್ದಾರೆ. ವೇದ, ಉಪನಿಷತ್ತು, ಗೀತೆ, ಬೈಬಲ್‌ಗಳೂ ಹುಟ್ಟಿಕೊಂಡವು. ದಾಸವರೇಣ್ಯರೂ, ಸಂತರೂ, ತತ್ವಪದಕಾರರು ಈ ಯಜ್ಞದಲ್ಲಿ ಭಾಗಿಯಾದರು. ಅರಿವಿಗೆ ಹೋಗುವ ಸೂತ್ರಗಳನ್ನು ಬರೆದರು.

ಶರಣರ ಜ್ಞಾನಿಗಳ ತಂತ್ರಗಳೆಲ್ಲಾ ಮನುಷ್ಯನಿಗೆ ಆಚರಣೆಗೆ ಪ್ರಧಾನವಾದವೇ ವಿನಹ ಅರಿವಿಗೆ ಪ್ರಧಾನವಾಗಲಿಲ್ಲ, ಏಕೆಂದರೆ :

ಗುರುವಾದಾತ ತನುವಿನ ಮರೆಯಲಿದ್ದೂ ಮಂತ್ರವೇ ತಾನಾಗಿ ಹಾಡಿಹೊಗಳುತ್ತಿದ್ದಾನೆ ಭಕ್ತನಂತೆ.

ಗುರುವಾದಾತ ತನುವಿನ ಮರೆಯಲಿದ್ದೂ ಪುಸ್ತಕ ಬರೆದು ಓದಿ ಹೊಗಳುವುದರಲ್ಲಿ ನಿರತನಾಗಿದ್ದಾನೆ ಪಂಡಿತನಂತೆ.

ಗುರುವಾದಾತ ತನುವಿನ ಮರೆಯಲಿದ್ದೂ ಅಧಿಕಾರಿ ರಾಜಕಾರಣಿಯಾಗಿ, ಅಹಂಕಾರಿ ವಿಷಯ ಲಂಪಟನಾಗಿ, ಮಠ ಮಂದಿರ ಚರ್ಚ್ ನಿರ್ಮಿಸಿ ಧರ್ಮ ಧುರೀಣನಾಗಿ, ಜಾತಿ ಮತ ಪಂಥಗಳನ್ನು ಸೃಷ್ಟಿಸುವ ಕಾಯಕದಲ್ಲಿ ನಿರತನಾಗಿದ್ದಾನೆ

ಅಧಿಕಾರಿಯಾಗಿ.

ತನುವಿನ ಮರೆಯಲಿದ್ದ ಜ್ಞಾನಕ್ಕೆ ಯಾರು ಜ್ಞಾನ ಹೇಳಬೇಕು. ಜ್ಞಾನಿಗೆ ಜ್ಞಾನ ಹೇಳುವ ಗುರುವಿದ್ದಾನೆಯೇ ಈ ಲೋಕದಲ್ಲಿ? ಜ್ಞಾನಿಗೆ ಜ್ಞಾನ ಬೇಕಿಲ್ಲ ಏಕೆಂದರೆ ಅವನು ತನುವಿನ ಮರೆಯಲ್ಲಿದ್ದವನು. ಅಜ್ಞಾನಿಗೆ ಜ್ಞಾನ ನಿಲ್ಲುವುದಿಲ್ಲ ಏಕೆಂದರೆ ಅವನು ತನುವನ್ನು ಆವರಿಸಿದವನು. ಕತ್ತಲು ಬೆಳಕಿನ ಕಥೆ ಹೇಳಿದಂತೆ! ಬೆಳಕಿನ ಕಥೆ ಹೇಳಿದರೆ ಕತ್ತಲು ಬೆಳಕಾಗುವುದಿಲ್ಲ. ತನುವಿನಲ್ಲಿ ಮರೆಯಾದವನು ಬೆಳಗಬೇಕು. ಆತ ಮೂರು ಲೋಕಕ್ಕೂ ಗುರುವಾದಾತ ಎಂದಿದ್ದಾರೆ ಸಿದ್ಧರಾಮ ಶರಣರು.

ಅರಿವು ಚಿನ್ನದೊಳಗಣ ಬಣ್ಣದಂತೆ

ಎನ್ನ ನಾನರಿಯದಲ್ಲಿ ಎಲ್ಲಿರ್ದೆ ಹೇಳಯ್ಯಾ ?
ಚಿನ್ನದೊಳಗಣ ಬಣ್ಣದಂತೆ ಎನ್ನೊಳಗಿರ್ದೆ ಅಯ್ಯಾ.
ಎನ್ನೊಳಗೆ ಇನಿತಿರ್ದು ಮೈದೋರದ ಭೇದವ
ನಿಮ್ಮಲ್ಲಿ ಕಂಡೆ ಕಾಣಾ ಚೆನ್ನಮಲ್ಲಿಕಾರ್ಜುನಾ.

- ಅಕ್ಕಮಹಾದೇವಿ

ಎನ್ನ ನಾನರಿಯದಲ್ಲಿ ಎಲ್ಲಿರ್ದೆ ಹೇಳಯ್ಯಾ :

ನಾನು ಎಲ್ಲರ ಬಗ್ಗೆ ತಿಳಿಯುತ್ತೇನೆ. ಎಲ್ಲರ ಸ್ವಭಾವಗಳ ಬಗ್ಗೆ ಅರಿಯುತ್ತೇನೆ. ಪುಸ್ತಕ ಓದುತ್ತೇನೆ ಪುಸ್ತಕದಲ್ಲಿರುವ ವಿಷಯ ಚರ್ಚಿಸುತ್ತೇನೆ. ರಾಜಕೀಯ, ಹಾಸ್ಯ, ವಿಡಂಬನೆ, ವ್ಯಂಗ್ಯ, ರೌದ್ರ, ಭೀಭತ್ಸ, ಕಾಮ, ಕ್ರೋಧ, ಸಿಟ್ಟು ಸೆಡವುಗಳೆಲ್ಲ ತನ್ನಂತೆ ಇತರರಲ್ಲಿ ಪ್ರಕಟವಾಗುವುದು ಗಮನಕ್ಕೆ ಬರುವುದು. ಆದರೂ ತನ್ನ ಮರೆತು ಇತರರ ಬಗ್ಗೆ ಕುತ್ಸಿತ ಮಾತುಗಳು ಅನುದಿನವೂ ನಡೆಯುತ್ತದೆ. ಅದು ಮನುಷ್ಯನ ಸಹಜ ಗುಣ.

ಹನ್ನೆರಡು ಜನ ಬುದ್ಧಿವಂತರು ನದಿ ದಾಟುವಾಗ ಕೈ ಕೈ ಹಿಡಿದು ದಾಟುತ್ತಾರೆ. ದಂಡೆಗೆ ಹೋಗಿ ಎಣಿಕೆ ಮಾಡಿದಾಗ ಹನ್ನೊಂದು ಜನ ಮಾತ್ರ ಲೆಕ್ಕಕ್ಕೆ ಬರುತ್ತಾರೆ. ಹನ್ನೆರಡನೆಯವನು ಎಣಿಕೆಗೆ ಸಿಲುಕುವುದೇ ಇಲ್ಲ. ಹೀಗೆ ವರ್ಷದ ಹನ್ನೆರಡು ತಿಂಗಳು ಅನ್ಯರ ಚರ್ಚೆಯಲ್ಲಿಯೇ ಕಳೆಯುತ್ತೇವೆ. ವರ್ಷ ಪೂರ್ತಿಯಾಗುವುದೇ ಇಲ್ಲ ; ನದಿಯಲ್ಲಿ ಒಬ್ಬ ಕಳೆದಂತೆ ! ಆಯುಷ್ಯ ಕಳೆದು ಹೋಗುತ್ತದೆ.

ಹೀಗೇಕಾಗುತ್ತದೆ ಎಂದು ನನ್ನನ್ನು ನಾನು ತಿಳಿಯಲು ಹೋಗಬೇಕಲ್ಲ? ಅನ್ಯರು ಮಾಡಿದಂತೆ ನಾನು ಅನಂತ ಕೋಟಿ ತಪ್ಪುಗಳನ್ನು ಮಾಡುತ್ತೇನೆ. ಅನ್ಯರ ತಪ್ಪುಗಳನ್ನು ಬಹಿರಂಗವಾಗಿ ಎಣಿಕೆ ಮಾಡುತ್ತೇನೆ. ಚರ್ಚೆಯಲ್ಲಿ ನನ್ನ ತಪ್ಪುಗಳು ಬರುವುದೇ ಇಲ್ಲ . ಹೀಗೇಕೆ ? ಎಂದು ಪ್ರಶ್ನಿಸಿಕೊಂಡರೆ ಸಾಕು :

ಚಿನ್ನದೊಳಗಣ ಬಣ್ಣದಂತೆ ಎನ್ನೊಳಗಿರ್ದೆಯಯ್ಯಾ :

ಚಿನ್ನ-ಬಣ್ಣ ಬೇರ್ಪಡಿಸಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಅರಿವು-ತನುವು ಬೇರ್ಪಡಿಸದಂತೆ ಎನ್ನ ತನುವಿನೊಳಗೇ ಅರಿಯ ಹೇಳುವ ಚೆನ್ನಮಲ್ಲಿಕಾರ್ಜುನನಿದ್ದಾನೆ ಎಂದಿದ್ದಾರೆ ಅಕ್ಕ. "ಎನ್ನ ತಪ್ಪು ಅನಂತ ಕೋಟಿ ನಿಮ್ಮ ಸೈರಣೆಗೆ ಲೆಕ್ಕವಿಲ್ಲ" ವೆಂದು ತನುವಿನೊಡೆಯ ಸಂಗಮನಾಥನನ್ನು ನೆನೆದಿದ್ದಾರೆ ಬಸವಣ್ಣ.

ಎನ್ನೊಳಗೆ ಇನಿತಿರ್ದು ಮೈದೋರದ ಭೇದವ ನಿಮ್ಮಲ್ಲಿ ಕಂಡೆ ಕಾಣಾ

ಚೆನ್ನಮಲ್ಲಿಕಾರ್ಜುನಾ :

ಚಿನ್ನದಿಂದ ಮಾಡಲ್ಪಟ್ಟ ಒಡವೆಗಳಿಗೆ ಮನ ಸೋಲುತ್ತದೆ. ಬಣ್ಣವನ್ನು ಮರೆಯುತ್ತದೆ. ಹಳದಿ ಬಣ್ಣ ಒಡವೆಗಳಿಗೆ ಶೋಭೆ ತಂದು ಆಕರ್ಷಿಸುವಂತೆ ಮಾಡಿತು. ನೋಡುವವರ ಕಣ್ಣುಗಳಿಗೆ ಆಭರಣ ಕಂಡು ಬಣ್ಣ ಮಾಯವಾಯಿತು. ಆಭರಣ ಕೆಡಿಸಿ ಮತ್ತೊಂದು ಆಭರಣ ಮಾಡಬಹುದು. ಚಿನ್ನದಲ್ಲಿದ್ದ ಬಣ್ಣ ಕೆಡಿಸಲು ಬರುವುದಿಲ್ಲ. ಲೋಹದಲ್ಲಿ ಹಳದಿ ಬಣ್ಣ ಎರಕವಾಗಿದೆ ಬೇರ್ಪಡಿಸದಂತೆ !

ಮನ ಆಭರಣವಿದ್ದಂತೆ. ದಿನಕ್ಕೊಂದು, ಕ್ಷಣಕ್ಕೊಂದು ರೂಪು ಆದಕ್ಕೆ. ಪ್ರತಿ ಆಭರಣದಲ್ಲಿಯೂ ಬಣ್ಣವಿದೆ. ಆಭರಣಕ್ಕೆ ತನಗಂಟಿದ ಬಣ್ಣ ನೋಡುವ ತವಕವಿಲ್ಲ. ಬಣ್ಣಕ್ಕೂ ತನ್ನ ಚಾಕಚಕ್ಯತೆಯನ್ನು ಆಭರಣಕ್ಕೆ ತೋರಬೇಕೆಂಬ ಬಯಕೆಯಿಲ್ಲ.

ಯೌವ್ವನ, ರೂಪ, ಮೈಮಾಟ, ಶ್ರೀಮಂತಿಕೆ, ಪಾಂಡಿತ್ಯ, ವಿದ್ಯೆ, ಅಧಿಕಾರ, ಇವು ತನುವಿನ ಆಭರಣಗಳು. ಪಡೆಯಬೇಕೆಂಬ ಬಯಕೆಯಿಂದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ತನುವಿನ ಆಶ್ರಯ ಪಡೆದವು.

ತನುವಿನಲ್ಲಿ ಮರೆಯಾದ ಅರಿವನ್ನು ಮನ ತಿಳಿಯಲು ಹೋಗಬೇಕು. ಅರಿವಿನಿಂದಲೇ ತನುವಿಗೆ ಶಾಶ್ವತ ಕೀರ್ತಿ. ಅರಿವು ಅನಂತ. ಅರಿವು ತನುವಿನ ಶಾಶ್ವತ ಗಂಡ. ಅರಿವಿನ ತನುವು ಬಣ್ಣವಿದ್ದ ಚಿನ್ನವಿದ್ದಂತೆ. ಬಣ್ಣವಿಲ್ಲದ್ದು ಬರೀ ಲೋಹ. ಅದನ್ನು ಯಾರೂ ಪ್ರೀತಿಸುವುದಿಲ್ಲ. ಅರಿವು ಬಿಟ್ಟ ತನುವು ಶವ. ಅದನ್ನು ಯಾರೂ ಕಾಮಿಸುವುದಿಲ್ಲ. ಒಂದಡಕೆಗೂ ಸಲ್ಲುವುದಿಲ್ಲ. ಅರಿವಿಗೆ ಸಾವಿಲ್ಲ. ತನುವಿಗೆ ಸಾವಿದೆ. *ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆನವ್ವ, ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು* ಎಂದು ಅಕ್ಕಮಹಾದೇವಿ ತನುವಿನ ಮರೆಯಲ್ಲಿದ್ದ ಚೆನ್ನಮಲ್ಲಿಕಾರ್ಜುನನನ್ನು ಭೇದಿಸಿ ಗಂಡನನ್ನಾಗಿ ಮಾಡಿಕೊಂಡಿದ್ದಾಳೆ. ಆ ಅರಿವಿನ ಗಂಡನಲ್ಲಿ ಸರ್ವ ಸುಖವನ್ನು ಕಂಡಿದ್ದಾಳೆ ಅಕ್ಕಮಹಾದೇವಿ.

■

ಅಜ್ಞಾನವನ್ನು ಜ್ಞಾನಿಯಾಗಿ ನೋಡುವ 'ಸಾಕ್ಷಿ' ಶಿಕ್ಷಣ

ಸಾಕ್ಷಿ ತಾನೆಂದಡೆ ಶಮನ ಕಾರ್ಯಕ್ಕೆ ಶುಭದವಾಯಿತ್ತಯ್ಯಾ,
ಸಾಕ್ಷಿ ತಾನಲ್ಲೆಂದಡೆ ಯಮನಕಾರ್ಯ ಬೀಳಾಯಿತ್ತಯ್ಯಾ,
ಸಾಕ್ಷಿ ಎಂಬುದು ವೃತ್ತಿಯಲ್ಲಲ್ಲದೆ ನಿವೃತ್ತಿಯಲ್ಲದೆಂತಯ್ಯಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ?

- ಸಿದ್ಧರಾಮ ಶಿವಯೋಗಿ

ಸಿದ್ಧರಾಮ ಶರಣರ ಸಾಕ್ಷೀ ಸೂತ್ರದ ವಚನವಿದು. ತನಗೆ ಮತ್ತೊಬ್ಬರು ಸಾಕ್ಷಿಯಾಗಿ ಹೇಳುವ ಪರಿಚಯವಿದೆ. ತನಗೆ ತನ್ನ ಜ್ಞಾನವೇ ಸಾಕ್ಷಿಯಾಗುವ ಪರಿಚಯ ಬಹಳ ವಿರಳ ! ತನಗೆ ತಾನೇ ಸಾಕ್ಷಿಯಾಗಿ ದಮನಕಾರ್ಯವನ್ನು ಹೇಗೆ ಶಮನಗೊಳಿಸಿಕೊಳ್ಳಬಹುದು ಎನ್ನುವ ವಿಧಾನವನ್ನು ಹೇಳಿದ್ದಾರೆ ಶರಣರು.

ಸಾಕ್ಷಿ ತಾನೆಂದಡೆ ಶಮನ ಕಾರ್ಯಕ್ಕೆ ಶುಭದವಾಯಿತ್ತಯ್ಯಾ:

ಸಾಕ್ಷಿ- 1: ವಸ್ತುಗಳನ್ನು ನೋಡಿ, ಆ ವಸ್ತುಗಳನ್ನು ಬಯಕೆ ಮಾಡಿ ಪಡೆಯುವುದು ; ದೊರೆಯದಿದ್ದಲ್ಲಿ ವಿಕೃತವಾಗಿಯಾದರೂ ಪಡೆಯುವುದು. ಅದನ್ನು ಅನುಭವಿಸುವುದು. ಈ ವಸ್ತುವನ್ನೇ ಸಾಕ್ಷಿಯಾಗಿ ನೋಡಿ ವಸ್ತುವಿನೊಂದಿಗೆ ಮಿತ್ರತ್ವ ಬಯಸಿ ತನಗೆ ಉರುಲು ಮಾಡಿಕೊಳ್ಳುವುದು. ಅಲ್ಪ ಸುಖವೇ ತನಗೆ ನೇಣಾಗುವುದು. **ಉದಾ :** ರೂಪ-ರುಚಿ-ಭೂಮಿ- ಹಣ- ಚಿನ್ನ ಮುಂತಾದ ವಸ್ತುಗಳಾಗಿರಬಹುದು.

ಸಾಕ್ಷಿ- 2 : ವಸ್ತುವಿನಲ್ಲಿರುವ ಸತ್ಯವನ್ನು ತಾನು ಸಾಕ್ಷಿಯಾಗಿ ನೋಡುವುದು. ವಸ್ತುವಿನಲ್ಲಿ ತನಗೆ ಉಂಟಾದ ಸುಖವನ್ನು ಸಾಕ್ಷಿಯಾಗಿ ನೋಡುವುದು. ವಸ್ತುವಿನಲ್ಲಿ ತನಗೆ ಬಯಕೆಯಾದ ಬಗೆಯನ್ನು ತಾನೇ ಸಾಕ್ಷಿಯಾಗಿ ನೋಡುವುದು. ವಸ್ತುವು ತನ್ನನ್ನು ಬಯಕೆ ಮಾಡಲಿಲ್ಲ. ತಾನೇ ವಸ್ತುವನ್ನು ಬಯಕೆ ಮಾಡಿದ. ತಾನೇ ವಸ್ತುವಿಗೆ ಮರುಳಾದ. ತಾನೇ ವಸ್ತುವಿಗೆ ಸೆರೆಯಾದ. ವಸ್ತುವಿನಲ್ಲಿ ತನ್ನನ್ನು ಸೆರೆ ಮಾಡಿಕೊಳ್ಳುವ ಯಾವ ಗುಣ ವಿದೆ ? ಚಿನ್ನದಲ್ಲಿಯ ಬಣ್ಣ ತನ್ನನ್ನು ಸೆರೆ ಮಾಡಿಕೊಂಡಿತೋ? ಅಥವಾ ಆಭರಣದ ಮಾಟ ಸೆರೆ ಮಾಡಿಕೊಂಡಿತೋ? ಆಭರಣದಲ್ಲಿ ಹಳದಿ ಬಣ್ಣವಿಲ್ಲದಿದ್ದರೆ ಆ ಮಾಟಕ್ಕೆ ಬೆಲೆಯಿಲ್ಲ. ಚಿನ್ನದಲ್ಲಿ ಬಣ್ಣವಿಲ್ಲದಿದ್ದರೆ ಅದು ಲೋಹ. ಲೋಹವನ್ನು ಯಾರೂ ಪ್ರೀತಿಸುವುದಿಲ್ಲ. ಚಿನ್ನ ಲೋಹವಲ್ಲದೆ ಬೇರಲ್ಲ.

ಹೀಗೆ ವಸ್ತುವಿನ ಸತ್ಯವನ್ನು ಸಾಕ್ಷಿಯಾಗಿ ನೋಡಲು ಹೋದಾಗ ಚಿನ್ನದ

ಆಭರಣದ ಮೇಲೆ ತನಗೆ ಉಂಟಾದ ದಮನ ಕಾರ್ಯ ನಿಂತು ಶಮನಕಾರ್ಯ ಉದಯವಾಗುತ್ತದೆ.

ಕಪ್ಪು ಲೋಹ ಹೇರಳವಾಗಿ ಸಿಗುತ್ತದೆ. ಹಳದಿಲೋಹ ವಿರಳವಾಗಿ ಸಿಗುತ್ತದೆ. ಚಿನ್ನ ವಿನಿಮಯಕ್ಕಾಗಿ ಬಳಕೆಯಾಯಿತು. ವಿನಿಮಯಕ್ಕಾಗಿ ಬಳಕೆಯಾಗುವ ಚಿನ್ನ ಆಭರಣಕ್ಕೆ ಬಳಕೆಯಾಗಿ, ಆಭರಣ ಮೋಹಕ್ಕೆ ಗುರಿಯಾಯಿತು. ವಸ್ತುವಿನ ಸತ್ಯವನ್ನು ತನ್ನ ಸಾಕ್ಷಿ ಮುಖಾಂತರ ನೋಡಲು ಹೋದಾಗ ತನಗೆ ಸಂತೋಷವನ್ನುಂಟು ಮಾಡಿತು. ವಸ್ತು ಬಯಕೆ ಉಂಟುಮಾಡಿ ಉರುಳಾಯಿತು.

ಸಾಕ್ಷಿ ತಾನಲ್ಲೆಂದಡೆ ಯಮನಕಾರ್ಯ ಬೀಳಾಯಿತ್ತಯ್ಯಾ. ಸಾಕ್ಷಿಯೆಂಬುದು ವೃತ್ತಿಯಲ್ಲಲ್ಲದೆ ನಿವೃತ್ತಿಯಲ್ಲದೆಂತಯ್ಯಾ ಕಪಿಲಸಿದ್ಧ ಮಲ್ಲಿಕಾರ್ಜುನಾ :

ಚನ್ನಬಸವಣ್ಣವರು ಸಾಕ್ಷಿ ಪದವನ್ನು ಮೂರು ಬಾರಿ ಬಳಸಿದ್ದಾರೆ. ವಸ್ತುವನ್ನು ಸಾಕ್ಷಿಯಿಂದ ನೋಡಿ ಬಯಕೆ ಮಾಡುವುದು ಒಂದು ಸಾಕ್ಷಿ. ವಸ್ತುವಿನ ಮೂಲ ಅಥವಾ ವಸ್ತುವಿನ ಸತ್ಯವನ್ನು ಸಾಕ್ಷಿ ಮುಖಾಂತರ ನೋಡಿ ಬಯಕೆ ಮಾಡದೆ ಇರುವುದು ಎರಡನೆಯದು. ಈ ಎರಡನ್ನು ನೋಡುವುದರಲ್ಲಿ ಸಾಕ್ಷಿ ಎನ್ನುವ ವೃತ್ತಿ ಅಡಗಿದೆ. ಒಂದು ನೋಡಿ ಬಯಕೆಯಾಗುತ್ತದೆ, ಮತ್ತೊಂದನ್ನು ನೋಡಿ ಬಯಕೆ ಇಲ್ಲವಾಗುತ್ತದೆ. ಇವೆರಡೂ ನೋಟಗಳು ವೃತ್ತಿಯನ್ನುಂಟುಮಾಡಿದವು.

ಈ ಎರಡೂ ಸಾಕ್ಷಿ ನಿವೃತ್ತಿಯಾದರೆ ಅಪ್ಪಟ ಜ್ಞಾನಿ ತಾನೆ, ಕಪಿಲಸಿದ್ಧ ಮಲ್ಲಿಕಾರ್ಜುನ ತಾನೆ. ಸೂರ್ಯನನ್ನು ನೋಡಿದಾಗ ಸೂರ್ಯ ಸಂಜೆ ಕತ್ತಲಿಗೆ ಗುರಿಯಾದ. ಸಾಕ್ಷಿಯಿಂದ ನೋಡಿದಾಗ ಬೆಳಗು ಕತ್ತಲೆ ಸಹಜವಾಯಿತು. ಅರಿವಿನಿಂದ ನೋಡಿದಾಗ ಬೆಳಗಿನಿಂದಲೇ ಕತ್ತಲೆ ಸೃಷ್ಟಿಯಾದದ್ದು ಗೋಚರಿಸಿತು. ಸೂರ್ಯನ ಬೆಳಕು ಸದಾ ಇದೆ. ಬೆಳಗಿಂಗೆ ಬೆಳಕಾಗಿದೆ. ಭೂಮಿ ತಿರುಗುವುದರಿಂದ ಬೆಳಕೇ ನೆರಳಾಗಿದೆ. ಆ ನೆರಳೇ ಕತ್ತಲಾಗಿದೆ. ಬೆಳಕಿನಿಂದ ಸೃಷ್ಟಿಯಾದ ನೆರಳು ಬೆಳಕಿನಿಂದಲೇ ಬೆಳಕಾಗುತ್ತದೆ. ಬೆಳಕು ಸದಾ ಬೆಳಕು, ಕತ್ತಲೆ ಎಂಬುದೇ ಇಲ್ಲ. ಹಾಗೆಯೇ ತನಗೆ ಮರಣವೆಂಬುದೇ ಇಲ್ಲ. ಆಗ ಯಮನ ಕಾರ್ಯವೂ ಬೀಳಾಗುತ್ತದೆ. ಇದು ಶರಣರ ಬೆಳಕಿನ ಶಿಕ್ಷಣ. ತನ್ನ ಅಜ್ಞಾನಕ್ಕೆ ತಾನೆ ಜ್ಞಾನಿಯಾಗಿ ನೋಡುವ ಶಿಕ್ಷಣ. ಯಮನ ಕಾರ್ಯವೇ ಬೀಳಾಗಿ ಅಮರವಾಗುವ ಶಿಕ್ಷಣ.

■

ಪದ-ಪದಾರ್ಥ

ಪದವೆಂಬರು ಪದಾರ್ಥೆಂಬರು.
ಪದವಾವುದೆಂದರಿಯರು, ಪದಾರ್ಥವಾವುದೆಂದರಿಯರು.
ಪದ ಲಿಂಗ, ಪದಾರ್ಥ ಭಕ್ತ.
ಇದನರಿದು ಪದಾರ್ಥ ತಂದು ಲಿಂಗಾರ್ಪಿತವ ಮಾಡಬಲ್ಲರೆ
ಕೂಡಿಕೊಂಡಿಪ್ಪ ನಮ್ಮ ಕೂಡಲ ಚೆನ್ನಸಂಗಮದೇವಾ.

- ಚೆನ್ನಬಸವಣ್ಣ

ಅಂತರಂಗದಲ್ಲಿರುವ ಜ್ಞಾನ ತಿಳಿದಾಗ ಜಾತಿ ಮತ ಪಂಥ ಇಲ್ಲವಾಗುತ್ತದೆ. ಕಾಮ, ಕ್ರೋಧ, ಲೋಭ, ಮುಂತಾದ ಅರಿಷಡ್ವರ್ಗಗಳೂ ಇಲ್ಲವಾಗುತ್ತವೆ. ನುಡಿಯುವ ನುಡಿಯೆಲ್ಲ ನುಡಿಗೆಟ್ಟು ಜ್ಞಾನವಾಗುತ್ತದೆ.

ಪ್ರಪಂಚದ ಆಗು ಹೋಗುಗಳಿಗೆ ಎರಡೇ ಕಾರಣವಾಗಿವೆ. ಒಂದು 'ಪದ' ವಾದರೆ ಮತ್ತೊಂದು ಪದವನ್ನು ಉತ್ಪನ್ನ ಮಾಡುವ 'ಪದಾರ್ಥ'. ದೇಹ 'ಪದಾರ್ಥ' ವಾದರೆ ಆ ಪದಾರ್ಥದಿಂದ ಜನ್ಮ ತಾಳಿದ ಶಬ್ದವೇ 'ಪದ' !

ಪದಾರ್ಥದಿಂದ ಹುಟ್ಟುವ ಪದಗಳಿಂದಲೇ ಪದಾರ್ಥಕ್ಕೆ ವಿಪತ್ತು. ಪದಾರ್ಥದಿಂದ ಉಂಟಾದ ಚೀತ್ಕಾರದ ಪಧದಿಂದಲೇ ಪದಾರ್ಥದ ಜನನ. ಈ ಪದ-ಪದಾರ್ಥದಲ್ಲಿಯೇ ವಿಶ್ವದ ಆಗು ಹೋಗುಗಳು ಅಡಗಿವೆ.

ಪದಾರ್ಥದಿಂದ ಜನ್ಮ ತಳೆದ ಪದಗಳೆಲ್ಲ ಶ್ರೇಷ್ಠವೆ. ಆದರೆ ಪದಾರ್ಥಕ್ಕೆ ಪದ ಬಡಿದರೆ ಸಾಕು ನರಕಯಾತನೆ. ಸುಣ್ಣದ ಕಲ್ಲಿನಲ್ಲಿ ನೀರು ಹಾಕಿ ಕಲಕಿದಂತೆ. ಕೈಕೇಯಿಯ ಎರಡು ಪದಗಳಿಂದ ಶ್ರೀರಾಮ ಹದಿನಾಲ್ಕು ವರ್ಷ ವನವಾಸಕಂಡ. "ವಾಕಟ್ಟುಸಮೊ" ಎನ್ನುವ ಒಂದೇ ಒಂದು ಪದ ಎರಡನೇ ಮಹಾಯುದ್ಧಕ್ಕೆ ಕಾರಣವಾಯಿತು. ಎರಡು ಲಕ್ಷ ಪದಾರ್ಥಗಳು (ದೇಹ) ರಕ್ತದ ಮಡುವಿನಲ್ಲಿ ಮುಳುಗಿದವು. ಪದಾರ್ಥದಿಂದ ಬಂದ ಪದವನ್ನೇ ಪದಾರ್ಥ ಸಹಿಸಿಕೊಳ್ಳುವುದಿಲ್ಲ. ಎಲ್ಲವನ್ನು ತಿಳಿಯುವ ಮನುಷ್ಯನಿಗೆ ಇದು ತಿಳಿಯಲಾರದ ಗುಟ್ಟಾಗಿದೆ !

ದ್ರೌಪದಿಯ ಒಂದು 'ಪದ' ಮಹಾಭಾರತದ ಯುದ್ಧಕ್ಕೆ ಕಾರಣವಾಯಿತು. ರಕ್ತದ ಕಾಲುವೆ ಹರಿಯಿತು.

ಹಸುವಿನ ಹಾಲು ಅಮೃತಕ್ಕೆ ಸಮಾನ. ಅಂತೆಯೇ ದೇಹದಿಂದ ಬಂದ ಶಬ್ದಗಳೆಲ್ಲ(ಬ್ರಪೃ) ಜ್ಞಾನವೇ. ಜ್ಞಾನಾಮೃತವೇ ಶಬ್ದ ತಿಳಿಯುವ ಶಿಕ್ಷಣ ವಿರಳವಾದದ್ದಕ್ಕೆ

ದೇಹದಿಂದ ಸಿಡಿದ ಶಬ್ದ ಅಣುಬಾಂಬಿಗೂ ಅಧಿಕ ಶಕ್ತಿ ಶಾಲಿಯಾಗಿದೆ. ದೇಹದಿಂದಲೇ ಜನಿಸಿದ ಶಬ್ದ ದೇಹಗಳನ್ನೇ ಕೊಲ್ಲುವ ರಾಕ್ಷಸ ಶಕ್ತಿಯನ್ನು ಹೊಂದಿದೆ. ಶಬ್ದ ತಿಳಿಯುವ ಜ್ಞಾನ ದೂರವಾಗುತ್ತಿರುವುದು ವಿಪರ್ಯಾ ಸವೇ ಸರಿ.

ಪದ ಲಿಂಗ, ಪದಾರ್ಥ ಭಕ್ತ. ಇದನರಿದು ಪದಾರ್ಥ ತಂದು ಲಿಂಗಾರ್ಪಿತವ ಮಾಡಬಲ್ಲರೆ ಕೂಡಿಕೊಂಡಿಪ್ಪ ನಮ್ಮ ಕೂಡಲ ಚೆನ್ನಸಂಗಮದೇವಾ :

ದೇಹದಲ್ಲಿ ಹುಟ್ಟಿದ ಶಬ್ದಗಳೆಲ್ಲ (ಲಿಂಗ) ಜ್ಞಾನವೇ. ಆ ಜ್ಞಾನವುಳ್ಳ ಪದಾರ್ಥ (ದೇಹ) ಭಕ್ತನೇ. ದೇಹದಲ್ಲಿ ಹುಟ್ಟಿದ ಶಬ್ದವನ್ನೂ ದೇಹಕ್ಕೆ ಅರ್ಪಣೆ ಮಾಡುವ ಶಿಕ್ಷಣ ಹೊಳೆದರೆ ಕೂಡಲ ಚೆನ್ನ ಸಂಗಮದೇವ (ಶಬ್ದ) ದೇಹದಲ್ಲಿ ಕೂಡಿಕೊಂಡು ಶಬ್ದ ಬ್ರಹ್ಮನಾಗುತ್ತಾನೆ. ಎನ್ನುತ್ತಾರೆ ಮಹಾಜ್ಞಾನಿ ಚೆನ್ನಬಸವಣ್ಣ.

“ನಿರಾಳ ಕೂಸಿಂಗೆ ಬೆಣ್ಣೆಯನ್ನಿಕ್ಕಿ ಹೆಸರಿಟ್ಟು ಕರೆದವರಾರೊ ಅಕಟಕಟಾ ಶಬ್ದದ ಲಜ್ಜೆಯ ನೋಡಾ; ಗುಹೇಶ್ವರನನರಿಯದ ಅನುಭಾವಿಗಳ ತರಕಟ ಕಾಡಿತ್ತು”
ದೇಹದಲ್ಲಿ ಹುಟ್ಟಿದ ಜ್ಞಾನ ನಿರಾಳ.ಅದಕ್ಕೆ ಯಾರೂ ಹೆಸರಿಡಲಿಲ್ಲ. ದೇಹಕ್ಕೆ ನಾಮಕರಣ ಮಾಡಿ ಹೆಸರಿಟ್ಟು ಕರೆದರು. ಆ ಹೆಸರೆ ಪ್ರಧಾನವಾಗಿ ದೇಹದಲ್ಲಿರುವ ಜ್ಞಾನ ಹಾಗೇ ಉಳಿಯಿತು. ಆ ಹೆಸರೆ ಪದವಿ ಪಡೆದು ಅಧಿಕಾರಿಯಾಯಿತು. ಚುನಾವಣೆಯಲ್ಲಿ ಗೆದ್ದು ಮಂತ್ರಿಯಾಯಿತು. ಏನೂ ಕಲಿಯದೆ ದಡ್ಡನಾಯಿತು. ದುಡಿದು ಶ್ರೀಮಂತನಾಯಿತು. ದುಡಿಯದೆ ದರಿದ್ರ ಭಿಕ್ಷುಕನಾಯಿತು. ದೇಹಕ್ಕಿಟ್ಟ ಹೆಸರೆ ಅಜ್ಞಾನಕ್ಕೆ ಕಾರಣವಾಯಿತು. ದೇಹದಲ್ಲಿರುವ ಜ್ಞಾನ (ಗುಹೇಶ್ವರ) ಹೊಳೆಯಲೇ ಇಲ್ಲ. ಬಳಕೆಯಾಗಲೇ ಇಲ್ಲ. ಪುಸ್ತಕ ಓದಿ ಪಂಡಿತರಾದರೇ ಹೊರತು (ಗುಹೇಶ್ವರನ) ಜ್ಞಾನವ ತಿಳಿಯಲಿಲ್ಲ. ಶಬ್ದಕ್ಕೆ ನಾಚಿದರು. ಸಿಡಿಮಿಡಿಗೊಂಡರು. ಶಬ್ದದೊಂದಿಗೆ ಶಬ್ದ ಬಳಸಿ ಯುದ್ಧ ಮಾಡಿದರು. ದೇಹದಿಂದಲೇ ಹೊರ ಬಂದ ಶಬ್ದವನ್ನು ದೇಹವು ಹೂವಿನಂತೆ ಸ್ವೀಕರಿಸಲಿಲ್ಲ. ಅಕಟಕಟಾ ಶಬ್ದದ ಲಜ್ಜೆಯ ನೋಡಾ ಗುಹೇಶ್ವರನನು ಅರಿಯದ ಅನುಭಾವಿಗಳ ತರಕಟ ಕಾಡಿತ್ತು. ಎಂದಿದ್ದಾರೆ ಪ್ರಭುಗಳು ಮಾರ್ಮಿಕವಾಗಿ.

■

ಸತ್ಯದ ಮನೆಯಲ್ಲಿ ಸುಳ್ಳಿನ ಪ್ರವೇಶ

ಅಸ್ತಿ ಭಾತಿ ಎಂಬ ಎನ್ನ ಸತ್ಯದಲ್ಲಿ,
ನಾಮ ರೂಪು ಎಂಬ ಹುಸಿ ಎಂತು ಜನಿಸಿತ್ತೆಂದು ಅರಿಯೆನಯ್ಯಾ
ಇಲ್ಲದ ಹೆಸರುಳ್ಳ ಚಿತ್ತಾರದಂತೆ
ದೇಹ ನಾಮವೀತೆರನೆಂದರಿಯದೆ
ತೊಳಲಿ ಬಳಲುತ್ತಿದ್ದೆನಯ್ಯಾ ಕೂಡಲ ಚೆನ್ನಸಂಗಯ್ಯಾ
ಸಂಸಾರ ಬಂಧನ ಯನಗಿದೇ ಕಂಡಯ್ಯಾ.

-ಚೆನ್ನಬಸವಣ್ಣ

ಸದಾ ಸತ್‌ಚಿತ್ ಆನಂದವೇ ತುಂಬಿರಬೇಕಾದ ದೇಹದಲ್ಲಿ ಹೆಸರು ಮತ್ತು ರೂಪ ಎಂಬ ಸುಳ್ಳು ಹೇಗೆ ಹುಟ್ಟಿದವೆಂದು ತಿಳಿಯುತ್ತಿಲ್ಲ ಎಂದು ಚೆನ್ನಬಸವಣ್ಣನವರು ಪ್ರಶ್ನಿಸಿದರೆ, ಸತ್-ಚಿತ್-ಆನಂದವೆಂಬ ನಿರಾಳ ಕೂಸಿಂಗೆ ಬೆಣ್ಣೆಯನಿಕ್ಕಿ ಹೆಸರನಿಟ್ಟು ಕರೆದವರಾರೊ ಆಕಟಕಟಾ ಶಬ್ಧದ ಲಜ್ಜೆಯ ನೋಡಾ ಎಂದಿದ್ದಾರೆ ಅಲ್ಲಮ ಪ್ರಭುಗಳು.

ಸತ್‌ಚಿತ್ ಆನಂದವನ್ನೇ ಸದಾನೆನೆವ ಮನಕ್ಕೆ ಚಿನ್ನ ತೋರಿತು, ಸತ್ಯ ನೋಡುವ ಕಣ್ಣುಗಳಿಗೆ ಹೆಣ್ಣು-ಗಂಡು ಎಂಬ ವಿಷಯ ತೋರಿತು. ಮಣ್ಣು ತೋರಿತು. ಸುಳ್ಳೇ ಸತ್ಯವಾಯಿತು. ಸತ್ಯ ರೂಪಿನಲ್ಲಿ ಮರೆಯಾಯಿತು.

ರೂಪ ಹಾವಿನ ಬಾಯಿಯೊಳಗಿದ್ದ ಕಪ್ಪೆಯಂತೆ. ಎಂದಾದರೂ ತಿಂದು ಹಾಕಬಹುದು.ರೂಪಕ್ಕೆ ಈ ಸತ್ಯದ ಅರುವಿದ್ದರೂ ಭೂಮಿ ಹೇಮ ವಿಷಯವನ್ನೇ ಅವಲಂಬಿಸಿದೆ.ರೂಪದೊಳಗಣ ನಿರೂಪವೆಂಬ ಸತ್ಯವನ್ನೇ ನೋಡುವ ಕಣ್ಣಿನಲ್ಲಿ ಹುಸಿ ತುಂಬಿದೆ. ನಿರಾಳವೆಂಬ ಸತ್ಯ ತುಂಬಿದ ರೂಪದಲ್ಲಿ ಹೆಸರೆಂಬ ಹುಸಿಯೂ ತುಂಬಿದೆ.

ಇಲ್ಲದ ಹೆಸರುಳ್ಳ ಚಿತ್ತಾರದಂತೆ :

ರೂಪದಲ್ಲಿ ಹೆಸರು ಎಲ್ಲಿ ಹುಡುಕಿದರೂ ಸಿಗುವುದಿಲ್ಲ. ಹೆಸರು ಹುಸಿ. 'ಚಕ್ಕಡಿ' ಎನ್ನುವ ಹೆಸರಿನಲ್ಲಿ ಎರಡು ಚಕ್ರಗಳು, ನೊಗ ಇರಸು ಚಟ್ಟ ಕೀಲು ಸೇರಿವೆ. ಇವೆಲ್ಲ ಸೇರಿ ಚಕ್ಕಡಿಯಾಗಿದೆ. ಚಕ್ರಗಳು ಚಕ್ಕಡಿಯಲ್ಲ. ನೊಗವೂ ಚಕ್ಕಡಿಯಲ್ಲ. ಇರಸೂ ಚಕ್ಕಡಿಯಲ್ಲ. ಬಿಡಿ ಬಿಡಿ ವಸ್ತುಗಳು ಸೇರಿ ಚಕ್ಕಡಿಯಾಯಿತು. ಆ ವಸ್ತುವಿಗೆ ಚಕ್ಕಡಿ ಎಂದು ನಾಮಕರಣವಾಯಿತು. ಚಕ್ಕಡಿ ದಿಟವಾಯಿತು. ವಸ್ತುಗಳು ಹುಸಿಯಾದವು. ಬಿಡಿ ವಸ್ತುಗಳಲ್ಲಿಯ ಹಾಗೂ ಚಕ್ಕಡಿಯಲ್ಲಿಯ ಸತ್ಯ ಮರೆಯಾದ

ಹಾಗೆಯೇ ರೂಪಕ್ಕಿಟ್ಟ ಹೆಸರು ದಿಟವಾಗಿ ಸತ್ಯ ಮರೆಯಾಯಿತು.

ಕಲಾವಿದ ಬರೆದ ಚಿತ್ರದಲ್ಲಿ ಕಾಗದ ಮಸಿ ಮರೆಯಾಯಿತು. ಕಲಾವಿದನೂ ಮರೆಯಾದ. ಬರೆದ ಚಿತ್ರ ದಿಟವಾಯಿತು. ಬರೆದ ಚಿತ್ರ ಪಾರ್ವತಿಯದಾದರೆ ಪಾರ್ವತಿಗೆ ಪೂಜೆ. ಪರಮೇಶ್ವರ, ವಿಷ್ಣು,ಬುದ್ಧ,ಬಸವ ಮಹಾವೀರ ಮುಂತಾದ ಚಿತ್ರಗಳಿಗೆ ಪೂಜೆ. ಕಲಾವಿದ ಮಸಿಯಿಂದ ಏನು ಬರೆದರೂ ಅದೇ ಸತ್ಯವಾಗಿ, ಮಸಿ, ಬಳಸಿದ ಕುಂಚ, ಕಾಗದ ಹೆಸರಿನ ಹಿಂದೆ ಇರುವ ಸತ್ಯ ಹುಸಿಯಾಗುತ್ತದೆ.

ತೊಳಲಿ ಬಳಲುತ್ತಿದ್ದೆನಯ್ಯಾ ಕೂಡಲ ಚೆನ್ನ ಸಂಗಯ್ಯಾ ಸಂಸಾರ ಬಂಧನ ಯನಗಿದೇ ಕಂಡಯ್ಯ:

ರೂಪ ಮತ್ತು ಹೆಸರಿನ ಹುಸಿಯಿಂದ ನಿರ್ಮಾಣವಾದ ಸಂಸಾರವೆಂಬ ಬಂಧನದಲ್ಲಿ ತೊಳಲಿ ಬಳಲುವ ರೂಪಕ್ಕೆ ತನ್ನ ರೂಪ ಮತ್ತು ಹೆಸರಿನ ಸತ್ಯದ ಅರಿವುಂಟಾಗಬೇಕಿದೆ.

'ಸಂಸಾರವೆಂಬ ಮಹಾವ್ಯಾಧಿ ಬಾಧಿಸಿ ನಡೆವೆಣನ ಮಾಡಿ ಕಾಡುತ್ತಿದೆ ನೋಡಯ್ಯಾ, ಮುಂದೆ ಸತ್ಪಥದಲ್ಲಿ ಅಡಿಯಿಡಲು ಶಕ್ತಿಯಿಲ್ಲ ಅಧಮನ ಮಾಡಿ ಕಾಡುತ್ತಿದೆ ನೋಡಯ್ಯ. ಶಿವನೆ, ನಾನು ನಿನ್ನ ಬೇಡಿಕೊಂಬೆನು. ನೀನೆ ಶ್ರೀಗುರುವೆಂಬ ವೈದ್ಯನಾಗಿ ಬಂದು, ಕೃಪಾ ಪ್ರಸಾದವೆಂಬ ಮದ್ದು ಕೊಟ್ಟು, ಪಂಚಾಕ್ಷರಿಯೆಂಬ ಪಥ್ಯ ವನೆರೆದು, ಸಂಸಾರ ವ್ಯಾಧಿಯ ಮಾಣಿಸಯ್ಯಾ ನಿಮ್ಮ ಧರ್ಮ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.''ರೂಪ ಮತ್ತು ಹೆಸರುಳ್ಳ ಸಂಸಾರ ಮಹಾ ವ್ಯಾಧಿಯಂತೆ ಬಾಧಿಸಿ, ನಡೆಯುವ ಹೆಣನಂತೆ ಮಾಡಿ ಕಾಡುತ್ತಲಿದೆ. ಸತ್ಪಥದಲ್ಲಿ ಅಡಿಯಿಡಲು ಶಕ್ತಿಯಿಲ್ಲ. ರೂಪದಲ್ಲಿ ಮರೆಯಾದ ನಿರೂಪನೆಂಬ ಶಿವನೇ, ನೀನೇ ಶ್ರೀಗುರುವೆಂಬ ವೈದ್ಯನಾಗಿ ಬಂದು, ರೂಪ ನೋಡುವ ಕಣ್ಣಿಗೆ, ಕೇಳುವ ಕಿವಿಗೆ, ವಾಸಿಸುವ ಮೂಗು, ಸ್ಪರ್ಶಿಸಿ ಸುಖಿಸುವ ಚರ್ಮಕ್ಕೆ ರುಚಿಸುವ ನಾಲಿಗೆಗೆ ಔಷಧಿಯನು ಕೊಟ್ಟು ಹುಸಿ ಸಂಸಾರದ ವ್ಯಾಧಿಯ ಕಳೆಯಯ್ಯಾ ಎಂದಿದ್ದಾರೆ ಶರಣರು.

■

ವ್ಯಕ್ತಿಯಲ್ಲಿ ಅಡಗಿದ್ದ ಅವ್ಯಕ್ತ

ಆದಿ ಅನಾದಿ ಇಲ್ಲದಂದು, ಶೂನ್ಯ ಮಹಾಶೂನ್ಯವಿಲ್ಲದಂದು,
ಸಾಧ್ಯಾಸಾಧ್ಯವಿಲ್ಲದಂದು, ರೂಪು-ನಿರೂಪು ಇಲ್ಲದಂದು,
ಸ್ಥೂಲ ಸೂಕ್ಷ್ಮವಿಲ್ಲದಂದು, ಸಾಕಾರ ನಿರಾಕಾರವಿಲ್ಲದಂದು,
ವಾಕ್ಕು ಹುಟ್ಟದಂದು, ದ್ವೈತಾದ್ವೈತವಿಲ್ಲದಂದು,
ಶಂಕರ ಶಶಿಧರ ಈಶ್ವರರೆಂಬ ಗಣಾಧೀಶ್ವರರಿಲ್ಲದಂದು,
ವರ್ತನೆ ನಿರ್ವರ್ತನೆ ಇಲ್ಲದಂದು, ಉಮೆಯ ಕಲ್ಯಾಣ
ವಿಲ್ಲದಂದು, ಇವರಾರೊಬ್ಬರ ನಾಮಸೀಮೆ ಇಲ್ಲದಂದು,
ನೀನುಲುಹಡಗಿದ್ದೆಯಲ್ಲಾ ಕಲಿದೇವಯ್ಯಾ.

- ಮಡಿವಾಳ ಮಾಚಿದೇವ

ಜ್ಞಾನ ಸಹಜ ! ಶಬ್ದಗಳ ಜೋಡಣೆಯಿಂದ, ಮಹಾನ್ ಗ್ರಂಥಗಳಿಂದ, ಜ್ಞಾನ ವೃದ್ಧಿಯಾಗಿಲ್ಲ . ಬದಲಾಗಿ ಚರ್ಚೆಗೆ, ತರ್ಕಕ್ಕೆ , ವಿವಾದಕ್ಕೆ ಗ್ರಾಸವಾಗಿ ಅಜ್ಞಾನ ಅತಿಯಾಗಿದೆ. ಮಹಾಭಾರತ, ರಾಮಾಯಣ, ಭಗವದ್ಗೀತೆ, ಬೈಬಲ್,ಉಪನಿಷತ್‌ಗಳು ಜ್ಞಾನಕ್ಕೆ ಹೋಗುವ ಮಹಾನ್ ಸೂತ್ರಗಳಾದರೂ ಜಾತಿ-ಮತ, ಧರ್ಮ, ಪಂಗಡಗಳ ಸೃಷ್ಟಿಗೆ ಕಾರಣವಾದವು.

ಮಡಿವಾಳ ಮಾಚಿದೇವರು ಜಾತಿ-ಮತ, ಪಂಥಗಳನ್ನು ಸೃಷ್ಟಿ ಮಾಡಿದ ಗ್ರಂಥಗಳಲ್ಲಿರುವ ಜ್ಞಾನವನ್ನು ಎಂಜಲೆಂದು ಕರೆದು, ದೇಹದಲ್ಲಿ ಜ್ಞಾನ ಅಡಗಿದ ವಿಧಾನವನ್ನು ಎತ್ತಿ ಹಿಡಿದಿದ್ದಾರೆ.

ಆದಿ ಅನಾದಿ ಕಾಲದಿಂದಲೂ ಜ್ಞಾನದ ಸೂತ್ರಗಳು ದೊರೆಯುತ್ತವೆ. ಆದಕ್ಕೂ ಮುನ್ನ ಜ್ಞಾನವಿದೆ. ಜ್ಞಾನವನ್ನು ಶೂನ್ಯ-ಮಹಾಶೂನ್ಯ ಎನ್ನುವ ಪದದಿಂದ ಕರೆದರೂ ಆದಕ್ಕೂ ಮುನ್ನ ಜ್ಞಾನವಿದೆ. ಪರಿಪೂರ್ಣ ಜ್ಞಾನ ನಿಲುಕುವುದು ಸಾಧ್ಯ ಅಸಾಧ್ಯ ಎಂದು ಸಿದ್ಧಾಂತಗಳೊಂದಿಗೆ ಚರ್ಚಿಸಿದರೂ ಅದಕ್ಕೂ ಮುನ್ನ ಜ್ಞಾನವಿದೆ. ಜ್ಞಾನ ಸಾಕಾರವೆಂದರೂ ಇದೆ. ನಿರಾಕಾರವೆನ್ನುವ ಮುನ್ನವೂ ಇದೆ. ಮಾತು ಹುಟ್ಟುವ ಮುನ್ನ, ದ್ವೈತ- ಅದ್ವೈತ ಸಿದ್ಧಾಂತಗಳಿಗೂ ಮುನ್ನ ಜ್ಞಾನವಿದೆ.

ಶಂಕರ ಶಶಿಧರ ಈಶ್ವರರೆಂಬ ಗಣಾಧೀಶ್ವರರು ಹುಟ್ಟುವ ಮುನ್ನವೂ ಜ್ಞಾನವಿದೆ. ಉಮೆಯ ಕಲ್ಯಾಣಕ್ಕೂ ಮೊದಲು ಜ್ಞಾನವಿದೆ. ಜ್ಞಾನ ಸೀಮಿತ ವ್ಯಕ್ತಿಗಳಿಂದ ಹುಟ್ಟಿಲ್ಲ, ಜ್ಞಾನ ಗ್ರಂಥಗಳಿಂದಲೂ ಹುಟ್ಟಿಲ್ಲ. ಜ್ಞಾನ ಪ್ರತಿ ವ್ಯಕ್ತಿಯಲ್ಲಿಯೂ ಅವ್ಯಕ್ತನಾಗಿ ರಾರಾಜಿಸುತ್ತಿದೆ. ಅದಕ್ಕಾಗಿಯೇ ಬಸವಣ್ಣನವರು '' ಕಾಳಿ ಕಂಕಾಳದಿಂದ ಮುನ್ನ,

ಉಮೆಯ ಕಲ್ಯಾಣದಿಂದ ಮುನ್ನ, ಹರಿವಿರಂಚಿಗಳಿಂದ ಮುನ್ನ, ಮುನ್ನ ಮುನ್ನ ಮುನ್ನ ಅಂದಿಂಗೆಳೆಯ ನೀನು ಹಳೆಯ ನಾನು ಮಹಾದಾನಿ ಕೂಡಲ ಸಂಗಮದೇವಾ " ಎಂದಿದ್ದಾರೆ.

ಕಾಳಿ, ಉಮೆ, ಬ್ರಹ್ಮ, ವಿಷ್ಣು, ರುದ್ರ ನಾನಾ ದೇವತೆಗಳ ಚರಿತ್ರೆ ಬರೆದವನು ವ್ಯಕ್ತಿ ; ಆದರೆ ಚರಿತ್ರೆ ಮತ್ತು ಗ್ರಂಥಗಳೆ ಸತ್ಯವಾಗಿ ಅವುಗಳ ಗುಣಗಾನ ಪ್ರಧಾನವಾಗಿ ತಾನು ತನ್ನ ಶಕ್ತಿ ಬಳಕೆಯಾಗದೆ ದೇಹದಲ್ಲಿ ಹಾಗೆ ಉಳಿದಿದೆ.

ಬಸವಣ್ಣನವರು, ದೇವಾನುದೇವತೆಗಳು ಮತ್ತು ಅವರ ಚರಿತ್ರೆಯನ್ನು ಚಿಕ್ಕದಾಗಿಸಿ ತಮ್ಮ ಹಿರಿಮೆಯನ್ನು ಮೆರೆದಿದ್ದಾರೆ. ಇದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಹೊರಗಿನ ಗ್ರಂಥಗಳನ್ನು ಓದುವುದು ನಿಲ್ಲಿಸಿ ಗ್ರಂಥಗಳಿಗೆ ಜನ್ಮ ನೀಡಿದ ಮಾತೃ ಗ್ರಂಥವನ್ನು ಅಂದರೆ ತನುವ ತಾನು ನೋಡುವುದು ಉದಯವಾದವರಿಗೆ ಸಾಧ್ಯ.

ನೋಡುವುದು, ಓದುವುದು, ಕೇಳುವುದೆಲ್ಲಾ ಎಳೆಯದೆ. ನೋಡಲು, ಓದಲು, ಕೇಳಲು, ಕಾರಣವಾದ ತಾನೆ ಹಳೆಯ. ಆತ ಕೂಡಲ ಸಂಗಮನಾಥ !

ಇವರಾರೊಬ್ಬರ ನಾಮಸೀಮೆ ಇಲ್ಲದಂದು, ನೀನುಲು ಹಡಗಿದ್ದೆಯಲ್ಲಾ ಕಲಿದೇವಯ್ಯಾ :

ಚರಿತ್ರಾ ಪುರುಷರು, ಸಿದ್ಧಾಂತ, ಸಿದ್ಧಾಂತಿಗಳಿಗೂ ಮುನ್ನ ಅವರ ನಾಮ-ಸೀಮೆಗಳಿಗೂ ಮುನ್ನ ಹುಲು ಮನುಜನಲ್ಲಿ ಅಡಗಿದ್ದೆಯಲ್ಲಾ ಕಲಿದೇವಯ್ಯಾ ಎಂದು ವ್ಯಕ್ತಿಯಲ್ಲಿ ಅಡಗಿದ್ದ ಅವ್ಯಕ್ತ ತತ್ವಕ್ಕೆ ಕಲಿದೇವನೆಂದು ನಾಮಕರಣ ಮಾಡಿದ್ದಾರೆ ಮಡಿವಾಳ ಮಾಚಿದೇವರು.

■

ಬೆಳಗಿನ ಕತೆಯಿಂದ ಕತ್ತಲು ಬೆಳಗುವುದಿಲ್ಲ

ಎಲೆ ನಿರಾಳ, ನಿರ್ಮಾಯ ಘನ ವಸ್ತುವೇ,
ನಿನ್ನ ಬೆಳಗನುಗುಳಿದಡೆ ಎಂಜಲಾಯಿತ್ತಲ್ಲಾ!
ನುಂಗಿದವನುಗುಳಿದುದುಂಟೆ ? ಇದು ಕರಚೋದ್ಯ, ಚೋದ್ಯ.
ನಿನ್ನುಗುಳಿನ ಬಿಂದುವಿನಲ್ಲಿ ಅಕ್ಷರಂಗಳು ಮೂರು ಹುಟ್ಟಿದವು.
ನಿನ್ನುಗುಳಿನ ಸಿಲುಕಿನಿಂದ ನಾದ ಬಿಂದುಕಳೆಗಳಾದವು.
ನಿನ್ನುಗುಳಿನ ಬಸುರಿನಿಂದೆ ಇಬ್ಬರು ಗಂಡು ಹೆಣ್ಣಾದರು.
ಆ ಗಂಡು ಹೆಣ್ಣಿಂದ ಐವರು ಮಕ್ಕಳಾದರು.
ನಿನ್ನುಗುಳು ಎಂಜಲೆಂದವರ ಕಣ್ಣು ಕಪ್ಪಾದವು.
ನಿನ್ನುಗುಳೆನಗೆ ಪ್ರಸಾದವೆಂದರಿದೆನಯ್ಯಾ ಕಾಣಾ ಕಲಿದೇವರದೇವಾ.

– ಮಡಿವಾಳ ಮಾಚಿದೇವ

ಎಲೆ ನಿರಾಳ, ನಿರ್ಮಾಯ ಘನ ವಸ್ತುವೇ, ನಿನ್ನ ಬೆಳಗನುಗುಳಿದಡೆ ಎಂಜಲಾಯಿತ್ತಲ್ಲಾ :

ಮಡಿವಾಳ ಮಾಚಿದೇವರು ಮಹಾಜ್ಞಾನಿಗಳು. ತನುವಿನಲ್ಲಿ ತನ್ಮಯವಾದ ಜ್ಞಾನದ ಕತೆಯನ್ನು ಕಥನವಲ್ಲದ ಕತೆಯ ಮೂಲಕ ಚಿತ್ತರಿಸಿದ್ದಾರೆ. ತನುವಿನಲ್ಲಿ ತನ್ಮಯವಾದ ಜ್ಞಾನವನ್ನು ಕುರಿತು : ಎಲೆ ಜ್ಞಾನವೇ, ನಿರ್ಮಾಯ ಘನವಸ್ತುವೇ, ನೀನುಗಳಿದ ಬೆಳಗಿನ ಮಾತು ಭಗವದ್ಗೀತೆ, ಬೈಬಲ್, ವೇದ, ಉಪನಿಷತ್‌ಗಳಲ್ಲಿ ಸೇರಿ ಎಂಜಲಾಯಿತಲ್ಲ! ಬುದ್ಧ, ಮಹಾವೀರ, ಕ್ರಿಸ್ತ ಶರಣ-ದಾಸವರೇಣ್ಯರ ಬಾಯಿಂದ ಬಂದ ಬೆಡಗಿನ ಮಾತುಗಳು ಕೇಳಿದ ಕಿವಿಯಲ್ಲಿ ಎಂಜಲಾದವಲ್ಲಾ! ಭಗವದ್ಗೀತೆ ವೇದ ಉಪನಿಷತ್ತು ಪಠಿಸಿ, ಉರು ಹೊಡೆಯಲು ದಶಕಗಳನ್ನೇ ಕಳೆದೆ ಯಲ್ಲ! ಸಭಿಕರೆದರು ಬೆಳಕಿನ ಆ ಎಂಜಲನ್ನೇ ನುಡಿದೆಯಲ್ಲ. ನುಡಿ ಕೇಳಿದ ಕಿವಿಗಳು ನಿನ್ನಂತೆ ಓದಲಿಲ್ಲ ಪಠಿಸಲಿಲ್ಲ. ಆದರೂ ಬೆಳಕಿನ ಆನಂದ ಸವಿಯಿತಲ್ಲಾ. ಹೇಳುವ ತನುವಿನಂತೆ ಕೇಳುವ ಕಿವಿ ದಶಕಗಳ ಕಳೆಯಲಿಲ್ಲವಲ್ಲ! ತನ್ನ ಜ್ಞಾನ ತಾನು ತಿಳಿಯಲು ಮತ್ತೊಂದು ಜ್ಞಾನ ಬೇಕೆ ? ತಾ ಕಲಿತ ಜ್ಞಾನ ತನಗೇ ಮುಳುವಾಯಿತಲ್ಲಾ. ಬೆಳಗುವ ದೀಪ , ಹತ್ತಿಸಿಕೊಂಡ ಬತ್ತಿ ಎರಡೂ ಬೆಳಗಿದವಲ್ಲಾ. ಹತ್ತಿಸಿಕೊಂಡ ಬತ್ತಿ , ಬೆಳಗುವ ದೀಪವನ್ನು ಹೊಗಳಲಿಲ್ಲವಲ್ಲ. ಭಗವದ್ಗೀತೆ, ಬೈಬಲ್, ವೇದ ಉಪನಿಷತ್ತುಗಳನ್ನು ಹೊಗಳುವುದೇ ನಿನ್ನ ಕೆಲಸವಾಯಿತಲ್ಲಾ. ಅವು ನಿನ್ನ ಬೆಳಗಿನಿಂದ ಬಂದ ಬೆಳಕಿನೆಂಜಲೆಂದು ನೀನು ತಿಳಿಯಲಿಲ್ಲವಲ್ಲ.

ನುಂಗಿದವನುಗುಳಿದುದುಂಟೆ ? ಇದು ಕರ ಚೋದ್ಯ, ಚೋದ್ಯ :

ನುಂಗಿದರೆ ನುಂಗು, ನುಂಗುವುದು ನಿನ್ನ ಆನಂದದ ಕೆಲಸ. ನುಂಗಿದುದು ನಿನಗೆ

ಜೀರ್ಣವಾಗಲಿಲ್ಲವಲ್ಲ. ನುಂಗಿದವನು ಉಗುಳಿದುದುಂಟೆ ? ಬೆಳಕು ಬೆಳಕನ್ನು ಬೆಳಗುವುದುಂಟೆ ? ಇದು ನಿನ್ನ ತನುವಿಗೆ ತಿಳಿಯಲಿಲ್ಲವಲ್ಲಾ. ಏನೀ ನಿನ್ನ ತನುವಿನ ಚೋದ್ಯದ ಕೆಲಸ ! ತನುವಿನಲ್ಲಿ ಜ್ಞಾನದ ಹೊರತು ಬೇರೆ ವಸ್ತು ಎದೆಯೇ ? ತನುವು ಉಗುಳಿದ ವಸ್ತು ತನುವು ಸೇರುವುದೆ ? ಹೊರ ಬೆಳಗು ಮನಸೇರಿ ಎಂಜಲಾಯಿತಲ್ಲ; ಕತ್ತಲಾಯಿತಲ್ಲ. ಬೆಳಗಿನ ಕತೆ ಕತ್ತಲನ್ನು ಬೆಳಗುವುದಿಲ್ಲವಲ್ಲ. ಬೆಳಗಿದೆ ಕತ್ತಲಿದೆ ಮನಕೆ ಬೆಳಗು ಹೊಳೆಯಲಿಲ್ಲವಲ್ಲ. ಬೆಳಕು ಜಿದ್ದರೆ ಕತ್ತಲು ಇಲ್ಲವೆಂದು ನಿನಗೆ ತಿಳಿಯಲಿಲ್ಲವಲ್ಲ.

ನಿನ್ನುಗುಳಿನ ಬಿಂದುವಿನಲ್ಲಿ ಅಕ್ಷರಂಗಳು ಮೂರು ಹುಟ್ಟಿದವು :

ತನುವಿನ ಬೆಳಗಿನುಗುಳಿನಲ್ಲಿಯೇ 'ಅ' ಕಾರ 'ಉ' ಕಾರ 'ಮ' ಕಾರಗಳು ಹುಟ್ಟಿದವು. ಅದೇ ಓಂಕಾರವಾಯಿತಲ್ಲ. ತ್ವಂಜ್ಮಯವಾಗಿಹುದೇ 'ಓಂ' ಕಾರ. ಪ್ರಾಣಿ ಪಶು ಪಕ್ಷಿ ಗಿಡ ಮರ ಬಳ್ಳಿಯ ತನುವಿಗೆಲ್ಲ ಚರ್ಮವೇ ಕವಚವಲ್ಲ. ಆ ಚರ್ಮದ ಮಹಿಮೆ ತಿಳಿಯಲು ಜ್ಞಾನದ ಪುಸ್ತಕ ಬೇಕಾಯಿತಲ್ಲ ನಿನಗೆ ?. ಅದು ನೀನುಗುಳಿದ ಬೆಳಕಿನ ಬಿಂದುವಲ್ಲ? ಆ ಬಿಂದುವೇ ಗರ್ಭಸೇರಿ ಪಾಕವಾಗಿ ಹೊರ ಬಂದು ತನುವಾಯಿತಲ್ಲ. ಅದರ ತುಂಬಾ ಓಂಕಾರವೇ ತುಂಬಿದೆಯಲ್ಲ. ಅದರಿಂದಲೆ ನಾದ ಬಿಂದು ಕಲೆಗಳಾದವಲ್ಲಾ. ಅದಕ್ಕೆ ಅತೀತನಾಗಿ ಬೆಳಗುವವನು ನೀನೆಯಲ್ಲ.

ನಿನ್ನುಗುಳಿನ ಬಸುರಿನಿಂದೆ ಇಬ್ಬರು ಗಂಡು ಹೆಣ್ಣಾದರು :

ನಿನ್ನ ಬೆಳಕಿನ ಬಿಂದುವೇ ತನುವಾಯಿತಲ್ಲ. ಆ ತನುವೇ ಗಂಡು ಹೆಣ್ಣಾಯಿತಲ್ಲ. ತನುವಿನ ತುಂಬ ಬೆಳಗೇ ತುಂಬಿದೆಯೆಲ್ಲ. ಬೆಳಗಿಂಗೆ ಗಂಡು ಹೆಣ್ಣುಗಳಿಲ್ಲವಲ್ಲ.

ಆ ಗಂಡು ಹೆಣ್ಣಿಂದ ಐವರು ಮಕ್ಕಳಾದರು :

ತನುವು ಗಂಡು ಹೆಣ್ಣಾದರೇನು ತನುವೆಂಬುದು ಒಂದೇ ಆಗಿದೆ ಯಲ್ಲ. ಕಿವಿ ಮೂಗು ಕಣ್ಣು ನಾಲಿಗೆ ಚರ್ಮಗಳು ನಿನ್ನ ಮಕ್ಕಳೆಲ್ಲ. ಅವುಗಳಿಗೆ ಜಾತಿ ಮತ ಪಂಥಗಳಿಲ್ಲ. ಹೆಣ್ಣು ಗಂಡೆಂಬ ಭೇದ ಭಾವಗಳಿಲ್ಲ.

ನಿನ್ನುಗುಳು ಎಂಜಲೆಂದವರ ಕಣ್ಣು ಕಪ್ಪಾದವು :

ತನುವಿನ ತುಂಬಾ ಬೆಳಕು ತುಂಬಿದೆಯಲ್ಲ. ಬೆಳಗಿಂಗೆ ಬೆಳಗಾಗಿ ಬೆಳಗುವ ಬೆಳಕೇ ಎಲ್ಲ. ಆ ಬೆಳಗು ಉಗುಳುವುದು ಬೆಳಗಿನೆಂಜಲೆಯಲ್ಲ. ಆ ಎಂಜಲೆಲ್ಲಾ ಪುಸ್ತಕಗಳು ದಿಟ ಹೌದೊ ಅಲ್ಲ. ಎಂಜಲೆಂದರೆ ಕಣ್ಣು ಕಪ್ಪಾದವಲ್ಲ. ಏನಿದು ನಿನ್ನ ತನುವಿನ ಚೋದ್ಯ ತಿಳಿಯದಾಯಿತಲ್ಲ.

ನಿನ್ನುಗುಳೆನಗೆ ಪ್ರಸಾದವೆಂದರಿದೆನಯ್ಯಾ ಕಾಣಾ ಕಲಿದೇವರದೇವಾ :

ಬೆಳಕಿನ ಕಿಡಿಯೇ ತನುವೆಂಬ ಬತ್ತಿಗೆ ಪ್ರಸಾದವಾಯಿತಲ್ಲ. ಬೆಳಗಿಂಗೆ ಬೆಳಕಾಗಿ ಬೆಳಗಾಯಿತಲ್ಲ ಎಂದು ಬೆಳಕಿನ ತನುವು ಜ್ಞಾನ ಬೆಳಗುವ ಬಗೆಯನ್ನು ಕಥನವಲ್ಲದ ಕಥನದ ಮೂಲಕ ಕತೆ ಹೇಳಿದ್ದಾರೆ ಮಡಿವಾಳ ಮಾಚಿದೇವರು.

■

ದೇಹ ಜ್ಞಾನದ ಗೊಂಚಲು

ಎತ್ತೆತ್ತ ನೋಡಿದಡೆ ಅತ್ತತ್ತ ಬಸವನೆಂಬ ಬಳ್ಳಿ.
ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲು.
ಒತ್ತಿ ಹಿಂಡಿದಡೆ ಭಕ್ತಿಯೆಂಬ ರಸವಯ್ಯ.
ಆಯತವು, ಸ್ವಾಯತವು, ಸನ್ನಿಹಿತವು ಬಸವಣ್ಣನಿಂದ.
ಇದ ಬಲ್ಲರೆ ನೀವು ಹೇಳಿರೇ, ಇತ್ತ ಬಲ್ಲರೆ ನೀವು ಕೇಳಿರೇ.
ಬಸವಾ ಬಸವಾ ಎಂದವನ ಭಕ್ತಿ ಶೂನ್ಯ ಕಾಣಾ ಕಲಿದೇವರದೇವಾ.

- ಮಡಿವಾಳ ಮಾಚಿದೇವ

ಎತ್ತೆತ್ತ ನೋಡಿದಡೆ ಅತ್ತತ್ತ ಬಸವನೆಂಬ ಬಳ್ಳಿ :

ತನುವಿನ ತುಂಬ ಜ್ಞಾನವೆಂಬ ಬಸವನ ಬಳ್ಳಿಯೇ ಹಬ್ಬಿದೆ. ಮುಳ್ಳಿನ ಮೊನೆ ಚುಚ್ಚಲೂ ಸಂದಿಲ್ಲದಂತೆ ಬೆಳಕಿನ ಬಳ್ಳಿಯೇ ಆವರಿಸಿದೆ. ಪಾದದಿಂದ ನೆತ್ತಿಯವರೆಗೆ, ನಖದಿಂದ ಶಿಖೆಯವರೆಗೆ ಜ್ಞಾನದ ಬಳ್ಳಿಯೇ ; ಅದು ಬಸವಣ್ಣನ ಬಳ್ಳಿಯೇ ಬೆಳಕಿನ ಬಳ್ಳಿಯೇ ಆಗಿದೆ. ಕಣ್ಣು ಬೆಳಕು. ಚರ್ಮ ಬೆಳಕು. ಮೂಗು ಬೆಳಕು. ಕಿವಿ ಬೆಳಕು. ನಾಲಿಗೆಯೂ ಬೆಳಕೆಂಬ ಬಸವನ ಬಳ್ಳಿಯೇ.

ಬೇರಿದ್ದ ಬಳ್ಳಿಗೆ ಆಸರೆ ಬೇಕು. ನೆಲದಲಿ ಬಿಟ್ಟ ಬೇರಿಗೆ ನೀರೆರೆದರೆ ಮೇಲೆ ಫಲ. ತನುವಿನ ಬೆಳಕಿನ ಬಳ್ಳಿ ಇದು ಜ್ಞಾನದ ಬಳ್ಳಿ, ಇದಕ್ಕೆ ಬೇರಿಲ್ಲ. ಸದಾ ಹಸಿರು. ತನುವು ಚಲಿಸಿದಲ್ಲೆಲ್ಲ ಪರಿಮಳ. ಬೆಳಕಿನ ಪರಿಮಳ. ವಾಸಿಸದ ಪರಿಮಳ. ಎತ್ತೆತ್ತ ನೋಡಿದಡೆ ಅತ್ತತ್ತ ಬಳ್ಳಿಯ ವಿಸ್ತಾರ. ಜಗದಗಲ ಮುಗಿಲಗಲ ಇದರ ವಿಸ್ತಾರ. ಪಾತಾಳ ಬ್ರಹ್ಮಾಂಡದಿಂದತ್ತತ್ತ ಇದರ ಎತ್ತರ. ತನುವಿನಳತೆಗೆ ಬಂದು ಚುಳುಕಾಗಿ ಬೆಳಗಿದೆ.

ಪ್ರಮಾಣಕ್ಕೆ ನಿಲುಕದ, ಗೋಚರಕ್ಕೂ ನಿಲುಕದ ಜ್ಞಾನದ ಬೆಳಕು ಬಳ್ಳಿಯಲ್ಲಿ ಸಂಗಮವಾಗಿ ಬಸವಣ್ಣ ತಾನಾಗಿದೆ, ಸಂಗಮನಾಥನಾಗಿದೆ. ಕಲಿದೇವರ ದೇವ ತಾನಾಗಿ ಎತ್ತೆತ್ತ ನೋಡಿದರೆ ಅತ್ತತ್ತ ಹಬ್ಬಿದೆ. ಎತ್ತಿ ನೋಡಿದಡೆ ಜ್ಞಾನದ ಗೊಂಚಲೇ ಗೊಂಚಲು !

ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲು :

ತನುವಿನ ತುಂಬ ಹಬ್ಬಿರುವ ಬೆಳಕಿನ ಬಳ್ಳಿಯನು ಎತ್ತಿ ನೋಡಿದಡೆ ಫಲಭರಿತವಾದ ಬೆಳಕಿನ ಗೊಂಚಲೇ ! ಎತ್ತೆತ್ತ ನೋಡಿದಡೆ ಅತ್ತತ್ತ ಲಿಂಗದ ಗೊಂಚಲೇ ತುಂಬಿದೆ.

ಒತ್ತಿ ಹಿಂಡಿದಡೆ ಭಕ್ತಿಯೆಂಬ ರಸವಯ್ಯ :

ತನುವಿನ ತುಂಬ ತನ್ಮಯವಾಗಿ ಹಬ್ಬಿರುವ ಬಸವನೆಂಬ ಬೆಳಕಿನ ಬಳ್ಳಿಗೆ, ಫಲ

ಭರಿತ ಬೆಳಕಿನ ಗೊಂಚಲು ಆ ಗೊಂಚಲಿಗೆ ಮನ ಶರಣು ಹೋಗಿ ಒತ್ತಿ ಹಿಂಡಿದಡೆ ಬೆಳಕಿನ ರಸಬುಗ್ಗೆಯೇ ಚಿಮ್ಮುವುದು.

ಆಯತವು, ಸ್ವಾಯತವು, ಸನ್ನಿಹಿತವು ಬಸವಣ್ಣನಿಂದ :

ತನುವಿನಲ್ಲಿ ತನ್ಮಯವಾಗಿ ಹಬ್ಬಿದ ಬೆಳಕಿನ ಬಳ್ಳಿಯತ್ತ ಸುಳಿಯಲು ಬಸವಣ್ಣನೇ ಸುಳುಹು ನೀಡಿದ, ಬಸವಣ್ಣ ನೀಡಿದ ಸುಳುಹಿನಿಂದಲೇ ತನುವಿಗೆ ಹಬ್ಬಿದ ಬೆಳಕಿನ ಬಳ್ಳಿ ಸ್ವಾಯತವಾಯಿತು. ಬಸವಣ್ಣನಿಂದಲೇ ಆ ಬೆಳಕಿನ ರಸಬುಗ್ಗೆ ಸನ್ನಿಹಿತವಾಯಿತು. ಆ ಬೆಳಕೇ ನಾನಾಗಲು ಕಾರಣವಾಯಿತು ಎಂದು ಮಡಿವಾಳ ಮಾಚಿದೇವರು ಬೆಳಕಿನ ಗುರು ಬಸವಣ್ಣನವರನ್ನು ಕೊಂಡಾಡಿದ್ದಾರೆ.

ಇದ ಬಲ್ಲರೆ ನೀವು ಹೇಳಿರೇ, ಇತ್ತ ಬಲ್ಲರೆ ನೀವು ಕೇಳಿರೇ ಬಸವಾ ಬಸವಾ ಎಂದವನ ಭಕ್ತಿ ಶೂನ್ಯ ಕಾಣಾ ಕಲಿದೇವರದೇವಾ :

ಜ್ಞಾನ ತಿಳಿದರೆ ಸುಳುಹು ನೀಡಿ, ಅಥವಾ ಬಯಕೆಯಾದರೆ ಕೇಳಿ, ಕಾಮ ಕ್ರೋಧ, ಲೋಭ ಮೋಹ ಮದ ಮತ್ಸರದಿಂದ ಕೂಡಿದ ತನುವನ್ನು ಬಸವಣ್ಣನ ಬೆಳಕಿನ ಸುಳುಹಿನಿಂದ ಶೂನ್ಯ ಮಾಡಿಕೊಳ್ಳ ಬೇಕಿದೆ. ತನುವಿನಲ್ಲಿ ಬೆಳಕಿದೆ, ತನುವಿಗೆ ಕತ್ತಲು ಆವರಿಸಿದೆ. ತನುವಿನಲ್ಲಿರುವ ಬೆಳಕಿನ ಸುಳುಹು ಪಡೆದು ಬೆಳಕಾದರೆ ಕತ್ತಲು ಕಳೆದು ಶೂನ್ಯವಾಗುತ್ತದೆ. ಆ ಶೂನ್ಯ ತಾನೇ ಕಾಣಾ ಕಲಿದೇವರ ದೇವಾ ಎಂದಿದ್ದಾರೆ ಮಾಡಿವಾಳಯ್ಯ.

■

ಕಣ್ಣ ಕತ್ತಲ ಕಳೆಯುವ ಮಾಚಿದೇವರ ಸೂತ್ರ

ಘಟದೊಳಗೆ ತೋರುವ ಸೂರ್ಯನಂತೆ,
ಸರ್ವರಲ್ಲಿ ಶಿವ ಚೈತನ್ಯವಿಪ್ಪುದು.
ಇದ್ದರೇನು ? ಸರ್ವರಿಗೆ ಸಾಧ್ಯವಿಲ್ಲ.
ಮುಟ್ಟಿಯೂ ಮುಟ್ಟದು. ಅದು ಕೂಡುವರೆ
ಗುರುವಿಂದಲ್ಲದಾಗದು ಕಾಣಾ ಕಲಿದೇವರ ದೇವಾ.

- ಮಡಿವಾಳ ಮಾಚಿದೇವ.

ಘಟದೊಳಗೆ ತೋರುವ ಸೂರ್ಯನಂತೆ, ಸರ್ವರಲ್ಲಿ ಶಿವ ಚೈತನ್ಯವಿಪ್ಪುದು :

ಮಡಕೆಯೊಳಗೆ ತೋರುವ ಸೂರ್ಯನಂತೆ ಎಲ್ಲರಲ್ಲಿಯೂ ಬೆಳಕೇ ಇದೆ. ಸರ್ವ ವಸ್ತುಗಳನ್ನು ಬೆಳಕಿನಿಂದ ನೋಡುವ ಶಕ್ತಿಯಿದೆ. ''ಕೋಟಿ ಸೂರ್ಯಂ ಸಮ ಪ್ರಭ'' ಎನ್ನುವಂತೆ ಕೋಟಿ ಸೂರ್ಯರನ್ನು ಬೆಳಗುವ ಶಕ್ತಿಯಿದೆ.

ಸೂರ್ಯನ ಬೆಳಕು ಸದಾ ಇದೆ. ಭೂಮಿ ತಿರುಗುವುದರಿಂದ ಕತ್ತಲಾಗುತ್ತದೆ. ಸೂರ್ಯ ಮುಳುಗಿ ಕತ್ತಲಾಗುವುದಿಲ್ಲ. ತೇಲಿ ಬೆಳಕಾಗುವುದಿಲ್ಲ. ಹಾಗೆ ವ್ಯಕ್ತಿಯನ್ನು ಸದಾ ಬೆಳಗುವ ಅವ್ಯಕ್ತ ತತ್ವವಿದೆ. ಕಣ್ಣ ಮುಂದಣ ಕತ್ತಲು (ಅಜ್ಞಾನ) ವಸ್ತುವನ್ನು ವಸ್ತುವಿನಂತೆ ನೋಡಲು ಬಿಡುವುದಿಲ್ಲ. ಹಳದಿ ಲೋಹವನ್ನು ಚಿನ್ನವೆಂದು ನೋಡಿದ ಕಣ್ಣು ದೇಹದಲ್ಲಿ ರಾಸಾಯನಿಕ ಕ್ರಿಯೆ ಸೃಷ್ಠಿ ಮಾಡಿತು. ದೇಹ ಅದಕ್ಕಾಗಿ ಹಪಹಪಿಸಿತು. ಸಂಗ್ರಹಿಸಲು ಹಾತೊರೆಯಿತು. ಆಯುಷ್ಯ ಅದಕ್ಕಾಗಿಯೇ ಮೀಸಲಾಯಿತು. ಹಳದಿ ಲೋಹದ ಮೇಲೆ ಬೆಳಗುವ ಕಣ್ಣಿನ ಬೆಳಕಿನಲ್ಲಿ ಯಾವ ಬದಲಾವಣೆಗಳೂ ಇಲ್ಲ. ಚಿನ್ನ ಆಭರಣವೆಂದು ಕಬಳಿಸುವ ಕಣ್ಣಿನಲ್ಲಿ ದೋಷವೇ ತುಂಬಿದೆ.

ಕಣ್ಣಿನಲ್ಲಿ ಶಿವ ಚೈತನ್ಯವೂ ಇದೆ. ಆಸೆಯ ದೋಷವೂ ಇದೆ. ''ಆಸೆಯೇ ದುಃಖಕ್ಕೆ ಕಾರಣ '' ವಿನಿಮಯಕ್ಕಾಗಿ ಇದ್ದ ಸಂಬಂಧ ವಿಲ್ಲದ ವಸ್ತುಗಳ ಮೇಲೆ ಆಸೆ ಪಡುವ ಅಜ್ಞಾನ ಎಂದಿನಿಂದಲೋ ವ್ಯಕ್ತಿಯನ್ನು ಆವರಿಸಿದೆ. ಆಸೆಯನ್ನು ತಿಳಿಯುವ ಜ್ಞಾನವೂ ಇದೆ. ಆಸೆ ಪಡುವ ಅಜ್ಞಾನವೂ ಇದೆ.

ಇದ್ದರೇನು ? ಸರ್ವರಿಗೆ ಸಾಧ್ಯವಿಲ್ಲ ಮುಟ್ಟಿಯೂ ಮುಟ್ಟದು :

ವಸ್ತುವಿನ ಮೂಲ ಹಳದಿ ಲೋಹ ನೋಡುವ ಕಣ್ಣಿನಲ್ಲಿ ಸತ್ಯವಿದೆ. ಅದು ಸುಳ್ಳು ನೋಡುವುದಿಲ್ಲ. ಆಭರಣ-ಚಿನ್ನ ನೋಡುವ ಕಣ್ಣಿನಲ್ಲಿ ಕುರುಡುತನವಿದೆ. ಕಣ್ಣು ಕಂಡರೂ ಆ ಕಣ್ಣಿಗೆ ಆಭರಣ ಕಂಡಿತೇ ಹೊರತು ಲೋಹ ಕಾಣಲಿಲ್ಲ. ಲೋಹ ನೋಡುವ ನಿಜ ಕಣ್ಣಿಗೆ ಆಭರಣ ಕಾಣಲಿಲ್ಲ. ಹೀಗೆ ಒಮ್ಮೆ ಹೊಳೆಯುತ್ತದೆ, ಮತ್ತೊಮ್ಮೆ

ಹೊಳೆಯುವುದೇ ಇಲ್ಲ. ಹೊಳೆದಾಗ ಆಭರಣಕ್ಕೆ ಆಸೆ ಪಡುವುದಿಲ್ಲ. ಹೊಳೆಯದಿದ್ದಾಗ ಆಭರಣ ಕಂಡರೆ ಸಾಕು ತಂದೆ ತಾಯಿ ಬಂಧು ಬಳಗ ಹೆಂಡತಿ ಮಕ್ಕಳನ್ನೂ ಕೊಂದು ಆಭರಣ ಪಡೆಯಲು ಹೇಸುವುದಿಲ್ಲ. ಹೊನ್ನಿನಂತೆಯೇ ಮಣ್ಣು, ಚರ್ಮವನ್ನು ಆಸೆಗಣ್ಣಿನಿಂದ ನೋಡುತ್ತದೆ ಕಣ್ಣು.

ಅದು ಕೂಡುವರೆ ಗುರುವಿಂದಲ್ಲದಾಗದು ಕಾಣಾ ಕಲಿದೇವರ ದೇವಾ :

ಅಜ್ಞಾನದ ಕಣ್ಣು ಜ್ಞಾನದಲ್ಲಿ ಕೂಡುವುದು ವಿರಳ. ಎರಡೂ ಕಣ್ಣುಗಳು ತನ್ನವೇ. ಒಂದು ಕಣ್ಣು ಕಾಣುತ್ತದೆ, ಮತ್ತೊಂದು ಕಣ್ಣು ಕಾಣುವುದಿಲ್ಲ. ವಸ್ತುವೊಂದಿದ್ದರೆ, ತಾನೊಂದು ನೋಡುತ್ತದೆ. ರಾಜನ ಕಣ್ಣು ಲೋಹ ನೋಡಿದ್ದರೆ ಯುದ್ಧಗಳೇ ಆಗುತ್ತಿರಲಿಲ್ಲ. ರಾಜ ಚಿನ್ನದ ಕಿರೀಟ ನೋಡಿದ, ಆ ಆಸೆಗಾಗಿ ಯುದ್ಧ ಮಾಡಿದ, ರಕ್ತದ ಕಾಲುವೆಯೇ ಹರಿಸಿದ. ಗೌತಮ ರಾಜನಾದರೂ ಲೋಹ ನೋಡಿದ, ಯುದ್ಧ ಮಾಡಲಿಲ್ಲ. ರಕ್ತದ ಕಾಲುವೆ ಹರಿಸಲಿಲ್ಲ. ಜ್ಞಾನದ ಸಾಗರವೇ ಹರಿಸಿದ, ಬುದ್ಧನಾದ.

ಇದು ಶರಣರ ಶಿಕ್ಷಣ. ಬುದ್ಧ-ಮಹಾವೀರರ ಶಿಕ್ಷಣ. ದಾಸವರೇಣ್ಯರ ಶಿಕ್ಷಣ. ತನ್ನ ಶಿಕ್ಷಣ. ಆದರೂ ಗುರುವಿಂದಲ್ಲದೆ ಸಾಧ್ಯವಾಗದು ಕಾಣಾ ಕಲಿದೇವರ ದೇವಾ ಎಂದು ಮಡಿವಾಳ ಮಾಚಿದೇವರು ತನ್ನೊಳಗಿರುವ ಬೆಳಕು ತೋರುವ ಸೂತ್ರವನ್ನು ಸರಳೀಕರಿಸಿದ್ದಾರೆ.

■

ಲಿಂಗೈಕ್ಯ-ಲಿಂಗಾನುಭಾವಿ

ನಾವು ಲಿಂಗೈಕ್ಯ ಲಿಂಗಾನುಭಾವಿಗಳೆಂದು ಹೇಳುವ ಅಣ್ಣಗಳಿರಾ,
ನೀವು ಎಂತಾದಿರಿ ಹೇಳಿರಣ್ಣಾ.
ಅರಿಯದಿರ್ದರೆ ಕೇಳಿರೆ. ಗುರು ಕೃಪೆಯಿಂದ ಹೇಳಿರೆ.
ಸರ್ವಸಂಗ ಪರಿತ್ಯಾಗವ ಮಾಡಬೇಕು.
ಲೋಕಾಚಾರವ ಮುಟ್ಟದಿರಬೇಕು.
ನುಡಿಯಂತೆ ನಡೆ ದಿಟವಾಗಬೇಕು.
ಸರ್ವಾಚಾರ ಸಂಪತ್ತಿನಾಚರಣೆಯ ಸದ್ಗುರು ಮುಖದಿಂದಾಚರಿಸಬೇಕು.
ನಾನು ಆರು, ನನ್ನ ಜೀವವೇನು, ನಾಬಂದ ಮುಕ್ತಿ ದ್ವಾರವಾವುದು,
ನಾ ಹೋಗುವ ನಿಜ ಕೈವಲ್ಯ ಪದವಾವುದು,
ನನ್ನ ಇರವೇನು, ಎಂದು ಅರಿದಾಚರಿಸಬಲ್ಲಾತನೇ
ನಿಜ ಲಿಂಗಾನುಭಾವಿ ಲಿಂಗೈಕ್ಯ ನೋಡಾ ಕಲಿದೇವರ ದೇವಾ

- ಮಡಿವಾಳ ಮಾಚಿದೇವರು

ಲಿಂಗೈಕ್ಯ, ಲಿಂಗಾನುಭಾವಿ ಎನ್ನುವ ಎರಡು ಶಬ್ದಗಳು ಆಚಾರದಿಂದ, ವೇಷ ಭೂಷಣದಿಂದ ಕರೆಯಿಸಿಕೊಳ್ಳುವುದಿಲ್ಲ. ಪ್ರಯೋಗದ ಮೂಲಕ ಸ್ವತಃ ತಾನು ವಿಜ್ಞಾನಿಯಾಗಿ ಲಿಂಗೈಕ್ಯನಾಗಬೇಕು, ಲಿಂಗಾನುಭಾವಿಯಾಗಬೇಕು. ಕೇಳಿದರೆ ಹೇಳಲು ಬರುವಂತಿರಬೇಕು. ಆ ಹೇಳುವಿಕೆ ಮತ್ತೊಬ್ಬರಿಗೆ ಸುಳುವಾಗಿರಬೇಕು.

ಲಿಂಗೈಕ್ಯ : ತನುವಿಗೆ ಆವರಿಸಿಕೊಂಡ ಅಜ್ಞಾನ, ತನುವಿನ ಜ್ಞಾನದಲ್ಲಿ ಐಕ್ಯವಾಗಿ ಲಿಂಗದ ತನುವಾಗಬೇಕು ; ಲಿಂಗಾಂಗವಾಗಬೇಕು. ತನ್ನ ಅಜ್ಞಾನ ತನ್ನ ಜ್ಞಾನದಲ್ಲಿ ಐಕ್ಯಗೊಳಿಸಿ ಲಿಂಗೈಕ್ಯನಾಗುವಿಕೆ. ಇದು ಮಡಿವಾಳ ಮಾಚಿದೇವ, ಬಸವಣ್ಣ ಮುಂತಾದ ಶರಣರಿಗೆ, ಬುದ್ಧ ಮಹಾವೀರ, ದಾಸವರೇಣ್ಯರಿಗೆ ಸಾಧ್ಯವಾಯಿತು.

ಲಿಂಗ ಕಳಚಿಕೊಂಡ ಅಂಗ ಶವ. ಶವದಲ್ಲಿ ರೂಪವಿದ್ದರೂ ಲಿಂಗ ಕಳೆ ಇರುವುದಿಲ್ಲ. ಗುಣಗಾನ ಮಾಡಿದರೂ, ನಿಂದಿಸಿದರೂ ಬೋರಾಡಿ ಅತ್ತರೂ ಶವಕ್ಕೆ ಕೇಳುವುದಿಲ್ಲ. ಶವ ಲಿಂಗ ಕಳಚಿಕೊಂಡ ಅಂಗ.

ಅಂಗ : ಬೈಗಳಿಗೆ ಕುದಿಯುತ್ತದೆ, ಹೊಗಳಿಕೆಗೆ ಹಿಗ್ಗುತ್ತದೆ. ಅರ್ಥವಿಲ್ಲದ ವಸ್ತುಗಳ ಸಂಗ್ರಹಿಸಿ ಸುಖಿಸುತ್ತದೆ. ಅಧಿಕಾರ, ಪದವಿ ಪಟ್ಟಗಳಿಗಾಗಿ ಪರಿತಪಿಸುತ್ತದೆ. ಪತ್ನಿಯಿದ್ದರೂ ಪರಸ್ತ್ರೀಯರಿಗಾಗಿ, ಪತಿಯಿದ್ದರೂ ಪರಪುರಷರಿಗಾಗಿ ಹವಣಿಸುತ್ತದೆ. ಇದು ಲಿಂಗ ಪರಿಚಯವಿಲ್ಲದ ಅಂಗ.

ಲಿಂಗದಲ್ಲಿ ಐಕ್ಯವಾದ ಅಂಗ :

ಬೈಗಳಿಗೆ ಕುದಿಯುವುದಿಲ್ಲ, ಹೊಗಳಿಕೆಗೆ ಹಿಗ್ಗುವುದಿಲ್ಲ. ಕ್ಷಣಾರ್ಧದಲ್ಲಿ ಶಬ್ದ ಭೇದಿಸಿ, ನಿಶಬ್ದವೇದಿಯಾಗಿ ಶಬ್ದವನ್ನು ಸ್ವೀಕರಿಸುತ್ತದೆ. ಶಬ್ದಕ್ಕೆ ಅಂಗ ಕುದಿಯುವುದಿಲ್ಲ, ಹಿಗ್ಗುವುದಿಲ್ಲ. ಅಧಿಕಾರ ಪದವಿ, ಪಟ್ಟಗಳು ಅರ್ಥ ಕಳೆದುಕೊಳ್ಳುತ್ತವೆ. ಪರಸ್ತ್ರೀ ಪರಪುರುಷ ರೂಪ ಕಳೆದುಕೊಂಡು ತನ್ನಂತೆ ಕಾಣುತ್ತಾನೆ. ಆತ ಲಿಂಗೈಕ್ಯ. ಇದು ಅಂಗ ಮತ್ತು ಲಿಂಗ (ಜ್ಞಾನ)ದ ಬಗ್ಗೆ ವೈಜ್ಞಾನಿಕವಾಗಿ ಪಾಠ ಮಾಡುವ ಗುರುವಿಗೆ ನಿಲುಕುವ ಕಲೆ. ತಿಳಿಯುವ ಆಸಕ್ತಿಯಿಂದ ಸಂಪೂರ್ಣ ಶರಣಾಗತನಾದ ಶಿಷ್ಯನಿಗೆ ನಿಲುಕುವ ಕಲೆ.

ಲಿಂಗಾನುಭಾವಿ :

"ರೂಪ ಬಯಲು ಮಾಡ ಬಲ್ಲಾತನೇ ಲಿಂಗಾನುಭಾವಿ" ಎಂದಿದ್ದಾರೆ ಬಸವಣ್ಣ. ರೂಪ ಬಯಲು ಮಾಡಿ ನಿರೂಪದೊಂದಿಗೆ ಸಂಗ ಮಾಡುವ ವೈಜ್ಞಾನಿಕ ಕಲೆ ಕರಗತವಾದಾಗ ಸರ್ವಸಂಗ ಪರಿತ್ಯಾಗ ಮಾಡಲು ಬರುತ್ತದೆ. ಕೇಳುವವರಿಗೆ ವೈಜ್ಞಾನಿಕವಾಗಿ ವಿವರಿಸಿ ಹೇಳುವ ಶಕ್ತಿ ಶಾಲಿಯೂ ಆಗುತ್ತಾನೆ.

ಲೋಕಾಚಾರವ ಮುಟ್ಟದಿರಬೇಕು :

ಆಚಾರದಲ್ಲಿ ನಿರತವಾದ ಲೋಕಕ್ಕೂ ತನಗೂ ಸಂಬಂಧವಿಲ್ಲ. ಲೋಕ, ಮೂರ್ತಿಯನ್ನು ಪೂಜಿಸಿದರೆ, ಅನುಭಾವಿ ಕಲ್ಲೆಂದು ತಿಳಿದು ಸುಮ್ಮನಾಗುತ್ತಾನೆ. ಆಭರಣವನ್ನು ಲೋಹವೆಂದು ತಿಳಿದು ಮೋಹಿಸಲಾರ. ಅಂಗದಲ್ಲಿ ಐಕ್ಯವಾದ ಲಿಂಗ (ಜ್ಞಾನ) ನೋಡುತ್ತಾನೆ, ಎಲ್ಲ ಅಂಗಗಳು ಲಿಂಗದ ಲಾಂಛನಗಳಾಗಿ ಕಾಣುತ್ತವೆ, ಲಾಂಛನಕ್ಕೆ ಶರಣೆನ್ನುತ್ತಾನೆ.

ಲಿಂಗ (ಜ್ಞಾನ) ನುಡಿಯುತ್ತದೆ, ಲಿಂಗ ನಡೆಯುತ್ತದೆ. ಸರ್ವ ಆಚಾರಗಳೆಲ್ಲ ಜ್ಞಾನದ ಆಚರಣೆಗಳೇ ಆಗುತ್ತವೆ. ನಾನು ಯಾರು, ನನ್ನ ಜೀವವೇನು, ತಾನು ಬಂದ ಮುಕ್ತಿ ದ್ವಾರವಾವುದು, ತಾನು ಹೋಗುವ ನಿಜ ಕೈವಲ್ಯ ಪದವಾವುದು, ತನ್ನ ಇರುವಿನ ಬಗ್ಗೆ ಸಂಪೂರ್ಣವಾಗಿ ಗುರುವಿನ ಮುಖಾಂತರ ಸುಳುಹು ಪಡೆದು ಆ ಗುರುವಿನಂತೆ ತಾನಾಗುತ್ತಾನೆ. ಬತ್ತಿ ತಾಗಿದ ಉರಿಯಂತೆ ಬೆಳಗುತ್ತಾನೆ.

ಬಯಲ ರೂಪ ಮಾಡಿ ಶರಣನಾಗುತ್ತಾನೆ, ಲಿಂಗೈಕ್ಯನಾಗುತ್ತಾನೆ. ಆ ರೂಪವನ್ನೆ ಪುನಹ ಬಯಲು ಮಾಡಿ ಲಿಂಗಾನುಭಾವಿಯಾಗುತ್ತಾನೆ. ರೂಪ ಬಯಲ ಮಾಡಿ ನಿರೂಪ ನೋಡುವ ವಿಜ್ಞಾನಿಯಾಗಿ, ಆ ನಿರೂಪವನ್ನೇ ರೂಪ ಮಾಡಿ ತನ್ನಂತೆ ನೋಡುವ ತತ್ವಜ್ಞಾನಿಯಾಗುತ್ತಾನೆ. ಕಲಿದೇವರ ದೇವ ತಾನೆ ಆಗುತ್ತಾನೆ.

■

ತನುಮನ ಭಾವದ ಅಜ್ಞಾನ ಕಳೆದುಕೊಂಡವನೇ ಅಚ್ಚಶರಣ

ನಾವು ಶರಣರೆಂದು ಒಪ್ಪವಿಟ್ಟು ನುಡಿವ ಅಣ್ಣಗಳಿರಾ,
ನೀವು ಶರಣರಾದ ಭೇದವ ಹೇಳಿರೆ. ಅರಿಯದಿರ್ದಡೆ ಕೇಳಿರಿ.
ತನವಿನ ಕಾಂಕ್ಷೆಯ ಸುಟ್ಟುರುಹಿ, ಮನದ ಲಜ್ಜೆಯ ಮರೆದು,
ಭಾವದ ಕ್ರಿಯೆಯ ಹೊಟ್ಟುಮಾಡಿ ತೂರಿ
ಸದ್ಭಕ್ತಿಯ ನಿಜ ನೈಷ್ಠೆಯ ತಿಳಿದು,
ಸತಿ ಸುತರಿಗೆ ಸನ್ಮಾರ್ಗವ ತೋರಿ.
ನಿರ್ವಂಚಕದಿಂದ ಅರಿದಾಚರಿಸಬಲ್ಲಾತನೆ ಅಚ್ಚ ಶರಣ ನೋಡಾ
ಕಲಿದೇವರ ದೇವಾ.

-ಮಡಿವಾಳ ಮಾಚಿದೇವರು

ನಾವು ಶರಣರೆಂದು ಒಪ್ಪವಿಟ್ಟು ನುಡಿವ ಅಣ್ಣಗಳಿರಾ, ನೀವು ಶರಣರಾದ ಭೇದವ ಹೇಳಿರೆ. ಅರಿಯದಿರ್ದಡೆ ಕೇಳಿರೆ :

ಶರಣ, ಸಂತ, ದಾಸ, ಬುದ್ಧ, ಮಹಾವೀರ ಇವು ಹೆಸರಿಟ್ಟು ಕರೆಯಿಸಿಕೊಳ್ಳುವ ಪದಗಳಲ್ಲ. ''*ಬಯಲ ರೂಪ ಮಾಡಬಲ್ಲಾತನೇ ಶರಣ. ಬಯಲ ರೂಪ ಮಾಡಲರಿಯದಿರ್ದಡೆ ಎಂತು ಶರಣನೆಂಬೆ*'' ಎಂದು ಪ್ರಶ್ನಿಸುತ್ತಾರೆ ಬಸವಣ್ಣ. ಶರಣ ನೆನ್ನುವುದು ಕೈವಲ್ಯ ಪದ, ಸ್ವ ಸ್ವರೂಪ ತಿಳಿದು ತಾನೇ ಆ ಸ್ವರೂಪನಾದಾತ. ಇದನ್ನು ವೈಜ್ಞಾನಿಕವಾಗಿ ತಿಳಿಹೇಳುವಾತ. ಆಸಕ್ತ ಹೃದಯವಂತರನ್ನು ತನ್ನಂತೆ ಮಾಡಿಕೊಳ್ಳುವಾತ ಶರಣ.

ತನುವಿನ ಕಾಂಕ್ಷೆಯ ಸುಟ್ಟುರುಹಿ, ಮನದ ಲಜ್ಜೆಯ ಮರೆದು :

ದೇಹದ ಆಕಾಂಕ್ಷೆ, ಬಯಕೆಗಳನೆಲ್ಲ ಸುಟ್ಟುರುಹಿದಾತ ಶರಣ. ಮನದ ಲಜ್ಜೆಯ ಮರೆವಾತ ಶರಣ. ದೇಹವನ್ನು ಮನ ಆವರಿಸಿರುವುದರಿಂದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳು ಮನದಲ್ಲಿ ಮೂಡಿ ಮನ ದೇಹದ ಮೂಲಕ ಪೂರೈಸಿಕೊಳ್ಳುತ್ತದೆ. ದೇಹದ ಮೂಲಕ ಗಮನಕ್ಕೆ ಬರುತ್ತದೆ. ಮನದ ಆಕಾಂಕ್ಷೆಗಳೆಲ್ಲ ತನುವಿನಿಂದಲೇ. ಮನ ಬಯಸಿದ್ದು ದೊರೆತರೆ ದೇಹಕ್ಕೆ ಕ್ಷಣಿಕ ಸುಖ. ದೊರೆಯದಿದ್ದರೆ ತನುವಿನ ತಲ್ಲಣ. ಬಯಕೆ ಮಾಡುವ ಮನ ಹಾಗೂ ತಲ್ಲಣಗೊಳ್ಳುವ ತನುವಿನ ಬಗ್ಗೆ ಗುರುವಿನಿಂದ ಸಂಪೂರ್ಣ ತಿಳಿದ ಭಕ್ತ ಪ್ರಾಯೋಗಿಕವಾಗಿ ಕರಗತ ಮಾಡಿಕೊಂಡು

ಶರಣನಾಗುತ್ತಾನೆ. ಮನವನ್ನು ಜ್ಞಾನದಲ್ಲಿ ಲೀನ ಮಾಡಿ ಜ್ಞಾನಕ್ಕೆ ಶರಣು ಹೋಗುತ್ತಾನೆ. ಘನಮನನಾಗುತ್ತಾನೆ. ತನುವಿನ ಬಯಕೆಗಳು, ಮನದ ಲಜ್ಜೆ, ಮಾದ ಗಾಯದಂತೆ ತನಗರಿಯದಂತೆ ಉದುರಿ ಬೀಳುತ್ತವೆ. ಆತ ಅಚ್ಚ ಶರಣ ! ವೇಷದ ಶರಣ ಶರಣನಲ್ಲ.

ಭಾವದ ಕ್ರಿಯೆಯ ಹೊಟ್ಟು ಮಾಡಿ ತೂರಿ, ಸದ್ಭಕ್ತಿಯ ನಿಜ ನೈಷ್ಠೆಯ ತಿಳಿದು :

ಭಾವನೆಗಳಲ್ಲಿ ಎರಡು ವಿಧ : ಸದ್ಭಾವನೆ, ದುರ್ಭಾವನೆ. ಇವೆರಡೂ ಒಂದು ನಾಣ್ಯದ ಎರಡು ಮುಖಗಳಿದ್ದಂತೆ ! ಒಬ್ಬ ವ್ಯಕ್ತಿಯ ಮೇಲೆ ಸದ್ಭಾವ ಮಾಡುತ್ತೇವೆ. ಆತನನ್ನು ಪ್ರೀತಿಸಿ ಆರಾಧಿಸುತ್ತೇವೆ. ಹೊಗಳುತ್ತೇವೆ. ವ್ಯಕ್ತಿಯ ಬಗ್ಗೆ ನಿಂದೆಗಳನ್ನು ಕೇಳಿದರೆ ಸಿಡಿದು ಬೀಳುತ್ತೇವೆ. ಆ ವ್ಯಕ್ತಿಯಿಂದಲೇ ತನಗೆ ಅಪಚಾರವಾದರೆ, ಅಥವಾ ವ್ಯಕ್ತಿಯ ವಿಕೃತ ಸ್ವಭಾವಗಳು ಗಮನಕ್ಕೆ ಬಂದರೆ, ಇಟ್ಟ ಸದ್ಭಾವನೆ ದುರ್ಭಾವವಾಗಿ ಮಾರ್ಪಡುತ್ತದೆ. ಸದ್ಭಾವನೆ ಇಟ್ಟ ವ್ಯಕ್ತಿಯೇ ಅಪಪ್ರಚಾರಕ್ಕಿಳಿಯುತ್ತಾನೆ. ದ್ವೇಷಿಸುತ್ತಾನೆ. ಕೊಲೆ ಮಾಡಲೂ ಹೇಸುವುದಿಲ್ಲ. ಭಾವನೆಗಳ ಮೂಲಕ ತನುವನ್ನು ಪ್ರೀತಿಸಿದ, ಭಾವನೆಗಳ ಮೂಲಕ ತನುವನ್ನು ದ್ವೇಷಿಸಿದ. ತಾನು ದ್ವೇಷಿಸಿದ್ದು ಪ್ರೀತಿಸಿದ್ದು ಭಾವವನ್ನೋ ಅಥವಾ ತನುವನ್ನೊ ? ಎಂಬುದು ವೇಷ ಹಾಕಿಕೊಂಡು ಭಾವಧಾರಣೆ ಮಾಡಿಕೊಂಡ ಶರಣನಿಗೆ ತಿಳಿಯದ ವಿಷಯ.

ಭಾವದ ಕ್ರಿಯೆಯನ್ನು ನಿರ್ಭಾವ ಮಾಡಿ, ಭಾವವನ್ನು ಹೊಟ್ಟು ಮಾಡಿ ತೂರುವ ಸೂತ್ರ ಶರಣ ಮಾತ್ರ ಬಲ್ಲ. ಆತ ಜ್ಞಾನಕ್ಕೆ ತನ್ನ ನಿಷ್ಠೆಯನ್ನು ಸದ್ಭಕ್ತಿಯನ್ನು ಮಾಡುತ್ತಾನೆ. ಆ ಶಿಕ್ಷಣ ತಿಳಿದಾತ ಶರಣ. ಶರಣನ ಮನೆಯದು ಸ್ವರ್ಗದ ಧಾಮ. ಸತಿ ಸುತರೊಂದಿಗೆ ಶಬ್ದ ಮಾಡಿ ಕೆರಳುವುದಿಲ್ಲ. ಅವರ ಶಬ್ದಕ್ಕೆ ತಾನೂ ಕೆರಳುವುದಿಲ್ಲ. ಶಬ್ದ ಕೇಳಿ ತನುವನ್ನು ಕೆರಳುವಂತೆ ಮಾಡುವ ಮನದ ಲಜ್ಜೆಯನ್ನು ಮುರಿಯುತ್ತಾನೆ. ಶಬ್ದಗಳೆಲ್ಲ ಹೇಗೆ ಜ್ಞಾನ ಎಂಬುದನ್ನು ಸತಿ ಸುತರಿಗೆ ಸೂತ್ರದ ಮೂಲಕ ತಿಳಿಯ ಹೇಳುತ್ತಾನೆ. ಸನ್ಮಾರ್ಗದೆಡೆಗೆ ಕರೆದೊಯ್ಯುತ್ತಾನೆ.

ನಿರ್ವಂಚಕದಿಂದ ಅರಿದಾಚರಿಸಬಲ್ಲಾತನೆ ಅಚ್ಚ ಶರಣ ನೋಡಾ. ಕಲಿದೇವರ ದೇವಾ :

ವಂಚಿಸುವ ತನುವಿನ ಕಾಂಕ್ಷೆಯನು ಸುಟ್ಟು, ಮನದ ಲಜ್ಜೆಯನು ಮುರಿದು, ಭಾವದ ಕ್ರಿಯೆಯನು ಹೊಟ್ಟು ಮಾಡಿ ತೂರಿ, ತನುವಿನ ಜ್ಞಾನಕ್ಕೆ ಭಕ್ತಿ ಮಾಡಿ, ಆ ಜ್ಞಾನಿಯೇ ತಾನಾದಾತ ಅಚ್ಚ ಶರಣ. ಆತನೇ ಕಲಿದೇವರದೇವಾ ಎಂದಿದ್ದಾರೆ ಮಡಿವಾಳ ಮಾಚಿದೇವರು.

■

ಲಿಂಗಾಂಗಿ

ಲಿಂಗಾಂಗಿಗಳೆಂದು ನುಡಿದ ಅಪ್ಪಗಳಿರಾ,
ಲಿಂಗಾಂಗಿಗಳೆಂತಾದಿರಿ ಹೇಳಿರಣ್ಣಾ,
ಅರಿಯದಿರ್ದಡೆ ಕೇಳಿರಣ್ಣಾ,
ಲಿಂಗಾಂಗದ ಭೇದವ. ಪರದೈವವ ನೆನೆಯದೆ,
ಪರಸ್ತ್ರೀಯರ ಪರದ್ರವ್ಯವನಪಹರಿಸದೆ, ಪರನಿಂದೆಯ ಮಾಡದೆ,
ಪರಹಿಂಸೆಗೊಡಂಬಡದೆ, ಪರವಾದವ ಕಲ್ಪಿಸದೆ,
ಸತ್ಯ ಶುದ್ಧ ಕಾಯಕವ ಮಾಡಿ,
ನಿರ್ವಂಚಕತ್ವದಿಂದ ಸಮರ್ಪಿಸಿ ಅತಿ ಭೃತ್ಯನಾಗಿ ಆಚರಿಸುವರೇ.
ಲಿಂಗಾಂಗಿಗಳು ನೋಡಾ ಕಲಿದೇವರದೇವಾ.

- ಮಡಿವಾಳ ಮಾಚಿದೇವರು

ಲಿಂಗಾಂಗಿಗಳೆಂದು ನುಡಿದ ಅಪ್ಪಗಳಿರಾ, ಲಿಂಗಾಂಗಿಗಳೆಂತಾದಿರಿ ಹೇಳಿರಣ್ಣಾ :
ಲಿಂಗ-ಅಂಗದಲ್ಲಿ ಸಮರಸವಾಗಿ ಬೆರೆತುದೇ ಲಿಂಗಾಂಗ. ಜ್ಞಾನ-ಅಂಗದಲ್ಲಿ ಸಮರಸವಾಗಿ ಬೆರೆತುದೇ ಜ್ಞಾನಾಂಗ. ಅದು ಲಿಂಗಾಂಗ. ಅಂಗದಲ್ಲಿ ಲಿಂಗ ಹೇಗೆ ಬೆರೆತಿದೆ ? ಅಂಗದಲ್ಲಿ ಲಿಂಗ ಬೆರೆತು ಅದು ಲಿಂಗಾಂಗ ಹೇಗಾಯಿತು? ಲಿಂಗಾಂಗಿಗಳು ಹೇಗಾದಿರಿ ? ನುಡಿಯುವುದರಿಂದ ಅಂಗ ಲಿಂಗವಾಗಲಿಲ್ಲ. ಅರಿದರಿದು ತಿಳಿಯುವುದರಿಂದ ಅಂಗ ಲಿಂಗವಾಗುತ್ತದೆ. ಅಂಗ ಲಿಂಗವಾಗುವುದಕ್ಕೆ ಆ ಲಿಂಗವೇ ಅಂಗವಾಗುವುದಕ್ಕೆ ಒಂದು ಶಿಕ್ಷಣವಿದೆ. ಆ ಶಿಕ್ಷಣವೇ ಶರಣರ ಶಿಕ್ಷಣ. ಆ ಶಿಕ್ಷಣ ಪಡೆದು ಲಿಂಗ ತಾನಾದವನೇ ವೀರ. ಲಿಂಗಾಂಗ ಸಾಮರಸ್ಯ ತಿಳಿದು ಅದರ ಆಚಾರದಲ್ಲಿದ್ದವನೇ ವೀರಶೈವ. ವರ್ಧಮಾನ ಮಹಾವೀರನಾದಂತೆ !

ಅರಿಯದಿರ್ದಡೆ ಕೇಳಿರಣ್ಣಾ, ಲಿಂಗಾಂಗದ ಭೇದವ ; ಪರದೈವವ ನೆನೆಯದೆ :
ಪರದೈವವ ನೆನೆಯದವನೆ ಲಿಂಗಾಂಗಿ ಎಂದಿದ್ದಾರೆ ಮಡಿವಾಳ ಮಾಚಿದೇವರು. ಪರದೈವ ದೂಷಣೆ ಮಾಡಲು, ತನ್ನ ದೈವವ ಹಾಡಿ ಹೊಗಳಲು ಬರುತ್ತದೆ. ದೇವರನ್ನು ನಿಂದೆ ಮಾಡುವವ ಹೊಗಳುವವ ಲಿಂಗಾಂಗಿಯಲ್ಲ. ಅಂತರಂಗದಲ್ಲಿ ಬೆರೆತ ತನ್ನ ದೈವ ತಿಳಿದರೆ ಪರದೈವವೆಂಬುದೇ ಇಲ್ಲ !''*ಹೊರಗಿದ್ದಹನೆಂದು ಮರೆದು ಮಾತನಾಡಿದೆ; ಅರಿಯಲೀಯದೆ ಬಂದೆನ್ನ ಅಂತರಂಗದಲ್ಲಿಪ್ಪನು. ತೆರಹಿಲ್ಲದಭವ ನುಡಿಗೆಡೆಗೊಡನು. ಆತನ ಬಯಲಿಂಗೆ ಬೇಟಗೊಂಡೆನವ್ವಾ. ನಾನೇನ ಮಾಡುವೆ ನೆಲೆ ತಾಯೆ, ಮರೆದಡೆ ಎಚ್ಚರಿಸುವ ಕುರುಹಿಲ್ಲದ ಗಂಡನು. ತನ್ನನರಿದಡೆ ಒಳ್ಳಿದನವ್ವಾ*

ನಮ್ಮ ಶಂಭು ಜಕ್ಕೇಶ್ವರನು" ಎಂದು ಶಿವಶರಣೆ ಸತ್ಯಕ್ಕ ತನ್ನೊಡಲೊಳಗಿನ ದೈವವನ್ನು ನೆನದಿದ್ದಾಳೆ.

ಜ್ಞಾನ ತಿಳಿಯಲು ಪುಸ್ತಕ, ದೇವರ ತಿಳಿಯಲು ದೇವಾಲಯದ ಮೊರೆ ಹೋಗುವುದು ಸಾವಿರಾರು ವರ್ಷಗಳಿಂದಲೂ ಬಂದಿದೆ. ಆದರೂ ಸಾಧ್ಯವಾಗಿಲ್ಲ! ಜ್ಞಾನ ಪುಸ್ತಕದಲ್ಲಿಯೇ ಇದೆ, ದೇವರು ದೇವಾಲಯದಲ್ಲಿಯೇ ಇದ್ದಾನೆ. ಇವೆರಡನ್ನೂ ಮೊರೆ ಹೋಗುವುದು ಮನಷ್ಯನಿಗೆ ತಪ್ಪಿಲ್ಲ. ಇವೆರಡೂ ಹೊರಗಿನವು. ಒಳಗಿನ ದೈವ ಮತ್ತು ಜ್ಞಾನ ಬಳಕೆಯಾಗಲೇ ಇಲ್ಲ.

ದೇವರು ತನ್ನೊಳಗಿದ್ದಾನೆ, ತಾನೇ ಆ ದೇವರು. ಆ ದೇವರೇ ಬ್ರಹ್ಮ, ಅಹಂಬ್ರಹ್ಮಾಸ್ಮಿ. ನಾನೇ ಆ ಬ್ರಹ್ಮ ಎಂದು ತೋರಿಸಲು ದೇವಸ್ಥಾನ ಗರ್ಭಗುಡಿ ನಿರ್ಮಿಸಿ ಅದರೊಳಗೆ ಮೂರ್ತಿ ಕೂಡಿಸಿ, ದೇವರೆಂದು ತೋರಿಸಿದರು. ದೇಹದಾಕಾರದ ರಥ ಮಾಡಿ ಅದರೊಳಗೆ ಮೂರ್ತಿ ಕೂಡಿಸಿ ಎಳೆದು ತೋರಿದರು. ಹೀಗೆ ನಿನ್ನ ದೇಹ ಆಲಯ, ಅದರೊಳಗೆ ದೇವರಿದ್ದಾನೆ ಆ ದೇವರೇ ನೀನೆಂದು ಪ್ರಯೋಗದ ಮೂಲಕ ಹಿರಿಯರು ಹೇಳಿ ಹೋದರು. ಆದರೂ ಆ ಕಲ್ಲು ಕಟ್ಟಡವೇ ಸತ್ಯವಾಗಿ, ತನ್ನ ದೇವರು ದೇಹದೊಳಗೇ ಉಳಿದ. ಹೊರಗಿನ ದೇವರನ್ನು ನೆನೆದ; ಹೊರಗಿನ ದೇವರನ್ನೇ ನಿಂದಿಸಿದ. "*ನಿತ್ಯ ನಿರಂಜನ ತಾನೆಂದರಿಯದೆ 'ತತ್ವಮಸಿ' ಎಂದು ಹೊರಗನೆ ಹಾಡಿ ಸತ್ತಿತ್ತಲ್ಲ ಜಗವೆಲ್ಲ ನಾಯಿ ಸಾವ*" ಎನ್ನುವ ಅಲ್ಲಮ ಪ್ರಭುಗಳ ಮಾತು ಅಂದಿಗೂ ದಿಟವಾಗಿದೆ , ಇಂದಿಗೂ ದಿಟವಾಗಿದೆ.

ನಿತ್ಯ ನಿರಂಜನ ತಾನೇ. ತನ್ನೊಳಗೆ ತತ್ವ ಅಡಗಿದೆ. ಆ ತತ್ವ ತಿಳಿ ಎನ್ನುವುದನ್ನು ಕೂಡಾ ವೇದಿಕೆಯ ಮೇಲೆ ಪಂಡಿತನಾಗಿ ಹೇಳಿದನೇ ಹೊರತು ತನ್ನ ತಿಳಿಯಲಿಲ್ಲ, ತನ್ನ ಅಂತರಾಳಕ್ಕಿಳಿಯಲಿಲ್ಲ.

"*ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆನವ್ವಾ. ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು*" ಎಂದಿದ್ದಾರೆ ಅಕ್ಕಮಹಾದೇವಿ. ಸತ್ತ ದೇವರನ್ನು ಕಲ್ಲಿನಲ್ಲಿ ಕೆತ್ತಿ ಕತೆ ಮಾಡಿ ಹಾಡದೆ ತನ್ನ ಅಂತರಾಳದ ಚೆಲುವನಲ್ಲಿ ಲೀನನಾಗಿ ಆ ಚೆಲುವನೇ ತಾನಾಗುವಡೆ ಪರದೈವವ ನೆನೆಯಲಿಲ್ಲ ನಿಂದಿಸಲಿಲ್ಲ. ಪರದೈವವೆಂಬುದು ಇಲ್ಲವೇ ಇಲ್ಲ. ಅದು ಭ್ರಮೆ. ಅಲ್ಲಿರುವುದು ಬರೀ ಕಲ್ಲು. ಕಣ್ಣಿನ ಅಜ್ಞಾನದಲ್ಲಿ ಕಲ್ಲು ಮರೆಯಾಗಿ ಭ್ರಮಿತನಾಗಿ ಆ ಕಲ್ಲನ್ನೇ ದೇವರೆಂದ. ಆ ದೇವರೆ ಮೂರ್ತಿಯಾಗಿದೆ. ಆ ಮೂರ್ತಿಯಲ್ಲಿರುವ ಸತ್ಯ ಕಲ್ಲೇ ಹೊರತು ದೇವರಲ್ಲ, ಮೂರ್ತಿಯಲ್ಲಿ ಕಲ್ಲು ಮರೆಯಾದಂತೆ, ಅಂಗದಲ್ಲಿ (ಜ್ಞಾನ) ಲಿಂಗ ಮರೆಯಾಗಿದೆ. ಇದನ್ನು ಭೇದಿಸಿ ಆ ಲಿಂಗ ತಾನಾದವನೇ ಲಿಂಗಾಂಗಿ. ಅವನು ಪರದೈವವ ನೆನೆಯುವುದಿಲ್ಲ. ಪರದೈವ ಅವನಿಗೆ ಕಾಣುವುದೂ ಇಲ್ಲ. ದೇವಾಲಯ ಕಲ್ಲಿನಿಂದ

ನಿರ್ಮಾಣವಾಗಿದೆ. ಆಲಯದಲ್ಲಿರುವ ಮೂರ್ತಿಯೂ ಕಲ್ಲಿನದೇ. ಅಂಗವೇ ಆಲಯ. ಆ ಆಲಯದಲ್ಲಿ ಭರಿತವಾಗಿರುವ ದೈವವೇ ಲಿಂಗ. ಅದು ಜ್ಞಾನ !

ಪರಸ್ತ್ರೀಯರ ಪರದ್ರವ್ಯವನಪಹರಿಸದೆ :

ಪರಸ್ತ್ರೀ : ಇದು ಪುರುಷರಿಗೊಂದೇ ಸಂಬಂಧಿಸಿದ ಶಬ್ದವಲ್ಲ. ಸೆಕ್ಸ್ ಪುರುಷನಿಗೆ ಸ್ತ್ರೀಯಾಗಿ ಕಾಡುವುದು, ಸ್ತ್ರೀಗೆ ಪುರುಷನಾಗಿ ಕಾಡುವುದು. ಸೆಕ್ಸ್ ಅಪಹರಿಸಿ ಅನುಭವಿಸುವ ಗುಣ ತನುವಿನಲ್ಲಿದೆ. ಮಾತು ಸುಂದರವಾಗಿದ್ದರೂ ತನುವಿನಲ್ಲಿ ಸೆಕ್ಸ್ ತರಂಗಗಳು ಕಾಡದೆ ಬಿಡುವುದಿಲ್ಲ. ರೂಪ ನೋಡುವ ಕಣ್ಣು, ಮಾತನಾಡುವ ಶಬ್ದ, ತನುವಿನಲ್ಲಿ ಉಂಟಾಗುವ ತರಂಗಗಳನ್ನು ತನ್ನಲ್ಲಿರುವ ಅರಿವಿನೊಂದಿಗೆ ತಾಳೆ ನೋಡಲು ಹೋಗುವುದಿಲ್ಲ. ನೋಡುವ ಕಣ್ಣಿಗೂ, ಮಾತನಾಡುವ ಬಾಯಿಗೂ, ತನುವಿನಲ್ಲಿಯ ವಿಕೃತ ತರಂಗಗಳಿಗೂ ಒಂದಕ್ಕೊಂದು ಸಂಬಂಧ ವಿರುವುದಿಲ್ಲ. ಮಾತು ಕೇಳಿಸಿಕೊಂಡವರು ಮೃದು ಎಂದು ನಿರ್ಧರಿಸಿ ಗೌರವಿಸಿದರೂ ತಾನು ಹಾಗೆ ಇಲ್ಲ ಎನ್ನುವ ಅರಿವು ತನಗೇ ಉಂಟಾಗುವುದು.

ತನುವಿನಲ್ಲಿ ಉಂಟಾಗುವ ಆಹಾರ ನಿದ್ರೆ ಭಯ ಮೈಥುನ ಜ್ಞಾನ ಒಂದೇ. ಇದು ಸ್ತ್ರೀ ಪುರುಷನಿಗೆ ಬೇರೆ ಬೇರೆ ಎಂದು ವಿಂಗಡಿಸುವಂತಿಲ್ಲ. ಹಾಗೆಯೇ ತನುವಿನಲ್ಲಿರುವ ಚರ್ಮ, ರಕ್ತ, ಮೂಳೆ, ಮಾಂಸ, ಮಜ್ಜಾ, ಮೇದಸ್ಸು ಪದಾರ್ಥಗಳು ಕೂಡಾ ಒಂದೇ. ಆದರೂ ಸ್ತ್ರೀ-ಪುರುಷ ಎನ್ನುವ ಅಜ್ಞಾನ ತನುವಿಗೆ ಮೆತ್ತಿಕೊಂಡಿದೆ. ಪರ ತನುವಿನ ರೂಪ ನೋಡುವ ಕಣ್ಣು ಮೈಥುನ ಕ್ರಿಯೆ ಉಂಟು ಮಾಡಿ ಆ ತನುವಿನೊಂದಿಗೆ ಹಾದರ ಮಾಡುತ್ತದೆ.

ತನುವನ್ನು ಅಪಹರಿಸಿ ಸುಖಿಸಿದರೆ ತನುವಿಗೆ ಹಾದರದ ಪಟ್ಟ ! ಲೋಕದ ಭಯದಿಂದ ಮನದಲ್ಲಿ ಸುಖಿಸಿದರೆ ತನುವಿಗೆ ಕೀರ್ತಿಯ ಪಟ್ಟ. ಎರಡೂ ಹಾದರಗಳೇ ! ಒಂದು ಅಪಹರಣದ ಹಾದರ ಮತ್ತೊಂದು ಮನದ ಹಾದರ. ಅಪಹರಣದ ಹಾದರ ಲೋಕಕ್ಕೆ ಗೊತ್ತಾಗುತ್ತದೆ. ಜನ ಗೌರವಿಸುವುದಿಲ್ಲ. ಮನದ ಹಾದರ ತನಗೆ ಗೊತ್ತಾಗುತ್ತದೆ. ಜನಕ್ಕೆ ಗೊತ್ತಾಗುವುದಿಲ್ಲ, ಗೌರವಿಸುತ್ತಾರೆ. ಜನ ಕೂಡಾ ಈ ಎರಡೂ ಹಾದರಗಳ ಸುಖದಿಂದ ಹೊರತಾಗಿಲ್ಲ. ಹನ್ನೆರಡು ಜನ ಬುದ್ಧಿವಂತರಿದ್ದಂತೆ, ತನ್ನನ್ನು ಬಿಟ್ಟು ಎಣಿಕೆ ಮಾಡುವ ಸುಖದ ಅಜ್ಞಾನ ತನುವಿನಲ್ಲಿ ಮಿಳಿತವಾಗಿದೆ.

ಮಡಿವಾಳ ಮಾಚಿದೇವರು, ಪರಸ್ತ್ರೀಯರ ಅಪಹರಿಸದವನನ್ನು ಲಿಂಗಾಂಗಿ ಎಂದಿದ್ದಾರೆ. ಪರಸ್ತ್ರೀಯರ ಅಪಹರಣ ತೋರಿಕೆಯಲ್ಲೊಂದೇ ಅಲ್ಲ , ಮನದಲ್ಲಿ ಅಪಹರಿಸಿ ಸುಖಿಸುವ ಕ್ರಿಯೆಯೂ ನಿಲ್ಲಬೇಕು. ಅವನು ಲಿಂಗಾಂಗಿ.

ಸ್ತ್ರೀ-ಪುರುಷ ತನುವಿಗೆ ವಿಷಯದ ಬಯಕೆ ಒಂದೇ. ಆದರೂ 'ಸ್ತ್ರೀ'ಯನ್ನು ಮಾತ್ರ ಹೆಸರಿಸಿದ್ದಾರೆ. 'ಸ್ತ್ರೀ'ಗೂ ವಿಷಯದ ಬಯಕೆ ಇರುತ್ತದೆ. ಪುರುಷನೆಂದು

ಹೆಸರಿಸಿಲ್ಲ. ಇಲ್ಲಿ ಮಾಚಿದೇವರು ತನುವಿನ ಅಜ್ಞಾನದ ವಿಷಯದ ಬೇರು ಕಿತ್ತುವ ಸೂತ್ರವನ್ನು ಜಗತ್ತಿಗೆ ನೀಡಿದ್ದಾರೆ.

ಸ್ತ್ರೀ ಎನ್ನುವುದು ತನುವು. ಅದು ಪುರುಷನೆಂದರೂ ತನುವೇ ಸ್ತ್ರೀ ಎಂದರೂ ತನುವೇ. ತನುವಿನಲ್ಲಿ ವಿಷಯವೆಂಬ ಹಸಿರಿದೆ. ಅದಕ್ಕಾಗಿಯೇ ತನುವು ಪಶುವಾಗಿದೆ. ಹಸಿರು ಕಂಡಲ್ಲೆಲ್ಲ ಮೇಯಲು ಹೋಗುತ್ತದೆ. ತನವಿನೊಳಗೆ ಪಶುಪತಿಯೆಂಬ ಜ್ಞಾನಿಯೂ ಇದ್ದಾನೆ. ತನುವಿನ ಜ್ಞಾನ ಪುರುಷ. ತನುವು ಸ್ತ್ರೀ. ಜ್ಞಾನದಿಂದ ತನುವನ್ನು ನೋಡಿದರೆ ತನುವು ತನ್ನಂತೇ ಇದೆ. ಜ್ಞಾನದಿಂದ ಭರಿತವಾಗಿದೆ. ತನುವಿನ ಪದಾರ್ಥಗಳೆಲ್ಲ ಒಂದೇ. ನೋಡುವ ತನುವು ಸ್ತ್ರೀ , ನೋಟಕ್ಕೆ ಗುರಿಯಾದ ತನುವು ಕೂಡಾ ಸ್ತ್ರೀ ! ತನುವಿನ ಕಣ ಕಣದಲ್ಲಿ ತುಂಬಿದ್ದ ಜ್ಞಾನ ಪುರುಷ. ಜಗತ್ತಿಗೆಲ್ಲ ಪರಮ ಪುರುಷನೊಬ್ಬನೆ ಅವನೇ ನಾನೆಂದು ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಜಗದ ಎಲ್ಲ ತನುವುಗಳು ಸ್ತ್ರೀಯಾದರೆ ತನುವಿನಲ್ಲಿ ಭರಿತವಾದ ಜ್ಞಾನ ಒಂದೇ ! ಶ್ರೀ ಕೃಷ್ಣನಿಗೆ ಹದಿನಾರು ಸಾವಿರ ಹೆಂಡಂದಿರು. ಶ್ರೀ ಕೃಷ್ಣನೊಬ್ಬನೆ. ಆ ಪರಮ ಪುರುಷನಲ್ಲಿ ದೀಕ್ಷೆ ಪಡೆದು ಹೆಂಡಂದಿರಾದರು. ಭಕ್ತರಾದರು. ನಂತರ ಜ್ಞಾನದ ಸುಳುಹು ಪಡೆದು ಪರಮ ಪುರುಷರಾದರು.

ವಿಷಯವೆಂಬುದು ತನುವಿನ ಅಜ್ಞಾನ. ತನುವಿನಲ್ಲಿಯೇ ಹುಟ್ಟಿ ತನುವನ್ನೇ ಸುಖಿಸಿ, ಸ್ತ್ರೀ-ಪುರುಷರಿಂದಲೇ ಸುಖ ಎನ್ನುವ ವ್ಯರ್ಥ ಆರೋಪಕ್ಕೆ ಗುರಿಯಾಗಿದೆ. ಜ್ಞಾನದಿಂದಲೇ ತನುವು ಪರಸ್ತ್ರೀಯನ್ನು ಅಪಹರಿಸದೆ ಮುಕ್ತಿ ಪಡೆಯುತ್ತದೆ. ಅಂಗ ಲಿಂಗದಲ್ಲಿ ಲೀನವಾಗಿ ಲಿಂಗಾಂಗಿ ಯಾಗುತ್ತದೆ.

ಪರದ್ರವ್ಯವನಪಹರಿಸದೆ : ದ್ರವ್ಯವೆನ್ನುವುದು ಸಂಪತ್ತು. ಯಾವ ವಸ್ತುಗಳಿಗೆ ಸಂಪತ್ತೆನ್ನಬೇಕು ? ಯಾವುದು ಪರರ ಸಂಪತ್ತು. ? ಯಾವುದ ತನ್ನ ಸಂಪತ್ತು ? ಸಂಪತ್ತಿನ ಬಗ್ಗೆ ಸರಿಯಾಗಿ ತಿಳಿದುಕೊಂಡರೆ ತನ್ನದು ಪರರದು ಎನ್ನುವುದು ತಾನೇ ತಿಳಿಯುತ್ತದೆ. ಭೌತಿಕ ಸಂಪತ್ತು : ಭೂಮಿ, ಚಿನ್ನ , ಕರೆನ್ಸಿ ವಿಷಯ ಈ ಸಂಪತ್ತು ಇಂದು ತನ್ನಲ್ಲಿದ್ದು ನಾಳೆ ಪರರದಾಗುತ್ತದೆ. ಇವುಗಳನ್ನು ನನ್ನದೆನ್ನಲು ಬರುವುದಿಲ್ಲ. ಪರರವೂ ಆಗುವುದಿಲ್ಲ. *"ಭೂಮಿ ನಿನ್ನದಲ್ಲ ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ, ಇವು ಜಗಕ್ಕಿಕ್ಕಿದ ವಿಧಿ; ನಿನ್ನದೆಂಬುದು ಜ್ಞಾನ ರತ್ನ ಕಾಣಾ ಅದನ್ನು ಕೆಡಗೊಡದೆ ಅಲಂಕರಿಸಿದೆಯಾದಡೆ ನಿನ್ನಂತಹ ಹಿರಿಯರು ಯಾರೂ ಇಲ್ಲ"* ಜ್ಞಾನ ರತ್ನ ಎನ್ನುವ ದ್ರವ್ಯ ತನ್ನದು. ಅದು ತನ್ನ ತನುವಿನ ಪ್ರೊಡೆಕ್ಟ್. ಭೌತಿಕ ದ್ರವ್ಯವೆನ್ನುವುದು ಅಜ್ಞಾನ. ಭೂಮಿ, ಭೂಮಿಯೊಳಗಿದ್ದ ಚಿನ್ನ, ತನುವನಾವರಿಸಿದ ವಿಷಯ, ಇವು ಹೊರಗಣವು, ತನುವಿನಲ್ಲಿ ಉಂಟಾದ ಭ್ರಮೆಯ ಜ್ಞಾನ. ಪರರಿಂದ ತನುವಿನಲ್ಲಿ ಸಂಗ್ರಹವಾದ ಭೌತಿಕ ಜ್ಞಾನ ಅಷ್ಟೆ . ಜ್ಞಾನದಿಂದ ಭೂಮಿ ಹೇಮ ಕರೆನ್ಸಿ ವಿಷಯ ನೋಡಿದಾಗ

ಪರದ್ರವ್ಯವೆಂದು ಸಿದ್ಧವಾಗಿ ಅಪಹರಣ ನಿಲ್ಲುತ್ತದೆ. ಅಂಗದಲ್ಲಿ ಆವರಿಸಿದ ಅಜ್ಞಾನ ಲಿಂಗ (ಜ್ಞಾನ)ದಲ್ಲಿ ಲೀನವಾಗಿ ಲಿಂಗಾಂಗಿಯಾಗುತ್ತಾನೆ.

ಪರನಿಂದೆಯ ಮಾಡದೆ, ಪರಹಿಂಸೆಗೊಡಂಬಡದೆ, ಪರವಾದವ ಕಲ್ಪಿಸದೆ :

ಪರನಿಂದೆ, ಪರಹಿಂಸೆ, ಪರವಾದ ಈ ಮೂರು ಮಾಡದವನು ಲಿಂಗಾಂಗಿ ಎಂದಿದ್ದಾರೆ ಮಡಿವಾಳ ಮಾಚಿದೇವರು. ಇದು ಮಾಚಿದೇವರ ಉಪದೇಶವಲ್ಲ. ತಾಂತ್ರಿಕವಾಗಿ ತಿಳಿದುಕೊಳ್ಳುವ ಬಗೆ. ಈ ಮೂರನ್ನು ಅಳವಡಿಸಿಕೊಂಡರೆ ನಿಂದೆ ಮಾಡದಿರಬಹುದು, ಹಿಂಸೆ ಮಾಡದಿರಬಹದು, ವಾದಕ್ಕೆ ಆಸ್ಪದ ಕೊಡದೆ ಇರಬಹುದು, ಆದರೆ ಶಬ್ದ ಕೇಳಿದ ತನುವು ಕುದಿಯದೇ ಇರುವುದಿಲ್ಲ. ಆ ವ್ಯಕ್ತಿ ಟೆಕ್ನಿಕಲಿ ಸೌಂಡ್ ಆಗಲಾರ. ಲಿಂಗಾಂಗಿ ಆಗಲಾರ.

ನಿಂದೆ ಹಿಂಸೆ ವಾದ ಈ ಮೂರು ಶಬ್ದಗಳು ತನುವಿನಿಂದಲೇ ಪ್ರೊಡೆಕ್ಟ್ ಆಗಿ ತನುವನ್ನೇ ಆಯುಧದಂತೆ ಘಾಸಿಗೊಳಿಸುತ್ತವೆ. ಹೊರಬಂದ ಶಬ್ದಗಳೆಲ್ಲ ತನುವಿನ ಫಲ. ತನುವಿನಿಂದ ಬಂದ ಫಲ, ತನುವನ್ನೇ ಘಾಸಿಗೊಳಿಸುತ್ತವೆ, ತನುವನ್ನು ಅರಳುವಂತೆ ಮಾಡುತ್ತವೆ.

ಬಾಲ್ಯದಲ್ಲಿ ಕಲಿಯುವಾಗ ನಪುಂಸಕವಾದ ಶಬ್ದಗಳು ತನುವಿನಲ್ಲಿ ಸಂಗ್ರಹವಾಗಿ, ಪ್ರಯೋಗಿಸುವಾಗ ಸುಖ ದುಃಖಗಳನ್ನುಂಟು ಮಾಡಿದವು. ಹಿಂಸೆ, ನಿಂದೆಗಳಿಗೆ ಆಸ್ಪದವನ್ನುಂಟು ಮಾಡಿದವು. ವಾದ-ತರ್ಕ ಮಾಡಲು ಪ್ರೇರೇಪಿಸಿದವು. ಸುಖಿಸುವ ಶಬ್ದ ಆಡುವ ತನುವನ್ನು ಕೇಳುವ ತನುವನ್ನೂ ಸುಖಿಸಿದವು. ಹಿಂಸಿಸುವ ಶಬ್ದ ಆಡುವ ತನುವನ್ನು ಕೇಳುವ ತನುವನ್ನು ಘಾಸಿಗೊಳಿಸಿದವು. ಮತ್ತೊಂದು ಶಬ್ದ ತನ್ನನ್ನು ಇತರರನ್ನೂ ವಾದ-ವಿವಾದದಲ್ಲಿ ತರ್ಕ ಕುತರ್ಕದಲ್ಲಿ ಮುಳುಗಿಸಿತು.

ಕಲಿಯುವಾಗ ನಪುಂಸಕವಾದ ಶಬ್ದ ಪ್ರಯೋಗಿಸುವಾಗ ಜೀವ ಕಳೆ ಪಡೆಯಿತು. ಅಣುಬಾಂಬಿಗಿಂತಲೂ ಅಧಿಕ ಶಕ್ತಿಶಾಲಿಯಾಯಿತು. ತನುವಿನಿಂದ ಹೊರಬಂದ ಶಬ್ದ ರಕ್ತದ ಮಡುವಿನಲ್ಲಿ ತೇಲುವಂತೆ ಮಾಡಿತು. ಇದು ತನುವಿನ ಫಲ; ಶಬ್ದವನ್ನು ತನುವು ವಿಪರೀತವಾಗಿ ಅರ್ಥೈಸಿದ ಫಲ.

ಬೇಬಿ ಸಿಟ್ಟಿಂಗ್‌ನಿಂದ ಹಿಡಿದು ಇಪ್ಪತ್ತು ವರ್ಷಗಳ ಪರ್ಯಂತ ಕಲಿತರೆ ಸ್ನಾತಕ ಪದವಿ, ಇಪ್ಪತ್ತೈದು ವರ್ಷ ಕಲಿತರೆ ಡಾಕ್ಟರೇಟ್ ಪದವಿ ದೊರೆಯುತ್ತದೆ. ಆಯುಷ್ಯದ ಕಾಲು ಶತಮಾನ ಓದಿಗಾಗಿ, ಶಬ್ದಗಳ ಕಲಿಕೆಗಾಗಿ ಕಳೆದರೂ ತನುವಿನ ಸಂಪತ್ತು ಹೊರಬರಲಿಲ್ಲ, ನಿಂದೆ, ಹಿಂಸೆ, ವಾದ ಮಾಡದೆ ಉಳಿದ ಆಯುಷ್ಯ ಕಳೆಯಲಿಲ್ಲ. ಸರಕಾರ, ಶಿಕ್ಷಣ ಸಂಸ್ಥೆಗಳೂ ಈ ಬಗ್ಗೆ ಯೋಚಿಸಲಿಲ್ಲ. ತನುವಿನ ಆಹಾರ ಸಂಪಾದನೆಗಾಗಿ ಶಿಕ್ಷಣ ಮೀಸಲಾಯಿತು. ಗಿಡಮರ ಬಳ್ಳಿ ಪಶು ಪಕ್ಷಿ ಪ್ರಾಣಿಗಳಿಗೆ ಯಾರೂ ಆಹಾರ ನೀಡುವುದಿಲ್ಲ. ಅನ್ನಕ್ಕಾಗಿ ಅವು ಯಾವ ಸಂಸ್ಥೆಗಳಲ್ಲಿ ಕಲಿಯುವುದೂ

ಇಲ್ಲ. ಮನುಷ್ಯನಂತೆ ಆಹಾರಕ್ಕಾಗಿ ಸಜಾತಿ ಪ್ರಾಣಿಗಳನ್ನು ಅವು ಕೊಲ್ಲುವುದೂ ಇಲ್ಲ.

ನಿಂದೆ, ಹಿಂಸೆ, ವಾದ ಶಬ್ದದಿಂದಲೇ. ಶಬ್ದ ಕಲಿತು ಸಂಗ್ರಹ ಮಾಡಿಕೊಂಡ ನಂಜು ಕಿವಿಯಲ್ಲಿ ತುಂಬಿದೆ. ಕಲಿಯುವಾಗ ಶಬ್ದ ಕೇಳಿದ ಕಿವಿ ಅವುಗಳ ಅರ್ಥ ಸಂಗ್ರಹಿಸಿಕೊಂಡಿದೆ. ಶಬ್ದ ಕಿವಿಗೆ ಬಡಿದಾಗ ತನ್ನ ನಿಘಂಟಿನ ಮೂಲಕ ಕ್ಷಣಾರ್ಧದಲ್ಲಿ ಅರ್ಥೈಸಿಕೊಂಡು ತನುವನ್ನು ಹಿಂಸಿಸುತ್ತದೆ. ಪರ ತನುವಿಗೆ ನಿಂದೆ ಮಾಡುತ್ತದೆ. ವಾದ-ವಿವಾದ, ತರ್ಕ-ಕುತರ್ಕ ಮಾಡಿ ತಾನು ಕೇಳಿ, ಕಲಿತು, ಓದಿ ಸಂಗ್ರಹಿಸಿಕೊಂಡ ಪದಗಳನ್ನೆಲ್ಲ ಪ್ರಯೋಗ ಮಾಡುತ್ತದೆ, ಶರಣರು ಇಂಥವರನ್ನು ಶಬ್ದ ಸಂಭ್ರಮಿಗಳೆಂದು ಕರೆದರು.

ಓದಿ, ಕೇಳಿ, ಕಲಿತು ಸಂಗ್ರಹಿಸಿಕೊಂಡು ಪ್ರಯೋಗಿಸಿದ ಶಬ್ದಗಳೆಲ್ಲ ನಿಂದೆ, ಹಿಂಸೆ, ವಾದ-ವಿವಾದ, ತರ್ಕ-ಕುತರ್ಕ ಸುಖ-ದುಃಖಕ್ಕೆ ಕಾರಣವಾಯಿತು. ಇವುಗಳನ್ನು ಪ್ರಯೋಗಿಸುವಾತ ಅಂಗಿ, ಅಂಗವುಳ್ಳಾತ.

ಲಿಂಗಾಂಗಿಯ ಅಂಗವದು ಜ್ಞಾನಾಂಗ. ಕಿವಿ, ಕಣ್ಣು, ಚರ್ಮ, ಮೂಗು, ನಾಲಿಗೆಯಲ್ಲಿ ಜ್ಞಾನವೇ ಭರಿತವಾಗಿದೆ. ಶಬ್ದ ಕಿವಿಗೆ ಬಡಿದು ಜ್ಞಾನವಾಗುತ್ತದೆ. ಬಡಿದ ಶಬ್ದಗಳೆಲ್ಲ ಹೂವಿನಂತೆ ಸ್ವೀಕರಿಸುತ್ತಾನೆ. ಶಬ್ದ ಕೇಳಿ ಹಿಂಸೆ ಮಾಡುವುದಿಲ್ಲ ಮೌನಿಯಾಗುತ್ತಾನೆ. ಶಬ್ದ ಕೇಳಿ ವಾದ ಮಾಡುವುದಿಲ್ಲ ಘನ ಗಂಭೀರ ನಾಗುತ್ತಾನೆ. ಲಿಂಗಾಂಗಿ ನಿಶಬ್ದವೇದಿ. ಬಡಿದ ಶಬ್ದಗಳನ್ನು ಭೇದಿಸಿ ತನ್ನಂತೆ ಮಾಡಿಕೊಳ್ಳುವ ಸಾಮರ್ಥ್ಯವುಳ್ಳ ಅಚ್ಚ ಶರಣ. ಆತ ಕಲಿದೇವರ ದೇವ.

■

ತನುವನಾವರಿಸಿದ ಡೊಂಬ

ಅರಸನ ಭಕ್ತಿ ಅಹಂಕಾರದಲ್ಲಿ ಹೋಯಿತ್ತು.
ಬ್ರಾಹ್ಮಣನ ಭಕ್ತಿ ಮುಟ್ಟು ತಟ್ಟಿನಲ್ಲಿ ಹೋಯಿತ್ತು.
ಶೀಲವಂತನ ಭಕ್ತಿ ಪ್ರಪಂಚಿನಲ್ಲಿ ಹೋಯಿತ್ತು.
ಸೆಟ್ಟಿಯ ಭಕ್ತಿ ಕುಟಿಲ ವ್ಯಾಪಾರದಲ್ಲಿ ಹೋಯಿತ್ತು.
ನೀವು ಕೇಳಿರೋ, ಇಂಥವರ ಭಕ್ತಿಗೆ ಊರಿಂದ
ಹೊರಗಣ ಡೊಂಬನೇ ಸಾಕ್ಷಿ ಕಾಣಾ ಕಲಿದೇವರದೇವಾ

- ಮಡಿವಾಳ ಮಾಚಿದೇವರು

ಮಡಿವಾಳ ಮಾಚಿದೇವರು, ಅರಸ ಬ್ರಾಹ್ಮಣ ಶೀಲವಂತ ಸೆಟ್ಟಿಯ ಸ್ವಭಾವ ಮತ್ತು ಅವರ ವೃತ್ತಿಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ನಾಲ್ಕೂ ಜನರ ತನುವು ಒಂದೇ ಆದರೂ ವೃತ್ತಿ ಮತ್ತು ಪ್ರವೃತ್ತಿ ಬೇರೆ ಬೇರೆ.

ರಕ್ಷಣೆ ಮಾಡಬೇಕಾದ ಅರಸನ ತನುವಿನಲ್ಲಿ ಅಹಂಕಾರ ಮನೆ ಮಾಡಿಕೊಂಡಿದೆ. ಜ್ಞಾನ ಹೇಳಿ ತನ್ನಂತೆ ಸರ್ವರನ್ನು ಕಾಣಬೇಕಾದ ಬ್ರಾಹ್ಮಣನ ತನುವಿನಲ್ಲಿ ಮುಟ್ಟು ತಟ್ಟು ಮನೆ ಮಾಡಿಕೊಂಡಿದೆ. ಸಜ್ಜನ, ಸುಶೀಲನ ತನುವಿನಲ್ಲಿ ಹಾದರದ, ಆಗುಹೋಗುಗಳು ಮನೆ ಮಾಡಿಕೊಂಡಿವೆ. ಸೆಟ್ಟಿಯ ತನುವಿನಲ್ಲಿ ಕುಟಿಲತನದ ವ್ಯಾಪಾರ ಮನೆ ಮಾಡಿಕೊಂಡಿದೆ.

ತನುವು ಒಂದೇ ಆದರೂ ವ್ಯವಹಾರದಿಂದ ತನುವಿನ ಸ್ವಭಾವ ಬೇರೆ ಬೇರೆಯಾಗಿದೆ.

ನಾಲ್ಕೂ ತನುವುಗಳು ದೇವಾಲಯ ನಿರ್ಮಿಸಿ, ಭಕ್ತಿ ಮಾಡುವುದು. ಪೂಜೆ, ನೈವೇದ್ಯ, ಸ್ನಾನ, ಸಂಧ್ಯಾವಂದನೆ ಇವಾವುಗಳಲ್ಲಿಯೂ ಕೊರತೆಯಿಲ್ಲ. ಆದರೆ ವ್ಯವಹಾರಕ್ಕೂ ಪೂಜೆಗೂ ಸಂಬಂಧವಿಲ್ಲ. ಪೂಜೆ ಮಾಡುವಾಗ ತನುವಿನಲ್ಲಿದ್ದ ಸ್ವಭಾವ ವ್ಯವಹಾರದಲ್ಲಿಲ್ಲ. ತನುವು ಒಂದೇ ಆದರೂ ಸ್ವಭಾವಗಳಿಂದ ಬೇರೆ ಬೇರೆಯಾಗಿ ಕಾಣುತ್ತದೆ.

ತನುವಿನ ಭಕ್ತಿ ಮತ್ತು ವ್ಯವಹಾರದಲ್ಲಿ ನಡೆದುಕೊಳ್ಳುವ ಸ್ವಾಭಾವಕ್ಕೆ ಕಾರಣವಾದ ವಸ್ತುವನ್ನು ಮಾಚಿದೇವರು ಪತ್ತೆ ಹಚ್ಚಿದ್ದಾರೆ. ಆ ವಸ್ತುವಿಗೆ 'ಡೊಂಬ' ಎಂದು ನಾಮಕರಣ ಮಾಡಿದ್ದಾರೆ. ಊರಿಂದ ಹೊರಗಣ ಡೊಂಬನೇ ಸಾಕ್ಷಿ ಎಂದಿದ್ದಾರೆ.

ಊರು ಎಂದರೆ ಪುರ. ಪುರ ಎಂದರೆ ತನುವು. ಪುರುಷ ಎಂದರೆ ತನುವಿನಲ್ಲಿ ತನ್ಮಯವಾದವನು. ಹೆಣ್ಣು-ಗಂಡು ತನುವಿಗೆ ಒಬ್ಬನೇ ಪುರುಷ. ಅರಸ, ಬ್ರಾಹ್ಮಣ,

ಶೀಲವಂತ, ಸೆಟ್ಟಿಯ ತನುವಿಗೆ ಒಬ್ಬನೇ ಪುರುಷ. ಆತ ಕಲಿದೇವರು, ಅಂಗದಲ್ಲಿ ಬೆರೆತ ಲಿಂಗ. ತನುವಿನಲ್ಲಿ ತನ್ಮಯವಾದ ಅರಿವು.

ಊರಿಂದ ಹೊರಗಣ ಡೊಂಬ :

ತನುವಿನ ಹೊರಗಣ ಡೊಂಬ ಅಂದರೆ ಮನ. ಮನಕ್ಕೆ ಮಾಚಿದೇವರು ಊರ ಹೊರಗಣ ಡೊಂಬನೆಂದು ಕರೆದಿದ್ದಾರೆ. ಬಸವಣ್ಣನವರು ಡೊಂಬನಿಗೆ ಅರಸನೆಂದಿದ್ದಾರೆ. *"ಲಾಂಛನಕ್ಕೆ ಶರಣೆಂಬೆ. ಆವರಂತರಂಗವ ನೀವೆ ಬಲ್ಲಿರಿ. ಅರಸನ ಸುದ್ದಿ ಎಮಗೇಕಯ್ಯ ? ಕೂಡಲ ಸಂಗಮದೇವಾ ನಿಮ್ಮ ಶರಣರು ರತ್ನ ಮೌಖಿಕದಚ್ಚು"* ತನುವು ಅರಿವಿನ ಲಾಂಛನ. ತನುವಿನ ತುಂಬಾ ಅರಿವೇ ತುಂಬಿದೆ. ತನುವು ಅರಿವಿನ ಪಡಿಯಚ್ಚು, ಜ್ಞಾನ ರತ್ನ. ಮನವೆಂಬ ಅಹಂಕಾರ ತನುವಿನಲ್ಲಿ ಆವರಿಸಿರುವುದರಿಂದ ಮನ ತನುವಿನ ಸ್ವಭಾವವಾಗಿ ಮಾರ್ಪಟ್ಟಿದೆ. ಮನ ತನುವನ್ನು ಪೂಜೆ ಮಾಡಿಸುತ್ತದೆ. ಆ ಮನವೇ ಅರಸನಾಗಿ ತಪ್ಪು ಮಾಡಿದ ತನುವನ್ನು ಗಲ್ಲಿಗೇರಿಸುತ್ತದೆ. ಎಲ್ಲರೂ ಒಂದೇ, ದೈವ ಸಮಾನ ಎಂದು ಮನ ಪ್ರವಚನ ನೀಡುತ್ತದೆ, ಅದೇ ಮನ ಬ್ರಾಹ್ಮಣನಾಗಿ ಮುಟ್ಟುವ ತಟ್ಟುವ ಶೀಲಮಾಡುತ್ತದೆ. ಸೆಟ್ಟಿಯ ತನುವಿನಲ್ಲಿ ಮನ ಭಕ್ತಿವಾನನಂತೆ ವೇಷ ಹಾಕಿ, ಕುಟಿಲತನದ ಪಾತ್ರವನ್ನೂ ಮಾಡಿಸುತ್ತದೆ. ಹೀಗೆ ಮನ ಶೀಲವಂತನೆಂದು ತೋರುವ ತನುವಿನಲ್ಲಿ ಹಾದರದ ಪಾತ್ರವನ್ನೂ ಹಾಕಿಸುತ್ತದೆ.

ಮನ ಇಲ್ಲದ್ದು. ತನುವಿನೊಳಗಣ ಅರಿವು ಇದ್ದದ್ದು. ಅರಿವು, ಕ್ಷಣ ಕ್ಷಣಕ್ಕೂ ಮನ ಹಾಕಿದ ಡೊಂಬನ ಪಾತ್ರವನ್ನು ಖಂಡಿಸಿ ತನ್ನಲ್ಲಿ ಲೀನವಾಗಲು ಪ್ರೇರೇಪಿಸಿ ತನುವಿನೊಳಗೆ ಪಾಠ ಮಾಡುತ್ತದೆ. ತನುವಿನಲ್ಲಿ ತನ್ಮಯವಾಗಿ ಪಾಠ ಮಾಡುವ ಆ ಅರಿವಿಗೆ ಮಾಚಿದೇವರು ಕಲಿದೇವರೆಂದು ಹೆಸರಿಟ್ಟು ಕರೆದರು. ತನುವಿನ ಹೊರಗಿದ್ದು ತನುವನಾವರಿಸಿ, ಅರಿವಿನ ತನುವನ್ನೇ ದುರ್ಬಳಕೆ ಮಾಡಿಕೊಂಡ ಮನವನ್ನು ಊರ ಹೊರಗಿನ ಡೊಂಬನೆಂದು ಕರೆದರು.

■

ಗಂಡನೆಂಜಲಿಗೆ ಹೇಸುವ ಮನ

ಗಂಡನೆಂಜಲಿಗೆ ಹೇಸುವಳು. ಮಿಂಡನೆಂಜಲ ತಿಂಬ ತೆರನೆಂತೆಂದರೆ :
ಗುರುವಿನಲ್ಲಿ ಉಪದೇಶ ಪಡೆದು ಪ್ರಸಾದಕ್ಕೆ ಸೂತಕವ
ಮಾಡುವ ಪಂಚ ಮಹಾಪಾತಕರು ನೀವು ಕೇಳಿಭೋ :
ಅಂಡದೊಳಗೆ ಹುಟ್ಟಿದ ಉತ್ಪತ್ತಿ ಎಲ್ಲವೂ ಗುರುವಿಂದಲಾಯಿತ್ತು.
ಮತ್ತೆ ಮರಳಿ ಮಿಂಡ ಮೈಲಾರ, ಬೀರ, ಭೈರವ, ಎಕ್ಕನಾದಿ ,
ಕುಕ್ಕನೂರ ಬಸವಿ, ಕೇತ, ಧೂಳನೆಂಬ ಕಾಳು ದೈವಕ್ಕೆರಗಿ
ನಾನು ಶಿವಭಕ್ತನೆನಿಸಿಕೊಂಬ ಚಂಡಿ ನಾಯಿಗಳ ಕಂಡು
ಎನ್ನ ಮನ ಹೇಸಿತ್ತು ಕಾಣಾ ಕಲಿದೇವರದೇವಾ.

- ಮಡಿವಾಳ ಮಾಚಿದೇವರು

ಈ ವಚನದಲ್ಲಿ ಮಾಚಿದೇವರು ಗಂಡನೆಂಜಲು, ಮಿಂಡನೆಂಜಲು ಎನ್ನುವ ಎರಡು ಪದಗಳನ್ನು ಬಳಸಿದ್ದಾರೆ. ಸಮಾಜ ಗಂಡನೆಂಜಲು ತಿನ್ನುವವರನ್ನು ಅಣಕಿಸುವುದಿಲ್ಲ. ಅದಕ್ಕೆ ಮಾನ್ಯತೆಯಿದೆ. ಪರರ ಎಂಜಲಿಗೆ ಸಮಾಜ ಮಾನ್ಯತೆ ಕೊಡುವುದಿಲ್ಲ. ಇದು ಲೌಕಿಕದ ಮಾತು.

ಗುರುವಿನಲ್ಲಿ ಉಪದೇಶ ಪಡೆದು ಜ್ಞಾನಕ್ಕೆ ಹೋಗುವ ಸೂತ್ರ ತಿಳಿದು ಪುನಃ ಪರರ ಎಂಜಲಿಗೆ ಆಸೆ ಪಡುವ ತನುವಿನ ಪಂಚ ಮಹಾ ಪಾತಕ ಗುಣಗಳನ್ನು ಮಾಚಿದೇವರು ಖಂಡಿಸಿದ್ದಾರೆ.

ತನುವಿನ ಜ್ಞಾನದಿಂದಲೇ ಎಲ್ಲ ವಸ್ತುಗಳು, ದೇವರು ಸೃಷ್ಟಿಯಾಯಿತು. ಜ್ಞಾನ ಗ್ರಂಥಗಳೆಲ್ಲ ತನುವಿನಿಂದಲೇ ಹುಟ್ಟಿದವು. ಮೈಲಾರ, ಬೀರ, ಬೈರವ, ಬಸವಿ, ಕೇತ, ಧೂಳನೆಂಬ ಕಾಳು ದೈವಗಳೆಲ್ಲ ಶಿಲೆಯ ಮೂಲಕ ತನುವಿನಿಂದ ಹುಟ್ಟಿದ ಮೂರ್ತಿಗಳು. ತನುವಿನಿಂದ ಸೃಷ್ಟಿಯಾದ ಮೂರ್ತಿಗಳಿಗೆ ತನುವು ವಶವಾಗಿ ಆ ಶಿಲಾ ಮೂರ್ತಿಗಳಿಗೆ ಭಕ್ತನಾಗಿ, ಶಿವಭಕ್ತ ನೆನಿಸಿಕೊಂಬ ತನುವಿನ ನಾಯಿಗುಣದ ಅಜ್ಞಾನಕ್ಕೆ ಮನ ಹೇಸುವುದೇ ಇಲ್ಲ.

ತನುವಿನಿಂದ ಹುಟ್ಟಿದ ಪ್ರತಿಯೊಂದು ವಸ್ತುವೂ ಎಂಜಲೇ. ಚಿನ್ನ, ಬೆಳ್ಳಿ, ಆಭರಣ, ಶಿಲೆ ಲೋಹ-ಕಟ್ಟಿಗೆ-ಪ್ಲಾಸ್ಟಿಕ್-ಗಾಜುಗಳಿಂದಾದ ಮೂರ್ತಿಗಳೆಲ್ಲ ಅರಿವಿನ ಎಂಜಲಿನಿಂದ ಹುಟ್ಟಿದವು. ತನು ಸೃಷ್ಠಿ ಮಾಡಿದ ಮೂರ್ತಿಗಳು ತನುವಿಗೆ ಮರುವಾಗಿ, ಆ ಮೂರ್ತಿಗಳೇ ತನುವಿಗೆ ಮಿಂಡನಾಗುವುದು ಅಜ್ಞಾನದ ಸಂಗತಿ.

ತನುವಿನ ಅರಿವೆಂಬುದು ಮನಕ್ಕೆ ಗಂಡನೆಂಜಲಿದ್ದಂತೆ, ತನುವಿನ ಅರಿವಿಗೆ

ಶರಣರು ಗಂಡನೆಂದು ಕರೆದಿದ್ದಾರೆ. ಆ ಅರಿವಿನಿಂದ ಸೃಷ್ಠಿಯಾದ ವಸ್ತುಗಳಿಗೆ ಮನ ದಾಸನಾಗಬೇಕೋ ? ಅಥವಾ ಆ ಅರಿವಿಗೆ ದಾಸನಾಗಬೇಕೋ ? ಇದು ಮನಕ್ಕೆ ತಿಳಿಯದ ವಿಷಯವಾಗಿ ಇನ್ನೂ ಜಟಿಲವಾಗಹತ್ತಿದೆ.

ಕಲ್ಲು ತಂದದ್ದು ತಾನೇ, ಮೂರ್ತಿ ಮಾಡಿಸಿದ್ದು ತಾನೇ, ಗರ್ಭ ಗುಡಿ, ಪೌಳಿ, ಶಿಖರ ಗೋಪುರ ನಿರ್ಮಿಸಿ, ಪ್ರಾಣ ಪ್ರತಿಷ್ಠಾನ ಮಾಡಿಸಿದ ನಾಟಕವಾಡಿದ್ದು ತಾನೇ. ಪುನಃ ಆ ಮೂರ್ತಿಗೆ ಮರುಳಾಗಿ ಸಾಲುಗಟ್ಟಿ ನಿಂತು, ಹುಂಡಿಗೆ ಹಣ ಹಾಕಿ, ತನ್ನಂತೆ ವಸ್ತ್ರ ಉಡಿಸಿ, ಕಿರೀಟ, ಮೂಗುತಿ, ತಾಳಿ, ವಂಕಿ, ಉಂಗುರುಗಳನ್ನು ತೊಡಿಸಿ, ಛತ್ರಿ ಚಾಮರಗಳನ್ನು ಬೀಸಿ, ಆ ಮೂರ್ತಿಗಳಿಗೆ ಮದುವೆ ಮಾಡಿ, ಮೂರ್ತಿಗಳನ್ನು ಶಯನ ಗೃಹಕ್ಕೆ ಕಳುಹಿಸಿ, ಸೋಬಾನ ಪದಗಳನ್ನು ಹಾಡಿ, ಬೀಗರು ಬಿಜ್ಜರು ಸ್ನೇಹಿತರನ್ನು ಕರೆಯಿಸಿ ದಿಂಡುರುಳು ಸೇವೆ ಮಾಡಿ ಊಟ ಹಾಕಿಸುವ ಮನ ಅಜ್ಞಾನದ ಮಿಂಡನೆಂಜಲಿಗೆ ಮೋಸ ಹೋಗಿದೆ. ಮನಕ್ಕೆ ಅರಿವಿನ ಗಂಡನೆಂಜಲೆ ಹೇಸಿಗೆಯಾಗಿದೆ.

ತನುವಿನ ಅರಿವಿನಿಂದ ಸೃಷ್ಠಿಯಾದ ವಸ್ತುಗಳಿಗೆ ಮನ ಅರಿಯದಂತೆ ಆ ವಸ್ತುಗಳಿಗೇ ಸೆರೆಯಾಳಾಗಿದೆ. ವಸ್ತುಗಳಿಗೆ ಜೀವವಿಲ್ಲ, ಚೇತನವಿಲ್ಲ. ವಸ್ತುವಿನ ಮೂಲವನ್ನು ಅರಿವಿನಿಂದ ನೋಡಿದರೆ ವಸ್ತುಗಳೆಲ್ಲ ನಿರರ್ಥಕ. ಆದರೂ ತನುವು ತಾನೇ ಆ ವಸ್ತುಗಳ ಎಂಜಲಿಗೆ ಆಸೆ ಪಟ್ಟಿದೆ. ಜಡವಸ್ತುಗಳೇ ಚೇತನಕ್ಕೆ ಮಿಂಡನಾಗಿವೆ. ಇದೆಂತಹ ಹುಚ್ಚು ! ವಸ್ತುಗಳ ಸೃಷ್ಠಿಗೆ ಕಾರಣವಾದ ಅರಿವಿನ ಎಂಜಲು ಮನಕ್ಕೆ ಹೇಸಿಗೆಯಾಗಿದೆ. ಇದೆಂತಹ ಅಜ್ಞಾನ ತನುವಿಗೆ ಆವರಿಸಿಕೊಂಡಿದೆಯಲ್ಲಾ ! ಹೇಸಿ ಮನ, ಅಜ್ಞಾನ ಮನಕ್ಕೆ ಅರಿವಾಗುತ್ತಿಲ್ಲವಲ್ಲ. ಜ್ಞಾನವೆಂಬ ಕಲಿದೇವನ ದರ್ಶನ ಮನಕ್ಕೆ ದೂರವಾಗುತ್ತಿದೆಯಲ್ಲಾ. ಅರಿವನು ಉಣ್ಣಲು ಹೇಸುವ ಮನ ಅಜ್ಞಾನದ ಎಂಜಲನು ನರಕದಂತೆ ತಿಂದು ಸುಖಿಸುತ್ತದೆ ಎಂದು ಮಡಿವಾಳ ಮಾಚಯ್ಯನವರು ಕನಿಕರ ವ್ಯಕ್ತಪಡಿಸಿದ್ದಾರೆ.

■

ಬೆಳಕು ನೆನೆದರೆ ಕತ್ತಲು ಹರಿಯುವುದೆ ?

ಶಿವನ ನೆನೆದರೆ ಭಯ ಹರಿವುದೆಂಬ ವಿವರಗೇಡಿಗಳ
ಮಾತ ಕೇಳಲಾಗದು. ಅದೇನು ಕಾರಣವೆಂದರೆ,
ಜ್ಯೋತಿಯ ನೆನೆದರೆ ಕತ್ತಲ ಹರಿವುದೆ ?
ಮೃಷ್ಟಾನ್ನವ ನೆನೆದರೆ ಹೊಟ್ಟೆ ತುಂಬುವುದೆ ?
ರಂಭೆಯ ನೆನೆದರೆ ಕಾಮದ ಕಳವಳ ಹಿಂಗುವುದೆ ?
ನೆನೆದರಾಗದು. ನಿಜದಲ್ಲಿ ನಿಂದು ನಿರ್ಧರಿಸದನ್ನಕ್ಕ
ಸದ್ಗುರು ಸಿದ್ಧ ಸೋಮನಾಥನೆಂಬ ಲಿಂಗವ ನೆನೆಯಬಾರದು.

– ಶಿವಶರಣ ಅಮುಗಿದೇವ

ನೆನೆದರಾಗದು ಎನ್ನುವ ಒಂದು ಶಬ್ದ ಅಮುಗಿದೇವರ ಇಡೀ ವಚನದಲ್ಲಿ ಧ್ವನಿಸಿದೆ. ಅರ್ಥವಿಲ್ಲದೆ ಬರೀ ನೆನೆಯುವ ಕೆಲಸ ತನುವಿನಲ್ಲಿ ಆಯುಷ್ಯ ಪರ್ಯಂತ ನಡೆಯುತ್ತದೆ. ಶಿವನ ನೆನೆಯುವುದು, ಮನೆ ದೈವವ ನೆನೆಯುವುದು, ತನ್ನ ಆಗುಹೋಗುಗಳಿಗೆ ದೈವ, ದೇವರ ನೆನೆದು ಆ ವಸ್ತುವಿನ ಮೇಲೆ ಭಾರ ಹಾಕುವುದು, ತಾನೇ ಆ ಕೆಲಸ ಮಾಡಿ ದೇವರು ಮಾಡಿದನೆಂದು ನಿಟ್ಟುಸಿರು ಬಿಡುವುದು.

ಯಾವುದೇ ಆಧಾರ ವಿವರ ವಿಲ್ಲದೆ ನೆನೆಯುವುದು, ನೆನೆದರೆ ಭವರೋಗ ಹರಿಯುವುದೆ ? ನೆನೆದರೆ ಹೊಟ್ಟೆ ತುಂಬುವುದೇ ? ವಿಷಯ ಸುಖ ಹಿಂಗುವುದೆ ? ಕತ್ತಲು ಬೆಳಕಾಗುವುದೆ ? ನೆನೆದರಾಗದು, ನಿಜದಲ್ಲಿ ನಿಂದು ನಿರ್ಧರಿಸದನ್ನಕ್ಕ. 'ಕೆಂಚ ಕರಿಕನ ನೆನೆದರೆ ಕರಿಕನಾಗಬಲ್ಲನೆ ? ಕರಿಕ ಕೆಂಚನ ನೆನೆದರೆ ಕೆಂಚನಾಗಬಲ್ಲನೆ ?'' ಎಂದು ಬಸವಣ್ಣನವರು ಪ್ರಶ್ನಿಸಿ ನೆನೆದರಾಗದು ಎನ್ನುತ್ತಾರೆ.

ಶಿವನನ್ನು ನೆನೆಯುವುದು ವಾಡಿಕೆ. ವಾಡಿಕೆಯಿಂದ ಶಿವನನ್ನು ನೆನೆಯಬೇಕೆ? ಶಿವನಾರು ಎನ್ನುವ ವಿವರ ಬೇಡವೇ ? ವಿವರ ಗೇಡಿಯಾಗಿ, ಜಗತ್ತೇ ನೆನೆಯುವುದೆಂದು ಶಿವನನ್ನು ತಾನೂ ನೆನೆಯುವುದೆ ? ನೆನೆದ ಕೆಲಸ ಆಯಿತೆಂದು ಹರಕೆ ತೀರಿಸುವುದೆ ? ಹರಕೆ ತೀರಿಸಲು ಹೋದ ದೇವ ಉಪವಾಸ ಇದ್ದನೆ ? ತೀರಿಸಿದ ಹರಕೆಯಿಂದ ಶಿವ ತೃಪ್ತನಾದನೆ ? ಕತ್ತಲಿನಲ್ಲಿ ಕುಳಿತು ಬೆಳಕಿನ ಕತೆ ಹೇಳಿದರೆ ಬೆಳಕಾಗುವುದೆ ? ಕತ್ತಲು ಹರಿಯಲು ಬೆಳಕು ಬೇಕಲ್ಲ; ಅದು ನಿಜ. ದೀಪ ಬೆಳಗಿಸಿದಾಗ ಕತ್ತಲು ದೀಪದೊಳಗೆ ಲೀನವಾಗಿ ದೀಪದಂತೆ ಬೆಳಗಿತಲ್ಲ.

ಶಿವನ ನೆನೆಯುವ ಮನ ಕತ್ತಲು. ಶಿವ ಬೆಳಕು. ನೆನೆಯುವ ಮನಕೆ ಶಿವನ ಪರಿಚಯವಿಲ್ಲ. ಶಿವನ ನಾಮ ಪರಿಚಯವಿದೆ. ಶಿವನ ನೆನೆಯುವ ರೂಢಿಯಿದೆ.

ಆ ರೂಢಿಯಿಂದ ಕೂಡುವಾಗ, ನಿಲ್ಲುವಾಗ, ಮಲಗುವಾಗ, ಕೆಲಸ ಮಾಡುವಾಗೊಮ್ಮೆ ಶಿವನ ನೆನೆಯುವುದು. ಲೋಕ ನೆನೆಯುವುದೆಂದು ತಾನೂ ನೆನೆಯುವುದು. ಶಿವನ ರೂಪ ಕಲ್ಪಿಸಿ, ಚಿತ್ರ ತೆಗೆದು, ದೀಪ ಬೆಳಗಿ, ಪತ್ರಿ, ಪುಷ್ಪದಿಂದ ಅಲಂಕರಿಸಿ, ತಾನುಣ್ಣುವದನ್ನು ನೈವೇದ್ಯ ಮಾಡಿ ತಾನೇ ತಿಂದು ಅರ್ಥವಿಲ್ಲದೆ ನೆನೆದು ನೆನೆದು ಜಗಲಿ, ದೇವ ಸ್ಥಾನ ನಿರ್ಮಿಸಿ, ಉತ್ಸವಗಳನ್ನು ಆಚರಿಸಿ ನೆನೆಯುವುದು. ನೆನೆಯುವುದಕ್ಕೆ ಜಾತಿ,ಮತ, ಪಂಥ ಪಂಗಡಗಳನ್ನು ಕಟ್ಟಿಕೊಂಡು ಒಟ್ಟಾಗಿ ಆರಾಧಿಸಿ ನೆನೆಯುವುದು. ಅರ್ಥವಿಲ್ಲದೆ ನೆನೆದರಾಗದು ನಿಜದಲ್ಲಿ ನಿಂದು ನಿರ್ಧರಿಸದನ್ನಕ್ಕ.

ಗುರುದೇವನೇ ಮಹಾದೇವ, ಗುರುದೇವನೇ ಸದಾಶಿವ, ಗುರುದೇವನೇ ಸಾಕ್ಷಾತ್ ಪರಬ್ರಹ್ಮ. ಅಂತಹ ಪರಬ್ರಹ್ಮನಾದ ಶ್ರೀ ಗುರುವಿಗೆ ಪ್ರಣಾಮಗಳು ಎಂದು ಉಚ್ಚರಣೆ ಮಾಡುತ್ತ ಮಂತ್ರ ಹೇಳುತ್ತಾ ನೆನೆಯುವುದು. ನೆನೆಯುವ ತನುವಿನ ಅಜ್ಞಾನಕ್ಕೆ ಕೊನೆ ಎಂದು ? ನೆನೆಯುವ ಮನ ಕತ್ತಲು, ಶಿವ ಬೆಳಕು. ಕತ್ತಲು ಬೆಳಕನು ನೆನೆದರೆ ಬೆಳಕಾಗದು. ಕಡ್ಡಿಯಿಂದ ಮತಾಪಿಗೆ ಉಜ್ಜಬೇಕು. ಬೆಳಕು ಪ್ರಜ್ವಲಿಸುವುದು. ಕತ್ತಲು ಬೆಳಕಿನಲ್ಲಿ ಲೀನವಾಗಿ ಬೆಳಕಾಗುವುದು. ಬೆಳಕಾದ ಕತ್ತಲು ಮತ್ತೆ ಕತ್ತಲಾಗಲರಿಯದು. ಬೆಳಕೆಲ್ಲಿತ್ತು ಎನ್ನುವುದು ಕಡ್ಡಿಗೆ ತಿಳಿಯದು ಮತಾಪಿಗೂ ತಿಳಿಯದು. ಕಡ್ಡಿ ಬೆಳಗಿದ್ದು ಕಡ್ಡಿಯಿಂದಲೇ. ಬೆಳಕು ಕಡ್ಡಿಯಲ್ಲಿ ಲೀನವಾಗಿತ್ತು. ತನಗರಿಯದ ಕಡ್ಡಿ ಕತ್ತಲಿನಲ್ಲಿ ಕತ್ತಲಾಗಿ ಕರಗಿಹೋಗಿತ್ತು. ಕಡ್ಡಿಯಿಂದ ಹೊರಬಂದ ಬೆಳಕು ಕಡ್ಡಿಯನ್ನು ತನ್ನಂತೆ ಬೆಳಗಿತು.

ತನುವಿನ ತುಂಬ ಬೆಳಕು-ಜ್ಞಾನ-ಅರಿವೇ ತುಂಬಿದೆ. ಆ ಅರಿವೇ ಗುರು. ಆ ಗುರುದೇವನೇ ಸದಾಶಿವ ಪರಬ್ರಹ್ಮವೂ ಹೌದು. ನೆನೆಯುವ ಭ್ರಮೆ ತನುವಿಗೆ ಆವರಿಸಿರುವುದರಿಂದ ನೆನೆಯುವ ಕೆಲಸದಲ್ಲಿ ಮನ ನಿರತವಾಗಿದೆ. ನೆನೆಯುವುದನ್ನು ಬಿಟ್ಟು ನಿಜದಲ್ಲಿ ನಿಂದು ನಿರ್ಧರಿಸಲು ಹೋದಾಗ ನೆನೆಯುವ ಭ್ರಮೆ ಬ್ರಹ್ಮನಲ್ಲಿ ಲೀನವಾಗಿ ತಾನೇ ಬ್ರಹ್ಮನಾಗುವುದು. ಗುರುದೇವ, ಮಹಾದೇವ, ಸದಾಶಿವನು ತಾನೇ ಆಗುವುದು. ಸದ್ಗುರು ಸಿದ್ಧ ಸೋಮನಾಥನೆಂಬ ಲಿಂಗ ತಾನೇ ಆಗುವುದು. ನೆನೆಯುವ ನೆನವು ನಿಂತು ನಿಶ್ಚಿಂತನಾಗುವುದು.

■

ಹುಲಿಯ ಬಿಲಕ್ಕಿಂತಲೂ ಸತ್ಯದ ಗುಹೆ ಕಠಿಣ

ಅಲಗಿನ ಮೊನೆಯ ನೇರಬಹುದು.
ಹುಲಿಯ ಬಿಲವ ಹೊಗಬಹುದು.
ಸಿಂಗದ ಕೊರಳಿಗೆ ಹಾಯಬಹುದು.
ಸಿದ್ಧಸೋಮನಾಥ ನಿಮ್ಮ ಮುಂದೆ
ಮನ ಸಹಿತ ನಿಮಿಷ ಕುಳ್ಳಿರಲಾಗದು.

- ಶಿವಶರಣ ಅಮುಗಿದೇವ

ಭ್ರಮಾಜ್ಞಾನವದು ಇನಸ್ಟ್ಯಾಂಟ್ ಸುಖ, ಕ್ಷಣಿಕ ಸುಖ. ಮತ್ತೆ ಮತ್ತೆ ಪಡೆಯಬೇಕು ಮತ್ತೆ ಮತ್ತೆ ಸುಖಿಸಬೇಕೆನ್ನುವ ತವಕ. ಅದು ತೀರದ ತವಕ. ಈ ತವಕದಲ್ಲಿ ಆಯುಷ್ಯ ಕಳೆದು ಹೋದದ್ದೇ ಅರಿವಿಗೆ ಬರುವುದಿಲ್ಲ. ಇಷ್ಟೊಂದು ಆಯುಷ್ಯ ವ್ಯರ್ಥ್ಯ ಕಳೆದೆನಲ್ಲ ಎನ್ನುವುದು ಕೂಡಾ ಅರಿವಿಗೆ ಬರದೇ ಇರುವುದಿಲ್ಲ ! ಇವೆರಡರ ನಡುವೆ ಶಾಶ್ವತ ಸುಖದ ಸುಳುಹು ಕೂಡಾ ದೊರೆಯುವುದಿಲ್ಲ. ವಸ್ತುಗಳಿಗೆ ಭ್ರಮಾಧೀನವಾಗಿ ಸುಖ ಪಡುವ ತನುವಿಗೆ, ಸತ್ಯವೆನ್ನುವುದು ಅಲಗಿನ ಮೊನೆಗೂ ಹರಿತವಾಗುತ್ತದೆ.

ಸತ್ಯವೆನ್ನುವುದು ಹುಲಿಯ ಗವಿ ಪ್ರವೇಶಕ್ಕಿಂತಲೂ ಕಠಿಣವಾಗುತ್ತದೆ. ತಿಂದು ಹಾಕುವ ಸಿಂಹದ ಕೊರಳು ಬೀಳುವುದಕ್ಕಿಂತಲೂ ಕಠಿಣವಾಗುತ್ತದೆ ಎನ್ನುತ್ತಾರೆ ಅಮುಗಿದೇವರು.

'ಭಕ್ತಿಯೆಂಬುದು ಮಾಡಬಾರದು, ಕರಗಸದಂತೆ-ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು', 'ಹುಲಿಯ ಮೀಸೆ ಹಿಡಿದು ಉಯ್ಯಾಲೆ ಯಾಡಿದಂತೆ ಸುಣ್ಣದ ಕಲ್ಲು ಕಟ್ಟಿಕೊಂಡು ಮಡುವಿನಲ್ಲಿ ಬಿದ್ದಂತೆ ಹರಿವ ನಾಗರ ಹಿಡಿದು ಕೆನ್ನೆ ತುರಿಸಿಕೊಂಡಂತೆ' ಸತ್ಯದ ಸಹವಾಸ ಎನ್ನುತ್ತಾರೆ ಬಸವಣ್ಣ.

ಸತ್ಯದೊಂದಿಗೆ ನಡೆಯುವ ತನುವು ವೇಷ ಹಾಕುವುದಿಲ್ಲ. ವೇಷ ಹಾಕಿದ ತನುವು ಸತ್ಯದಿಂದ ನಡೆಯುವುದಿಲ್ಲ. ಸತ್ಯ ಅದಕ್ಕೆ ಕೂರಲಗು ಇದ್ದಂತೆ, ಗರಗಸದಂತೆ. ವೇಷ ಹಾಕಿದ ತನುವಿನ ಮನ ಒಂದು ನಿಮಿಷವೂ ಸತ್ಯದೊಂದಿಗೆ ಕೂಡುವುದಿಲ್ಲ. ವೇಷದ ತನುವಿನ ಧ್ಯಾನ ಬರೀ ಬೂಟಾಟಿಕೆ. ಅದಕ್ಕೆ ಕ್ಷಣಿಕ ಸುಖ ಬಲು ಇಷ್ಟ. ಆ ಸುಖಕ್ಕೆ ಮರುಳಾಗಿ ವೇಷ ಹಾಕುವುದು. ಅಧಿಕಾರ, ಸಂಪತ್ತು,ರುಚಿ,ಸ್ಪರ್ಶದ ಸುಖ ಸುಖಿಸುವುದಕ್ಕಾಗಿ ವೇಷ ! ಸತ್ಯಕ್ಕೆ ವೇಷ ಬೇಕೆ ? ತನುವಿನೊಳಗಿದ್ದ ಸತ್ಯ ವೇಷವನ್ನು ಖಂಡಿಸುತ್ತದೆ. ತನ್ನ ಅಲಗಿನ ಮೊನೆಯಿಂದ ಹಿರಿಯುತ್ತದೆ.

ಜನ ವೇಷ ಹಾಕಿದ ತನುವಿನ ಪಾದ ಹಿಡಿಯಬಹುದು, ತೊಳೆದು ನೀರು ಕುಡಿಯಬಹುದು, ಉಘೇ ಉಘೇ ಎಂದು ಘೋಷಣೆ ಮಾಡಬಹದು, ಪಲ್ಲಕ್ಕಿಯಲ್ಲಿ ಮೆರೆಸಿ ತನುವಿಗೆ ಕಿರೀಟ ತೊಡಿಸಬಹುದು. ಆದರೆ ವೇಷ ತೊಟ್ಟ ಮನದ ತನುವಿನ ಸತ್ಯ ಒಂದು ನಿಮಿಷವೂ ಕೂಡಲು ಬಿಡದೆ 24X7 ಹವರ್ಸ್ ಅಲಗಿನ ಮೊನೆಯಿಂದ ಚುಚ್ಚದೇ ಬಿಡುವುದಿಲ್ಲ.

ವೇಷಕ್ಕೂ ವೇಸಿಗೂ ಸಮನೆಂಬೆ ಎಂದು ಚನ್ನಬಸವಣ್ಣನವರು ವೇಷದ ತನುವನ್ನು ಖಂಡಿಸಿದ್ದಾರೆ.

ರಾಜಕೀಯ ವೇಷ ಹಾಕಿದ ರಾಜಕಾರಣಿ ಕಾವಿ ಧರಿಸಿದ ಸ್ವಾಮಿ ವೇಷ ಹಾಕಿ ಪಾಠ ಮಾಡದ ಶಿಕ್ಷಕ ಹೀಗೆ ಮುಂತಾದ ತನುಗಳಿಗೆ ಸತ್ಯ ಬಾಧಿಸದೇ ಇರದು. ಮನ ಆಯಾ ವೇಷ ಧರಿಸಿ ತನುವಿನೊಂದಿಗೆ ಸುಖಿಸುತ್ತದೆ. ತನುವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ. ಸರ್ಕಾರ ಮತ್ತು ಜನ ವೇಷ ಗುರುತಿಸಿ ತನುವನ್ನು ದಂಡಿಸಿದರೆ ಹೊರತು ತನುವಿನ ಕೃತ್ಯಕ್ಕೆ ಕಾರಣವಾದ ಮನವನ್ನು ದಂಡಿಸಲು ಸಾಧ್ಯವಾಗಲಿಲ್ಲ. ಜನ ತಪ್ಪು ಮಾಡಿದ ತನುವಿಗೆ ಶಿಕ್ಷೆ ಕೊಟ್ಟು ಮರೆಯುತ್ತಾರೆ. ಆದರೆ ವೇಷ ಹಾಕಿ ಹೇಸಿ ಕೆಲಸ ಮಾಡುವ ಮನವನ್ನು ಸತ್ಯ ಸದಾಕಾಲ ಅನೇಕ ಮಗ್ಗುಲಗಳಿಂದ ಬಾಧಿಸುತ್ತದೆ, ಸುಣ್ಣದಕಲ್ಲು ಕಟ್ಟಿಕೊಂಡು ಮಾಡುವಿನಲ್ಲಿ ಬಿದ್ದಂತಹ ಬಾಧೆಯಾಗುತ್ತದೆ. ನಾಗರ ಹಿಡಿದು ಕೆನ್ನೆ ತುರಿಸಿಕೊಂಡಂತೆ, ಸಿಂಹದ ಕೊರಳಿಗೆ ಬಿದ್ದಂತೆ.

ಹುಲಿಯ ಬಿಲ ಹೊಕ್ಕಂತೆ ಭಾಸವಾದರೂ ಮನಕ್ಕೆ ಸತ್ಯದ ಸಮೀಪ ಹೋಗುವುದು ಸಾಧ್ಯವಾಗುವುದೇ ಇಲ್ಲ. ಮನಕ್ಕೆ ಕ್ಷಣಿಕ ಸುಖವದು ಸುಲಭ, ಸತ್ಯವದು ತನುವಿನ ಧರ್ಮ. ಆದರೂ ಬಹುದೂರ. ಸತ್ಯದ ಮುಂದೆ ವೇಷದ ಮನದ ತನುವು ಒಂದು ನಿಮಿಷವೂ ಕೂಡಲು ಆಗುವುದಿಲ್ಲ. ಸತ್ಯವದು ಸಾಕ್ಷಾತ್ ಕೂಡಲ ಸಂಗಮದೇವ ಸಿದ್ಧ ಸೋಮನಾಥ ಎನ್ನುತ್ತಾರೆ ಶಿವಶರಣರು.

■

ತನುವಿನ ಮಂಗಳಮಯ ಬೆಳಕು

ಮಂಗಳ ಮಣ್ಣ ಬೆರಸದಂತೆ, ಗಾಳಿಯ ಧೂಳು ಹತ್ತದಂತೆ,
ಬಿಸಿಲು ಮಳೆಯಲ್ಲಿ ನೆನೆಯದಂತೆ,
ಬಯಲು ಮೂರ್ತಿಗೊಳ್ಳದಂತೆ ಸಿದ್ಧಸೋಮನಾಥಾ,
ನಿಮ್ಮ ಶರಣನೆಲ್ಲಿಯೂ ಬಳಸಿ ಬಳಸದಂತಿಪ್ಪನು.

- ಶಿವಶರಣ ಅಮುಗಿದೇವ

ಅಮುಗಿದೇವರು ಈ ವಚನದಲ್ಲಿ ಮಣ್ಣು, ಗಾಳಿ, ಬಿಸಿಲು, ಮಳೆ ಮತ್ತು ಬಯಲು ಪಂಚ-ಭೂತಗಳನ್ನು ಬಳಸಿಕೊಂಡಿದ್ದಾರೆ. ಜ್ಞಾನ ಸದಾಕಾಲ ಸತ್ಯವೂ ಸುಂದರವೂ ಶಿವಮಯವೂ ಆದುದು. ಅದು ಮಂಗಳಕರವೂ ಹೌದು. ತನುವಿನ ತುಂಬ ತನ್ಮಯವಾಗಿ ಬೆರೆತು ಮಂಗಳಮಯವಾಗಿ ಮಾಡುವ ತವಕವದಕ್ಕೆ.

ಮಂಗಳ, ಮಣ್ಣಿನಲ್ಲಿ ಸಸಿಯಾಗಿ, ಮರವಾಗಿ, ಹೂ, ಕಾಯಿ, ಹಣ್ಣಾಗಿ ಬೆರೆತಿದೆ. ತನುವಿನಲ್ಲಿ ಜ್ಞಾನವಾಗಿ ಬೆರೆತರೂ ಬೆರೆಯದಂತೆ ಮಂಗಳಕರ ವಾಗಿಯೇ ಗೋಚರಿಸುತ್ತದೆ. ಸಸಿಯ ಕೋಮಲತೆ, ಮರದ ಸೌಂದರ್ಯ, ಹೂವಿನ ಸುಗಂಧ ಪರಿಮಳ, ಕಾಯಿಯಲ್ಲಿ ಬೆರೆತ ಆನಂದ, ಹಣ್ಣಿನಲ್ಲಿ ಬೆರೆತ ರುಚಿ, ಬೀಜದಲ್ಲಿ ಹುದುಗಿದ್ದ ಮರದ ಮೈಮಾಟ ಕೊನೆಗೆ ತನುವಿನ ಕಣಕಣದಲ್ಲಿ ಬೆರೆತ ಜ್ಞಾನ ಮಂಗಳಕರ ವಾದುದೇ ಆಗಿದೆ.

ಮಂಗಳದ ಆ ಸೊಬಗು ಮಣ್ಣಿನಲ್ಲಿ ಬೆರೆತು ಸಸಿ ರೂಪದಲ್ಲಿ ಹೊರಬಂದರೂ ಕಣ್ಣಿಗೆ ಮಣ್ಣು ಕಾಣಿಸದಂತೆ ಮಿರಮಿರನೆ ಮಿಂಚುತ್ತಿದೆ.

ಗಾಳಿಯಲ್ಲಿ ಧೂಳ ಬೆರೆತಿದೆ. ಆ ದೂಳ ಗಾಳಿಯಲ್ಲ. ಗಾಳಿಗೂ ಧೂಳಿಗೂ ಸಂಬಂಧವಿಲ್ಲ. ಮಣ್ಣಿನಲ್ಲಿ ಪ್ರಾಣವಾಯು ಮಣ್ಣಾಗಿ ಮರೆಯಾಗಿದೆ.

ನೀರಿನಲ್ಲಿ ಬೆಂಕಿ ಬೆರೆತು ನೀರಾಗಿ ಮರೆಯಾಗಿದೆ. ಆ ನೀರು ಬೆಂಕಿಯನ್ನು ತಣ್ಣಗೆ ಮಾಡುತ್ತಿಲ್ಲ.

ಮಣ್ಣಿನಲ್ಲಿ ಬಯಲು ಬೆರೆತು ಗೋಚರಿಸುತ್ತಿಲ್ಲ. ಬಯಲಿನಲ್ಲಿ ನೀರು ಮರೆಯಾಗಿದೆ. ನೀರಿನಲ್ಲಿ ಬಯಲು ಗೋಚರಿಸುತ್ತಿಲ್ಲ. ಬಯಲಿನಲ್ಲಿ ಬೆಂಕಿ ಮರೆಯಾಗಿದೆ. ಬೆಂಕಿಯಲ್ಲಿ ಬಯಲು ಗೋಚರಿಸುತ್ತಿಲ್ಲ. ಬಯಲಿನಲ್ಲಿ ಬಯಲಾಗಿ ಗಾಳಿ ಮರೆಯಾಗಿದೆ. ಬಯಲು ಗಾಳಿ ಗೋಚರಿಸುತ್ತಿಲ್ಲ.

ತನುವಿನಲ್ಲಿ ಜ್ಞಾನ ಮರೆಯಾಗಿದೆ. ಜ್ಞಾನ ತನುವಿನಲ್ಲಿ ಗೋಚರಿಸುತ್ತಿಲ್ಲ.

ಮಣ್ಣು ನೀರು, ಗಾಳಿ, ಬೆಂಕಿಗೆ ಆಧಾರ ಬಯಲೇ. ಬಯಲಿನಲ್ಲಿ ಬಯ

ಲಿನ ಸಹಾಯದಿಂದ ಬಯಲಿನಲ್ಲಿಯೇ ಜನ್ಮ ತಳೆದ ಜಲಜನಕ, ಪ್ರಾಣವಾಯು ಬೆರೆತು ನೀರು ಆಗಿದೆ. ಆ ನೀರಿಲ್ಲಿ ಬೆರೆತ ಬೆಂಕಿಯ ಸಹಾಯದಿಂದ ನೀರು ಪಾಕ ವಾಗಿ ಗಟ್ಟಿಗೊಂಡು ಮಣ್ಣಾಗಿ, ಭೂಮಿ ಆಗಿದೆ. ಹೀಗೆ ಭೂಮಿ ನೀರು ಗಾಳಿ ಬೆಂಕಿ ಗಳ ವಾಸ ಬಯಲಿನಲ್ಲಿಯೇ.

ಬೆಂಕಿ ವಿಕೃತಗೊಂಡು ಧರೆ ಹತ್ತಿ ಉರಿದಾಗ ಬಯಲು ನಲುಗಲಿಲ್ಲ. ಬಯ ಲಿಗೆ ಯಾವ ಗಾಯಗಳೂ ಆಗಲಿಲ್ಲ. ಬೆಂಕಿಯ ಉರಿ ಬಯಲಿಗೆ ತಾಗಲಿಲ್ಲ. ಬೆಂಕಿ ಗಾಳಿ ನೀರು ಭೂಮಿ ಇವು ಬಯಲು ಸೃಷ್ಟಿಸಿದ ಕಂದಗಳಾದ ಕಾರಣ ಬೆಂಕಿಯ ಆರ್ಭಟ, ಭೂಮಿಯ ಭೂಕಂಪ ಗಾಳಿಯ ವೇಗ, ನೀರಿನ ಪ್ರಳಯ ಗರ್ಭಧರಿಸಿದ ತಾಯಿಗೆ ಮಗುವಿನ ತುಂಟುತನದಂತೆ ಭಾಸವಾಗಿ ಬಯಲಿಗೆ ಆನಂದವಾಯಿತು.

ಅಂತೆಯೇ ತನುವಿನಲ್ಲಿ ಮಂಗಳಮಯವಾಗಿ ಬೆರೆತ ಬಯಲು ಅರಿವಾಗಿ ಚುಳುಕಾಗಿದೆ. ಬಯಲು ತನುವಿನಲ್ಲಿ ಮಣ್ಣಾಗಿ ಬೆರೆತು ಮೂರ್ತಿಯಾಗದೆ ಮಂಗಳ ಮಯವಾಗಿದೆ. ಬೆಂಕಿಯನ್ನು ತನುವಿನಲ್ಲಿ ಬೆರೆಸಿ ಸುಡದಂತೆ ಮಂಗಳಮಯವಾಗಿ ಬೆಳಗಿದೆ. ಸುಳಿದು ಬೀಸುವ ಗಾಳಿಯನ್ನು ತನುವಿನಲ್ಲಿ ಬೆರೆಸಿ ಧೂಳು ಹತ್ತದಂತೆ ಮಂಗಳಮಯವಾಗಿ ಮಾಡಿದೆ. ನೀರ ಬಿಂದುವಿನಲ್ಲಿ ಬೆಂಕಿ ಬೆರೆಸಿ ಪಾಕಗೊಂಡು ರಕ್ತ ಮೂಳೆ ಮಾಂಸ ಮಜ್ಜಾ ಮೇದಸ್ಸಾಗಿ ಚರ್ಮದ ಹೊದಿಕೆಯಿಂದ ತನುವಾಗಿ ಆ ತನುವಿನಲ್ಲಿ ಬಯಲು ಮಂಗಳಮಯವಾಗಿದೆ, ಸಿದ್ಧ ಸೋಮನಾಥನಾಗಿ ಬೆಳಗಿಂಗೆ ಬೆಳಗಾಗಿ ಬೆಳಗುತಲಿದೆ. ಮಣ್ಣು, ಗಾಳಿ, ಬೆಂಕಿ, ನೀರು ಬಳಸಿಯೂ ಬಳಸದಂತೆ ಬೆಳಗುತಲಿದೆ.

■

ತನುವಿಗೆ ಜ್ಞಾನ ತುಂಬಬೇಕೆ ?

ಗಂಧವ ವಾಯು ಕೊಂಬಾಗ ಅದು ತಂದು
ಊದಿದವರಾರು ? ಮರಕ್ಕೆ ಸುಗಂಧ ನಿಂದುದಾಗ
ಅದ ಬಂಧಿಸಿ ತಂದು ಇರಿಸಿದವರಾರು ?
ಅವು ತಮ್ಮ ಅಂಗದ ಭಾವದಂತೆ ನಿಂದ ನಿಜವೆ
ತಾವಾಗೆ, ಬೇರೊಂದು ಸಂಧಿಸಲಿಲ್ಲೆಂದಾತ
ನಮ್ಮ ಅಂಬಿಗರ ಚೌಡಯ್ಯ

- ಶರಣ ಅಂಬಿಗರ ಚೌಡಯ್ಯ

ಮರದಲ್ಲಿ ಗಂಧ ಸಹಜ. ತನುವಿನಲ್ಲಿ ಜ್ಞಾನ ಸಹಜ. ಗಂಧ ಗಾಳಿಯಿಂದಲೇ ಎಂದು ಭಾಸವಾಗಿದೆ. ಸುಗಂಧದ ಗಾಳಿಯದು ಕ್ಷಣಿಕ. ಮರದಲ್ಲಿ - ಪುಷ್ಪದಲ್ಲಿ ಇದ್ದ ಗಂಧವನ್ನು ಗಾಳಿ ಪಸರಿಸಲು ಸಹಕರಿಸಿತೇ ಹೊರತು ಗಾಳಿಯೇ ಗಂಧವಲ್ಲ.

ಮರದಲ್ಲಿಗಂಧವನು, ತನುವಿನಲ್ಲಿ ಜ್ಞಾನವನು ಯಾರೂ ತಂದಿರಿಸಲಾರರು. ಮರದ ಸಹಜ ಗುಣ ಗಂಧ ! ಮರದ ಕಣ ಕಣದ ತುಂಬ ತನ್ಮಯವಾಗಿ ಗಂಧವೇ ತುಂಬಿ ಆ ಗಂಧದೊಂದಿಗೆ ಮರ ಬೆಳೆದಿದೆ. ಮರ ಕಡಿಕಡಿದು ತುಂಡರಿಸಿದರೂ ಅದು ಗಂಧ ಪಸರಿಸುವುದೇ ಹೊರತು ಅನ್ಯವಲ್ಲ.

ಶರಣ ಅಂಬಿಗರ ಚೌಡಯ್ಯನವರು ತನುವಿನಲ್ಲಿ ತನ್ಮಯವಾದ ಸಹಜ ಜ್ಞಾನದ ಬಗ್ಗೆ ಈ ವಚನದಲ್ಲಿ ಮಾಹಿತಿ ನೀಡಿದ್ದಾರೆ. ಶರಣರು ನೀಡಿದ ಈ ಮಾಹಿತಿ ವೈಜ್ಞಾನಿಕವಾದುದು. ಮರದಲ್ಲಿ ಯಾರೂ ಗಂಧವನು ಬೆರೆಸುವುದಿಲ್ಲ, ಗಂಧದ ನೀರನ್ನೂ ಎರೆಯುವುದಿಲ್ಲ, ಮರ ಗಂಧದೊಂದಿಗೆ ಸಹಜವಾಗಿಯೇ ತನ್ಮಯವಾಗಿ ಬೆಳೆಯುವುದು, ಇದರಂತೆ ತನುವು ಜನ್ಮ ಪಡೆದಾಗಿನಿಂದ, ಜ್ಞಾನ ತನುವಿನಲ್ಲಿ ತನ್ಮಯವಾಗಿ, ತನುವಿನೊಂದಿಗೆ ಹೊರಬಂದಿದೆ. ತನುವಿನ ತುಂಬ ಜ್ಞಾನವೇ ತುಂಬಿದೆ. ಕಣ್ಣು, ಕಿವಿ, ಮೂಗು, ಚರ್ಮ, ನಾಲಿಗೆ ಜ್ಞಾನ ಕೇಂದ್ರಗಳೇ ಆಗಿವೆ. ಕಣ್ಣಿಗೆ ನೋಡಲು ಯಾರೂ ಕಲಿಸಲಿಲ್ಲ. ಕಿವಿಗೆ ಕೇಳುವುದನ್ನು ಯಾರೂ ಕಲಿಸಲಿಲ್ಲ. ಮೂಗಿಗೆ ವಾಸಿಸಲು ಯಾರೂ ಹೇಳಿ ಕೊಡಲಿಲ್ಲ. ಚರ್ಮಕ್ಕೆ ಸ್ಪರ್ಶಿಸಲು ಯಾರೂ ಬೋಧಿಸಲಿಲ್ಲ. ನಾಲಿಗೆಗೆ ರುಚಿಸಲು ಯಾವ ಜ್ಞಾನಿಯೂ ಪಾಠ ಮಾಡಲಿಲ್ಲ. ಎರಡಕ್ಷರ ಕಲಿತ ಮಟ್ಟಿಗೆ ತನುವಿನಲ್ಲಿ ತನ್ಮಯವಾದ ಜ್ಞಾನ ನೋಡುವುದು ಬಿಟ್ಟು ಹೊರಗೆ ನೋಡುವುದೆ ?

ತನುವಿಗೆ ಮತ್ತೊಂದು ತನುವು ಶಕ್ತಿ ತುಂಬಬೇಕೆ ? ಹಾಗಿದ್ದರೆ ಗಂಧ ಬೀರಲು ಮರಕ್ಕೆ ಯಾರು ಪಾಠ ಮಾಡಿದರು. ಹೂವಿನಲ್ಲಿ ಮಕರಂದ ತುಂಬಿದವರಾರು? ಜೇನಿನಲ್ಲಿ

ಸಿಹಿ ತುಂಬಿದವರಾರು, ಕಬ್ಬಿನಲ್ಲಿ ಸ್ವಾದ ತುಂಬಿದವರಾರು ? ಮಾತಿಲ್ಲದೆ ಸಹಜ ಕ್ರಿಯೆಯಲ್ಲಿ ಲೀನವಾದ ಗಿಡ, ಮರ, ಬಳ್ಳಿಗಿಂತ ಭಿನ್ನವಾಗಿದೆಯೆ ಈ ತನುವು ?

ತನುವಿನ ಸಹಜ ಕ್ರಿಯೆ ತನುವಿನಲ್ಲಿ ಅಡಗಿ, ಅಸಹಜ ಕ್ರಿಯೆ ಎದ್ದು ಕಾಣುವುದು ಗಮನಕ್ಕೆ ಬರುತ್ತಿಲ್ಲವಲ್ಲ ಎಂದು ಚೌಡಯ್ಯ ಶರಣರು ಪ್ರಶ್ನಿಸಿದ್ದಾರೆ.

ತಾಯಿ ತನುವಿಗೆ ಹಾಲುಣಿಸಿದರೆ ಸಾಕಿತ್ತು, ತನ್ನ ಎಂಜಲು ಪ್ರೀತಿ ಬೆರೆಸಿದಳು. ತಂದೆ, ಮಗುವನ್ನು ತನ್ನಂತೆ ಮನೆತನದಂತೆ ಬೆಳೆಯಲು, ಶೌರ್ಯ, ಧೈರ್ಯ, ಈರ್ಶೆ, ದ್ವೇಷ, ಭಾವ, ಮಮಕಾರದ ಎಂಜಲ ನಂಜು ತುಂಬಿದ. ಗರ್ಭದಿಂದ ಅಪ್ಪಟ ಚಿನ್ನವೇ ಹೊರಬಂದಿತ್ತು, ಆ ಚಿನ್ನಕ್ಕೆ ಆದರ್ಶವೆಂಬ ಮಣ್ಣು ಮೆತ್ತಿದರು. ಆ ಮಣ್ಣಿನಲ್ಲಿ ಚಿನ್ನವೇ ಮರೆಯಾಯಿತು. ತುಂಜಿದ ನಂಜೇ ಹೊರೆಯಾಯಿತು. ತನುವಿನ ಸಹಜ ತನವೆಂಬುದು ಜ್ಞಾನ ಮಾತ್ರ. ಮರದ ಸಹಜ ತನವೆಂಬುದು ಗಂಧ ಮಾತ್ರ. ಮರಕ್ಕೆ ಅಸಹಜವಾದ ಗಂಧ ಯಾರೂ ತುಂಬಲಿಲ್ಲ. ಅದಕ್ಕಾಗಿ ಮರ ದುರ್ಗಂಧ ಎಂದೂ ಬೀರಲಿಲ್ಲ.

ತನುವಿನ ಸಹಜ ಜ್ಞಾನ ಹೊರಸೂಸಬೇಕಾದರೆ, ಹೇರಿಕೊಂಡ ಜ್ಞಾನ ಕೊಡವಬೇಕು. ಹೇರಿಕೊಂಡ ಜ್ಞಾನ ಕೊಡವಲು ತನುವಿಗೆ ಸಾಧ್ಯವೆ ? ಸಹಜ ಜ್ಞಾನ ಕಾಣದಂತೆ ಬೆಟ್ಟದಷ್ಟು ಮಣ್ಣು ತನುವಿಗೆ ಸುರಿಯಲಾಗಿದೆ. ಎಷ್ಟೊಂದು ಪುಸ್ತಕಗಳು ಹೊರಗಿನಿಂದ ಸೇರಿವೆ. ಒಂದೇ ಎರಡೆ ಹಲವಾರು. ರಾಮಾಯಣ, ಮಹಾಭಾರತ, ಭಗವದ್ಗೀತೆ, ಬೈಬಲ್, ಕತೆ, ಕಾದಂಬರಿ, ಕವನ, ಮಹಾಕಾವ್ಯ, ರಾಜಕೀಯ, ಧರ್ಮ, ಪುರಾಣ, ಪುಣ್ಯ ಕತೆಗಳು ಹೀಗೆ ತನುವಿನಲ್ಲಿ ಹೇರಿಕೊಂಡ ಜ್ಞಾನ ದ್ರವ್ಯವೆಂಬ ಕಸ ತೆಗೆದು ಹಾಕಲು ಸಾಧ್ಯವೆ? ಇದಲ್ಲದೆ ತನುವಿಗೆ, ಮತ್ತೊಂದು ತನುವಿನಿಂದ ಬೋಧೆ ಬೇರೆ. ಇವೆಲ್ಲವುಗಳಲ್ಲಿ ಹೂತುಹೋದ ಸಹಜತೆ ಪ್ರಜ್ವಲಿಸುವುದಾದರೂ ಹೇಗೆ ? ತನುವಿನ ತನ್ನ ಒಳ ಮಿಡಿತವನ್ನು ಹೊರಹಾಕಬೇಕೆಂದರೆ, ಹೇರಿಕೊಂಡ ಕಸ ಅಡ್ಡಿ ಪಡಿಸುತ್ತದೆ. ಹಾವು ಸಾಯುವುದಿಲ್ಲ, ಕೋಲು ಮುರಿಯುವುದಿಲ್ಲ. ಏಕೆಂದರೆ ಹಾವು ತಾನೆ; ಕೋಲು ಕೂಡಾ ತಾನೆ ! ತಾನೆ ಬೆಳೆಸಿಕೊಂಡ ವಿಷದ ಹಾವನ್ನು ತಾನೇ ತನ್ನ ಕೋಲಿನಿಂದ ಹೊಡೆಯಲು ಸಾಧ್ಯವೇ ? ಅಥವಾ ಮತ್ತೊಬ್ಬರಿಗೆ ತಾನು ಪ್ರೀತಿಯಿಂದ ಸಾಕಿದ ಹಾವನ್ನು ಹೊಡೆಯಲು ಆದೀತೆ ? ಆಗಲು ಸಾಧ್ಯವೇ ಇಲ್ಲ.

ಮರದಲ್ಲಿ ಗಂಧ ಮಿಳಿತವಾದದ್ದು ಸಹಜ. ಅಂಗದಲ್ಲಿ ಅರಿವು ಮಿಳಿತವಾದದ್ದು ಸಹಜ. ಮರದಲ್ಲಿದ್ದ ಗಂಧವನ್ನು ಬೇರಾರೂ ತುಂಬಲಿಲ್ಲ. ಅದಕ್ಕಾಗಿ ಅದು ಸದಾ ಸುಗಂಧವೆ ಎನ್ನುವ ಸಹಜ ಜ್ಞಾನದ ಸೂತ್ರವನ್ನು ಜಗಕ್ಕೆ ಕರುಣಿಸಿದ್ದಾರೆ. ಶರಣ ಚೌಡಯ್ಯನವರು.

■

ತನುವೇ ಹರಿಗೋಲು ಅರಿವೇ ಅಂಬಿಗ

ಅಸುರರ ಮಾಲೆಗಳಿಲ್ಲ, ತ್ರಿಶೂಲ ಡಮರುಗವಿಲ್ಲ,
ಬ್ರಹ್ಮ ಕಪಾಲವಿಲ್ಲ, ಭಸ್ಮ ಭೂಷಣನಲ್ಲ,
ವೃಷಭ ವಾಹನನಲ್ಲ, ಋಷಿಗಳೊಡನೆ ಇದ್ದಾತನಲ್ಲ.
ಎಸಗುವ ಸಂಸಾರದ ಕುರುಹಿಲ್ಲದಾತಂಗೆ
ಹೆಸರಾವುದಿಲ್ಲೆಂದ ನಬಿಂಗರ ಚೌಡಯ್ಯ

- ಶರಣ ಅಂಬಿಗರ ಚೌಡಯ್ಯ

ಪುರಾತನರು ಜ್ಞಾನಿಗಳು. ಕಾಲಘಟ್ಟದ ನಿಯಮದಂತೆ ತನ್ನಲ್ಲಿ ತನ್ಮಯವಾದ ಜ್ಞಾನಕ್ಕೆ ಶಿವನೆಂದು ಹೆಸರಿಸಿ, ತನುವಿನಲ್ಲಿ ಆವರಿಸಿದ ಅಜ್ಞಾನಕ್ಕೆ ರಕ್ಕಸನೆಂದು ಕರೆದರು. ತನುವಿನಲ್ಲಿ ಉತ್ಪತ್ತಿಯಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಾದಿ ರಕ್ಕಸರನ್ನು, ತನುವಿನಲ್ಲಿಯ ಶಿವಮಯವಾದ ಜ್ಞಾನದಿಂದ ಜಯಿಸುವ ಬಗೆಯನ್ನು ವಿವರಿಸಿದರು. ದಿನಗಳುರುಳಿದವು, ಆ ವಿವರಣೆ ಕತೆಯಾಯಿತು, ಪುರಾಣವಾಯಿತು. ಕಲಾವಿದ ಶಿವನನ್ನು ಚಿತ್ರಿಸಿದ. ಕಲ್ಲಿನಲ್ಲಿ, ಲೋಹದಲ್ಲಿ ಕೆತ್ತಿದ. ಚಿತ್ರಕ್ಕೆ ರಕ್ಕಸರ ರುಂಡಗಳ ಮಾಲೆ ಹಾಕಿದ, ಕೈಯಲ್ಲಿ ತ್ರಿಶೂಲ, ಡಮರುಗ, ಕಪಾಲ ಇಟ್ಟ. ಮೈಗೆಲ್ಲ ಭಸ್ಮ ಬಳಿದ, ವಾಹನಕ್ಕಾಗಿ ಎತ್ತನ್ನು, ಸುತ್ತಲೂ ಋಷಿಗಳನ್ನು ಚಿತ್ರಿಸಿದ.

ಕವಿ ಬರೆದ ಕತೆ, ಕಲಾವಿದ ಸೃಷ್ಟಿಸಿದ ಚಿತ್ರವೇ ಸತ್ಯವಾಯಿತು. ತಾನು ಬೇರೆ, ಶಿವ ಬೇರೆ ಎಂಬ ಅಜ್ಞಾನ ನಿರ್ಮಾಣವಾಯಿತು. ಶಿವನ ಕಲ್ಪನೆ ಕಲ್ಲಿನ ಲಿಂಗದಲ್ಲಿ, ಜ್ಯೋತಿರ್ಲಿಂಗದಲ್ಲಿ ಉಳಿಯಿತು. ದರ್ಶನಕ್ಕಾಗಿ ಪುಣ್ಯ ಕ್ಷೇತ್ರಗಳು ನಿರ್ಮಾಣವಾದವು. ಬರೆದ ಕವಿ, ಕೆತ್ತಿದ ಕಲಾವಿದನೂ ಮರೆಯಾದ. ಊರಿಗೊಂದು, ಓಣಿಗೊಂದು, ರಸ್ತೆಗೊಂದು ದೇವಾಲಯಗಳು ನಿರ್ಮಾಣವಾದವು. ಅಜ್ಞಾನದ ವಿಸ್ತಾರ ಅಧಿಕವಾಯಿತು. ಶಿವನಿಲ್ಲದ ತನು ಶವ, ದೇಹವೇ ದೇವಾಲಯವೆನ್ನುವುದೇ ಮರುವಾಯಿತು.

ಕವಿ ಕಲಾವಿದನ ಅಜಾಗರೂಕತೆಗೆ ಮನುಕುಲವೇ ಅಜ್ಞಾನಕ್ಕೆ ಬಲಿಯಾಯಿತು. ಶಿವ ಸಾಕಾರನೆಂದು ಚಿತ್ರ ಬರೆದು ಪೂಜಿಸಿದರು. ಶಿವ ನಿರಾಕಾರನೆಂದು ಬರೆದ ಚಿತ್ರ ಕೆಡಿಸಿ ಜಗಳಕ್ಕಿಳಿದರು. ಯುದ್ಧಗಳಾದವು. ಚಿತ್ರದಲ್ಲಿಯ ಶಿವ ಮಾತನಾಡಲೇ ಇಲ್ಲ. ನಿರಾಕಾರ ಶಿವ ಜಗಳ ಬಿಡಿಸಲೂ ಇಲ್ಲ.

ತನುವಿನಲ್ಲಿ ತನ್ಮಯವಾದ ಶಿವ(ಜ್ಞಾನ)ನನ್ನು ಕಲ್ಲಿನಲ್ಲಿ ಕತೆಯಲ್ಲಿ ಚಿತ್ರದಲ್ಲಿ ನೋಡಲು ಸಾಧ್ಯವೆ ? "ತನ್ನ ತಾನರಿಯದ ಮುನ್ನ ತನ್ಮಯವಾದ ಅರಿವು. ತನ್ನ ತಾನರಿದ ಬಳಿಕ ಅರಿವು ತನ್ಮಯವೆಂದರಿತ ಅರಿವು. ತನುವಿನಲ್ಲಿರುವ ಆ ಅರಿವೆ ಕರಿಗೊಂಡ

ಬಳಿಕ ತಾನೇ ಸೌರಾಷ್ಟ್ರ ಸೋಮೇಶ್ವರಾ" ಎನ್ನುತ್ತಾರೆ ಆದಯ್ಯ ಶರಣರು.

ತನುವಿನಲ್ಲಿ ಅರಿವು ಶಿವಮಯವಾಗಿದೆ. ಆ ಅರಿವು ನೋಡಿ ಆ ಅರಿವೇ ತಾನಾದಡೆ ತಾನೇ ಶಿವ. ಅರಿಯದಿದ್ದಡೆ ಶಿವ ನಿದ್ದ ತನುವು ಶವಕ್ಕೆ ಸಮಾನ. ತನುವಿನಲ್ಲಿದ್ದ ಶಿವ ನಿರಾಕಾರ. ಆ ನಿರಾಕಾರವಾದ ಅರಿವಿನ ಬಲ ತೋರಿಸಲು ಹಿರಿಯರು ಕತೆ ಬರೆದರು. ಚಿತ್ರ ಬರೆದು ಶಿವನ ಸುಳುಹು ನೀಡಿದರು :

ಗಂಗೆಯ ಬಿಂದು ತಂದೆಗರ್ಭದ ಮೂಲಕ ತಾಯಿ ಗರ್ಭದಲ್ಲಿ ಹೊಕ್ಕು ಪಾಕವಾಗಿ, ಆ (ಜಲ) ಬಿಂದುವೇ ಮೂಳೆ, ಮಾಂಸ,ಚರ್ಮದ ತನುವಾಗಿ ಗಂಗೆಯಾದಳು. ಆ ತನುವಿನಲ್ಲಿ ತನ್ಮಯವಾದ ಅರಿವೇ ಶಿವ. ಚಿತ್ರಕಾರ ತನುವಿನ ಜಟೆಯಲ್ಲಿ ಗಂಗೆಯನ್ನು ಬಂಧಿಸಿ ಗಂಗಾಧರನೆಂದು ಹೆಸರಿಟ್ಟ. ಶಿವನ ತನುವೆ ಬ್ರಹ್ಮವೆಂದು ಸೂಚಿಸಲು ಕಪಾಲ ಕೈಯಲ್ಲಿ ಇಟ್ಟ. ಬ್ರಹ್ಮ ಕಪಾಲನ ಚಿತ್ರ ಬರೆದ. ಅಜ್ಞಾನವನ್ನು ಸುಟ್ಟು ಭಸ್ಮ ಮಾಡಿ ಆ ಭಸ್ಮವನ್ನು ತನುವಿಗೆ ಲೇಪಿಸಿ ಎತ್ತಿನ ಚಿತ್ರ ರಚಿಸಿ ತನುವಿಗೆ ವೃಷಭ ವಾಹನ - ಪಶುಪತಿ ಎಂದು ಕರೆದ. ರೂಪ ನಿರೂಪಗೊಳಿಸುವ ಜ್ಞಾನ ಸೂಚನೆಗಾಗಿ ಜಟೆಯಲ್ಲಿ ಚಂದ್ರನ ಚಿತ್ರ ಬರೆದು ಚಂದ್ರಶೇಖರನೆಂದ. ನಂಜು ತುಂಬಿದ ಮಾತುಗಳನೆಲ್ಲ ಅರಿವಿನ ಆನಂದದಿಂದ ಉಂಡುದಕ್ಕಾಗಿ, ಕೊರಳಲ್ಲಿ ಸರ್ಪ ಹಾಕಿ ನಂಜುಂಡ-ನಾಗಭೂಷಣನೆಂದು ಚಿತ್ರಿಸಿ ಹೆಸರು ಕೊಟ್ಟ.

ತನವಿನಲ್ಲಿ ಇದ್ದು ಸಂಸಾರದ ಕುರುಹು ಇಲ್ಲದಾತನ ಪರಿಚಯಕ್ಕಾಗಿ ನಾನಾ ರೀತಿಯ ಹೆಸರು ಕೊಟ್ಟು, ಲೋಹದಿಂದ ಕಲ್ಲಿನಿಂದ ಬಣ್ಣದಿಂದ ಚಿತ್ರ ನಿರ್ಮಿಸಿದ ಚಿತ್ರಗಾರ, ಹೀಗೆಲ್ಲ ಮಾಡಿದರೂ, ಹೊರಗನೇ ಹಾಡುವ ಪೂಜಿಸುವ ಭಜಿಸುವ ಅಜ್ಞಾನವೇ ಸತ್ಯವಾಯಿತು. ತನುವಿನ ಶಿವಮಯ ಜ್ಞಾನ ಸುಳ್ಳಾಯಿತು. ತನುವಿನ ಆ ಶಿವನ ಸಾಕ್ಷತ್ಕಾರಕ್ಕಾಗಿ *"ನಿರಾಳ ಕೂಸಿಂಗೆ ಬೆಣ್ಣೆಯ ನಿಕ್ಕಿ ಹೆಸರನಿಟ್ಟು ಕರೆದವರಾರೋ ಅಕಟಕಟಾ ಶಬ್ದದ ಲಜ್ಜೆಯ ನೋಡಾ ಗುಹೇಶ್ವರನನು ಅರಿಯದ ಅನುಭಾವಿಗಳ ತರಕಟ ಕಾಡಿತ್ತು"* ಎಂದು ಅಲ್ಲಮ ಪ್ರಭುಗಳು ತನುವಿನೊಳ ಪ್ರವೇಶಕ್ಕಾಗಿ ನಿರಾಳ ನಿರಕಾರ ಶಿವನ ಸೂತ್ರ ನೀಡಿದರು.

ಶಿವ ಕುರುಹಲ್ಲ, ಕುರುಹು ಉಳ್ಳವ ಶಿವನಲ್ಲ. ಶಿವನಿಗೆ ಹೆಸರಿಲ್ಲ. ತನುವಿನಲ್ಲಿ ತನ್ಮಯವಾದ ಅರಿವೇ ಅಂಬಿಗ. ಸಂಸಾರದಲ್ಲಿ ಬಂಧಿಯಾದ ತನುವನ್ನು ಅಜ್ಞಾನ ಸಾಗರದಿಂದ ಪಾರು ಮಾಡುವ ನಾವಿಕನಿಗೆ ಹೆಸರೆನ್ನುವುದೇ ಇಲ್ಲವೆಂದು ಹೇಳಿದರು ಶರಣ ಚೌಡಯ್ಯನವರು.

■

ಕಾಯದಿಂದ ಬಂದ ಮಾತು ಕಾಯಕ್ಕೆ ಕುತ್ತು

ಅಗ್ನಿ ದಿಟವೆಂದೊಡೆ ತಾ ಹುಸಿ, ಕಾಷ್ಠವಿಲ್ಲದೆ,
ಕಾಷ್ಠದಲ್ಲಡಗಿ ಸುಡದಿಪ್ಪ ಭೇದವನರಿತಡೆ
ಪ್ರಾಣಲಿಂಗಿ ಎಂದೆಂಬೆ ನೆಂದ ನಂಬಿಗರ ಚೌಡಯ್ಯ

-ಅಂಬಿಗರ ಚೌಡಯ್ಯ

ವಿಜ್ಞಾನಿ ಭೌತಿಕ ವಸ್ತು ತಿಳಿಯುವ ಸೂತ್ರ ನೀಡಿದರೆ ಜ್ಞಾನಿ ತನ್ನನ್ನು ತಿಳಿಯುವ ಸೂತ್ರ ನೀಡುತ್ತಾನೆ. ಒಂದು ವಸ್ತುವನ್ನು ಭೇದಿಸಲು ವಿಜ್ಞಾನಿ ಆಯುಷ್ಯ ಕಳೆಯುತ್ತಾನೆ. ಆಗ ಒಂದು ವಸ್ತುವಿನ ಪರಿಚಯವಾಗುತ್ತದೆ. ಅದರ ಸೂತ್ರ ಬರೆದಿಡುತ್ತಾನೆ.

ಜ್ಞಾನಿಗೆ ತನ್ನನ್ನು ತಿಳಿಯುವ ತವಕ. ಎಲ್ಲ ವಸ್ತುಗಳು ತನ್ನಿಂದ ತಿಳಿಸಿಕೊಳ್ಳುತ್ತವೆ. ಆದಕ್ಕಾಗಿ ಭೌತಿಕ ವಸ್ತುವನ್ನು ತಿಳಿಯಲು ಹೋಗುವುದಿಲ್ಲ. ತನ್ನನ್ನು ತಿಳಿಯುತ್ತಾನೆ. ಎಲ್ಲ ವಸ್ತುಗಳು ತನ್ನ ಅರಿವಿಗೆ ಬರುತ್ತವೆ. ಅವುಗಳನ್ನು ಕ್ಷಣಾರ್ಧದಲ್ಲಿ ಭೇದಿಸುತ್ತಾನೆ.

ಅಂಬಿಗರ ಚೌಡಯ್ಯನವರು ಮಹಾಜ್ಞಾನಿ. ಅಗ್ನಿಯನ್ನು ಹೆಸರಿಸಿ ಅದು ಕಟ್ಟಿಗೆಯಲ್ಲಿ ಅಡಗಿದ ಭೇದವನು ಬಿಡಿಸಿದ್ದಾರೆ. ಸುಡದಂತೆ ಕಟ್ಟಿಗೆಯಲಿ ಅಡಗಿದ ಸುಳಿವನ್ನು ನೀಡಿದ್ದಾರೆ.

ಅಗ್ನಿ ನೋಡಲು ತೋರುವುದಿಲ್ಲ. ಕಟ್ಟಿಗೆಯೊಂದಿಗೆ ಬೆರೆತ ಅಗ್ನಿ ಘರ್ಷಿಸಿದಾಗ ಸುಡುವುದರ ಮೂಲಕ ತೋರುವುದು.ಅಗ್ನಿ ಜಲಜನಕದೊಂದಿಗೆ ನೀರಲಿ ಬೆರೆತು ಮರಕ್ಕೆ ಪೋಷಣೆ ನೀಡಿತು. ಮೈತುಂಬ ಹಸಿರಾಗಿ ಕಣ್ಮನ ಸೆಳೆಯಿತು. ಹೂವಾಗಿ, ಕಾಯಾಗಿ, ಹಣ್ಣಾಗಿ ಸರ್ವಜೀವ ಕುಲಕ್ಕೂ ಹಿತವಾಯಿತು. ಬೀಜದಲಿ ಹುದುಗಿ ಸಸಿಯಾಗಿ ಪುನಃ ಮರವಾಗಲು ಕಾರಣವಾಯಿತು.

ಮರದಲ್ಲಿ ಸುಡದಂತೆ ಅಡಗಿದ ಅಗ್ನಿ ಮನುಷ್ಯನನ್ನು ಸುಡುವಂತೆ ಮಾಡುತ್ತದೆ. ದೇಹದ ನರನಾಡಿಗಳು ಬಿರಿಯುವಂತೆ ಮಾಡುತ್ತದೆ. ಮಾತಿನಲಿ ಅಡಗಿ ಮಾತು ಬಡಿದಾಗ ಅರಳುವಂತೆ ಕೆರಳುವಂತೆ ಮಾಡುತ್ತದೆ.

ಅಗ್ನಿ ಮರದಲ್ಲಿ,ಕಾಷ್ಠದಲ್ಲಿ,ಹೂವಿನಲ್ಲಿ,ಹಣ್ಣಿನಲ್ಲಿ ಅಡಗಿ ಹಿತವನ್ನುಂಟು ಮಾಡಿದೆ. ಅದರಂತೆ ದೇಹದಲ್ಲಿ ಅಡಗಿದ ಭೇದವನು ಸಹಜವಾಗಿ ಅರಿಯಲು ಬಾರದಿದ್ದರೆ, ಮಾತು ತನುವನ್ನು ಸುಡದೆ ಬಿಡುವುದಿಲ್ಲ.

ಅಂಗದಲ್ಲಿ ಅಡಗಿದ ಪ್ರಾಣ, ಅಂಗ -ಪ್ರಾಣದಲ್ಲಿ ಅಡಗಿದ ಅರಿವನ್ನು

(ಲಿಂಗ) ಭೇದಿಸಲು ಅರಿಯದಿದ್ದೊಡೆ ಮಾತು ಅರಿವಾಗುವುದಿಲ್ಲ. ಮಾತು ಜ್ಞಾನವಾಗುವುದಿಲ್ಲ. ಬದಲಾಗಿ ಮಾತು ಪ್ರಳಯವಾಗುತ್ತದೆ. ಮಾತಿನಿಂದ ರಕ್ತದ ಕಾಲುವೆ ಹರಿಯುತ್ತದೆ. ಮಾತಿನಿಂದ ಯುದ್ಧಗಳಾಗುತ್ತವೆ. ಒಮ್ಮೆ ಆಡಿದ ಮಾತು ತನುವನ್ನು ಅರಳಿಸುತ್ತದೆ. ಮತ್ತೊಮ್ಮೆ ಅದೇ ಮಾತು ಕೆರಳಿಸುತ್ತದೆ. ಪ್ರಾಣಕ್ಕೆ ಪ್ರಾಣಲಿಂಗಿಯಾಗಬೇಕಾದ ಮಾತು ಪ್ರಾಣಕ್ಕೆ ಕುತ್ತಾಗುತ್ತದೆ. ಕಾಯದಿಂದ ಬಂದ ಮಾತು ಕಾಯಕ್ಕೆ ಕುತ್ತು! ಕಾಷ್ಠದಿಂದ ಬಂದ ಅಗ್ನಿ ಕಾಷ್ಠಕ್ಕೆ ಕುತ್ತು ! ಮಾತೇ ಭ್ರಮೆ, ತಿಳಿದರೆ ಮಾತೇ ಬ್ರಹ್ಮ! ಮಾತು ಸುಡದಿಪ್ಪ ಭೇದವನರಿತಾಗ ಮಾತ್ರ.

■

ಅಂಬಿಗ ವೇಷಕ್ಕೆ ವೇಳೆಯಿಲ್ಲ

ಅಡವಿಯೊಳಗರಸುವಡೆ ಸಿಡಿಗಂಟಿ ತಾನಲ್ಲ.
ಮಡುವಿನೊಳಗರಸುವಡೆ ಮತ್ಸ್ಯ ಮಂಡೂಕನಲ್ಲ.
ತಪಂಬಡುವಡೆ ವೇಷಕ್ಕೆ ವೇಳೆಯಿಲ್ಲ.
ಒಡಲ ದಂಡಿಸುವಡೆ ಕೊಡುವ ಸಾಲಿಗನಲ್ಲ.
ಅಷ್ಟತನುವಿನೊಳಗಡೆ ಹುದುಗಿರ್ಪ ಲಿಂಗವ
ನಿಲುಕಿ ನೋಡಿಯೆ ಕಂಡ ನಂಬಿಗರ ಚೌಡಯ್ಯ

- ಅಂಬಿಗರ ಚೌಡಯ್ಯ

ಮುಕ್ತಿ ಮೋಕ್ಷ ಸ್ವರ್ಗ ಪ್ರಾಪ್ತಿಗಾಗಿ ಮನುಷ್ಯ ನಾನಾ ವಿಧದ ಆಚರಣೆಗಳನ್ನು ಸೃಷ್ಟಿಸಿಕೊಂಡಿದ್ದಾನೆ. ಸಂಕಟಗಳನ್ನು ಒಡ್ಡಿಕೊಂಡಿದ್ದಾನೆ. ಜೊತೆಗೆ ಮುಕ್ತಿ ಪ್ರಾಪ್ತಿಗಾಗಿ ಬೋಧಿಸುವ ವ್ಯವಹಾರಿಕ ಗುರುಗಳೂ ಸೃಷ್ಟಿಯಾಗಿದ್ದಾರೆ. ಧ್ಯಾನ ಧಾರಣ-ಯೋಗ ಮುಂತಾದ ಕ್ರಿಯೆಗಳ ಮೂಲಕ, ಜಪ-ತಪ-ಅನುಷ್ಠಾನ ಮುಂತಾದ ಸಾಧನೆಗಳ ಮೂಲಕ ಮುಕ್ತಿ ಪಡೆಯ ಬಹುದೆಂದು ಹೇಳಿ ಹಣ-ಆಭರಣ-ಭೂಮಿ ಕಬಳಿಸುವ ವ್ಯವಹಾರಕ್ಕೇನೂ ಈ ನೆಲದಲ್ಲಿ ಕಮ್ಮಿಯಿಲ್ಲದಷ್ಟು ಗುರುವರ್ಗದ ಜನ ಸಿಕ್ಕುತ್ತಾರೆ.

ಅಡವಿಯೊಳಗರಸುವಡೆ ಸಿಡಿಗಂಟಿ ತಾನಲ್ಲ:

ತಾನು ಯಾವುದಾದರೂ ವಸ್ತುಗಳಿಂದ ಬಂಧಿಸಲ್ಪಟ್ಟಿದ್ದರೆ ಅವುಗಳಿಂದ ಮುಕ್ತಿ ಪಡೆಯಬಹುದು. ಇಲ್ಲದ ಮುಕ್ತಿ ಮೋಕ್ಷಕ್ಕಾಗಿ ಅಡವಿಯೊಳಗೆ ಘೋರಾರಣ್ಯದಲ್ಲಿ ಹುಡುಕುವುದೆ ? ಹಾಗೆ ಹುಡುಕಲು ತಾನೇನು ಸಿಡಿಗಂಟಿಯೆ ?

ಮಡುವಿನೊಳಗರಸುವಡೆ ಮತ್ಸ್ಯ ಮಂಡೂಕನಲ್ಲ :

ಮುಕ್ತಿ ಮೋಕ್ಷಕ್ಕಾಗಿ ಹರಿಯುವ ನದಿ, ಕೆರೆ ಕುಂಟೆ ಮಡುವಿನಲ್ಲಿ ಹುಡುಕಲು ತಾನೇನು ಮೀನು ಕಪ್ಪೆಯೆ ?

ತಪಂಬಡುವಡೆ ವೇಷಕ್ಕೆ ವೇಳೆಯಲ್ಲ:

ಜಪ-ತಪ ಮಾಡಿ ವೇಷ ಹಾಕಿಕೊಂಡು ವ್ಯರ್ಥತನುವಿನ ಸಮಯ ಕಳೆಯುವುದೂ ತರವಲ್ಲ. ಕಳೆದ ವೇಳೆ ವ್ಯರ್ಥವಾಗುವುದಲ್ಲದೇ ಮತ್ತೇನೂ ದೊರೆಯುವುದೂ ಇಲ್ಲ. ತನುವಿನ ವೇಷ ಧರಿಸಿದ ಅರಿವು ತನುವಿನಲ್ಲಿಯೇ ಮರೆಯಾಗಿದೆ.

ಒಡಲ ದಂಡಿಸುವಡೆ ಕೊಡುವ ಸಾಲಿಗನಲ್ಲ:

ಮುಕ್ತಿ ಮೋಕ್ಷಕ್ಕಾಗಿ ಒಂಟಿ ಕಾಲ ಮೇಲೆ ತಪ ಮಾಡಿ ದೀಡ ನಮಸ್ಕಾರ,ಪ್ರದಕ್ಷಿಣೆ

ಹಾಕಿ,ಅನುಷ್ಠಾನ ಜಪ-ತಪ ಉಪವಾಸ ಮಾಡಿ, ವರ ಪಡೆಯಲು ಅವನೇನು ಸಾಲಿಗನೇ ? ನಿನ್ನ ಮುಂದೆ ಬಂದು ಪ್ರತ್ಯಕ್ಷನಾಗಿ ವರ ಕೊಡಲು ?

ಅಷ್ಟ ತನುವಿನೊಳಗಡೆ ಹುದುಗಿರ್ಪ ಲಿಂಗವ ನಿಲುಕಿ ನೋಡಿಯೆ ಕಂಡ ನಂಬಿಗರ ಚೌಡಯ್ಯ :

ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ, ಸೂರ್ಯ, ಚಂದ್ರ, ಜೀವಾತ್ಮ, ಎನ್ನುವ ಎಂಟು ವಸ್ತುಗಳಿಂದಾದ ತನುವಿನಲ್ಲಿ ತನ್ಮಯವಾಗಿ ಅಡಗಿದ್ದ ಅರಿವೆ ಆ ಲಿಂಗ.

ಅಷ್ಟ ತನುವನ್ನು ಸ್ಥೂಲ, ಸೂಕ್ಷ್ಮ, ಕಾರಣ, ನಿರ್ಮಲ, ಆನಂದ, ಚಿನ್ಮಯ, ಚಿದ್ರೂಪ, ಶುದ್ಧ ಎಂದೂ ವಿಂಗಡಿಸ ಬಹುದು.

ಸ್ಥೂಲ ತನು : ಭೂಮಿ ನೀರು ತತ್ವ ಪ್ರಧಾನವಾದುದು.

ಸೂಕ್ಷ ತನು : ಬೆಂಕಿ ಗಾಳಿ ತತ್ವ ಪ್ರಧಾನವಾದುದು

ಕಾರಣ ತನು : ಆಕಾಶ ತತ್ವ ಪ್ರಧಾನವಾದುದು.

ನಿರ್ಮಲ ತನು : ಪಂಚ ಕರ್ಮೇಂದ್ರಿಯಗಳಿಂದ ಕೂಡಿದೆ.

ಆನಂದ ತನು : ಪಂಚ ವಿಷಯಗಳಿಂದ ಕೂಡಿದೆ.

ಚಿನ್ಮಯ ತನು : ಪಂಚ ಜ್ಞಾನೇಂದ್ರಿಯಗಳಿಂದ ಕೂಡಿದೆ.

ಚಿದ್ರೂಪ ತನು : ಪಂಚ ಪ್ರಾಣವಾಯುಗಳಿಂದ ಕೂಡಿದೆ.

ಶುದ್ಧ ತನು : ಪಂಚಕರಣಗಳಿಂದ ಕೂಡಿದೆ.

ಹೀಗೆ ತನುವನ್ನು ಸೀಳುತ್ತಾ ಹೋದಂತೆಲ್ಲ ನೂರಾ ಒಂದು ಸ್ಥಲಗಳಾಗಿ ತನುವಿನ ಪಾಂಡಿತ್ಯವೇ ಪ್ರದರ್ಶನವಾಗುತ್ತದೆ ಹೊರತು, ತನು ಮತ್ತು ತನುವಿನಲ್ಲಿ ತನ್ಮಯವಾದ ಅರಿವು ದೂರವಾಗುತ್ತದೆ. ಪಾಂಡಿತ್ಯ ಆಚಾರ-ವೇಷ-ಭೂಷಣ ಪೀಠ-ಪದವಿಗಳಿಗೆ ದಾರಿ ಮಾಡಿ ವ್ಯವಹಾರಕ್ಕೆ ಕಾರಣವಾಗುತ್ತದೆ.

ವೇಷ ಹಾಕಿದ ಗುರುವು ಅಣು ಬಾಂಬಿಗಿಂತಲೂ ಸೂಕ್ಷ್ಮ.

ವೇಷ ಹಾಕಿದ ಗುರುವಿನ ತನುವಿನಲ್ಲಿ ಅರಿವಿನ ಗುರು ದೂರವಾಗುತ್ತಾನೆ. ಅರಿವಿಗೆ ಹೋಗುವ ಶಾಸ್ತ್ರವೇ ಪ್ರಧಾನವಾಗುತ್ತದೆ. ಅದು ತನಗೆ ತಿಳಿಯದೇ ವ್ಯವಹಾರಕ್ಕೆ ನಿಲ್ಲುತ್ತಾನೆ. ಶಾಸ್ತ್ರ ಬೋಧಿಸುತ್ತ ಹಣ ಭೂಮಿ-ದ್ರವ್ಯ-ವಾಹನ ಪಡೆದು ಅವುಗಳ ವಿಸ್ತಾರವೇ ಆತನ ಆನಂದವಾಗುತ್ತದೆ. ಮುಕ್ತಿಗಾಗಿ ತನ್ನನ್ನು ಕೇಳಲು ಬಂದ ಇತರರನ್ನು ಜಪ-ತಪ-ಧ್ಯಾನ- ಅನುಷ್ಠಾನ, ಪುಣ್ಯ ಕ್ಷೇತ್ರಗಳ ದರ್ಶನ, ಮಠ-ಮಂದಿರ ನಿರ್ಮಾಣ ತೇರು-ರಥ-ಕಳಶ-ಮೂರ್ತಿ ಪ್ರತಿಷ್ಠಾಪನೆ ಮುಂತಾದ ಕ್ರಿಯೆಗಳಲ್ಲಿ ತೊಡಗಿಸಿ ತಾನು ವ್ಯವಹಾರಿಕ ಲಾಭ ಪಡೆಯುತ್ತಾನೆ. ತಾನೂ ಮೋಸಹೋಗುತ್ತಾನೆ. ಇತರರನ್ನೂ ದಾರಿ ತಪ್ಪಿಸುತ್ತಾನೆ.

ತನುವಿನಲ್ಲಿ ತನ್ಮಯವಾದ ಅರಿವನ್ನು ತಾನೇ ನೋಡಿ ಆ ಅರಿವೇ

ತಾನಾಗಬೇಕಲ್ಲದೆ ಇತರರಿಂದ ಎರವಲು ಪಡೆಯಲು ಆಗುವುದಿಲ್ಲ. ಅಡವಿಯೊಳಗೆ, ಮಡುವಿನಲ್ಲಿ,ತಪ ಮಾಡಿ, ಒಡಲು ದಂಡಿಸಿ ಅರಿವು ಪಡೆಯಲು ಸಾಧ್ಯವಿಲ್ಲ.

ತನುವು ತಾನೇ, ತನುವಿನಲ್ಲಿ ತನ್ಮಯವಾದ ಅಂಬಿಗನು ತಾನೇ. ತನುವು ಹರಿಗೋಲು-ಅರಿವು ಅಂಬಿಗ. ಆ ಅರಿವೇ ತಾನಾದಾಗ ಅಜ್ಞಾನವೇ ಇಲ್ಲ. ಆಚರಣೆಗಳೂ ಇಲ್ಲ. ಎಲ್ಲವೂ ಆನಂದವೇ ಎಲ್ಲವೂ ಸುಖಮಯವೇ ಎಲ್ಲವೂ ಶಿವಮಯವೇ ಎಲ್ಲರೂ ತನ್ನಂತೆಯೇ . ಅದನ್ನು ತನುವಿನಲ್ಲಿ ಅನುಭವಿಸಿಯೇ ಕಾಣಬೇಕು ಎನ್ನುವ ಸೂತ್ರ ವಿವರಿಸಿದ್ದಾರೆ ಚೌಡಯ್ಯ ಶರಣರು.

■

ನುಡಿಯಿಲ್ಲದ ನಿಸ್ಸೀಮ

ತಡಿನೆಲೆ ಇಲ್ಲದ ಮಹಾನದಿಯಲ್ಲಿ ಒಡಲಿಲ್ಲದಂಬಿಗ
ಬಂದೈದಾನೆ. ಹಿಡಿವ ಬಿಡುವ ಮನವ ಬೆಲೆಗೊಟ್ಟಡೆ
ಗಡಣವಿಲ್ಲದೆ ಹಾಯಿಸುವೆ ಹೊಳೆಯ. ನುಡಿಯಿಲ್ಲದ
ನಿಸ್ಸೀಮ ಗ್ರಾಮದಲಿರುಸುವೆನೆಂದಾತ ನಂಬಿಗ ಚೌಡಯ್ಯ

- ಅಂಬಿಗರ ಚೌಡಯ್ಯ

ತನುವಿನಲ್ಲಿ ಬ್ರಹ್ಮಾಂಡವೇ ಅಡಗಿ ಚುಳುಕಾಗಿದೆ. ಈ ತನುವನ್ನು ಶರಣರು ಬೇರಿಲ್ಲದ ಮರವೆಂದು ಕರೆದರು. ಸುಳಿದ ಜಾಗದಲ್ಲೆಲ್ಲ ಪರಿಮಳವೇ ಸೂಸುವ ಶಕ್ತಿಯಿದೆ ಈ ತನುವಿಗೆ.

ಚೌಡಯ್ಯ ಶರಣರು ತನುವನ್ನು ತಡಿನೆಲೆಯಿಲ್ಲದ ಮಹಾ ನದಿಗೆ ಹೋಲಿಸಿದ್ದಾರೆ. ಆ ನದಿಯ ಬಿಂದುವೆ ಚುಳುಕಾಗಿ ತನುವಾಗಿದೆ. ಮಹಾನದಿಯಾಗಿ ಜೀವಚೈತನ್ಯ ವಾಗಿದೆ. ಮಹಾನದಿ, ಪ್ರಾಣಿ ಪಶು ಪಕ್ಷಿ ಜಲಚರ, ಉರುಗ, ಗಿಡ ಮರ ಬಳ್ಳಿ ಗಳಿಗೆ ಜೀವ ಸೆಲೆಯಾಗಿದೆ. ಆ ಜಲ ಬಿಂದುವೇ ಗರ್ಭಸೇರಿ ಪಾಕವಾಗಿ ಗಟ್ಟಿಗೊಂಡು ತನುವಾಗಿದೆ. ಈ ತನುವು ತಡಿನೆಲೆಯಿಲ್ಲದ ಮಹಾನದಿಯೂ ಹೌದು.

ತಡಿನೆಲೆಯಿಲ್ಲದ ತನುವೆಂಬ ಮಹಾನದಿಯಲ್ಲಿ ಒಡಲಿಲ್ಲದ ಅರಿವೆಂಬ ಅಂಬಿಗ ವಾಸ ಮಾಡಿದ್ದಾನೆ. ತನುವಿನ ಸೋಂಕು ಅಂಬಿಗನಿಗಿಲ್ಲ. ಅಂಬಿಗನ ಅರಿವು ತನುವಿಗಿಲ್ಲ. ತನುವಿನ ಸುಖ ಅಂಬಿಗನಿಗೆ ಬೇಕಿಲ್ಲ. ಅಂಬಿಗನ ಮಾತು ತನುವಿಗೆ ಹಿಡಿಸುವುದಿಲ್ಲ. ಮನದ ನಂಜಿನ ಸೆರಗು ತನುವು ಹೊದ್ದ ಕಾರಣ ಅಂಬಿಗನ ಅರಿವಿನ ಮಾತು ತನುವು ಕೇಳುವುದೇ ಇಲ್ಲ. ಸುಖ-ದುಃಖ ವೆಂಬುದು ಮನಕ್ಕೆ ಹೊರತು ಅರಿವಿಗಲ್ಲ. ಮನ ತನುವಿನೊಂದಿಗೆ ಸುಖಿಸುತ್ತದೆ, ತನುವಿನೊಂದಿಗೆ ದುಃಖಿಸುತ್ತದೆ. ತನುವನ್ನು ವಿಕಾರ ಮಾಡುವ ಹಾಗೂ ಅರಳಿಸುವ ಅರ್ಥವಿಲ್ಲದ ಗುಣ ಹೊಂದಿದೆ. ಮನ ಶಬ್ದವನ್ನು ವಿಪರೀತ ಅರ್ಥದಲ್ಲಿ ಸ್ವೀಕರಿಸಿ ತನುವನ್ನು ಕುದಿಯುವಂತೆ, ಆತ್ಮಹತ್ಯೆಗೆ ಎಳೆಸುವಂತೆ, ಕೊಲೆ ಮಾಡುವಂತೆ ಪ್ರೇರೇಪಿಸುತ್ತದೆ.

ಕಂಡ ಕಂಡ ದೇವರುಗಳನ್ನು ಸೃಷ್ಟಿಸಿ ಕೈ ಮುಗಿಯುವಂತೆ ಮಾಡುತ್ತದೆ. ಸರಿ ಕಾಣದಿದ್ದರೆ ದೇವರನ್ನು ತೆಗಳುತ್ತದೆ. ನುಡಿದಂತೆ ನಡೆಯುವುದಿಲ್ಲ. ಮನ ಮಾಡಿದ ಅಪರಾಧಗಳೆಲ್ಲ ತನುವಿಗೇ ಮೂಲ. ಜನ ನೋಡುವುದು ತನುವನ್ನು ಹೊರತು ತನು ಹೊದ್ದ ಮನವನ್ನು ನೋಡಲು ಬರುವುದಿಲ್ಲ, 'ಕೋತಿ, ಮೊಸರನ್ನ ತಿಂದು ಮೇಕೆ ಮೋತಿಗೆ ಒರಸಿದಂತೆ' ತಿಂದ ಮನವೆಂಬ ಕೋತಿ ಪಾರಾಗುತ್ತದೆ. ತಿನ್ನದ ಮೇಕೆಯೆಂಬ

ತನು ಸಿಕ್ಕಿ ಬೀಳುತ್ತದೆ.

ಅರಿವೆಂಬ ಅಂಬಿಗನ ಪಾಠ ತನುವಿಗೆ ಹಿಡಿಸಿದರೆ ಅದು ಅರಿವಿನ ತನುವು. ಮರೆವೆಂಬ ಮನದ ಸುಖ ತನುವಿಗೆ ಹಿಡಿಸಿದರೆ ಅದು ಹಾದರದ ತನು. ಮನದ ತನುವಿನ ಪೂಜೆ ಅರ್ಥವಿಲ್ಲದ್ದು. ಮನದ ತನುವಿನ ವೇಷವೂ ಅರ್ಥವಿಲ್ಲದ್ದು, ಶಾಸ್ತ್ರ ಹೇಳಿ ಹಾದರ ಮಾಡುವ ಗುಣ ಮನದ್ದು. ತನುವಿನ ತುಂಬಾ ಅರಿವು ತನ್ಮಯವಾಗಿದ್ದರೂ ಮನದೊಂದಿಗೆ ಸುಖಿಸುವ ಸುಖ-ದುಃಖಗಳು ಅರಿವಿಗೆ ಸಂಬಂಧವಿಲ್ಲ. ಅರಿವು "ಒಡಲೊಳಗಿದ್ದು, ಒಡಲಿಂಗಾಧಾರವಾಗಿ, ಒಡಲ ಸೋಂಕದೆ ಒಡಲ ಬೆಳಗುವ ಪರಿಯ ನೋಡಾ. ಬೆಳಗಿಂಗೆ ಬೆಳಗಾಗಿ ಬೆಳಗುವ ಪರಿಯ ನೋಡಾ ಗುಹೇಶ್ವರಾ" ಒಡಲೊಳಗೆ, ಒಡಲಿಂಗಾಧಾರವಾಗಿದೆ ಒಡಲು ಸೋಂಕದೆ ಬೆಳಗಿಂಗೆ ಬೆಳಕಾಗಿ ಬೆಳಗುತ್ತಿದೆ.

ಮನ ಆಭರಣ ನೋಡಿ ತನುವನ್ನು ಕಳುವಿಗೆ ಪ್ರಚೋದಿಸಿದರೆ, ಅರಿವು ಲೋಹ ನೋಡಿ ತನುವಿಗೆ ಕಳುವು ಮಾಡದಿರಲು ಪಾಠ ಮಾಡುತ್ತದೆ. ಮನ ಚರ್ಮ ನೋಡಿ ತನುವಿಗೆ ಸುಖಿಸಲು ಹೇಳಿದರೆ, ಸುಖ ನಿನ್ನಲ್ಲಿಯೇ ಇದೆ. ಅದು ನಿನ್ನಂತೆಯೇ ಇರುವ ಚರ್ಮದ ತನುವೆಂದು ಎಚ್ಚರಿಸುತ್ತದೆ.

ಮನ ನುಡಿಯುತ್ತದೆ. ನುಡಿದಂತೆ ನಡೆಯದಿರಲು ತನುವಿಗೆ ಪುಸಲಾಯಿಸುತ್ತದೆ. ಜನ ತನುವನ್ನು ತನುವಿಗಿಟ್ಟ ಹೆಸರನ್ನು ನಿಂದಿಸುತ್ತಾರೆ. ಮನ ತನುವಿಗೆ ಕಾವಿ, ಖಾದಿ, ಹಾಕಿಸುತ್ತದೆ. ತನುವಿನೊಂದಿಗೆ ಹಾದರ ಮಾಡಲು ಉದ್ದೀಪಿಸುತ್ತದೆ. ಸಿಕ್ಕಿಬಿದ್ದರೆ ಜನ ನೋಡಿ ಮರ್ಯಾದೆ ಕಳೆದರೆಂದು ತನುವನ್ನು ಆತ್ಮಹತ್ಯೆಗೆಳೆಸುತ್ತದೆ.

ಮನ ತನು ಹಿಡಿದು ಅನಂತ ಕೋಟಿ ತಪ್ಪು ಮಾಡಿದರೂ ಅರಿವು ಮೈದಡವಿ ಮತ್ತೊಮ್ಮೆ ಮಾಡದಿರಲು ಸಾಂತ್ವನದ ತನಿಯ ಮಾತುಗಳಾಡಿ ಸರಿದಾರಿಗೊಯ್ಯುತ್ತದೆ.

ಭೌತಿಕ ವಸ್ತುಗಳಿಗೆ ಸೆರೆಯಾಳಾಗಿ ತನುವಿನೊಂದಿಗೆ ಸುಖಿಸುವ ಮನಕ್ಕೆ ಒಡಲೊಳಗಿದ್ದ ಒಡಲಿಲ್ಲದ ಅರಿವೆಂಬ ಅಂಬಿಗನ ಪರಿಚಯವಾದರೆ ಸಾಕು ತಡಿನೆಲೆಯಿಲ್ಲದ ಮಹಾ ನದಿಯಲ್ಲಿ ಯಾವ ಗಂಡಾಂತರವಿಲ್ಲದೆ ಸುಖಕರ ಪ್ರಯಾಣ ಸಾಗುತ್ತದೆ. ತನುವು ಅರಿವೆಂಬ ಅಂಬಿಗನ ವಶವಾಗಿ ನುಡಿಯಿಲ್ಲದ ನಿಸ್ಸೀಮ ಗ್ರಾಮವಾಗುತ್ತದೆ. ಅರಿವಿನ ನುಡಿಯದು ನುಡಿಯಲ್ಲದ ನುಡಿ. ನೋಡುವ ನೋಟದಲ್ಲಿ ಅರಿವು ತುಂಬಿ ಎಲ್ಲರೂ ತನ್ನಂತೆ ಕಾಣುತ್ತಾರೆ. ಕೇಳುವ ಶಬ್ದದಲ್ಲೆಲ್ಲಾ ಅರಿವೇ ತುಂಬಿ ಶಬ್ದ ನಿಶಬ್ದ ಬ್ರಹ್ಮವಾಗುತ್ತದೆ. ರುಚಿಸಿದ ಪದಾರ್ಥವೆಲ್ಲ ಪ್ರಸಾದವಾಗುತ್ತದೆ. ವಾಸನೆಯೆಲ್ಲಾ ಪರಿಮಳವಾಗುತ್ತದೆ. ಸ್ಪರ್ಶಿಸಿದ ಚರ್ಮವೆಲ್ಲ ಓಂಕಾರವಾಗುತ್ತದೆ. ಇದು ಚೌಡಯ್ಯ ಶರಣರ ನುಡಿಯಿಲ್ಲದ ನಿಸ್ಸೀಮ ಗ್ರಾಮದೊಡೆಯನ ಪರಿಚಯದ ಸೂತ್ರ.

■

ಅರಿವೇ ಗುರು, ಮನವೇ ಶಿಷ್ಯ

ಮೃಡನ ಒಲಿಸಿಹೆನೆಂದು ನುಡಿವ ನಾಲಿಗೆ ಎಡಹಿದಲ್ಲಿ,
ಅದು ಕಲ್ಲು ಕೊರಡೆ? ಒಡಲಿಗೆ ಹೊನ್ನು ಹೆಣ್ಣು
ಮಣ್ಣು ಅಡ್ಡ ಬಿದ್ದು ಕೊಲುವಾಗ, ನಡೆವ ಗಂಡರುಂಟೆ?
ತನ್ನೊಡಲೊಳಗೆ ಅನ್ನ ಮರಳಿದಡೆ ಹೇಸುವಂತೆ,
ಹೇಸಿ ಬಿಟ್ಟಡೆ, ನಡೆದು ಶಿವನ ಕೂಡುವನೆಂದಾತ ನಂಬಿಗ ಚೌಡಯ್ಯ

- ಅಂಬಿಗರ ಚೌಡಯ್ಯ

ತನುವಿನ ದೈನಂದಿನ ಚಟುವಟಿಕೆ ಹೇಸುವಂತಹದ್ದು. ಮನುಷ್ಯನನ್ನೊಂದು ಬಿಟ್ಟು ಗಿಡ ಮರ ಬಳ್ಳಿ ಪ್ರಾಣಿ ಪಶು ಪಕ್ಷಿ, ಸಹಜ. ತನುವೊಂದೆ ಅಸಹಜ! ಏಕೆಂದರೆ ತನುವಿನಲ್ಲಿ ಮನ ಬೆರೆತಿದೆ. ಮನವೆಂದರೆ ಕತ್ತಲು. ಕತ್ತಲಲ್ಲಿ ಏನೂ ಕಾಣುವುದಿಲ್ಲ. ಕತ್ತಲು ಬೆಳಕಿನ ಕತೆ ಹೇಳಿದರೆ ಬೆಳಗಾಗುವುದಿಲ್ಲ.

ಮನ ತನುವಿನ ಶತೃ. ತನು ಹಿಡಿದ ಮನ, ತನುವಿಗೆ ಕಾವಿ ತೊಡಿಸಿ, ತನ್ನಂತೆ ಇರುವ ತನುವಿಗೆ, ತಾನು ದೈವ ಸ್ವರೂಪನೆಂದು, ಗುರುವೆಂದು ಸರ್ವ ಸಂಗ ಪರಿತ್ಯಾಗಿ ಎಂದು ಶಿವನ ಸ್ವಸ್ವರೂಪವೆಂದು ಶಿಷ್ಯನನ್ನು ಅಂಗಲಾಚಿ ಬೇಡುವಂತೆ ಮಾಡುತ್ತದೆ ಗುರು ವೇಷದ ತನುವಿನ ಮನ. ಗುರು ಬೇಡಿದ ಭೂಮಿ, ವಾಹನ, ಆಭರಣ, ಹಣ, ದ್ರವ್ಯಗಳನ್ನು ಕೊಡುವಂತೆ ಮಾಡುತ್ತದೆ ಶಿಷ್ಯ ತೆನುವನ್ನು ಹೊದ್ದಮನ. ಗುರುಶಿಷ್ಯನ ವೇಷ ಬೇರೆ ಬೇರೆಯಾದರೂ ತನುವೊಂದೇ. ಸರ್ವಸಂಗ ಪರಿತ್ಯಾಗಿಯೆಂದು ನುಡಿದ ಗುರುವಿನ ನಾಲಿಗೆ ಶಿಷ್ಯನನ್ನು ಬೇಡಿ ಎಡುವುವಂತೆ ಮಾಡುತ್ತದೆ. ಸರ್ವ ಸಂಗ ಪರಿತ್ಯಾಗಿ ಎನ್ನುವ ಪದ ಕೇಳಿಯೂ ಕೊಡುವಂತೆ ಪ್ರೇರೇಪಿಸುತ್ತದೆ ಶಿಷ್ಯ ತನುವಿನ ಮನ.

ಇಲ್ಲಿ ಗುರು-ಶಿಷ್ಯ ವೇಷದ ತನುವಿನ ನಾಲಿಗೆಗಳೆರಡೂ ಎಡವಿದವು. ನುಡಿವ ನಾಲಿಗೆ ಎಡಹಿದಲ್ಲಿ ಆದು ಕಲ್ಲು ಕೊರಡೆ ? ಎಂದು ಪ್ರಶ್ನಿಸುತ್ತಾರೆ ಶರಣ ಚೌಡಯ್ಯನವರು.

ಮನವೆಂಬ ಹೇಸಿಗೆ, ತನುವಿನ ನಾಲಿಗೆಯಲ್ಲಿ ಕಿವಿಯಲ್ಲಿ ತುಂಬಿರುವುದರಿಂದ ನುಡಿದ ನುಡಿ ಅರಿವಿಗೆ ಬಂದರೂ, ನುಡಿದಂತೆ ನಡೆಯದಿರುವುದು ಮನಕ್ಕೆ ಸುಖವೆನಿಸುತ್ತದೆ. ಕೇಳಿದ ಕಿವಿಗೆ ಅರಿವಿಗೆ ಬಂದರೂ ಕೇಳಿದಂತೆ ನಡೆಯದಿರು ವುದೇ ಮನಕ್ಕೆ ಹಿತವೆನಿಸುತ್ತದೆ. ಮನವೆಂಬ ಹೇಸಿಗೆ ತನುವಿನಲ್ಲಿ ಆವರಿಸಿ, ಹೇಸುವಂತೆ ಮಾಡುತ್ತದೆ. ಹೊನ್ನು ಹೆಣ್ಣು ಮಣ್ಣಿಗೆ ಒಡಲು ಸೆರೆಯಾಳಾಗುವಂತೆ ಅವುಗಳನ್ನು ಸಂಗ್ರಹಿಸಿ ಸುಖಿಸುವಂತೆ ಮಾಡುತ್ತದೆ. ಮನ ಒಂದು ತನುವನ್ನು ಸಂಗ್ರಹಿಸಿ

ಸುಖಿಸುವಂತೆ, ಮತ್ತೊಂದು ತನುವನ್ನು ದೋಚಿ ಸುಖಿಸುವಂತೆ ಮಾಡುತ್ತದೆ. ಹೊನ್ನು, ಮಣ್ಣು, ಹೆಣ್ಣು(ವಿಷಯ)ನ್ನು, ಮನ ತನುವಿನೊಂ ದಿಗೆ ಸುಖಿಸುವಾಗ, ಅಡ್ಡಿ ಪಡಿಸುವ ತನುವನ್ನು ಕೊಲ್ಲುವಂತೆ ಮಾಡುತ್ತದೆ. ತನುವನ್ನು ತನುವು ಕೊಲ್ಲುವುದೆ? ಹೊನ್ನು, ಹೆಣ್ಣು(ವಿಷಯ) ಮಣ್ಣು ನೋಡುವ ಕಣ್ಣಿನಲ್ಲಿ ಅದೆಂತಹ ಸುಖದ ನಂಜು ತುಂಬಿದೆ? ನೋಡುವ ಶಕ್ತಿಯುಳ್ಳ ಕಣ್ಣಿಗೆ ತನ್ನ ಅರಿವೇ ತನಗೆ ಮರುವಾಯಿತೆ? ಇದನ್ನು ಮೆಟ್ಟಿ ನಿಲ್ಲುವ ಗಂಡೆದೆ ಭೂಪರುಂಟೆ? ತನುವನ್ನು ಆವರಿಸಿದ ಹೇಸಿ ಮನ ಕಳೆಯುವುದು ಜಟಿಲವೇ? ಇದ್ದ ಅರಿವಿನೊಂದಿಗೆ ಕೂಡುವುದು ಜಟಿಲವೇ? ಹೀಗೆ ನಿರ್ಣಯವಿಲ್ಲದೆ ತನುವಿನ ಅವಧಿ ವ್ಯರ್ಥ ಮುಗಿಯುತ್ತಲಿರುವುದರ ಚಿಂತನ ಚೌಡಯ್ಯ ಶರಣರದು.

ತನುವಿಗೆ ಹಸಿವೆಯಾದಾಗ ತಟ್ಟೆಯಲ್ಲಿದ್ದ ಬಿಸಿ ಬಿಸಿ ಆಹಾರವನ್ನು ಕಣ್ಣು ಅರಳಿಸಿ ನೋಡುತ್ತದೆ. ಮೂಗು ಅದರ ಪರಿಮಳವನ್ನು ಆನಂದದಿಂದ ಅನುಭವಿಸುತ್ತದೆ. ಕಿವಿ ಒಂದೊಂದು ಪದಾರ್ಥದ ಶಬ್ದಕೇಳಿ ಸುಖಿಸುತ್ತದೆ. ಚರ್ಮ ತನ್ನ ಬೆರಳುಗಳಿಂದ ಸ್ಪರ್ಶಿಸಿ ಸುಖಪಡುತ್ತದೆ. ನಾಲಿಗೆ ರುಚಿಸಿ ಆನಂದದಿಂದ ಮೆದ್ದು ಒಡಲೊಳಗೆ ಕಳಿಸುತ್ತದೆ. ಇದು ಮನದ ಕ್ರಿಯೆ. ಮನದ ಸುಖದ ಕ್ರಿಯೆ.

ಒಡಲೊಳಗಿಳಿದ ಗರಿಗರಿ ಪದಾರ್ಥ, ಮಲವಾಗಿ ಮರಳಿದಾಗ, ಕಣ್ಣು ಹೇಸುತ್ತದೆ. ರುಚಿಸಿದೆ ನಾಲಿಗೆಗೆ ವಾಕರಿಕೆಯಾಗುತ್ತದೆ. ಚರ್ಮ ಮುಟ್ಟುವುದೂ ಇಲ್ಲ. ಕಿವಿಗೆ ತನುವಿನ ಹೂಸಿನ ಶಬ್ದವೇ ಅಸಹ್ಯವಾಗುತ್ತದೆ. ವಾಸಿಸಿದ ಮೂಗಿಗೂ ಹೇಸಿಗೆಯಾಗುತ್ತದೆ. ಇದು ಕೂಡ ಮನದ ಮತ್ತೊಂದು ಕ್ರಿಯೆ, ಅಸಹ್ಯ ಭರಿತ ಕ್ರಿಯೆ! ಅನ್ನ ನೋಡಿ ಸುಖದಿಂದ ಒಡಲೊಳಗಿಳಿಸಿದ ಮನ, ಒಡಲಿಂದ ಮರಳಿದರೆ ಹೇಸುತ್ತದೆ. ಹೀಗೆ ತನುವಿನಲ್ಲಿ ಮನ ನಂಜಾಗಿ ಸೇರಿ ನಂಜುಂಡನನ್ನೇ ಮರೆತಿದೆ.

ನಂಜಿನಂತಿರುವ ಮನ ಅನ್ನವನ್ನು ಉಣ್ಣುವಂತೆ ಮಾಡಿ, ಮಲವನ್ನು ಹೇಸುವಂತೆ ಮಾಡುತ್ತದೆ. ಅರಿವು, ಅನ್ನವನ್ನು ಅನ್ನದಂತೆ ನೋಡಿತು. ಮಲವನ್ನೂ ಅನ್ನದಂತೆ ನೋಡಿತು. ತಾನು ಉಣ್ಣುವಾಗ ಅನ್ನವಾಯಿತು. ಉಂಡ ಅನ್ನ ಮಲವಾಗಿ ಹೊರಗೆ ಬಂದಾಗ, ತನ್ನಂತೆ ಕಣ್ಣರಳಿಸಿ ಆನಂದದಿಂದ ಉಣ್ಣುವ ಹಂದಿ, ನಾಯಿ, ಹಸು, ನೊಣ ಕೀಟಗಳಿಗೆ ಅನ್ನವಾದುದನ್ನು ಕಂಡ ಅರಿವು ಮಲವನ್ನು ಬ್ರಹ್ಮವೆಂದು ತಿಳಿಯಿತು. ವಸ್ತುವನ್ನು ಅರಿವಿನಿಂದ ನೋಡಿದರೆ ಮನ ಅರಿವಿನಲ್ಲಿ ಲೀನವಾಗಿ ಅರಿವೇ ತಾನಾಗುವುದು. ಅರಿವೇ ಗುರು, ಮನವೇ ಶಿಷ್ಯ. ಶಿಷ್ಯ ಗುರುವಿನಲ್ಲಿ ಲೀನವಾಗಿ ಗುರುವೇ ತಾನಾದ. ಹೇಸಿ ಬಿಟ್ಟ ತನುವಿನ ಮನ ಅರಿವಿನ ತನುವಾಯಿತು. ಶಿವನ ತನುವಾಯಿತು.

■

ಕಾಯದಿಂದ ಬಂದ ಶಬ್ದ ಕಾಯಕ್ಕೆ ಮೃತ್ಯು

ನುಡಿವ ಶಬ್ದವೇ ಕಾಯದ ಕಳವಳ
ಒಡಲುಗೊಂಡವರೆಲ್ಲಾ ಕೇಳಿರಯ್ಯಾ
ಸಂಧ್ಯಾ,ನೇಮ,ನಿತ್ಯ,ಜಪ,ತಪ,ಸಮಾಧಿ
ಏನೆಂದಳೇನೆಂದು ಬರೆವಂತೆ ಬರೆವ ನುಡಿಯೊಳಗಿರ್ದು
ನುಡಿ ತಪ್ಪಿದೆನೆಂಬ ಈ ನುಡಿಗೆ ನಾಚುವೆನೆಂದ ನಂಬಿಗರಚೌಡಯ್ಯ

-ಅಂಬಿಗರ ಚೌಡಯ್ಯ

ಕಾಯದಿಂದ ಜನ್ಮ ತಳೆದ ಶಬ್ದ, ಕಾಯದಿಂದ ಜನ್ಮ ತಳೆದ ಗ್ರಂಥಗಳು, ಕಾಯದಿಂದಲೇ ಜನ್ಮ ತಳೆದ ಸಂಧ್ಯಾ, ನೇಮ, ನಿತ್ಯ, ಜಪ, ತಪ, ಸಮಾಧಿ. ಈ ಎಲ್ಲ ನುಡಿಗಳು ಕಾಯದ ಗರ್ಭದಲ್ಲಿದ್ದಾಗ ಕಾಯಕ್ಕೆ ಕಳವಳವಿರಲಿಲ್ಲ. ಆಗ ಕಾಯ ಯಾವ ಆಚರಣೆಯನ್ನೂ ಮಾಡಲಿಲ್ಲ. ಕಾಯದಿಂದ ಹೊರಬಂದ ಶಬ್ದಗಳು ಕಾಗದದ ಮೇಲೆ ಮೂಡುವಾಗಲೂ ನಪುಂಸಕವಾಗಿಯೇ ಇದ್ದವು. ಕಲಿಯುವಾಗಲೂ ನಪುಂಸಕವಾಗಿಯೇ ಇದ್ದವು.

ಶಬ್ದ ಬಳಕೆ ಮಾಡಿ ನುಡಿದಾಗ ಕಾಯದ ಕಳವಳ ಪ್ರಾರಂಭವಾಯಿತು. ನುಡಿದ ಶಬ್ದ, ಕಾಯ ನಡೆಯುವಂತೆ, ಎಡುವುವಂತೆ ಮಾಡಿತು. ಏನೆಲ್ಲಾ ಶಬ್ದ ಬರೆದದ್ದು, ನುಡಿದದ್ದು ಬರೆದ ಕಾಯಕ್ಕೆ ಮುಳುವಾಯಿತು. ನುಡಿ ತಪ್ಪಿದನೆಂದು, ನುಡಿದಂತೆ ನಡೆದನೆಂದು ಹೀಗೆ ಕಾಯ ಬರೆದ ಬರವಣಿಗೆಯಲ್ಲಾ ಕಾಯಕ್ಕೆ ನಿಯಮಗಳಾದವು. ಆಚರಿಸಿದರೆ ನಿಯಮ. ತಪ್ಪಿದರೆ ನಿಯಮ ಬಾಹಿರ ಕಾಯ ವೆಂದು ಕಾಯಗಳಲ್ಲಿಯೇ ಎರಡು ತೆರನಾದವು.

ಕೊಡಲಿಗೆ ಕಾವು ಆದ ಮರ, ಆ ಕಾವುಳ್ಳ ಕೊಡಲಿಯೇ ಮರಕ್ಕೆ ಮೃತ್ಯು ವಾದಂತೆ. ಕಾಯದಿಂದ ಬಂದ ಶಬ್ದ ಕಾಯಕ್ಕೆ ಮೃತ್ಯುವೂ ಆಯಿತು. ಕಾಯಕ್ಕೆ ಕಿರೀಟವೂ ಆಯಿತು.

ಕೈಕೇಯಿಯ ಕಾಯದಿಂದ ಬಂದ ಎರಡು ಶಬ್ದ ರಾಮ, ಸೀತಾ,ಲಕ್ಷ್ಮಣರ ಕಾಯಗಳನ್ನು ಹದಿನಾಲ್ಕು ವರ್ಷ ಅಡವಿಗೆ ಅಟ್ಟಿತು. ನುಡಿದು ಆನಂದ ಪಡಬೇಕಾದ ಕೈಕೇಯಿಯೂ ದುಃಖದ ಮಡುವಿನಲ್ಲಿ ಮುಳುಗಿದಳು.

ನುಡಿದ ನುಡಿಗೆ ಕಾಯ ನಾಚಲಿಲ್ಲ. ಜನ್ಮ ಕೊಟ್ಟ ಶಬ್ದವನ್ನು ಜನ್ಮಕೊಟ್ಟ ಕಾಯದಲ್ಲಿಯೇ ಭಸ್ಮ ಮಾಡುವುದು ಕಾಯಕ್ಕೆ ತಿಳಿಯಲಿಲ್ಲ. ಏನೀ ಕಾಯದ, ಕಾಯದಿಂದ ಬಂದ ಶಬ್ದದ ಕರಾಮತ್ತು !

ಕಾಯದಿಂದ ಬಂದ ' ವಾಕಟ್ಸುಮೊ ' ಎನ್ನುವ ಒಂದೇ ಒಂದು ಶಬ್ದ ಎರಡನೇ ಮಹಾಯುದ್ಧಕ್ಕೆ ಕಾರಣವಾಯಿತು. ಒಂದು ಲಕ್ಷ ತೊಂಭತ್ತೈದು ಸಾವಿರ ಕಾಯಗಳು ನೆಲಕ್ಕುರುಳಿದವು. ರಕ್ತದ ಕಾಲುವೆಯೇ ಹರಿಯಿತು, ಪ್ರಪಂಚದ ತುಂಬಾ ನೆಲೆಸಿರುವ ಕಾಯಗಳು ತಲ್ಲಣ ಗೊಂಡವು. ಕಾಯದಿಂದ ಬಂದ ಪದ ಕಾಯ ತಿಳಿಯದೇ ಹೋಯಿತು.

ಜಪಾನಿನ ಸಚಿವ ಸಂಪುಟದಲ್ಲಿ ನಿರ್ಣಯಿಸಿ ದಾಖಲಿಸಲ್ಪಟ್ಟ ವಾಕಟ್ಸುಮೋ ಎನ್ನುವ ಪದಕ್ಕೆ ಅಷ್ಟೊಂದು ಪದಾರ್ಥಗಳನ್ನು ನಾಶ ಮಾಡುವ ಶಕ್ತಿಯಿದೆಯೇ ? ಪದಾರ್ಥ ದೊಡ್ಡದೋ ? ಪದಾರ್ಥದಿಂದ ಬಂದ ಪದ ದೊಡ್ಡದೋ ?

ಪದಾರ್ಥದಿಂದ ಬಂದ ಒಂದು ಪದ ಪದಾರ್ಥಕ್ಕೆ ಆಹಾರವಾಗಲಿಲ್ಲ; ಕಾಳಕೂಟ ವಿಷವಾಯಿತು. ಅಣುಬಾಂಬು ಕೆಲವರನ್ನೇ ಕೊಂದು ಹಾಕಬಹುದು. ಒಂದೇ ಒಂದು ಪದ ಪ್ರಪಂಚವನ್ನೇ ತಲ್ಲಣಗೊಳಿಸಿತು. ಪದ ನಷ್ಟ ಮಾಡುವ ಪ್ರಯೋಗದಲ್ಲಿ ಪದಾರ್ಥ ತೊಡಗದಿರುವುದೇ ಇದಕ್ಕೆ ಕಾರಣ. ಆ ಕಲೆಯ ಶಿಕ್ಷಣದಲ್ಲಿ ಪ್ರಪಂಚದ ಸರಕಾರಗಳು ತೊಡಗದಿರುವುದೇ ಇದಕ್ಕೆ ಕಾರಣ. ಆನೆ, ಹುಲಿ, ಸಿಂಹ, ತಿಮಿಂಗಲ, ಡೈನೋಸಾರ, ಭಯಾನಕ ಉರುಗಗಳನ್ನು ಪಳಗಿಸಿ ತನ್ನಂತೆ ಮಾಡಿಕೊಳ್ಳುವ ಕಾಯಕ್ಕೆ ಕಾಯದಿಂದ ಬಂದ ಶಬ್ದ ಸೀಳಲು ತಿಳಿಯಲಿಲ್ಲ.

ಸಂಧ್ಯಾ,ನೇಮ, ನಿತ್ಯ,ಜಪ,ತಪ,ಸಮಾಧಿ ಶಬ್ದಗಳನ್ನು ಕಾಯದಿಂದಲೇ ನುಡಿದ, ಕಾಯದಿಂದಲೇ ಬರೆದ, ಕಾಯದಿಂದಲೇ ನಡೆದ, ನುಡಿದಂತೆ ನಡೆ ತಪ್ಪಿದೆನೆಂದು ಕಳವಳ ಪಟ್ಟ. ನುಡಿಯುವ ಕಾಯ, ನಡೆಯುವ ಕಾಯ, ನುಡಿದಂತೆ ನಡೆಯಲಿಲ್ಲವೆಂದು ಕಳವಳಪಡವ ನುಡಿಗೆ ನಾಚಬೇಕಾಗಿದೆ. ಆ ಅರಿವು ಕಾಯದಲ್ಲಿಯೇ ಇದೆ. ಅದು ಒಡ ಮೂಡಿದಾಗ, ನುಡಿದ ನುಡಿ ಬಡಿದ ನುಡಿಗಳೆರಡೂ ಮಾಯವಾಗುವವು. ಆಗ ಕಾಯ ನುಡಿದರೆ ನುಡಿಗೆಟ್ಟ ನುಡಿ ನುಡಿಯುವುದು. ನುಡಿದ ನುಡಿಗೆ ಕಳವಳವಿಲ್ಲ. ಕೇಳಿದ ನುಡಿಗೂ ಕಳವಳವಿಲ್ಲ. ಬಡಿದ ಶಬ್ದಗಳೆಲ್ಲಾ ಭೇದಿಸಿ ನಿಶ್ಯಬ್ದ ವೇದಿಯಾಗುವುದು. ಶಬ್ದಗಳ ಕ್ರಿಯೆ ನಿಂತು,ಶಬ್ದ ನಪುಂಸಕವಾಗವುದು. ಒಡಲಿಂದ ಬಂದ ಶಬ್ದ ಒಡಲು ಸೇರಿ ಭಸ್ಮವಾಗುವುದು.

■

ಪ್ರೀತಿಗೂ ದ್ವೇಷಕ್ಕೂ ಭಾವವೇ ಕಾರಣ

ಹಿಡಿಯದೆ, ಹಿಡಿದುದ ಬಿಡದೆ,
ಬಿಟ್ಟುದ ಮತ್ತಾರು ಅರಿಯರಲ್ಲಾ! ಒಡಲ ಹಮ್ಮು
ಜಾತ್ಯಾಭಿಮಾನವ ತೊಡಗಿರ್ದ ಭಾವವ
ಮತ್ತಾರೂ ಅರಿಯರಲ್ಲಾ! ಭಾವ ಭಾವಿಸುತ,
ನಿರ್ಭಾವವಳವಟ್ಟ ಭೇದವನಾರು ಅರಿಯರಲ್ಲಾ!
ಸೌರಾಷ್ಟ್ರ ಸೋಮೇಶ್ವರ ಲಿಂಗದ ನಿರ್ಣಯವ
ಮತ್ತಾರೂ ಅರಿಯರಲ್ಲಾ.

-ಆದಯ್ಯ ಶರಣ

ಈ ವಚನದಲ್ಲಿ ಆದಯ್ಯ ಶರಣರು 'ಭಾವ ' ಶಬ್ದವನ್ನು ಪ್ರಯೋಗಕ್ಕೆ ಬಳಸಿಕೊಂಡಿದ್ದಾರೆ. ಭಾವ ಅಮೃತವೂ ಹೌದು, ವಿಷವೂ ಹೌದು! ಭಾವ ಶಬ್ದವನ್ನು ಸರಿಯಾಗಿ ತಿಳಿದುಕೊಳ್ಳದ ನಿಮಿತ್ತ ಭಾವಿಸಿ ಸ್ನೇಹ ಮಾಡಿದ ವ್ಯಕ್ತಿ ಪ್ರೀತಿಗೂ ಹಗೆತನಕ್ಕೂ ಕಾರಣನ್ನಾಗುತ್ತಾನೆ.

ವ್ಯಕ್ತಿ ಒಬ್ಬನೇ ಆಗಿದ್ದರೂ, ಭಾವಿಸಿದ್ದಕ್ಕಾಗಿ ಪ್ರೀತಿಗೆ ಕಾರಣನಾದ. ಭಾವ ದಲ್ಲಿ ದೋಷ ಕಂಡದ್ದಕ್ಕೆ ಹಗೆತನಕ್ಕೆ ಕಾರಣನಾದ. ಪ್ರೀತಿಗೆ ಕಾರಣವಾದ ಭಾವ ವನ್ನು ಅರಿಯಲಿಲ್ಲ , ಹಗೆತನಕ್ಕೆ ಕಾರಣವಾದ ಭಾವವನ್ನು ಅರಿಯಲಿಲ್ಲ. ಗಂಡ-ಹೆಂಡತಿ-ಮಕ್ಕಳು, ಬಂಧು-ಬಳಗ, ಗೆಳೆಯ ಯಾರಾದರೂ ಆಗಬಹುದು. ಭಾವಿಸಿದ ಭಾವದಲ್ಲಿ ವ್ಯತ್ಯಾಸ ಬಂದರೆ ದೀರ್ಘ ಸಂಬಂಧದ ಕೊಂಡಿ ಕಳಚಿ ಬೀಳುತ್ತದೆ.

ವ್ಯಕ್ತಿಯ ರೂಪ, ಭಾವ ಗೋಚರಕ್ಕೆ ಬರುತ್ತದೆ. ಒಮ್ಮೆ ಗೆಳೆತನವಾಗುತ್ತದೆ ಮತ್ತೊಮ್ಮೆ ಹಗೆತನ ಬೆಳೆಯುತ್ತದೆ. ವ್ಯಕ್ತಿಯ ತತ್ವ ಗೋಚರಕ್ಕೆ ಬರುವುದಿಲ್ಲ. ಅದರಲ್ಲಿ ಬದಲಾವಣೆಯೂ ಆಗುವುದಿಲ್ಲ. ತತ್ವ ಹೆಣ್ಣು- ಗಂಡುಗಳಲ್ಲ, ಇವೆರಡನ್ನೂ ಹೊದ್ದ ಬೆಳಕು ಅರಿವು. ತನುವಿನ ಅರಿವಿಗೆ ಭಾವನೆಗಳಿಲ್ಲ, ಬೆಳಗುವುದೊಂದೇ ಅದರ ಕೆಲಸ. ಅದನ್ನು ಭಾವಿಸುವಂತಿಲ್ಲ. ಬೆಳಕು ಸತ್ಯ, ಬೆಳಕನ್ನು ಬೆಳಕು ತೆಗಳುವುದಿಲ್ಲ. ಬಿಚ್ಚಿ ಬೇರಾಗದಂತೆ ಕೂಡುತ್ತದೆ.

ಭಾವಿಸಿ ಪ್ರೀತಿಸುವ ವ್ಯಕ್ತಿಗಳಿದ್ದಾರೆ, ಪ್ರೀತಿಗೆ ಭಾವ ಕಾರಣವೆಂದು ಅರಿಯಲಿಲ್ಲ. ಭಾವಿಸಿದ ಭಾವ ದುರ್ಭಾವವಾಗಿ ದ್ವೇಷಿಸುವ ವ್ಯಕ್ತಿಗಳಿದ್ದಾರೆ. ದ್ವೇಷಕ್ಕೆ ಭಾವವೇ ಕಾರಣವೆಂದು ಅರಿಯಲಿಲ್ಲ. ಪ್ರೀತಿಸಿದ ಭಾವ ದ್ವೇಷಕ್ಕೆ ಕಾರಣವಾಗಿ, ಪ್ರೀತಿಗೂ ದ್ವೇಷಕ್ಕೂ ಭಾವವೇ ಕಾರಣವೆಂದು ಅರಿಯಲಿಲ್ಲ. ಪ್ರೀತಿ-ದ್ವೇಷ ತನುವಿನಲ್ಲಿ

ಸಂಗ್ರಹವಾಗಿ ನೆನಪಾದಾಗೊಮ್ಮೆ ಕುದಿಯಿತು. ತನುವಿನ ವಿಕಾರಕ್ಕೆ ಭಾವವೇ ಕಾರಣವೆಂದು ಅರಿಯಲಿಲ್ಲ.

ಅಹಂಕಾರ, ಜಾತಿ, ಮತ, ಪಂಥಗಳ ಅಭಿಮಾನಕ್ಕೆ ಭಾವ ವೇ ಕಾರಣವೆಂದು ಅರಿಯಲಿಲ್ಲ.

ಭಾವ - ಸದ್ಭಾವ ದುರ್ಭಾವ ಸಂಪೂರ್ಣ ಕಳೆದು ನಿರ್ಭಾವವಾದವರನ್ನು ಅರಿಯಲಿಲ್ಲ.

ಶರಣರು ಭಾವಿಸಿ ಪ್ರೀತಿಸಲಿಲ್ಲ. ಭಾವ ನಿರ್ಭಾವಗೊಳಿಸಿ ಪ್ರೀತಿಸಿದರು. ಕಳ್ಳ, ಹಾದರಿಗ, ಕೊಲೆಗಡುಕನನ್ನು ಪ್ರೀತಿಸಿದರು. ಜಾತಿ,ಮತ, ಪಂಥ ಸುಳಿಯಲೇ ಇಲ್ಲ. ಭಾವ ವ್ಯಕ್ತಿಯನ್ನು ವ್ಯಕ್ತಿಯ ವ್ಯವಹಾರವನ್ನು ನೋಡಿದರೆ, ನಿರ್ಭಾವ ವ್ಯಕ್ತಿಯ ಮೂಲತತ್ವ ನೋಡುತ್ತದೆ. ಇದು ಶರಣರ ಶಿಕ್ಷಣ. ಮನುಕುಲವೆಲ್ಲ ಸಂತೋಷ, ಸಮಾಧಾನದಿಂದ ಬದುಕುವ ನಿರ್ಭಾವ ಶಿಕ್ಷಣ.

■

ಗ್ರಂಥಗಳಿಗೆ ಸೆರೆಯಾದ ತನುವು

ವೇದಂಗಳ ಹಿಂದೆ ಹರಿಯದಿರು ಹರಿಯದಿರು,
ಶಾಸ್ತ್ರಂಗಳ ಹಿಂದೆ ಸುಳಿಯದಿರು ಸುಳಿಯದಿರು,
ಪುರಾಣಂಗಳ ಹಿಂದೆ ಬಳಸದಿರು ಬಳಸದಿರು,
ಆಗಮಂಗಳ ಹಿಂದೆ ತೊಳಲದಿರು ತೊಳಲದಿರು,
ಸೌರಾಷ್ಟ್ರ ಸೋಮೇಶ್ವರನ ಕೈವಿಡಿದು
ಶಬ್ದ ಜಾಲಂಗಳಿಗೆ ಬಳಲದಿರು ಬಳಲದಿರು.

–ಆದಯ್ಯ ಶರಣ

ತನುವನ್ನು ಪಂಡಿತ ಪಾಮರ ಎಂದು ವಿಂಗಡಿಸುವಂತಿಲ್ಲ. ಅರಿವು ಬಳಕೆ ಮಾಡಿ ಕೊಂಡು ಆ ಅರಿವೇ ತಾನಾಗಿ, ಉಪಯುಕ್ತವಾಗಲೆಂದು ತನುವು ಕಾಗದದಲ್ಲಿ ತಾಳೋಲೆಯಲ್ಲಿ ಅರಿವು ಸಂಗ್ರಹಿಸಿತು.

ಅರಿಯದೇ ಅರಿವು ಸಂಗ್ರಹಿಸಿದ ತನುವು ಗ್ರಂಥಕರ್ತನಾಯಿತು. ಕಾಗದ ತಾಳೋಲೆಗಳು ಪವಿತ್ರ ಗ್ರಂಥಗಳಾದವು. ವೇದ, ಶಾಸ್ತ್ರ, ಪುರಾಣ, ಆಗಮಂಗಳಾದವು. ಭಗವದ್ಗೀತೆ, ಬೈಬಲ್ ಮುಂತಾದ ಗ್ರಂಥಗಳಾದವು. ತನುವಿನಿಂದ ಜನ್ಮ ಪಡೆದ ಗ್ರಂಥಗಳು ಮೇಲಾದವು. ತನುವು ಕೀಳಾಯಿತು.

ಗ್ರಂಥ ಓದಿದ ತನುವು ಪಂಡಿತನಾಯಿತು. ಶಾಸ್ತ್ರಿಯಾಯಿತು. ಪವಿತ್ರ ತನುವಾಯಿತು. ಏನೂ ಓದದೇ ಆನಂದದಿಂದ ಕೇಳಿದ ತನುವು ಅಧಮನಾಯಿತು. ಪಾಮರನಾಯಿತು. ಶಾಸ್ತ್ರ ಕಲಿತು ಹೇಳಲು ತನುವಿಗೆ ವರ್ಷಗಳೇ ಬೇಕಾಯಿತು. ಕೇಳುವ ತನುವುಗಳಿಗೆ ನಿಮಿಷವೂ ಬೇಕಾಗಲಿಲ್ಲ , ಕ್ಷಣಾರ್ಧದಲ್ಲಿ ಕೇಳಿ ಆನಂದ ಪಡೆಯಿತು. ತಲೆದೂಗಿತು, ಎಂದೂ ಕೇಳದ ಶಾಸ್ತ್ರ, ತನುವಿನಲ್ಲಿ ತನ್ಮಯವಾಗಿ ಮೈಮನಂಗಳಲ್ಲಿ ರೋಮಾಂಚನವಾಯಿತು.

ಹೇಳುವವ ಪಂಡಿತನೆ ? ಗ್ರಂಥ ಪವಿತ್ರವೆ ? ಕೇಳುವವ ಅಧಮನೇ ? ಹೀಗೆ ಪ್ರಪಂಚದಲ್ಲಿ ತನುವು ಪ್ರಶ್ನಿಸಿಕೊಳ್ಳುವುದು ಬೇಡವೆ ? ತನುವಿನಿಂದ ಬಂದ ಅಕ್ಷರ ತನುವಿಗೆ ಮುಳುವಾದರೆ ಹೇಗೆ ? ಅದು ಅಕ್ಷರವಾದರೆ , ತನುವು ಅಕ್ಷರೋತ್ತಮನಲ್ಲವೇ ?

ಶಾಸ್ತ್ರ ಕಲಿತು ಹೇಳುವ ತನುವಿಗಿಂತ, ಎಂದೂ ಶಾಸ್ತ್ರ ಕೇಳದ ತನುವು ಕೇಳಿ ಪುಳಕಿತಗೊಳ್ಳಲಿಲ್ಲವೇ ?

ತನುವಿನಲ್ಲಿ ಅಕ್ಷರೋತ್ತಮನಿದ್ದೂ ಶಾಸ್ತ್ರ ಕಲಿಯಲು ಹೋದ. ತನುವಿನಲ್ಲಿ ಅಕ್ಷರೋತ್ತಮನಿದ್ದೂ ಶಾಸ್ತ್ರ ಕೇಳಲು ಬಂದ. ಶಾಸ್ತ್ರ ಗ್ರಂಥಗಳು ಜಡ ! ಶಾಸ್ತ್ರಿಗೂ

ಕೇಳುಗನಿಗೂ ತನುವಿನಲ್ಲಿರುವ ಅಕ್ಷರೋತ್ತಮನ ಪರಿಚಯುವಾಗಲಿಲ್ಲ. ಶಾಸ್ತ್ರವೇ ಪ್ರಧಾನವಾಯಿತು. ಶಿಕ್ಷಣ ಸಂಸ್ಥೆಗಳು, ಮಠ-ಮಾನ್ಯಗಳು, ಪ್ರಾರ್ಥನಾ ಮಂದಿರಗಳೇ ದೊಡ್ಡದಾದವು. ತನುವಿನಿಂದ ಸೃಷ್ಠಿಯಾದ ವೇದಕ್ಕೆ ತನುವೇ ಮರುಳಾಯಿತು. ತನುವಿನಿಂದ ಸೃಷ್ಠಿಯಾದ ಶಾಸ್ತ್ರಕ್ಕೆ ತನುವೇ ಬೆನ್ನು ಹತ್ತಿತು. ತನುವಿನಿಂದ ಸೃಷ್ಠಿಯಾದ ಪುರಾಣ ತನುವೇ ಬಳಸಿ ಬಳಸಿ ಪುರಾಣವೇ ದೊಡ್ಡದಾಯಿತು, ತನುವಿನಿಂದ ಸೃಷ್ಠಿಯಾದ ಆಗಮಕ್ಕೆ ತನುವೇ ತೊಳಲಿ ಬಳಲಿತು.

ತನುವಿನಿಂದ ಬರೆಯಲ್ಪಟ್ಟ ಗ್ರಂಥಗಳು, ತನುವನ್ನು ಆಳುತ್ತಲಿವೆ. ಗ್ರಂಥಗಳು ಧರ್ಮಗ್ರಂಥಗಳಾದವು. ಗ್ರಂಥಗಳು ಹೇಳಿದ್ದೇ ವೇದ ವಾಕ್ಯ ! ಸರಕಾರ, ನ್ಯಾಯಾಲಯ, ರಾಜ್ಯ, ದೇಶಗಳು ಗ್ರಂಥಗಳಿಂದ ಬಂಧಿಸಲ್ಪಟ್ಟಿವೆ. ಕೋಟ್ಯಾನುಕೋಟಿ ಗ್ರಂಥಗಳಿಗೆ ಜನ್ಮ ಕೊಟ್ಟ ತನುವು ಕಡೆಗಣಿಸಲ್ಪಟ್ಟಿದೆ.

ಅಲ್ಲಮ ಪ್ರಭುಗಳು ತನುವು ನಿತ್ಯ ನಿರಂಜನವೆಂದರು. " ನಿತ್ಯ ನಿರಂಜನ ತಾನೆಂದರಿಯದೆ 'ತತ್ವಮಸಿ' ಎಂದು ಹೊರಗನೆ ಹಾಡಿ ಸತ್ತಿತ್ತಲ್ಲ ಜಗವೆಲ್ಲ ನಾಯಿ ಸಾವ! ತಮ್ಮ ತಾವರಿಯದೆ ಸತ್ತವರ ಪತ್ರ ಓದಿದಡೆ ಎತ್ತಣ ಮುಕ್ತಿ ಗುಹೇಶ್ವರಾ ! "

ನಿರಂಜನನೆಂಬ ಅಕ್ಷರೋತ್ತಮ ತನುವಿನ ತುಂಬಾ ತನ್ಮಯನಾಗಿದ್ದಾನೆ. ಅವನು ತತ್ವವೂ ಹೌದು ! ತತ್ವವೇ ತಾನಾಗಿದ್ದು, ತಾನೇ ತತ್ವವೆಂಬುದನ್ನು ಕೂಡಾ ಓದಿ ನಾಯಿಯಂತೆ ಹೊರಗಡೆಯೇ ಬೊಗಳಿ ಬೊಗಳಿ ಸಾಯುತ್ತಿದ್ದಾನೆ. ತನ್ನ ತನುವಿನ ಅಂತರಾಳದೊಳಗೆ ತಾನು ಇಳಿಯುತ್ತಿಲ್ಲ, ಮುಕ್ತಿಗಾಗಿ ವೇದ, ಶಾಸ್ತ್ರ, ಪುರಾಣ ಆಗಮ ಭಗವದ್ಗೀತೆ ಬೈಬಲ್‌ಗಳನ್ನು ಓದುತ್ತಿದ್ದಾನೆ. ಇವು ಸತ್ತವರು ಬರೆದ ಪತ್ರಗಳು. ಇದರಿಂದ ಮುಕ್ತಿ ದೊರೆಯದು, ತನುವಿನೊಡೆಯ ನಿತ್ಯ ನಿರಂಜನ, ಅಕ್ಷರೋತ್ತಮನ ಪರಿಚಯ ವಾಗದು. ತನುವಿನಲ್ಲಿ ಜಗದಗಲ ಮುಗಿಲಗಲಕ್ಕೂ ವಿಸ್ತಾರವಾದ ಜ್ಞಾನವೇ ಅಡಗಿದೆ.

ಶಬ್ದ ಜಾಲಂಗಳಿಗೆ ಬಳಲದಿರು, ಅವು ವೇದ, ಶಾಸ್ತ್ರ ಪುರಾಣ ಆಗಮಗಳನು ಹೊತ್ತ ಕಂತೆಗಳು. ಅವುಗಳ ಹಿಂದೆ ಹರಿಯದಿರು, ಸುಳಿಯದಿರು, ಬಳಲಿ ತೊಳಲದಿರು. ತನುವಿನೊಡೆಯ ಸೌರಾಷ್ಟ್ರ ಸೋಮೇಶ್ವರ-ಅರಿವೆಂಬ ಗುರುವಿನ ಕೈಹಿಡಿದು ಶಬ್ದ ಜಾಲಂಗಳಿಗೆ ಬಳಲದಿರು, ಎಂದು ಅರಿವಿಗೆ ಹೋಗುವ ಸೂತ್ರ ಹೇಳಿದ್ದಾರೆ, ಆದಯ್ಯ ಶರಣರು.

■

‘ನೆನೆಹು’ ತನುವಿನ ಶತ್ರು

ನಿಜ ಸುಖದ ಸಂಗದಿಂದ ನೆನಹಳಿದು,
ಶಿವಾನುಭವದ ಸುಖದ ಸುಖದಲ್ಲಿ ಪ್ರಾಣವಡಗಿ,
ತೃಪ್ತಿಯಾಗಿ ನಿಂದ ನಿಲವಿನ ನಿರ್ಣಯವೆ
ಸೌರಾಷ್ಟ್ರ ಸೋಮೇಶ್ವರ ಲಿಂಗಕ್ಕೆ
ಓಗರವಾಯಿತು.

– ಆದಯ್ಯ ಶರಣ

ನಿಜ ಸುಖದ ಸಂಗದಿಂದ ನೆನಹಳಿದು :

ನಾಲ್ಕು ಸಾಲಿನ ವಚನದಲ್ಲಿ ಆದಯ್ಯ ಶರಣರು ನೆನಹು, ಪ್ರಾಣ, ಸುಖ ಈ ಮೂರು ಶಬ್ದಗಳಿಗೆ ಒತ್ತು ಕೊಟ್ಟಿದ್ದಾರೆ.

ನೆನಹು :

ತನು ಬಾಲ್ಯದಿಂದ ತೊಡಗಿದ ಕ್ರಿಯೆಗಳನ್ನು ಮೆಲುಕು ಹಾಕಿ ಸುಖಪಡುತ್ತದೆ. ಮತ್ತು ದುಃಖವೂ ಉಂಟಾಗುತ್ತದೆ. ಸುಖಕ್ಕಾಗಿ ಭವಿಷ್ಯದ ಯೋಜನೆಗಳನ್ನು ಹಾಕಿಕೊಂಡು ಚಿಂತಿಸುತ್ತದೆ-ಸುಖಿಸುತ್ತದೆ. ಇದು ತನು ನೆನಹಿನೊಂದಿಗೆ ತೊಡಗುವ ಕ್ರಿಯೆ.

ಭಯಾನಕ ವಿಷಯಗಳನ್ನು ನೆನಪಿಸಿಕೊಂಡರೆ ತನು ವಿಕೃತವಾಗುತ್ತದೆ. ಸುಖದ ಕ್ರಿಯೆ ನೆನಪಿಸಿಕೊಂಡರೆ ಸುಖವೆನಿಸುತ್ತದೆ. ನೆನಪಿಗೆ ಅದ್ಭುತವಾದ ಶಕ್ತಿಯಿದೆ. ಭೂತ ಭವಿಷ್ಯತ್ ವರ್ತಮಾನದ ಕ್ರಿಯೆಗಳನ್ನು ತನುವಿನಲ್ಲಿ ಸಂಗ್ರಹಿಸಿ ಆಗಾಗ ನೆನಪಿಸಿ ತನುವನ್ನು ಸುಖ ದುಃಖಗಳಲ್ಲಿ ಮುಳುಗಿಸುತ್ತದೆ.

ಎಂದೋ ಮಾಡಿದ ಕೆಲಸಕ್ಕೆ ಮಾಡಿದೆನೆಂಬ ಹೆಗ್ಗಳಿಕೆಯ ಜಂಬ, ಯಾರೋ ಮಾಡಿದ ನಿಂದೆಯ ಶಬ್ದ ಅವರ ಚಿತ್ರ ಸಹಿತ ತನುವಿನಲ್ಲಿ ಸ್ಕ್ಯಾನ್ ಮಾಡಿ ಸಂಗ್ರಹಿಸಿಕೊಂಡು ತನುವಿರುವವರೆಗೆ ನೆನಪಿಸಿ, ಕತಕತನೆ ಕುದಿಸಿ ದುಃಖಿಸುವಂತೆ ಮಾಡುತ್ತದೆ.

ತನ್ನನ್ನು ಕಾಡುವ ನೆನಪಿನ ಬಗ್ಗೆ ಚಿಂತಿಸಲಿಲ್ಲ. ತನುವಿಗೆ ನೆನಪು ಬೇಕೋ ಅಥವಾ ಬೇಡವೋ ಎಂದೂ ಯೋಚಿಸಲಿಲ್ಲ. ತನುವು ಹುಟ್ಟಿದಾಗಿನಿಂದ ಉಣ್ಣುವ ಭೋಗಿಸುವ, ಕಲಿಯುವ ಕ್ರಿಯೆಯಲ್ಲಿ ನಿರತವಾಗಿದೆ. ನೆನಪಿಸಿಕೊಂಡು ಸುಖಿಸುತ್ತದೆ-ದುಃಖಿಸುತ್ತದೆ. ವ್ಯಥ್ರನಾಗುತ್ತದೆ. ಪಿಶಾಚಿಯಂತೆ ಕಾಡುವ ನೆನಪು

ಕಳೆದುಕೊಳ್ಳಬೇಕೆಂದು ತನುವಿಗೆ ಇದುವರೆಗೂ ಅನಿಸಲಿಲ್ಲ. ಬದಲಾಗಿ ಮಕ್ಕಳಿಗೆ ನೆನಪಿನ ಶಕ್ತಿ ವೃದ್ಧಿಯಾಗಲೆಂದು ಔಷಧಿಯನ್ನು, ಸರಸ್ವತಿ ಎಲೆಯನ್ನು ತಿನ್ನಿಸಿ ನೆನಪಿಗೆ ಬಲ ತರುತ್ತೇವೆ.

ತನುವು ಜನ್ಮದಿಂದಲೇ ಜ್ಞಾನಿ, ನೆನಪು ತನುವಿನ ಜ್ಞಾನ ಮರೆಯಿಸಿ, ಪುಸ್ತಕದ ಜ್ಞಾನ ಸಂಗ್ರಹಿಸಿಕೊಳ್ಳುವ ಹಠಮಾರಿ! ವೇದಿಕೆಯ ಮೇಲೆ ನೆನಪಿನ ಸುರುಳಿ ಬಿಚ್ಚಿ ಪಂಡಿತನೆನಿಸಿಕೊಳ್ಳುತ್ತದೆ. ಅಗಾಧವಾದ ನೆನಪಿನ ಶಕ್ತಿ ಹೊಗಳಿಕೆಗೆ ಪಾತ್ರವಾಗುತ್ತದೆ. ಮತ್ತಷ್ಟು ಮತ್ತಷ್ಟು ಸಂಗ್ರಹಿಸಿಕೊಂಡ ನೆನಪು ತನುವನ್ನು ಪಂಡಿತನನ್ನಾಗಿ ಮಾಡಿ, ತನುವಿನ ಕಣ ಕಣದಲ್ಲಿದ್ದ ಜ್ಞಾನಿಯನ್ನು ಮರೆಯುವಂತೆ ಮಾಡುತ್ತದೆ. ತನುವಿನ ಜ್ಞಾನ ಜಾಗೃತವಾದರೆ ನೆನಪಿನ ಪಿಶಾಚಿಗೆ ಅವಕಾಶವಿಲ್ಲ. ತನುವನ್ನು ಕ್ಷಣ ಕ್ಷಣಕ್ಕೂ ಹಿಂಡಿ ಹಿಪ್ಪಿ ಮಾಡುವ ನೆನಪು ತನುವಿನ ಶತ್ರು. ನೆನಪು ಅಳಿಯದ ಹೊರತು ತನುವಿಗೆ ಸುಖವಿಲ್ಲ. ನೆನಪು ಇಟ್ಟುಕೊಂಡು ಹಿಮಾಲಯಕ್ಕೆ ಹೋದರೂ ತನುವು ತಿಪ್ಪೆಗೆ ಸಮಾನ. ಭೌತಿಕ ತನು ಪುಣ್ಯ ಕ್ಷೇತ್ರದಲ್ಲಿದ್ದರೂ ನೆನಪು ತನ್ನ ಶಕ್ತಿಯಿಂದ ತಿಪ್ಪೆಗೆ ತಳ್ಳುತ್ತದೆ, ನರಕಕ್ಕೆ ಭಾಜನನಾಗುವಂತೆ ಮಾಡುತ್ತದೆ.

ಪ್ರಾಣ :

ತನುವಿಗೆ ಕಾಯಿಲೆಯಾದರೆ ಪ್ರಾಣಕ್ಕೆ ಸಂಕಟ. ನೆನಪು ಕಾಯಿಲೆಯ ಘೋರ ವೃತ್ತಾಂತವನ್ನು ಪ್ರಾಣಕ್ಕೆ ನೆನಪಿಸಿ ಸಂಕಟದಲ್ಲಿ ತಳ್ಳುತ್ತದೆ. ಪ್ರಾಣ ಭಯದಿಂದ ನರಳುವಂತೆ ಮಾಡುತ್ತದೆ. ನೆನಪು ಪ್ರಾಣಕ್ಕೂ ಮನಕ್ಕೂ ತನುವಿಗೂ ಸಂಕಟವನ್ನೊಡ್ಡಿ ತನ್ನ ಪೈಶಾಚಿಕ ಗುಣವನ್ನು ಮೆರೆಯುತ್ತದೆ. ನೆನಪಿನ ಬಲ ಅಧಿಕವಾಗಿ ತನುವನ್ನು ಹುಚ್ಚನನ್ನಾಗಿಸುತ್ತದೆ. ತನುವಿಗೆ ಹುಚ್ಚನ ಪಟ್ಟ ಕಟ್ಟುತ್ತದೆ. ತನುವನ್ನು ಪ್ರತಿ ಕ್ಷಣ ಕಾಡುವ ನೆನಪು ಅಳಿದಾಗ ನಿಜ ಸುಖ ಲಭ್ಯ ವಾಗುತ್ತದೆ ಎನ್ನುತ್ತಾರೆ ಆದಯ್ಯ ಶರಣರು. ನೆನಪು ಅಳಿಯಲು ಜಪ ತಪ ಯೋಗ ಅನುಷ್ಠಾನ ಮಾಡಬೇಕಿಲ್ಲ ನಿಜ ಸುಖದ ಸಂಗದಿಂದ ನೆನಪು ಅಳಿಯುತ್ತದೆ ಎನ್ನುವ ಸೂತ್ರ ಅವರದು.

ಹಾಗಾದರೆ ನಿಜ ಸುಖ ಯಾವುದು ? ಅದರ ಸಂಗ ಮಾಡುವ ಬಗೆ ಹೇಗೆ ? :
ತನುವಿನ ನಿಜ ಸುಖ ಅರಿವು. ಆ ಅರಿವು ಪುಸ್ತಕದಲ್ಲಿಲ್ಲ. ಪುಸ್ತಕದಲ್ಲಿ ಬಂದ ಅರಿವು ಕೂಡಾ ತನುವಿನದೆ ಆಗಿದೆ. ನೆನಪು ತನುವಿನ ಅರಿವು ಮರೆಯಿಸಿ ತನುವನ್ನು ತನ್ನ ಕಬಂಧ ಬಾಹುವಿನಲ್ಲಿ ಬಂಧಿಸಿದೆ. ತನುವಿನ ಕಣ ಕಣದಲ್ಲಿ ಬೆರೆತ ಅರುವಿನ ಸಂಗವೇ ನಿಜ ಸುಖದ ಸಂಗ. ಆ ಸಂಗ ಬೆಳಕಿನ ಸಂಗ. ಬೆಳಕಿನ ಸಂಗದಲ್ಲಿ ನೆನಪು ಎಂಬ ಕತ್ತಲು ಕರಗಿ ಬೆಳಕು ಆಗಿ ಪರಿವರ್ತನೆಯಾಗುವುದು. ಮತ್ತೆ ತನುವಿನಲ್ಲಿ ನೆನಪಿಗೆ ಅವಕಾಶವಿಲ್ಲ. ಅರಿವಿನ ಸಂಗವದು ನಿಜ ಸುಖದ ಸಂಗ. ಅರಿವೆ ಗುರು, ಗುರುವೇ

ಶಿವ. ಆ ಶಿವಾನುಭವದ ಸುಖದ ಸುಖದಲ್ಲಿ ಪ್ರಾಣವಡಗಿ, ತೃಪ್ತಿಯಾಗಿ ತನುವು ನಿಂದ ನಿಲವೇ ನಿರ್ಣಯವಾಗುತ್ತದೆ. ಆ ಅಂಗಕ್ಕೆ ಸೌರಾಷ್ಟ್ರ ಸೋಮೇಶ್ವರ ಲಿಂಗ (ಜ್ಞಾನ)ವೆಂಬ ಅರಿವೇ ಅನ್ನವಾಗುತ್ತದೆ. ನೆನಹಳಿದ ಅಂಗ ಲಿಂಗಾಂಗವಾಗುತ್ತದೆ. ಅರಿವಿನ ಅಂಗವಾಗುತ್ತದೆ.

■

ರೂಹಿಲ್ಲದ ಚೆಲುವ

ಒಬ್ಬನಿಗೆ ರೂಹಿಲ್ಲ. ಒಬ್ಬನಿಗೆ ರೂಹುಂಟು.
ಒಬ್ಬನ ರೂಹು ಹೋಗುತ್ತ ಬರುತ್ತದೆ.
ಈ ಮೂವರನೊಂದೆಡೆಗೆ ತಂದರೆ
ಏನಹರೆಂಬುದ ನೋಡಿಕೊಳ್ಳಿರಣ್ಣಾ !
ಕಂಡಡೆ ಉಣಲಿಲ್ಲ. ಕಾಣದಿರ್ದಡೆ ಉಣದಿರಲಿಲ್ಲ.
ಇದೇನು ಸೋಜಿಗವಯ್ಯಾ ಸೌರಾಷ್ಟ್ರ ಸೋಮೇಶ್ವರಾ ?

- ಆದಯ್ಯ ಶರಣ

ತನ್ನನ್ನು ತಾನು ವೈಜ್ಞಾನಿಕವಾಗಿ ನೋಡಿಕೊಳ್ಳದಿದ್ದರೆ ಮೋಸ ಕಟ್ಟಿಟ್ಟ ಬುತ್ತಿ.

ಆದಯ್ಯ ಶರಣರು ದೇವರನ್ನು ಗುರುವನ್ನು ಹೊರಗೆ ಸೃಷ್ಟಿಮಾಡಲಿಲ್ಲ. ಸ್ಥೂಲ, ಸೂಕ್ಷ್ಮ, ಕಾರಣ ತನುವನ್ನು ಒಂದೆಡೆಗೆ ತಂದು ಬೇರಾಗದಂತೆ ಒಂದು ಮಾಡಿದರು. ತನುವನ್ನು, ತನ್ಮಯವಾದ ಅರಿವನ್ನು ದೇವರೆಂದರು. ತನುವಿನ ವೈಜ್ಞಾನಿಕತೆಯನ್ನು ಈ ಕೆಳಗಿನಂತೆ ಬಿಚ್ಚಿಟ್ಟರು.

ಒಬ್ಬನಿಗೆ ರೂಹಿಲ್ಲ:

ತನುವಿನ ತುಂಬ ತನ್ಮಯವಾದ ಅರಿವಿಗೆ ರೂಪವಿಲ್ಲ. ಕಣ್ಣು, ಕಿವಿ, ಮೂಗು, ನಾಲಿಗೆ ಚರ್ಮದಲ್ಲಿ ಅರಿವೆಂಬ ಗುರು ತನ್ಮಯವಾಗಿ ಬೆರೆತಿದ್ದಾನೆ. ಕಾಣುವ ತನುವನ್ನು ಮಾಧ್ಯಮ ಮಾಡಿಕೊಂಡು ತನುವಿನಲ್ಲೇ ತನ್ಮಯವಾಗಿದ್ದಾನೆ. ತನುವಿಗೆ ಅಧಿಷ್ಠಾನ ಮೂರ್ತಿಯಾಗಿದ್ದಾನೆ. ಈತನನ್ನು ಕಾರಣ ತನುವೆಂದು, ರೂಹಿಲ್ಲದವನೆಂದು, ಗುರುವೆಂದು, ಗಂಡನೆಂದು, ದೇವರೆಂದು, ಪರಬ್ರಹ್ಮನೆಂದು ವಿರಾಟ ಸ್ವರೂಪನೆಂದು ದಾರ್ಶನಿಕರಿಂದ ಕರೆಯಿಸಿಕೊಂಡಿದ್ದಾನೆ.

ಒಬ್ಬನಿಗೆ ರೂಹುಂಟು:

ಇದು ಸ್ಥೂಲ ತನುವು, ಕಾಣುತ್ತದೆ. ರೂಹಿಲ್ಲದವನೇ ರೂಪುಳ್ಳ ತನುವಿಗೆ ಮಾಧ್ಯಮ ಪುರುಷ. ಹೆಣ್ಣಾಗಿ-ಗಂಡಾಗಿ ಕಂಡರೂ ರೂಹಿಲ್ಲದ ಚೆಲುವನಿಂದಲೇ ರೂಪಿಗೆ ಕೀರ್ತಿ.

ಒಬ್ಬನ ರೂಹು ಹೋಗುತ್ತ ಬರುತ್ತದೆ:

ಇದು ಸೂಕ್ಷ್ಮ ತನುವು, ಕಾಣುವುದಿಲ್ಲ. ಆದರೆ ಕಾಣುವ ತನುವಿಗೆ ಮೋಸ ಮಾಡುವ ರಕ್ಕಸ. ತನುವಿನಲ್ಲಿ ಒಮ್ಮೆ ಹೋಗುತ್ತದೆ ಮತ್ತೊಮ್ಮೆ ಧುತ್ತೆಂದು ಬರುತ್ತದೆ. ತನುವಿನ ಬಾಡಿಗೆದಾರ. ಹೋಗಿ ಬರುವ ಇವನು ತನುವನ್ನು ದುರ್ಬಳಕೆ

ಮಾಡಿಕೊಳ್ಳುತ್ತಾನೆ. ಶರಣರು, ದಾಸರು, ಹೋಗಿ ಬರುವ ಸೂಕ್ಷ್ಮ ತನುವನ್ನು ಮನವೆಂದು, ಸೂಳೆ ಎಂದು ಕರೆದರು. ಹೀಗೆ ಸ್ಥೂಲ, ಸೂಕ್ಷ್ಮ ಕಾರಣ ತನುವೆಂದು ಕರೆಯಲ್ಪಟ್ಟಿದೆ.

ಈ ಮೂವರನೊಂದೆಡೆಗೆ ತಂದರೆ ಏನಹರೆಂಬುದ ನೋಡಿಕೊಳ್ಳಿರಣ್ಣಾ!:

ಸ್ಥೂಲ, ಸೂಕ್ಷ್ಮ, ಕಾರಣ ತನುವನ್ನು ಮೂರಾಗಿ ವಿಂಗಡಿಸಿದರೂ ನೋಡಲು ಒಂದೇ ಇದೆ. ತನುವಿನಲ್ಲಿ ತನ್ಮಯವಾದ ರೂಹಿಲ್ಲದ ಅರಿವೆಂಬ ಗುರುವಿನ ಪರಿಚಯ ಹೋಗಿ ಬರುವ ಮನಕ್ಕೆ ಇಲ್ಲ. ಈ ಮನ ಅರಿವೆಂಬ ಗುರುವಿನ ತನುವನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ. ತನಗೆ ರುಚಿ ಕಂಡಲ್ಲಿ ತನುವನ್ನು ಕರೆದೊಯ್ಯುತ್ತದೆ. ತಾನು ಸುಖಿಸುತ್ತದೆ ತನುವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತದೆ. ಅರಿವೆಂಬ ಗುರುವಿನ ಮಾತು ಹೋಗಿ ಬರುವ ಮನಕ್ಕೆ ಹಿಡಿಸುವುದಿಲ್ಲ. ಮನ ಮನದತ್ತ, ತನುವು ತನುವಿನತ್ತ, ಅರಿವೆಂಬ ಗುರುವು ಅತ್ತತ್ತವಾಗಿ ತನುವಿಗೆ ಮನಕ್ಕೆ ನಿಲುಕದಂತೆ ಒಂದು ತನುವನ್ನು ಮೂರು ಭಾಗಗಳಾಗಿ ಸೀಳಿದೆ.

ಹೋಗಿ ಬರುವ ಮನ ಕತ್ತಲು, ತನುವಿನಲ್ಲಿ ತನ್ಮಯವಾದ ರೂಹಿಲ್ಲದ ಅರಿವು ಬೆಳಕು. ಅರಿವು ಮತ್ತು ಹೋಗಿ ಬರುವ ಕತ್ತಲೆಂಬ ಮನ ಈ ಎರಡೂ ತನುವಿಗೆ ಮಾಧ್ಯಮಗಳು. ತನುವು, ಅರಿವಿನ ಮಾತು ಕೇಳುತ್ತದೆ. ಮನದ ಮಾತೂ ಕೇಳುತ್ತದೆ. ಅರಿವು, ಮೂರ್ತಿಯಲ್ಲಿ ಅಡಕವಾದ ಕಲ್ಲನ್ನು ಪರಿಚಯಿಸಿಕೊಂಡು ಪೂಜಿಸುವುದಿಲ್ಲ. ಹೋಗಿ ಬರುವ ಮನ ಕಲ್ಲಿನಿಂದಾದ ಮೂರ್ತಿಯನ್ನು ದೇವರೆಂದು ಪೂಜಿಸುತ್ತದೆ. ಮನ ರುಚಿಗೆ, ಅರಿವು ಪದಾರ್ಥಕ್ಕೆ ಪ್ರಾಧಾನ್ಯತೆ ಕೊಡುತ್ತದೆ. ಮನ ಸ್ಪರ್ಶ ಸುಖಕ್ಕೆ ಹಾತೊರೆದರೆ ಅರಿವು ಎಚ್ಚರಿಸುತ್ತದೆ. ಹೋಗಿ ಬರುವ ಮನ, ಕತ್ತಲಿನ ಕೆಲಸದಲ್ಲಿ ಭಾಗಿಯಾದರೆ, ಅರಿವು, ಬೆಳಕಿನ ಕೆಲಸದಲ್ಲಿ ಭಾಗಿಯಾಗುತ್ತದೆ. ಬೆಳಕಿದ್ದಲ್ಲಿ ಕತ್ತಲಿಲ್ಲ.

ಆದರೆ ತನುವಿನಲ್ಲಿ ಬೆಳಕು-ಕತ್ತಲು ಮನೆಮಾಡಿಕೊಂಡಿವೆ. ಮನಕ್ಕೆ ಬೆಳಕಿನ ಪರಿಚಯವಾದರೆ, ಬೆಳಕಿನಲ್ಲಿ ಲೀನವಾಗಿ ಬೆಳಕೇ ಆಗುತ್ತದೆ. ಆಗ ಹೋಗಿ ಬರುವ ಮನವೆಂಬ ಕತ್ತಲು ಬೆಳಕಿನಿಂದ ಹೊರಗೆ ಬರುವುದಿಲ್ಲ. ಬೆಳಕಿನೊಂದಿಗೆ ಕೂಡಿ ಬೆಳಕೇ ಆಗುತ್ತದೆ. ಬೆಳಕು ಬೆಳಕು ಕೂಡಿ ತನುವನ್ನು ಬೆಳಗುತ್ತವೆ. ಮೂರು ಒಂದೆಡೆಗೆ ಸೇರಿ ಬೆಳಕೇ ಆಗುತ್ತದೆ.

ಕಂಡಡೆ ಉಣಲಿಲ್ಲ:

ತನುವಿನ ಅರಿವಿಗೆ ಸತ್ಯಗೋಚರಿಸಿ ವಸ್ತುವಿನ ಮೂಲ ನೋಡಿ ಅಂದರೆ ಆಭರಣದಲ್ಲಿಯ ಹಳದಿ ಲೋಹ ಕಂಡು ಬಯಕೆ ಮಾಡಲಿಲ್ಲ.

ಕಾಣದಿರ್ದಡೆ ಉಣದಿರಲಿಲ್ಲ:

ಹೋಗಿ ಬರುವ ಮನಕ್ಕೆ ಆಭರಣ ಕಂಡು, ಬಯಕೆ ಮಾಡುತ್ತದೆ. ರೂಪ

ಕಾಣುತ್ತದೆ, ನಿರೂಪ ಕಾಣುವುದಿಲ್ಲ. ರೂಪದೊಂದಿಗೆ ಸಂಬಂಧ ಬೆಳೆಸುತ್ತದೆ.

ಇದೇನು ಸೋಜಿಗವಯ್ಯಾ ಸೌರಾಷ್ಟ್ರ ಸೋಮೇಶ್ವರಾ?:

ಒಂದು ತನುವಿನಲ್ಲಿ ಹೋಗಿ ಬರುವ ಮನವೂ ಇದೆ. ರೂಹಿಲ್ಲದ ಚೆಲುವನೂ ಇದ್ದಾನೆ. ಹೋಗಿ ಬರುವ ಮನಕ್ಕೆ ತನುವು ಸೆರೆಯಾಳಾದರೆ ಹುಚ್ಚನಾಗುತ್ತದೆ. ಕುಡಿಯದಿದ್ದರೂ ಕುಡಿದಂತೆ ಒದರುತ್ತದೆ. ಕಲ್ಲು ನೋಡಿ ದೇವರೆಂದು ಪ್ರದಕ್ಷಿಣೆ ಹಾಕುತ್ತದೆ. ತನ್ನಂತೆ ಇರುವ ತನುವಿಗೆಲ್ಲ ಗುರುವೆಂದು ಅಡ್ಡ ಬೀಳುತ್ತದೆ. ಪುಣ್ಯ ಕ್ಷೇತ್ರಕ್ಕೆ ಹೋಗಿ ಉತ್ಸವ ಆಚರಿಸುತ್ತದೆ. ಪಲ್ಲಕ್ಕಿ ಹೊರುತ್ತದೆ. ಇದು ಸೋಜಿಗವಲ್ಲವೇ?

ರೂಹಿಲ್ಲದ ಸಾವಿಲ್ಲದ, ಕೇಡಿಲ್ಲದ ಚೆಲುವನ ಪರಿಚಯ, ಹೋಗಿ ಬರುವ ಮನಕ್ಕೆ ಆದರೆ ಸಾಕು, ತನುವು ಸೌರಾಷ್ಟ್ರ ಸೋಮೇಶ್ವರನೇ ಆಗುತ್ತದೆ.

■

ಕುರುಹುಂಟೆ ಅರಿವಿಂಗೆ

ತಾನೆ ಶಿವನೆಂದು ಕುರುಹ ತೋರುವ ಹಾಗೆ
ಮರ್ತ್ಯದಲ್ಲಿ ಸುಳಿದನಲ್ಲದೆ, ಕುರುಹುಂಟೆ ಶಿವಂಗೆ?
ಮತ್ತೊಮ್ಮೆ ಅರಿವು ಮರಹುಂಟೆ? ಬಿಚ್ಚು ಬೇರಿಲ್ಲ,
ಬೆರಸಿ ಹೋದಲ್ಲದ ದ್ವಂದ್ವರಹಿತ
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ.

-ಆದಯ್ಯ ಶರಣ

ದೇಹ ಸೌಂದರ್ಯಮಯಿ ಶಿವೆಯಾದರೆ, ದೇಹದಲ್ಲಿ ಭರಿತವಾದ ಅರಿವೆ ಶಿವ.

ಜಲ ಪಾಕವಾಗಿ ಹೆಪ್ಪುಗಟ್ಟಿ, ಹಿಮಾಲಯದಂತೆ ಗಟ್ಟಿಗೊಂಡು ಶಿವನಿಗೆ ಪೀಠವಾದ ಈ ದೇಹ ಸೌಂದರ್ಯಮಯಿ ಶಿವೆಯಲ್ಲವೇ? ಅದಕ್ಕಾಗಿಯೇ ಶಂಕರಾಚಾರ್ಯರು ತಮ್ಮ **ಸೌಂದರ್ಯಲಹರಿ**ಯಲ್ಲಿ ಒಂದು ನೂರು ಶ್ಲೋಕಗಳಿಂದ ಶಿವೆಯೆಂಬ ತನುವನ್ನು ಕೊಂಡಾಡಿದ್ದಾರೆ. ಅಂತೆಯೇ ದೇಹದಲ್ಲಿ ಭರಿತನಾದ ಗಂಗಾಧರನನ್ನು ಕುರಿತು ಒಂದು ನೂರು ಶ್ಲೋಕಗಳಿಂದ **ಶಿವಾನಂದಲಹರಿ** ಯಲ್ಲಿ ಸ್ತುತಿಸಿದ್ದಾರೆ.

"ಹೇ ಮಹಾದೇವ, ಮುತ್ತಿನ ಚಿಪ್ಪಿನಲ್ಲಿ ಬೆಳ್ಳಿ ಎಂಬ ಬುದ್ಧಿ, ಗಾಜಿನಲ್ಲಿ ಮಣಿ ಎಂಬ ಬುದ್ಧಿ, ಹಿಟ್ಟು ಕಲಸಿರುವ ನೀರಿನಲ್ಲಿ ಹಾಲು ಎಂಬ ಬುದ್ಧಿ, ಬಿಸಿಲ್ಗುದುರೆಯಲ್ಲಿ ನೀರು ಎಂಬ ಬುದ್ಧಿ. ಇವು ಹೇಗೆ ಭ್ರಾಂತಿಯಿಂದ ಉಂಟಾಗುತ್ತವೆಯೋ ಹಾಗೆಯೇ, ಎಲೈ ಪಶುಪತಿಯೇ, ಜಡರಾದ ಜನ, ಈಶನಾದ ನಿನ್ನನ್ನು ಮನಸ್ಸಿನಲ್ಲಿ ನೆನೆಯದೆ ನಿನಗಿಂತ ಬೇರೆಯಾದ ವಸ್ತುವನ್ನು ದೇವರೆಂಬ ಭ್ರಾಂತಿಯಿಂದ ಭಜಿಸುತ್ತರಿವರು". *(8, ಶಿವಾನಂದ ಲಹರಿ.)*

ಉಪನಿಷತ್‌ಕಾರರು, ಆಚಾರ್ಯರು, ಶರಣರು, ಸಂತರು, ದಾಸರು, ತತ್ವಪದಕಾರರು ತನುವಿನಲ್ಲಿ ಭರಿತವಾದ ಅರಿವಿಗೆ ಶಿವನೆಂದು ಕರೆದು, ಅದನ್ನು ಅನುಭವದಿಂದ ಅನುಭವಿಸಿ ಹೇಳಿದರು. ಆದರೂ ಅರಿವು ಮರೆಯಾಗಿ, ಭ್ರಮೆಯಿಂದ ಶಿವನನ್ನು ಕುರುಹಿನಲ್ಲಿ ನೋಡುವುದು ನಿಲ್ಲಲಿಲ್ಲ. ಶಿವ ಕುರುಹಾಗಿ (ದೇಹ) ಸುಳಿಯುವುದೂ ನಿಲ್ಲಲಿಲ್ಲ. ಕುರುಹುಂಟೆ ಅರಿವು ತಾನೇ ಆದ ಶಿವಂಗೆ ಎಂದೂ ಪ್ರಶ್ನಿಸಿಕೊಳ್ಳಲಿಲ್ಲ.

ಶಿವ ತಾನೇ ಆದ ಕುರುಹಿಗೆ ಅರಿವು ಮರೆವುಂಟೆ? ಶಿವಮಯವಾದ ತನುವಿಗೆ

ಹೊರ ಅರಿವು ತುಂಬುವುದು ಸಾಧ್ಯವೇ? ತುಂಬುವುದು ನಿರಂತರ ನಡೆದಿರುವುದರಿಂದ ತನುವಿನಲ್ಲಿದ್ದ ಅರಿವು ಮರೆಯಾಗಿದೆ. ತುಂಬಿದ ಅರುವೆಲ್ಲ ಅಜ್ಞಾನವಲ್ಲದೆ ಬೇರಲ್ಲ.

ಯಾರೋ ಕಲ್ಲು ಕಟೆದು ಒಂದು ರೂಪ ಮಾಡಿ ಶಿವನೆಂದು ಹೆಸರಿಸಿದರೆ ಅದನ್ನೇ ಶಿವನೆಂದು ತಿಳಿದು ಪೂಜಿಸಿ ಪೂಜಿಸಿ ದಣಿದ ತನುವಿಗೆ ಒಮ್ಮೆಯೂ ಕಲ್ಲು ಒಡೆದು ಶಿವ ಪ್ರತ್ಯಕ್ಷವಾಗಲಿಲ್ಲ. ಇದು ಸಿನಿಮಾ ನಾಟಕದಲ್ಲಿ ಪುರಾಣ, ಕಥೆಗಳಲ್ಲಿ ಸಾಧ್ಯವಾಗಬಹುದು, ಸತ್ಯದಲ್ಲಲ್ಲ. ಮೋಸದ ಕತೆಗಳು ಕೆಲಸಕ್ಕಿಲ್ಲವೆಂದು ತನು ಜರಿಯಲಿಲ್ಲ. ಏಕೆಂದರೆ ಅದು ತನುವಿನಲ್ಲಿ ತುಂಬಿದ ಹೊರ ಅರಿವು. ಆ ಅರಿವೇ ಸತ್ಯವೆಂದು ತಿಳಿದು ಹೊರಗಣ ಮೂರ್ತಿಗೆ ಆರಾಧಿಸಿದರೆ ಹೊರತು, ಮೂರ್ತಿ ಭೇದಿಸಿ ಅಂತರಂಗದ ಅನು ಭಾವದಿಂದ , ಅರಿವಿನಿಂದ, ಕಲ್ಲು ನೋಡಲಿಲ್ಲ.

ಮೂರ್ತಿಯಲ್ಲಿ ದೇವರಿದ್ದಾನೆಂದು ನಂಬಿಸಿ ಹೇಳಿದ್ದು ಹೊರಗಿನ ಜ್ಞಾನ. ಇದು ದ್ವಂದ್ವ. ಮೂರ್ತಿಯೂ ಅಲ್ಲ, ದೇವರೂ ಅಲ್ಲ, ತನುವಿನ ನಿಜಜ್ಞಾನ ಇವೆರಡನ್ನೂ ಅಲ್ಲಗಳೆದು ಕಲ್ಲು ಎಂದು ಹೇಳುತ್ತದೆ. ಹೀಗೆ ದ್ವಂದ್ವ ರಹಿತ ಅರಿವಿನಿಂದ ನೋಡುವುದೇ ಶಿವ ಜ್ಞಾನ. ಇಂತಹ ಜ್ಞಾನ ತನುವಿನ ತುಂಬಾ ಭರಿತವಾಗಿದೆ. ಯಾರೂ ಈ ತನುವಿಗೆ ಗುರುವಾಗಬೇಕಿಲ್ಲ, ಪುಸ್ತಕಗಳು ಅರಿವಾಗಬೇಕಿಲ್ಲ, ಗುರುವನ್ನು, ಪುಸ್ತಕಗಳನ್ನು ತನುವಿನ ಅರಿವೇ ರೂಪಿಸಿದೆ.

ತನುವಿನಲ್ಲಿ ಏನನ್ನೂ ಬೆರೆಸದೆ, ಇದ್ದುದನ್ನು ಬಿಚ್ಚಿ , ಬೇರೆ ಏನೂ ಇಲ್ಲದಂತೆ ನೋಡಿದಡೆ, ನೋಡುವ ನೋಟವೆಲ್ಲಾ ದ್ವಂದ್ವರಹಿತ, ಕೇಳುವ ಶಬ್ದವೆಲ್ಲ ಬ್ರಹ್ಮ, ಮುಟ್ಟುವ ಸ್ಪರ್ಶವೆಲ್ಲಾ ಜ್ಞಾನ. ರುಚಿಸುವ ಪದಾರ್ಥವೆಲ್ಲ ಪ್ರಸಾದವೆಂದು ಹೇಳಿದ್ದಾರೆ ಆದಯ್ಯ ಶರಣರು.

■

ಬಯಲೆ ಬಯಲ ಬಿತ್ತಿ ಬಯಲಾದ ಬಗೆ

ಒಂದೇ ವಸ್ತು ತನ್ನ ಲೀಲೆಯಿಂದ
ಪರಮಾತ್ಮ ಜೀವಾತ್ಮನಾಯಿತ್ತು.
ಪರಮಾತ್ಮನೇ ಲಿಂಗ, ಜೀವಾತ್ಮನೇ ಅಂಗ,
ಸಂಗವೇ ಏಕಾತ್ಮ, ತತ್ ಪದವೇ ಪರಮಾತ್ಮ,
ತ್ವಂ ಪದವೇ ಜೀವಾತ್ಮ, ಅಸಿ ಪದವೇ
ತಾದಾತ್ಮ್ಯವಯ್ಯ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

- ಶರಣ ಉರಿಲಿಂಗ ಪೆದ್ದಿ

"ಬಯಲು ಬಯಲನೆ ಬಿತ್ತಿ, ಬಯಲು ಬಲಯನೆ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯ, ಬಯಲು ಜೀವನ, ಬಯಲು ಭಾವನೆ, ಬಯಲು ಬಯಲಾಗಿ ಬಯಲಾಯಿತ್ತಯ್ಯ, ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು. ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ " ಎಂದು ಪ್ರಭುಗಳು ಕೂಡಾ ಒಂದೇ ವಸ್ತು, ಆ ವಸ್ತುವಿನ ಲೀಲೆಯ ಬಗ್ಗೆ ಹೇಳಿದ್ದಾರೆ. ಅಮೂರ್ತನನ್ನೇ ಮೂರ್ತರೂಪದ ಬೆಳೆಗೆ ತಂದು ವೈಜ್ಞಾನಿಕವಾಗಿ ಅಮೂರ್ತಗೊಳಿಸಿದ್ದಾರೆ.

ಜಲ ಒಂದೇ ವಸ್ತು. ಆಮ್ಲಜನಕದ ಒಂದು ಕಣ ಜಲಜನಕದ ಎರಡು ಕಣಗಳು ಕೂಡಿ ಜಲವಾಯಿತು. ಆಮ್ಲಜನಕವೂ ಕಾಣುವುದಿಲ್ಲ ಜಲಜನಕವೂ ಕಾಣುವುದಿಲ್ಲ, ಬಯಲಿನ ಸಹಾಯದಿಂದ ಇವೆರಡೂ ಬೆರೆತು ಜಲವಾಯಿತು. ಜಲದ ಕಣ ಕಣದಲ್ಲಿಯೂ ಬಯಲು ಸೇರಿ ಬಯಲಿನ ವೇಗದಿಂದ ಗರ್ಭ ಸೇರಿತು. ಜಲ ಪಾಕವಾಗಿ ಗಟ್ಟಿಗೊಂಡು ಬಯಲಿನ ಲೀಲೆಯಿಂದ ರಕ್ತ, ಮೂಳೆ, ಮಾಂಸ, ಚರ್ಮ, ಮಜ್ಜಾ ಮೇದಸ್ಸು ಆಗಿ ಜೀವಾತ್ಮವಾಯಿತು.

ಈ ಜೀವಾತ್ಮದ ಕಣ ಕಣದಲ್ಲಿ ಬೆರೆತ ಬಯಲೇ ಅರಿವಾಯಿತು. ಪರಮಾತ್ಮನಾಯಿತು. ಅಂಗದಲಿ ಬೆರೆತು ಜೀವಾತ್ಮನಾಯಿತು.

ಅಂಗ ಜೀವಾತ್ಮವಾದರೆ, ಲಿಂಗ ಪರಮಾತ್ಮ. ಶರಣರು ವೈಜ್ಞಾನಿಕವಾಗಿ ಅಂಗ, ಅಂಗದ ಕಣ ಕಣದಲ್ಲಿ ಬೆರೆತ ಲಿಂಗವನ್ನು ತಿಳಿದರು. ಲಿಂಗಾಂಗ ಸಾಮರಸ್ಯದ ಕುರಿತು ಸರಳವಾಗಿ ಅರಿವಿಗೆ ಹೋಗುವ ವಿಧಾನವನ್ನು ವಚನಗಳಲ್ಲಿ ಸೆರೆಹಿಡಿದರು.

ಪ್ರಪಂಚದಲ್ಲಿ ಜೀವಿಸುವ ಯಾವ ಅಂಗಗಳಿಗೂ, ಅರಿವಿಗೂ ಭೇದವಿಲ್ಲ. ಆದರೂ ಜಾತಿ, ಮತ, ಪಂಥ, ಹೆಣ್ಣು-ಗಂಡು, ಶ್ರೀಮಂತ-ಬಡವ, ದಾನಿ-ಭಿಕ್ಷುಕ ಈ ಎಲ್ಲ ಅಜ್ಞಾನ ಸೃಷ್ಠಿಯಾಯಿತು.

ಜ್ಞಾನ ತನುವಿನಲ್ಲಿಯೇ ಇದೆ. ಅದನ್ನು ಪುಸ್ತಕದಲ್ಲಿ ಹುಡುಕುವ ವಿಧಾನ ಶುರುವಾಯಿತು. ತನುವಿನ ತತ್ ಪದವೇ ಜ್ಞಾನ. ತನುವಿನಲ್ಲಿರುವ ತತ್ವ ಜ್ಞಾನ ಬಿಟ್ಟು ಏನೂ ಹೇಳುವುದಿಲ್ಲ. ತ್ವಂ ಪದವೇ ತನುವು. ತನುವಿನಲ್ಲಿ ತತ್ವ ಇದ್ದುದಕ್ಕಾಗಿ ತನುವನ್ನು ಜೀವ ಕುಲಗಳಲ್ಲಿಯೇ ಶ್ರೇಷ್ಠ ಎಂದರು. 84 ಲಕ್ಷ ಜೀವ ರಾಶಿಗಳಲ್ಲಿ ಮನುಕುಲವೇ ಶ್ರೇಷ್ಠ ಎಂದು ದಾಸರು ಶರಣರು ಸಂತರು ಸಾರಿದರು.

ತನುವಿನಲ್ಲಿ ತತ್ವವಿದೆ. ಅದು ಸಹಜ ಜ್ಞಾನ. ತತ್ವ ನುಡಿಯದೆ, ತನುವಿಗೆ ಭೋದೆ ಮಾಡುತ್ತದೆ. ತತ್ವ ನುಡಿದಂತೆ ತನು ನಡೆದರೆ ಅದು ತತ್ವವುಳ್ಳ ತನು. ವ್ಯಕ್ತಿತ್ವವುಳ್ಳ ತನು. ತತ್ವವೇತ್ತ ತನು.

ಅಸಿ ಪದವೇ ತಾದಾತ್ಮ್ಯವಯ್ಯ ಎಂದಿದ್ದಾರೆ ಉರಿಲಿಂಗ ಪೆದ್ದಿಗಳು. ತನುವನ್ನು ತನುವಿನ ತತ್ವವನ್ನು ತಿಳಿಯುವ ಬಗೆಯೇ ಅಸಿ ಪದ. ಅಸಿ ಅಂದರೆ ತಿಳಿಯುವುದು.

ತನುವಿನ ತತ್ವ ತಿಳಿಯುವ ಸೂತ್ರಗಳೇ ಭಗವದ್ಗೀತೆ, ಬೈಬಲ್, ಉಪನಿಷತ್, ವಚನ, ತತ್ವ ಪದಗಳು ಮುಂತಾದ ಆಧ್ಯಾತ್ಮ ಗ್ರಂಥಗಳು.

ತನುವನ್ನು ತನುವಿನ ತತ್ವವನ್ನು ಮನದಿಂದಲೇ ತಿಳಿಯಬೇಕು. ಮನಕ್ಕೆ ಮಾತ್ರ ತಿಳಿಯಲು ಸಾಧ್ಯ. ಆದರೆ ಮನ ಹೊರಗೆ ನೋಡುತ್ತದೆ. ಪುಣ್ಯಕ್ಷೇತ್ರ ದೇವಸ್ಥಾನ, ಮಠ ಪೀಠಗಳು, ಪದವಿ, ಪುರಸ್ಕಾರ, ರಾಜಕೀಯ,ಅಧಿಕಾರ, ಪುಸ್ತಕ, ಪಾಂಡಿತ್ಯ, ಭೋದನೆ, ಜಾತಿ, ಮತ, ಪಂಥ, ಹೆಣ್ಣು-ಗಂಡು, ರೂಪ, ಕಾಮ, ವಿಷಯ ಭೋಗೋಪ ಭೋಗಗಳಲ್ಲಿ ಮನ ತೊಡಗಿದೆ. ತತ್ವ ತಿಳಿಯುವ ಮನವೇ ಕಳವು, ತುಡುಗು, ಹಾದರ, ಅಧಿಕಾರ, ಪೀಠದ ಸೋಗಿನ ಹೊರಗಿನ ಕ್ರಿಯೆಯಲ್ಲಿ ತೊಡಗಿ ತನುವನ್ನು ದುರ್ಬಳಕೆ ಮಾಡಿಕೊಂಡಿದೆ. ನೋಡಿದ ಜನ ಸರಕಾರ ತಪ್ಪು ತನುವಿನದೆಂದು ತನುವಿಗೆ ಶಿಕ್ಷಿಸಿದರೆ ಹೊರತು ಮನ ನೋಡಲಿಲ್ಲ. ಆದರೆ ತತ್ವಕ್ಕೇನು ಕುಂದಿಲ್ಲ. ತನುವಿನ ತತ್ವಕ್ಕೆ ದುಃಖವೂ ಇಲ್ಲ, ಬದಲಾಗಿ ಮನದಿಂದ ಬಳಲಿದ ತನುವಿನ ಮೈದಡವಿ ಎಚ್ಚರಿಸುತ್ತದೆ. ತಿಳಿಯುವ ಮನಕ್ಕೆ ತನುವಿನಾಳಕ್ಕೆ ಹೋಗುವ ಅರಿವಾದರೆ ಸಾಕು, ಮನ ತತ್ವವಾಗುತ್ತದೆ. ತತ್ವದ ದಾಸನಾಗುತ್ತದೆ, ತತ್ವಕ್ಕೆ ಶರಣು ಹೋಗುತ್ತದೆ.

ಪರಮಾತ್ಮನೆಂಬ ಅರಿವು, ಜೀವಾತ್ಮನೆಂಬ ಅಂಗ ಇವೆರಡನ್ನೂ ತಿಳಿಯುವ ಮನ ಒಂದೇ ವಸ್ತುವಾಗುತ್ತದೆ. ಪರಮಾತ್ಮನ ಲೀಲೆಯಿಂದ ಮೂರಾಯಿತು. ತಿಳಿಯುವ ಮನದಿಂದ ಒಂದೇ ಆಯಿತು.

■

ಸವಿಮಾತಿನ ಸರದಾರ

ಸಕಲ ಶೃತಿಗಳ ಮುಂದಿರ್ದವರ, ಸವಿಮಾತಿನ ವಶಕ್ಕತೀತವಾದ
ವಸ್ತುವ ಬೇಡಿಕೊಳ್ಳಿರೋ. ಸಕಲಾತ್ಮರ ಮುಂದಿರ್ದವರ,
ತರ್ಕಕ್ಕೆಯೂ ಲಿಂಗವಾಗಿ ಸಿಕ್ಕದ ಅತೀತವಾದ ವಸ್ತುವ
ಬೇಡಿಕೊಳ್ಳಿರೋ. ಇಂತು ಸಕಲಾತ್ಮರ ಹೊದ್ದದ
ನಿತ್ಯ ಸಿಂಹಾಸನದ ಮೇಲೆ ನಿತ್ಯವಾಗಿರ್ದ
ನಮ್ಮ ಉರಿಲಿಂಗದೇವನ ಬೇಡಿಕೊಳ್ಳಿರೋ.

–ಶರಣ ಉರಿಲಿಂಗ ಪೆದ್ದಿ

ವೇದ ಆಗಮ ಉಪ ನಿಷತ್‌ಗಳನ್ನು ಹೊರ ಹಾಕಿದವನು, ಶೃತಿ ಸ್ಮೃತಿ ಭಗವದ್ಗೀತೆಗಳ ಸವಿಮಾತಿಗೂ ಅತೀತನಾದವನು ತನುವಿನಲ್ಲಿಯೇ ಇದ್ದಾನೆ. ಬೇಡಿದರೆ ಅವನನ್ನೇ ಬೇಡಿ ಎಂದು ಉರಿಲಿಂಗ ಪೆದ್ದಿ ಶರಣರು ತಮ್ಮ ಸೂತ್ರದೊಂದಿಗೆ ಓದುಗರನ್ನು ಅಂತರಾಳಕ್ಕೆ ಕರೆದೊಯ್ಯುತ್ತಾರೆ.

ಸಕಲ ಶೃತಿಗಳ ಓದಿ ತರ್ಕ ಮಾಡಿ ಸಮಯ ಕಳೆಯುವ ತಾರ್ಕಿಕರಿಗೂ ಸಿಗದ ತನುವಿನೊಡೆಯನನ್ನು ಬೇಡಿಕೊಳ್ಳಿ.

ಸಕಲರ ತನುವನು ಹೊದ್ದು, ತನುವಿನ ಸಿಂಹಾಸನದಲಿ ನಿತ್ಯವಾಗಿರ್ದ ಉರಿ ಲಿಂಗ ದೇವನ ಬೇಡಿಕೊಳ್ಳಿರೋ. ಎಂದು ತನುವಿನೊಳಗೆ ಪ್ರವೇಶ ಮಾಡದೆ ಹೊರ ಸುಳಿಯುವ ಮನಕ್ಕೆ ಎಚ್ಚರದ ಮಾತು ಹೇಳಿದ್ದಾರೆ ಉರಿಲಿಂಗ ದೇವರು.

ವೇದ ಆಗಮ ಉಪ ನಿಷತ್ತುಗಳನ್ನು ಓದಿದರೆ ಓದಬೇಕೆನ್ನಿಸುತ್ತದೆ, ಕೇಳಿದರೆ ಕೇಳ ಬೇಕೆನ್ನಿಸುತ್ತದೆ. ಹೇಳಿದರೆ ಹೇಳ ಬೇಕೆನ್ನಿಸುತ್ತದೆ. ಆದರೆ ಓದುವ, ಓದಿದ್ದನ್ನು ಹೇಳುವ, ಹೇಳಿದ್ದನ್ನು ಕೇಳುವ ಈ ಮೂರೂ ರುಚಿಗಳು ಒಂದೇ ಅನ್ನಿಸುವುದಿಲ್ಲ.

ಓದುವವನು ಓದುವ ಪುಸ್ತಕ ದೊಡ್ಡದು ಮಾಡಿ ತಾನು ಸಣ್ಣವನಾದ. ಓದಿ ಹೇಳುವವನು ಕೂಡಾ ಪುಸ್ತಕವನ್ನೇ ದೊಡ್ಡದು ಮಾಡಿ, ಕೇಳುಗನನ್ನು ಸಣ್ಣವನಾಗಿ ಕಂಡ. ತಾನು ಮಾತ್ರ ಪುಸ್ತಕ ಓದಿ ಪಂಡಿತನಂತೆ ಮೆರೆದ. ಇನ್ನು ಕೇಳುಗ, ಹೇಳುವವ ನನ್ನು ಪುಸ್ತಕವನ್ನು, ದೊಡ್ಡದು ಮಾಡಿ ತಾನು ಸಣ್ಣವನಾದ.

ಓದುಗನಿಗೆ ಕೃತಿಗಳು ಸವಿಯಾದವು. ಕೇಳುಗನಿಗೆ ಓದಿ ಹೇಳುವವನ ಮಾತುಗಳು ಸವಿಯಾದವು.

ಸವಿ ಎನ್ನುವುದು ಪುಸ್ತಕದಲ್ಲಿದೆಯೋ ? ಓದುವ ಓದಿನಲ್ಲಿದೆಯೋ ? ಹೇಳುವ ಧ್ವನಿಯಲ್ಲಿದೆಯೋ ? ಕೇಳುವ ಕಿವಿಯಲ್ಲಿದೆಯೋ ಎಂಬುದು

ತಿಳಿಯಲಿಲ್ಲ.

ಸವಿ ಎನ್ನುವುದು ಜಡ ಪುಸ್ತಕದಲ್ಲಿ ಮರೆಯಾಗಿ , ಓದುಗನ ಓದು ಅಂತರಾಳಕ್ಕೆ ಇಳಿಯದೆ ಇನ್ನಷ್ಟು ಓದುವಂತೆ ಮಾಡಿತು.

ಸವಿ ಎನ್ನುವುದು ಹೇಳುವವನ ಹಿರಿತನದಲ್ಲಿ ಮರೆಯಾಗಿ, ಇನ್ನೂ ಹೇಳುವಂತೆ ಮಾಡಿತು.

ಸವಿ ಎನ್ನುವುದು ಕೇಳುವವನ ಅಂತರಾಳಕ್ಕೆ ಇಳಿಯದೇ ಹೇಳುವವನಲ್ಲಿ ಮರೆಯಾಗಿ ಇನ್ನೂ ಕೇಳುವಂತೆ ಮಾಡಿತು. ಸವಿ ಎನ್ನುವುದು ಹೊರಗೆ ಉಳಿಯಿತು.

ಶೃತಿಗಳನು ಓದಿ ತರ್ಕ ಮಾಡಿದ, ಹೇಳಿ ತರ್ಕ ಮಾಡಿದ, ಕೇಳಿ ತರ್ಕ ಮಾಡಿದನೇ ಹೊರತು ಓದಿದ ಓದುಗನಿಗೂ, ಹೇಳುವ ಉಪನ್ಯಾಸಕನಿಗೂ, ಕೇಳುವ ಶ್ರೋತೃಗಳಿಗೂ ಅತೀತನಾದ ತನುವಿನೊಡೆಯನ ಪರಿಚಯವಾಗಲಿಲ್ಲ. ಅರಿವೆಂಬ ಗುರುವಿನ ಪರಿಚಯವಾಗಲಿಲ್ಲ. ಮೂವರೂ ಸವಿ ಮಾತಿನಲ್ಲಿ ಭಾಗಿಯಾದರು. ಸಕಲ ಶೃತಿಗಳ ಹೊಗಳಿದರು. ಶೃತಿಗಳ ಉಗಮ ಸ್ಥಾನವನರಿಯಲಿಲ್ಲ. ತನುವನ್ನೇ ಪೀಠ ಮಾಡಿಕೊಂಡು ಸಕಲ ಶೃತಿಗಳನು ಬರೆದ ಪೀಠಾಧಿಪತಿಯನ್ನು ತಿಳಿಯಲಿಲ್ಲ. ಸವಿ ಮಾತಿಗೆ ಕಾರಣನಾದ ಸದಾ ಸವಿಯ ಪರಿಮಳವನ್ನೇ ಉಣಬಡಿಸುವ ತನುವಿನ ಹಿರಿಯನನ್ನು ಅರಿಯಲಿಲ್ಲ.

ತನುವಿನಿಂದ ಬಂದ ಸಕಲ ಶೃತಿಗಳೂ ಸವಿಯಾದರೂ ಓದುಗನನ್ನು, ಹೇಳುಗನನ್ನು, ಕೇಳುಗನನ್ನು ಭ್ರಮೆಗೊಳಪಡಿಸಿದವು. ಓದಿ, ಹೇಳಿ, ಕೇಳಿ ಭ್ರಮಿತನಾದ. ಸಕಲ ಶೃತಿಗಳಿಗೂ ಅದರ ಸವಿಗೂ ಕಾರಣನಾದ ತನುವಿನೊಡೆಯನ ತಿಳಿದವನು ಬ್ರಹ್ಮನಾದ. ಆಗ ಓದಲಿಲ್ಲ, ಹೇಳಲಿಲ್ಲ, ಕೇಳಲಿಲ್ಲದ ಉರಿಲಿಂಗದೇವನೇ ತಾನಾದ. ಸವಿ ಮಾತಿನ ಸರದಾರನಾದ !

■

ಮನವರಿಯದ ಜ್ಞಾನ

ಲಿಂಗವು ಸರ್ವಾಂಗದಲ್ಲಿ ಭರಿತವಾಗಿರಲು ಮನವರಿಯದು
ತನು ಸೋಂಕದು, ಜ್ಞಾನ ಕಾಣೆಸದು, ಭಾವ ಮುಟ್ಟದು
ಶಿವ ಶಿವಾ ವಿಶ್ವಾಸದಿಂದ ಗ್ರಹಿಸಿ ಹಿಡಿಯದು.
ಶಿವಶಿವಾ ಕೆಟ್ಟೆ ಕೆಟ್ಟೆ, ಅಂತರಂಗ ಬಹಿರಂಗ ಭರಿತವಾಗಿ
ಲಿಂಗವಿದ್ದಾನೆ. ಮನ ವಿಶ್ವಾಸದಿಂದ ಗ್ರಹಿಸಿದಡೆ,
ಸತ್ಯನಪ್ಪೆ ನಿತ್ಯನಪ್ಪೆ ಮುಕ್ತನಪ್ಪೆ
ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

-ಶರಣ ಉರಿಲಿಂಗ ಪೆದ್ದಿ

ಸೂಜಿಯ ಮೊನೆಯಿಡಲು ಸಂದಿಲ್ಲದಂತೆ ಸರ್ವಾಂಗದಲ್ಲಿ ಜ್ಞಾನವೇ ಭರಿತವಾಗಿದೆ. ಮನ ತಿಳಿಯುತ್ತಿಲ್ಲ. ತನುವಿಗೆ ಸೋಂಕುತ್ತಿಲ್ಲ. ಮನ ಮತ್ತು ತನುವಿಗೆ ಜ್ಞಾನ ಕಾಣಿಸುತ್ತಿಲ್ಲ. ಮನದಿಂದ ಸೃಷ್ಟಿಯಾದ ಭಾವ ಮುಟ್ಟಲರಿಯದು. ಶಿವಶಿವಾ ವಿಶ್ವಾಸದಿಂದ ಮನ-ತನು ಭಾವಗಳು ಗ್ರಹಿಸಿ ಜ್ಞಾನವನು ಹಿಡಿಯವಲ್ಲ.

ಶಿವಶಿವಾ ಕೆಟ್ಟೆ ಕೆಟ್ಟೆ, ಅಂತರಂಗ ಬಹಿರಂಗ ಭರಿತವಾಗಿ ಒಳ ಹೊರಗೆನ್ನದಂತೆ ಸರ್ವಾಂಗದಲ್ಲೂ (ಜ್ಞಾನ) ಲಿಂಗಯ್ಯನೇ ಭರಿತವಾಗಿದ್ದಾನೆ. ಮನ ವಿಶ್ವಾಸದಿಂದ ಗ್ರಹಿಸಿದಡೆ ಲಿಂಗದೇವನಪ್ಪೆ ಎಂದು ಉರಿಲಿಂಗ ಶರಣರು ಮನ- ತನು-ಭಾವ ಅಂತರ್ಮುಖಿಯಾಗಿ ದೃಢ ನಿಲುವು ತಳೆದು ಜ್ಞಾನ ತಿಳಿಯುವ ಸೂತ್ರ ಹೆಣೆದಿದ್ದಾರೆ.

ಜ್ಞಾನ ಸರ್ವಾಂಗದಲ್ಲಿ ಭರಿತವಾಗಿದೆ. ಆದರೂ ಮನ ಅರಿಯದು. ಮನ ಅರಿತರೆ ಸಾಕು ತನು ನಿಶ್ಚಿಂತ ! ತನುವಿನ ಸೋಂಕು ಭಾವಿಸುವ ಭಾವದ ಕೆಲಸಕ್ಕೆ ವಿರಾಮ. ಆದರೆ ಮನ ಈ ಸರಳವಾದ ವಿಧಾನವನ್ನು ಜಟಿಲ ಮಾಡಿಕೊಂಡಿದೆ.

ಜ್ಞಾನ-ಬೆಳಕು. ತನು ಪರದೆ. ಮನ ರೀಲು. ಸಿನಿಮಾ ಮಂದಿರ ಕತ್ತಲು ಮಾಡಿ ಬೆಳ್ಳಿ ಪರದೆ ಅಳವಡಿಸಿ ರೀಲು ಹಾಕಿ ಅದರ ಮೇಲೆ ಬೆಳಕು ಚೆಲ್ಲಿದಾಗ ಚಲನ ಚಿತ್ರವಾಗುತ್ತದೆ. ಪರದೆಯ ಮೇಲೆ ಯುದ್ಧಗಳಾಗುತ್ತವೆ. ರಕ್ತದ ಕಾಲುವೆ ಹರಿಯುತ್ತದೆ. ಬಾಂಬು,ಬಂದೂಕಿನ ಗುಂಡು ಸಿಡಿಯುತ್ತವೆ. ಖಡ್ಗಕಠಾರಿ, ಗುರಾಣಿಗಳಿಂದ ತಿವಿಯಲ್ಪಡುತ್ತದೆ. ಆದರೂ ಪರದೆಗೆ ತೂತು ಬೀಳಲಿಲ್ಲ. ರಕ್ತದ ಕಲೆ ಅಂಟಲಿಲ್ಲ. ರೀಲು ಮುಗಿದಾಗ ಬಿಳಿ ಪರದೆ ಮೊದಲಿನಂತೆಯೇ ಗೋಚರಿಸುತ್ತದೆ. ಆದರೆ ಬಿಳಿ ಪರದೆ,ರೀಲು, ರೀಲಿನ ಮೇಲೆ ಚೆಲ್ಲುವ ಬೆಳಕು ಯಾರ ಗಮನಕ್ಕೂ ಬರುವುದಿಲ್ಲ. ಬೆಳಕಿಗೂ, ಪರದೆಗೂ ಕಲೆಗಳಿಲ್ಲ. ಓಡುವ ರೀಲು ಬರೀ ಕತ್ತಲು. ಬೆಳಕು ಕಪ್ಪು

ರೀಲಿನ ಮೇಲೆ ಬಿದ್ದಾಗ ಬಿಳಿ ಪರದೆ ಕಾಣದೆ ಬರೀ ಚಿತ್ರ ಗೋಚರಿಸುತ್ತದೆ.

ಬೆಳಕು, ರೀಲಿನ ಕತ್ತಲು ಸೀಳಿ ತನ್ನ ಕಿರಣಗಳೊಂದಿಗೆ ಬಿಳಿ ಪರದೆಯ ಮೇಲೆ ಚೆಲ್ಲಿ ಕತ್ತಲು ಬೆಳಕು ಸೇರಿ ಚಿತ್ರವಾಯಿತು. ಬೆಳ್ಳನೆಯ ಬೆಳ್ಳಿ ಪರದೆ ಮರೆಯಾಗಿ ಬರೀ ಚಿತ್ರ ಗೋಚರಿಸಿತು. ಚಿತ್ರದ ಕತೆಯೇ ಮನೆ ಮಾತಾಯಿತು. ಜಗದ ಮಾತಾಯಿತು. ಚಿತ್ರಕ್ಕೆ ಕಾರಣವಾದ ಬೆಳಕು ಬೆಳ್ಳಿ ಪರದೆ ಹಾಗೇ ಉಳಿಯಿತು.

ಚಿತ್ರದಲ್ಲಿ ಎಷ್ಟೊಂದು ಪಾತ್ರಗಳು. ಅತ್ತೆ-ಸೊಸೆ ತಾಯಿ-ಮಗಳ ಪಾತ್ರ ಹೆಂಡತಿ-ಗಂಡನ ಪಾತ್ರ, ತಂದೆ-ಮಗ, ಮಾವ-ಅಳಿಯನ ಪಾತ್ರ ಅಧಿಕಾರಿ-ರಾಜಕಾರಣಿ, ಸ್ವಾಮಿ-ಗುರುವಿನ ಪಾತ್ರ ಹೀಗೆ ಒಂದೇ, ಎರಡೇ ಹಲವಾರು ಪಾತ್ರಗಳು. ತನುವು ಒಂದೇ, ಪಾತ್ರ ಅನೇಕ ! ಹೆಣ್ಣು ಗಂಡಿನ ಪಾತ್ರದ ತನುವೂ ಒಂದೇ . ಅದರ ಅರಿವೂ ಒಂದೇ. ಆದರೆ ಮನವೆಂಬ ಕತ್ತಲು ಅರಿವೆಂಬ ಬೆಳಕಿನೊಂದಿಗೆ ಬೆರೆತು ತನುವೆಂಬ ಬಿಳಿಪರದೆಯ ಮೇಲೆ ಬಿದ್ದಿದೆ. ಪರದೆ ಎಂಬ ತನು ಕಾಣುತ್ತಿಲ್ಲ. ಪಾತ್ರ ಕಾಣುತ್ತದೆ. ಪಾತ್ರ ದಿಟವಾಗಿ ಪಾತ್ರಕ್ಕೆ ಕಾರಣವಾದ ಬೆಳಕು ಮರೆಯಾಗಿದೆ.

ಮನ ಬೆಳಕಿನೆಡೆಗೆ ಹರಿದರೆ ಸಾಕು ಬೆಳಕಿನಲ್ಲಿ ಲೀನವಾಗಿ ಬೆಳಕೆ ಆಗುತ್ತದೆ. ಆಗ ಬೆಳಕೂ ಬೆಳಕೇ, ಪರದೆಯೂ ಬೆಳಕೇ.

ಚಿತ್ರಕ್ಕೆ ಅವಕಾಶವೇ ಇಲ್ಲ. ತನುವಿನಲ್ಲಿ ಎಷ್ಟೊಂದು ಚಿತ್ರಗಳು ಸಂಗ್ರಹವಾಗಿವೆ ? ಬಾಲ್ಯದಿಂದಲೂ ಮುಪ್ಪಿನವರೆಗೆ ಬರೀ ಚಿತ್ರಗಳೇ. ನಾನಾ ಪಾತ್ರದ ಚಿತ್ರಗಳು. ನೆನೆದರೆ ಸಾಕು ತನು ಕುದಿಯುತ್ತದೆ. ತನುವನ್ನು ತನುವು ಹಿರಿಯುತ್ತದೆ. ಹಿಂಡಿ ಹಿಪ್ಪೆ ಮಾಡುತ್ತದೆ. ಬರಿ ಸುಖ,ದುಃಖ ಮಾಡಿದೆನೆಂಬ ಬಿಂಕ, ವಯ್ಯಾರ ಒಂದೇ ಎರಡೇ ಹಲವಾರು !

ಮನವರಿತರೆ ಸಾಕು ಒಳ ಹೊರಗೂ ಜ್ಞಾನವೇ. ವಿಶ್ವಾಸದಿಂದ ಗ್ರಹಿಸಿದಡೆ ಸಾಕು. ಸದಾ ಸತ್ಯ ನಿತ್ಯ ಮುಕ್ತನೇ.

■

ತನುವಿನ ಜ್ಞಾನದ ವೈಜ್ಞಾನಿಕ ಸೂತ್ರ

ಸಾಕಾರವಿಡಿದು ಅರ್ಚನೆ ಪೂಜನೆಯ ಮಾಡುವರಲ್ಲದೆ,
ನಿರಾಕಾರವ ನಂಬಲಾಗದು. ಶ್ರೀ ಗುರುಲಿಂಗವು
ಪ್ರಾಣಲಿಂಗವನು ಕರಸ್ಥಲದಲ್ಲಿ ಬಿಜಯಂಗೈಸಿ
ಕರುಣಿಸಿದ ಬಳಿಕ, ವಜ್ರದಲ್ಲಿ ಬಯಲನರಸುವರೇ
ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

-ಶರಣ ಉರಿಲಿಂಗ ಪೆದ್ದಿ

ಪ್ರಾಣವನ್ನು, ಜ್ಞಾನವನ್ನು ತನುವಿನಲ್ಲಿ ಶ್ರೀಗುರು ಕರುಣಿಸಿದ ಬಳಿಕ ವಜ್ರದಲ್ಲಿ ಬಯಲನರಸುವರೇ ಎಂದು ಪ್ರಶ್ನಿಸಿ ಕಾಣುವ ತನುವನ್ನು ಕಂಡು ಕಾಣದ ವಜ್ರದಂತೆ ಬಯಲು ಮಾಡಿದ್ದಾರೆ. ಅರ್ಥವಿಲ್ಲದ ಅರ್ಚನೆಗೆ ಪೂಜೆಗೆ ಎಳ್ಳು ನೀರು ಬಿಟ್ಟಿದ್ದಾರೆ.

ದೇವರು ಸಾಕಾರವೆಂದು ಅರ್ಚಿಸಿ ಪೂಜಿಸುವ ಕ್ರಿಯೆ ನಿರಂತರ ನಡೆದಿದೆ.

ದೇವರು ನಿರಾಕಾರನೆಂದು ಧ್ಯಾನಿಸುವ, ಜಪಿಸುವ, ತಪಿಸುವ ಕ್ರಿಯೆಗೂ ಕಮ್ಮಿಯಿಲ್ಲ. ಅರ್ಥವಿಲ್ಲದ ಅನುಷ್ಠಾನ, ಯೋಗ ಕ್ರಿಯೆಗಳಿಗೂ ಕೊರತೆ ಯಿಲ್ಲ.

ಫಲ ಪಡೆಯುವುದಕ್ಕಾಗಿಯೇ ಪೂಜಿಸುವುದು, ಅರ್ಚಿಸುವುದು. ಧ್ಯಾನ, ಜಪ-ತಪ, ಅನುಷ್ಠಾನ, ಯೋಗ ಕ್ರಿಯೆಗಳಲ್ಲಿ ತನುವನ್ನು ತೊಡಗಿಸಿಕೊಳ್ಳುವುದು ಇದು ಸಹಜ.

ತನುವಿಗೆ ಸರಿಯಾದ ಶಿಕ್ಷಣ ಇಲ್ಲದ ನಿಮಿತ್ಯ ಅಲ್ಲದ ಕೆಲಸಗಳಲ್ಲಿ ತೊಡಗಿ ಸಂಕಟ ಪಡುವುದು.ಸಂಕಟ ನಿವಾರಣೆಗಾಗಿ ಪೂಜೆ,ಪುನಸ್ಕಾರ, ಧ್ಯಾನ, ಜಪ-ತಪ,ಯೋಗ, ಅನುಷ್ಠಾನಗಳಲ್ಲಿ ತೊಡಗಿಸಿಕೊಂಡು ಸಮಾಧಾನಿ ಯಾಗುವುದು.

ಸಂಕಟ ಪಡುವುದು ತಾನೇ. ನಿವಾರಣೆಗಾಗಿ ಸಮಾಧಾನ ಮಾರ್ಗ ಕಂಡುಕೊಳ್ಳುವುದು ತಾನೆ. ಇವೆರಡೂ ತನುವಿಗರಿಯದೇ ತನುವೇ ತೊಡಗಿಸಿ ಕೊಂಡ ಕ್ರಿಯೆಗಳು. ಹುಚ್ಚು ಕ್ರಿಯೆಗಳು.

ಪೂಜಿಸುವ ತನು ಪೂಜೆಗೊಳಪಟ್ಟ ವಸ್ತುವನ್ನು ಅರಿವಿನಿಂದ ನೋಡಲಿಲ್ಲ. ತಾನು ನಿರ್ಮಿಸಿದ ವಸ್ತುವನ್ನು ತಾನು ಪೂಜಿಸಬೇಕೇ ಎಂದು ಪ್ರಶ್ನಿಸಿಕೊಳ್ಳದೆ ಈ ಅರಿವು ಮರೆಯಾಗಿ, ಪೂಜಿಸಿದ ಪೂಜಿಸಿದ, ಅರ್ಥವಿಲ್ಲದೆ ಪೂಜಿಸಿದ.

ತನುವಿನಲ್ಲಿ ತನ್ಮಯವಾದ ಅರಿವಿಗೆ ಪೂಜೆ ಬೇಕಿಲ್ಲ. ಅಜ್ಞಾನ ಪೂಜೆ ನಿಲ್ಲಿಸುವುದಿಲ್ಲ. ಯಾರು ಏನೇ ಹೇಳಿದರೂ ಹೇಳಿದ್ದೆಲ್ಲವನ್ನೂ ತನುವಿನೊಂದಿಗೆ ಮಾಡುವ ಅಜ್ಞಾನ ತನುವನ್ನೇ ಸಂಕಟಕ್ಕೀಡು ಮಾಡಿ ಅರ್ಥವಿಲ್ಲದ ಕೆಲಸದಲ್ಲಿ ತೊಡಗಿ

ತನುವಿಗೆ ಕಳಂಕದ ಹಣೆಪಟ್ಟಿ ಹಚ್ಚುತ್ತದೆ.

ನಿರಾಕಾರವಾದರೆ ಪೂಜಿಸಲಿಲ್ಲ, ನಂಬಲಿಲ್ಲ. ತನುವು ಸಾಕಾರವಾದರೂ ಜ್ಞಾನದಿಂದ ಒಳ ಹೊರಗೂ ವಜ್ರದಂತೆ ಹೊಳೆಯುತ್ತಲಿದೆ. ವಜ್ರ ಕಣ್ಣಿಗೆ ಕಂಡರೂ ಒಳಹೊರಗೂ ಬಯಲೇ ಕಾಣುತ್ತದೆ.

ತಂದೆಯ ಗರ್ಭದ ಜಲಬಿಂದು ತಾಯಿಗರ್ಭ ಸೇರಿ ಪಾಕವಾಗಿ ಗಟ್ಟಿಗೊಂಡು ತನುವಾಗಿದೆ. ಜಲ ಕಂಡರೂ ಜಲಕ್ಕೆ ರೂಪವಿಲ್ಲ. ಒಳ ಹೊರಗೂ ವಜ್ರದಂತೆ ಹೊಳೆಯುತ್ತದೆ. ಕಾಣುವ ಜಲಬಿಂದು, ಕಾಣದ ಜಲಜನಕ+ ಆಮ್ಲಜನಕ+ಬಯಲಿನ ಸಹಾಯದಿಂದ ಜಲವಾಗಿ ಕಂಡಿದೆ. ಬಯಲಿನ ಸಹಾಯದಿಂದ ತನುಸೇರಿ ತನುವಾಗಿ ಬಂದಿದೆ. ತನುವಿನಲ್ಲೂ ಪ್ರಾಣದಲ್ಲೂ ಬಯಲು ತನ್ಮಯವಾಗಿದೆ.

ಆ ಬಯಲು ಬಯಲನೇ ಬಿತ್ತಿದೆ. ಬಯಲನೇ ಬೆಳೆದಿದೆ. ತನುವು ಬಯಲಿನ ಬೆಳೆ ! ಸಾಕಾರವಿಡಿದು ಪೂಜಿಸಬಹುದು, ಅರ್ಚಿಸಬಹುದು. ನಿರಾಕಾರವನ್ನು ಪೂಜಿಸಲಾಗದು, ಅರ್ಚಿಸಲಾಗದು. ನಂಬಲಾಗದು. ತನು ಸಾಕಾರವಾದರೂ ನಿರಾಕಾರವಲ್ಲವೇ? ಈ ಕಾಣುವ ತನುವಿನಲ್ಲಿ ಕಾಣಬಾರದ ಜ್ಞಾನ ಗುರುವಾಗಿ ಪ್ರಾಣವಾಗಿ ಭರಿತವಾಗಿದ್ದಾನೆ.

ಪೂಜಿಸುವ, ಅರ್ಚಿಸುವ ಮೂರ್ತಿಯ ಮೂಲ ನೋಡುವ ಶಕ್ತಿ ತನುವಿನ ಜ್ಞಾನದಲ್ಲಿಯೇ ಇದೆ. ಮೂರ್ತಿಯ ಮೂಲ ನೋಡಲು ಹೋದರೆ ಅದು ಕಲ್ಲು. ಕಲ್ಲನ್ನು ತಾನೇ ಕಟೆದು ಮೂರ್ತಿ ಮಾಡಿದ, ಅಜ್ಞಾನ ದಿಂದ ದೇವರೆಂದು ತಿಳಿದು ಪೂಜಿಸಿದ, ಅರ್ಚಿಸಿದ. ಜ್ಞಾನದಿಂದ ಮೂರ್ತಿಯನ್ನು ನೋಡಿದ ಕಲ್ಲೆಂದು ತಿಳಿದ,ಆಗ ಆ ಕಲ್ಲನ್ನು ಪೂಜಿಸಲಿಲ್ಲ ,ಅರ್ಚಿಸಲಿಲ್ಲ. ದೇವರೆಂದು ನಂಬಲಿಲ್ಲ.

ಹೀಗೆ ಸಕಲ ತನುಗಳೂ ವಜ್ರದಂತೆ ಜ್ಞಾನದಿಂದ ಥಳಥಳನೆ ಹೊಳೆ ಯುತ್ತಲಿವೆ. ಇದು ಉರಿಲಿಂಗ ದೇವರ ಸೂತ್ರ. ತನುವಿನ ಜ್ಞಾನದ ವೈಜ್ಞಾನಿಕ ಸೂತ್ರ !

ತನುವಿನ ಐದು ಜ್ಞಾನ ಮುಖಗಳು

ಪಂಚ ಭೂತವಂಗವಾಗಿಪ್ಪಾತಂಗೆ ಪಂಚೇಂದ್ರಿಯಂಗಳೇ
ಮುಖಗಳು, ಕರಣಂಗಳೇ ಕೈಗಳು, ಪಂಚ ವಿಷಯವು ಪೂಜೆ,
ಪಂಚ ಪದಾರ್ಥವೇ ಭೋಗ, ಇವನೆಲ್ಲವ ತನ್ನ
ನಿಜ ಮೂರ್ತಿಯಪ್ಪ ಘನಕ್ಕೆಯಿಡಸಬಲ್ಲಡೆ
ಆತ ಸರ್ವ ನಿರ್ವಾಣಿ, ಸಕಲ ನಿಃಕಲಾತ್ಮಕನು
ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

-ಶರಣ ಉರಿಲಿಂಗ ಪೆದ್ದಿ

ಪಂಚಭೂತಗಳುಳ್ಳ ಒಂದಂಗಕ್ಕೆ ಐದು ಜ್ಞಾನ ಮುಖಗಳಿವೆ. ಜ್ಞಾನವೇ ಅವುಗಳ ಕಾಯಕ. ಒಂದೊಂದು ಮುಖದಲ್ಲೂ ಬ್ರಹ್ಮಾಂಡವೇ ಅಢಗಿದೆ. ದಿವ್ಯಶಕ್ತಿ ಅಡಗಿದೆ. ಆ ಶಕ್ತಿ ಬಳಕೆಯಾದರೆ ಪೂಜೆ. ಬಳಕೆಯಾಗದಿದ್ದರೆ ಭೋಗಕ್ಕೆ ದಾರಿ. ದುಃಖಕ್ಕೆ ದಾರಿ.

ಕಣ್ಣು ತನುವಿನ ಒಂದು ಜ್ಞಾನ ಮುಖ. ಕಣ್ಣಿನಲ್ಲಿ ಶಕ್ತಿಯಿದೆ. ಬೆಳಕಿದೆ. ಬೆಳಕಿನಿಂದ ಇತರ ವಸ್ತುಗಳನ್ನು ನೋಡುತ್ತದೆ. ನೋಡಲ್ಪಡುವ ವಸ್ತುವಿಗಿಂತ ಕಣ್ಣಿನ ಬೆಳಕು ದೊಡ್ಡದು. ಕಣ್ಣಿನಲ್ಲಿರುವ ಬೆಳಕು ತನುವಿನ ಸಂಪತ್ತು. ನೋಡುವ ನೋಟ ತಪ್ಪಿದರೆ ಕಣ್ಣಿದ್ದೂ ಉಪಯೋಗವಿಲ್ಲ.

ವಸ್ತುವನ್ನೇ ದೊಡ್ಡದು ಮಾಡಿ ನೋಡುವ ಭ್ರಮೆ ಗಮನಕ್ಕೆ ಬಾರದಿದ್ದರೆ ತನುವಿನ ಒಂದು ಮುಖ ಊನವಾದಂತೆ.

ನೋಡುವ ಕಣ್ಣಿಗೆ ಭ್ರಮೆ ಆವರಿಸಿದರೆ ವಸ್ತು ದೊಡ್ಡದಾಗಿ ಕಂಡು ಭ್ರಮೆ ತನುವನ್ನೇ ದಾರಿತಪ್ಪಿಸುತ್ತದೆ. ತನುವಿನ ಉಳಿದ ನಾಲ್ಕು ಜ್ಞಾನ ಮುಖಗಳೂ ದಾರಿತಪ್ಪಿ ಕಣ್ಣಿನ ಅಜ್ಞಾನಕ್ಕೆ ಬಲಿಯಾಗುತ್ತವೆ. ಕಣ್ಣಿಗಂಟಿದ ಭ್ರಮೆಯಿಂದ ಪದಾರ್ಥದ ಮೂಲ ಕಾಣದೆ ಪದಾರ್ಥ ಕಂಡು ಭೋಗಕ್ಕೆ ಕಾರಣವಾಗುತ್ತದೆ.

ತನು ಎಂಬುದು ಒಂದು ಪದಾರ್ಥ. ತನುವಿನ ಮೂಲ ಜಲ. ಜಲ ಪಾಕವಾಗಿ ರಕ್ತ, ಮೂಳೆ, ಮಾಂಸ, ಮಜ್ಜಾ, ಮೇದಸ್ಸು, ಚರ್ಮದಿಂದ ತನುವಾಗಿದೆ. ತನುವಿನ ಕಣ ಕಣದಲ್ಲಿ ಜ್ಞಾನವೇ ಇದೆ. ಹೀಗೆ ತನುವಿನ ಮೂಲ ಜಲ ಮತ್ತು ಜ್ಞಾನ. ಕಣ್ಣಿನ ಬೆಳಕಿಗೆ ತನುವಿನ ಮೂಲವಾದ ಜಲ ಮತ್ತು ಜ್ಞಾನ ಕಂಡುಬಂದರೆ, ಕಣ್ಣಿನ ಭ್ರಮೆಗೆ ನುಣುಪಾದ ಚರ್ಮ, ಅವಯವಗಳು ಕಂಡು ಬರುತ್ತವೆ. ಆಗ ವಿಷಯಾಸಕ್ತನಾಗುತ್ತಾನೆ. ಕಣ್ಣಿನ ಜೊತೆಗೆ ತನುವಿನ ನಾಲ್ಕು ಜ್ಞಾನೇಂದ್ರಿಯಗಳಿಗೂ ಸೋಲುಂಟಾಗಿ, ತನುವು ಪದಾರ್ಥದ ಭೋಗಕ್ಕೆ ಳೆಸುತ್ತದೆ. ಕಣ್ಣಿನಲ್ಲುಂಟಾದ ಭ್ರಮೆಯ ತಪ್ಪಿಗಾಗಿ ಇಡೀ

ತನು ಭೋಗದಲ್ಲಿ ತನ್ಮಯವಾಗಿ ಅಪರಾಧಕ್ಕೆ ಗುರಿಯಾಗುತ್ತದೆ.

ಅರಿವಿನ ಕಣ್ಣು ವಸ್ತುವಿನ ಮೂಲ ನೋಡಿ ಭೋಗಿಸಲಿಲ್ಲ. ಭ್ರಮೆಯ ಕಣ್ಣು ವಸ್ತು ನೋಡಿ ಭೋಗಕ್ಕೊಳಗಾಯಿತು. ಕಾಣುವ ಕಣ್ಣಿನಲ್ಲಿ ಅರಿವೂ ಇದೆ. ಮರೆವೂ ಇದೆ.

ತನುವಿನ ಪಂಚೇಂದ್ರಿಯಗಳಲ್ಲಿ ಅರಿವು ಹೇಗೆ ಮಿಳಿತವಾಗಿದೆಯೆಂಬು ದನ್ನು ಜ್ಞಾನದಿಂದಲೇ ತಿಳಿಯಬೇಕು. ಭೋಗಕ್ಕೆ ಕಾರಣವಾದ ಭ್ರಮೆಯ ಪೊರೆ ತನುವಿನಲ್ಲಿ ಹೇಗೆ ಆವರಿಸಿದೆಯೆಂಬುದನ್ನು ಜ್ಞಾನದಿಂದಲೇ ತಿಳಿಯಬೇಕು. ತಿಳಿದು ಅರಿವಿನ ಪ್ರಯೋಗಕ್ಕೆ ಸಿದ್ಧನಾಗಬೇಕು.

ಈ ಎಲ್ಲವನ್ನು ಜಪ, ತಪ, ಧ್ಯಾನ, ಯೋಗ ಅನುಷ್ಠಾನದಿಂದ ಮಾಡಲು ಸಾಧ್ಯವೇ ಹೇಗೆ ಎಂಬುದನ್ನು ಕೂಡಾ ಅರಿವಿನಿಂದ ತಿಳಿದು ನಿರ್ಧರಿಸಬೇಕಾಗಿದೆ.

ಹೇಳುವುದರಲ್ಲಿ, ಕೇಳುವುದರಲ್ಲಿ ಆಚರಿಸುವುದರಲ್ಲಿ ಅಜ್ಞಾನವೇ ಇದೆ. ತಿಳಿದು ಪ್ರಯೋಗಿಸಿಕೊಂಡು ನಡೆಯುವಲ್ಲಿ ಸುಖವಿದೆ.

ಊರಿಗೆ ದಾರಿ ತೋರುವ ದಿಕ್ಸೂಚಿಯನ್ನು ಯಾರೂ ಪೂಜಿಸುವುದಿಲ್ಲ ಹೊಗಳುವುದಿಲ್ಲ. ಆದರೆ ಅರಿವಿನ ದಾರಿ ತೋರುವ ವ್ಯವಹಾರಿಕನನ್ನು ಪುಸ್ತಕವನ್ನು ನಂಬುತ್ತೇವೆ, ಪೂಜಿಸುತ್ತೇವೆ, ಗೌರವಿಸುತ್ತೇವೆ. ನಡೆಯದೆ ಮೋಸ ಹೋಗುತ್ತೇವೆ. ದಿಕ್ಸೂಚಿ ದಾರಿ ತೋರಿದರೆ ನಡೆದು ಊರು ಸೇರುತ್ತೇವೆ. ಪೂಜಿಸಲಿಲ್ಲ, ಗೌರವಿಸಲಿಲ್ಲ, ಅಂತೆಯೇ ಅರಿವಿನ ದಾರಿ ತೋರುವ ವ್ಯಕ್ತಿ ಮತ್ತು ಪುಸ್ತಕ ದಿಕ್ಸೂಚಿಯಿದ್ದಂತೆ. ದಾರಿ ತಿಳಿದು ತನುವಿನಲ್ಲಿ ಪ್ರಯೋಗಕ್ಕೆ ಸಿದ್ಧವಾಗಬೇಕು.

ಸತ್ಯ, ಪ್ರೀತಿ, ದಯೆ, ಕರುಣೆ, ಅಂತಃಕರಣ ಹೊರಗಡೆಯಿಂದ ಕಡ ಪಡೆದು, ತನುವಿನಲ್ಲಿ ಅಳವಡಿಸಿಕೊಳ್ಳಬೇಕಿಲ್ಲ. ಪುಸ್ತಕ, ಪುಣ್ಯ ಪುರುಷರಿಂದ ಎರವಲು ಪಡೆಯಬೇಕಿಲ್ಲ. ತನುವಿನ ಪಂಚ ಮುಖಗಳಲ್ಲಿ ಅರಿವು ತನ್ಮಯವಾಗಿದೆ. ಅರಿವಿನಿಂದ ನೋಡುವುದು, ಕೇಳುವುದು, ಸ್ಪರ್ಶಿಸಿ ವಾಸಿಸುವುದು, ರುಚಿಸುವುದು, ತಿಳಿದರೆ ಸಾಕು ಭ್ರಮೆಯ ಪೊರೆ ಕಳಚಿ ನಿರ್ವಾಣಿಯಾಗುತ್ತಾನೆ. ಸಕಲ ನಿಃಕಲಾತ್ಮಕನಾಗುತ್ತಾನೆ. ಉರಿಲಿಂಗದೇವರು ತಾನೇ ಆಗುತ್ತಾನೆ.

■

ತನುವು ಪರುಷದ ಮನೆ

ಪರುಷದ ಗೃಹದೊಳಗಿರ್ದು ತಿರಿವನೆ ಮನೆ ಮನೆಯ ?
ತೊರೆಯೊಳಗಿದ್ದವನು ತೃಷೆಯಾಗಲು ಅರಸುವನೆ
ಕೆರೆಯುದಕವ ? ಮಂಗಳಲಿಂಗ ಅಂಗದ ಮೇಲೆ ಇದ್ದು
ಅನ್ಯ ಲಿಂಗಗಳ ನೆನೆವನೆ ನಿಮ್ಮ ಭಕ್ತನು ?
ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ

-ಶರಣ ಉರಿಲಿಂಗ ಪೆದ್ದಿ

ತನುವೆಂಬುದು ಕಾಮಧೇನು. ಪರುಷದ ಮನೆ! ಈ ಮನೆಯಲ್ಲಿ ಸಕಲ ಸಂಪತ್ತಿದೆ. ಸಕಲ ಸಂಪತ್ತುಗಳು ಸೃಷ್ಟಿಯಾದದ್ದು ಪರುಷದ ತನುವೆಂಬ ಮನೆಯಿಂದಲೇ !

ಮುತ್ತು,ರತ್ನ ,ಚಿನ್ನ, ಬೆಳ್ಳಿ ,ವಜ್ರ ಹೊರ ಬಂದದ್ದು ಈ ಪರುಷದ ಮನೆಯಿಂದಲೇ. ತನುವಿನಿಂದ ಸೃಷ್ಟಿಗೊಂಡು ಹೆಸರಿಸಿದ ಪದಾರ್ಥಗಳೆಲ್ಲಾ ತನುವಿನವಲ್ಲವೇ ? ಭೂಮಿ ಅಗೆದು ಕಲ್ಲು , ಮಣ್ಣು ಲೋಹವೆಂದು ಹೆಸರಿಸಿದ. ವಿರಳವಾಗಿ ದೊರೆತ ಲೋಹಕ್ಕೆ ಚಿನ್ನ, ಪ್ಲಾಟಿನಂ ಎಂದ. ಹೇರಳವಾಗಿ ದೊರೆತ ಲೋಹಕ್ಕೆ ಕಬ್ಬಿಣ,ಉಕ್ಕು, ಅಲ್ಯುಮಿನಿಯಂ, ಕಂಚು, ತಾಮ್ರವೆಂದು ಹೆಸರಿಸಿದ.

ತನುವಿನ ಅರಿವಿನಿಂದ ಸೃಷ್ಟಿಯಾದ ಲೋಹಕ್ಕೆ ತನುವಿನ ತಿರುಕನೇ ಸೆರೆಯಾಳಾದ. ತಿರುಕನಿಗೆ ಒಂದು ಮನೆಯ ಊಟ ಸರಿ ಹೋಗುವುದಿಲ್ಲ. ಮನೆ ಮನೆ ತಿರಿದು ತಿರಿದು ತಿನ್ನುವುದೇ ಅವನ ಕಾಯಕ. ಪರುಷದ ಮನೆಯೊಳಗೆ ಹೆಗ್ಗಣ ಹೊಕ್ಕಂತೆ. ಅಜ್ಞಾನವೆಂಬ ಭ್ರಮೆ ಪರುಷದ ತನುವೆಂಬ ಮನೆಯನ್ನು ಹೊಕ್ಕಿತು.

ತನುವೆಂಬ ಪರುಷದ ಮನೆಗೆ ಐದು ಮಹಾಜ್ಞಾನದ ಬಾಗಿಲುಗಳು. ಕಣ್ಣು ದ್ವಾರ ಬಾಗಿಲು ! ಕಣ್ಣಿನಿಂದಲೇ ಸಕಲ ಪದಾರ್ಥಗಳು ಗುರುತಿಸಲ್ಪಟ್ಟವು ಭೂಮಿ ಅಗೆದು ತೆಗೆದ ಹಳದಿ ಲೋಹ ಆಭರಣವಾಯಿತು. ವಿರಳವಾಗಿ ದೊರೆಯುವ ಚಿನ್ನ ಆಹಾರದ ವಿನಿಮಯಕ್ಕಾಗಿ ಬಳಕೆಯಾಯಿತು. ಈ ಎಲ್ಲ ಸೃಷ್ಟಿ ತನುವಿನಿಂದಲೇ. ತನುವಿನ ಕಣ್ಣಿನಿಂದಲೇ.

ತನುವಿನ ಮಹಾ ದ್ವಾರವೆಂಬ ಕಣ್ಣಿನಲ್ಲಿ ಭ್ರಮೆಯೆಂಬ ತಿರುಕ ಹೊಕ್ಕ. ಒಂದೊಂದು ಲೋಹಕ್ಕೂ ಒಂದೊಂದು ಹೆಸರಿಟ್ಟು ಆ ಹೆಸರಿನಲ್ಲಿ ಮೋಹ ಹುಟ್ಟಿಸಿದ. ಹಳದಿ ಲೋಹ ಚಿನ್ನವಾಯಿತು. ಚಿನ್ನದ ಆಭರಣಗಳಿಗೆಲ್ಲಾ ಒಂದೊಂದು ಮೋಹದ

ಹೆಸರು ನಾಮಕರಣವಾಯಿತು.

ತನುವಿನಿಂದ ಸೃಷ್ಟಿಯಾದ ಲೋಹಕ್ಕೆ ತನುವೇ ಸೆರೆಯಾಯಿತು.ಅರಿಯದೇ ಸಂಗ್ರಹಿಸಿತು. ಅರಿಯದೇ ಆನಂದಿಸಿತು. ಸಂಗ್ರಹದ ಸಂಭ್ರಮದಲ್ಲಿ ತನುವ ಮರೆಯಿತು. ತನುವೇ ಸೃಷ್ಟಿಸಿದ ಆಭರಣ ಅಜ್ಞಾನದಿಂದ ತನುವಿನ ಮೇಲೆಯೇ ಹೇರಿಕೊಂಡಿತು. ಅಂಗದ ಒಂದೊಂದು ಅವಯವಕ್ಕೆ ಒಂದೊಂದು ಆಭರಣ !

ಪರುಷದ ಮನೆಯ ಜ್ಞಾನದ ಬಾಗಿಲು ಭ್ರಮೆಯಿಂದ ಮುಚ್ಚಲ್ಪಟ್ಟಿತು. ಕಣ್ಣಿನಿಂದ ಸೃಷ್ಟಿಸಲ್ಪಟ್ಟ ಪದಾರ್ಥಗಳೆಲ್ಲ ಕಣ್ಣಿನ ಅಜ್ಞಾನಕ್ಕೆ ಸುಖ ನೀಡಿದವು. ಕಣ್ಣಿನ ಜ್ಞಾನ ಒಳಗೇ ಉಳಿಯಿತು. ಅಜ್ಞಾದ ಶಕೆ ಆರಂಭವಾಯಿತು !

ಅರಿವಿನ ಅಂದದ ಮನೆಯ ಮೇಲೆ ಅಜ್ಞಾನದ ಆಭರಣಗಳು ವಿರಾಜಿಸಿದವು. ಆಭರಣಗಳದ್ದೇ ಸಾಮ್ರಾಜ್ಯ ! ಕಣ್ಣಿನ ಅಜ್ಞಾನ ಆಭರಣ ನೋಡಿತು. ಆಭರಣಕ್ಕೆ ಮಾರು ಹೋಯಿತು. ಅರಿವಿನ ತನುವನ್ನು ಕೊಂದು ಆಭರಣ ದೋಚಿತು. ಕಣ್ಣಿನ ಅಜ್ಞಾನ ತನ್ನಂತೇ ಇರುವ ತನುವನ್ನು ನೋಡಲಿಲ್ಲ. ತನುವಿನಿಂದ ಸೃಷ್ಟಿಯಾದ ಲೋಹವನ್ನೂ ನೋಡಲಿಲ್ಲ.ಆಭರಣ ನೋಡಿತು. ತನ್ನಂತೆ ಇರುವ ಇತರ ತನುವನ್ನು ಹಿರಿಯುವಂತೆ ತನ್ನ ತನುವಿಗೇ ಆದೇಶ ನೀಡಿತು. ಹೇಗಿದೆ ತನುವಿನ ತಿರುಕನ ಮಹಿಮೆ !

ಅರಿವಿನ ಮನೆಯೊಳಗೆ ಬಂದ ತಿರಿದುಣ್ಣುವ ತಿರುಕನೇ ಪ್ರಧಾನವಾದ. ಅಮೃತದ ಜಲದೊಳಗಿದ್ದೂ ಅಜ್ಞಾನದ ಕೆರೆಯುದಕವ ಬೇಡಿದ. ತಾನೇ ಜ್ಞಾನಿಯಾಗಿ, ಜ್ಞಾನಕ್ಕಾಗಿ ಮನೆ ಮಠ ಮಂದಿರ ತಿರುಗಿದ . ಮಂಗಳ ಲಿಂಗ ಅಂಗದಲ್ಲಿದ್ದೂ ಹನ್ನೆರಡು ಜ್ಯೋತಿರ್ಲಿಂಗಗಳ ನೆನೆದ. ತಿರಿದುಣ್ಣುವ ಮನವೆಂಬ ತಿರುಕನಿಗೆ ಪರುಷದ ಮನೆಯ ದರ್ಶನ ವಾಗಲೇಬೇಕು. ಪುನಃ ಆ ತಿರುಕನಿಗೆ ಅರಿವಿನ ಮನೆಯ ದರ್ಶನವನ್ನು ಮಾಡಿಸಿದ್ದಾರೆ ಉರಿಲಿಂಗ ದೇವರು.

■

ಸತ್ ಚಿತ್ ಆನಂದ

ಸತ್ತು ರೂಪು ಲಿಂಗ, ಚಿತ್ತು ರೂಪು ಜಂಗಮ,
ಆನಂದ ರೂಪು ಪ್ರಸಾದ. ಇಂತೀ ತ್ರಿವಿಧದರಿವನು
ಶ್ರೀಗುರು ಇಷ್ಟಲಿಂಗದಲ್ಲಿ ತೋರಿ ಬಿಜಯಂಗೈಸಿ ಕೊಟ್ಟ ಬಳಿಕ,
ಸತ್ತು ಚಿತ್ತು ಆನಂದವೆಂಬ ಬಟ್ಟಬಯಲ ಮಾತೇಕಯ್ಯ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

- ಶರಣ ಉರಿಲಿಂಗ ಪೆದ್ದಿ

ಸತ್ ಚಿತ್ ಆನಂದದ ಬಗ್ಗೆ ಅನೇಕ ಗ್ರಂಥಗಳು ಪ್ರಕಟವಾಗಿವೆ. ಉಪನ್ಯಾಸಗಳು ನಡೆಯುತ್ತಲಿವೆ. ಸತ್ ಚಿತ್ ಆನಂದದ ಧ್ವನಿಗೆ ವೇದಿಕೆ ಬಳಕೆಯಾಗುತ್ತದೆ. ಆದರೂ ಸಚ್ಚಿದಾನಂದವೆನ್ನುವುದು ತನುವಿನಿಂದ ಬಹುದೂರ ಹೋಗುತ್ತಲಿದೆ.

ಸತ್ ಚಿತ್ ಆನಂದವೆಂಬ ತ್ರಿವಿಧದ ಅರಿವನು ಉರಿಲಿಂಗ ದೇವರು ತನುವಿನಲ್ಲಿಯೇ ಸರಳವಾಗಿ ತೋರಿಸಿದ್ದಾರೆ. ತನುವೇ ಸತ್ ಚಿತ್ ಆನಂದ ಸ್ವರೂಪವೆಂದು ಘೋಷಿಸಿದ್ದಾರೆ.

ಸತ್:

ಅಂಗ ರೂಪವುಳ್ಳದ್ದು. ಸರ್ವಾಂಗದಲ್ಲಿ ಲಿಂಗವೇ ಭರಿತವಾಗಿದೆ. ಕಣ್ಣಿನಲ್ಲಿ ನೋಡುವ ಶಕ್ತಿ ತನ್ಮಯವಾಗಿದೆ. ನೋಡುವ ನೋಟದಲ್ಲಿ ಅಜ್ಞಾನ ಬೆರೆಯದಿದ್ದರೆ ಆನಂದವೇ.

ಕಿವಿಯಲ್ಲಿ ಶಬ್ದ ಕೇಳುವ ಶಕ್ತಿಯಡಗಿದೆ. ಶಬ್ದವೆಲ್ಲ ಬ್ರಹ್ಮವೇ, ಶಬ್ದವೆಲ್ಲ ಜ್ಞಾನವೇ, ಶಬ್ದದಲ್ಲಿ ಅಜ್ಞಾನ ಬೆರೆಯದಿದ್ದರೆ ಕೇಳುವ ಶಬ್ದವೆಲ್ಲ ಜ್ಞಾನವೇ.

ಮೂಗಿನಲ್ಲಿ ವಾಸಿಸುವ ಶಕ್ತಿಯಿದೆ. ವಾಸಿಸುವ ವಿಷಯದಲ್ಲಿ ಅಜ್ಞಾನ ಬೆರೆಯದಿದ್ದರೆ ವಾಸಿಸಿದ್ದೆಲ್ಲ ಪರಿಮಳವೆ.

ನಾಲಿಗೆಯಲ್ಲಿ ರುಚಿಸುವ ಶಕ್ತಿಯಿದೆ. ರುಚಿ ಪದಾರ್ಥದಲ್ಲಿಯೋ ನಾಲಿಗೆಯಲ್ಲಿಯೋ ಎಂದು ತಿಳಿಯುವ ಜ್ಞಾನಹೊಳೆದರೆ ಸಾಕು ಪದಾರ್ಥವೆಲ್ಲ ರುಚಿಯೇ.

ಚರ್ಮದಲ್ಲಿ ಸ್ಪರ್ಶ ಸುಖವಿದೆ, ಅನ್ಯವಸ್ತುಗಳ ಸ್ಪರ್ಶದಲ್ಲಿ ಸುಖವಿದೆಯೊ

ಅಥವಾ ಚರ್ಮದಲ್ಲಿಯೇ ಸ್ಪರ್ಶ ಸುಖವಿದೆಯೋ ಎನ್ನುವುದು ಹೊಳೆದರೆ ಸಾಕು ಚರ್ಮದಲ್ಲಿ ಸುಖ ಆನಂದವೇ.

ಚಿತ್:

ನೋಡುವ ನೋಟದಲ್ಲಿ, ಕೇಳುವ ಕಿವಿಯಲ್ಲಿ, ರುಚಿಸುವ ನಾಲಿಗೆಯಲ್ಲಿ,

ವಾಸಿಸುವ ಮೂಗಿನಲ್ಲಿ, ಸ್ಪರ್ಶಿಸುವ ಚರ್ಮದಲ್ಲಿ ಸತ್ಯವೇ ಅಡಗಿದೆ. ಅಡಗಿದ ಸತ್ಯವನ್ನು ಭೇದಿಸುವ ಕಲೆಯೇ ಚಿತ್.

ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಕಂಡರೂ ಇವು ಆಸ್ವಾದಿಸುವ ರುಚಿ ಕಾಣಬರುವುದಿಲ್ಲ.

ಕಣ್ಣಿಗೆ ಪದಾರ್ಥ ಕಾಣುತ್ತದೆ. ಪದಾರ್ಥದ ಸೌಂದರ್ಯ ಕಣ್ಣಿನಲ್ಲಿ ನಿರ್ಮಾಣವಾಗಿದೆ. ಕಣ್ಣು ಅಜ್ಞಾನದಿಂದ ಪದಾರ್ಥ ಪಡೆಯಲು ತನುವಿಗೆ ಆದೇಶ ನೀಡುತ್ತದೆ. ತನು ಪದಾರ್ಥದ ಬೆನ್ನು ಬೀಳುತ್ತದೆ. ಸಂಕಟ ಅನುಭವಿಸುತ್ತದೆ. ತನುವಿಗೂ ಪದಾರ್ಥಕ್ಕೂ ಸಂಬಂಧವಿಲ್ಲ. ನೋಡಿದ್ದು ಕಣ್ಣು, ಬೆನ್ನು ಬಿದ್ದದ್ದು ತನು , ಆದರೆ ಸೌಂದರ್ಯ ವಿದ್ದದ್ದು ಕಣ್ಣಿನಲ್ಲಿ, ಚಿತ್ತ ಸೌಂದರ್ಯವನ್ನು ತಿಳಿಯಲು ಹೋದರೆ ಆನಂದ! ವಸ್ತುವನ್ನು ಪಡೆಯಲು ಹೋದರೆ ದುಃಖ .

ಕಿವಿಗೆ ಕೇಳುವ ಶಕ್ತಿಯಿದೆ. ಕೇಳುವ ಶಕ್ತಿಯಲ್ಲಿ ಆನಂದವಿದೆ. ಅರಿವಿದೆ, ಶಬ್ದ ಕೇಳಿ ತಿಳಿಯುವಲ್ಲಿ ತಪ್ಪಿದರೆ ತನುವು ಕತಕತನೆ ಕುದಿಯುತ್ತದೆ. ಶಬ್ದದಲ್ಲಿ ದೋಷವಿದೆಯೋ ತಿಳಿಯುವಲ್ಲಿ ದೋಷವಿದೆಯೋ ಎಂದು ಅರಿವಿಗೆ ಬಾರದಿದ್ದರೆ ಶಬ್ದದಿಂದ ಸುಖ ದುಃಖ ಉಂಟಾಗುತ್ತದೆ. ತಿಳಿಯದೇ ಕೇಳಿದ ಶಬ್ದ ಸುಖ ಕೊಟ್ಟರೂ ಅರ್ಥವಿಲ್ಲ, ದುಃಖವಾದರೂ ಅರ್ಥವಿಲ್ಲ, ಪ್ರತಿ ಶಬ್ದದಲ್ಲಿ ಸತ್ಯವಿದೆ. ಚಿತ್ತದಿಂದ ತಿಳಿದರೆ ಆನಂದವಾಗುತ್ತದೆ.

ಚರ್ಮದಲ್ಲಿ ಸ್ಪರ್ಶ ಸುಖ ಸತ್ಯವಿದೆ, ಅನ್ಯವಸ್ತುಗಳನ್ನು, ಚರ್ಮವನ್ನು ಸ್ಪರ್ಶಿಸಿ ಸುಖಿಸುವ ಅಜ್ಞಾನವು ಇದೆ , ಚಿತ್ತದಿಂದ ಭೇದಿಸಿ ತನ್ನ ಚರ್ಮದಲ್ಲಿ ಚಿತ್ತ ನೆಟ್ಟಾಗ, ಸುಖಿಸಿದ್ದು ತನ್ನ ಚರ್ಮದಿಂದಲೇ ಎಂಬ ಸತ್ಯ ಹೊಳೆದು ಶಾಶ್ವತ ಆನಂದದ ಪರಿಚಯವಾಗುತ್ತದೆ.

ನಾಲಿಗೆಯಲ್ಲಿ ರುಚಿಯ ಸುಖವಿದೆ. ಪದಾರ್ಥದಲ್ಲಿ ಚಿತ್ತ ನೆಟ್ಟಾಗ ತನುವನ್ನು ಪದಾರ್ಥದತ್ತ ಸೆಳೆಯುತ್ತದೆ. ರುಚಿಗಾಗಿ ಸಂಕಟ ಅನುಭವಿಸುತ್ತದೆ. ಪದಾರ್ಥದಿಂದ ನಾಲಿಗೆಯ ರುಚಿಯೆಡೆಗೆ ಸಾಗಿದಾಗ ಚಿತ್ತ ನಾಲಿಗೆಯ ನಾಲಿಗೆಯಲ್ಲಿ ನೆಟ್ಟು ಆನಂದವಾಗುತ್ತದೆ. ನಾಲಿಗೆ ರುಚಿ, ನಾಲಿಗೆಯ ನಾಲಿಗೆ ಆನಂದ .

ಮೂಗಿನ ಮೂಗಿನಲ್ಲಿ ವಾಸನಾಶಕ್ತಿಯಿದೆ. ಹೂ ವಾಸನೆಯಿಲ್ಲ , ಪರಿಮಳದಲ್ಲಿ ವಾಸನೆಯಿದೆ. ಹೂ ಸತ್ಯ; ಪರಿಮಳ ಆನಂದ. ಮೂಗು ಸತ್ಯ, ಮೂಗಿನ ಮೂಗಿನಲ್ಲಿ ಆನಂದವಿದೆ.

ಶ್ರೀಗುರು ಇಷ್ಟಲಿಂಗದಲ್ಲಿ ಅಂದರೆ ತನುವಿನಲ್ಲಿ ಅರಿವು ಹೇಗೆ ತನ್ಮಯವಾಗಿದೆ ಎಂಬ ಸುಳಿವನ್ನು ಶಿಷ್ಯನ ಚಿತ್ತದಿಂದಲೇ ನೋಡುವಂತೆ ಮಾಡುತ್ತಾನೆ. ಆನಂದವೆಂಬುದು ಗುರುವಿನ ಮಾತಿನಲ್ಲಿ ಇಲ್ಲ. ಹೊರಗಿನ ಪದಾರ್ಥಗಳಲ್ಲೂ ಇಲ್ಲ.

ಅದು ಬಂದುಹೋಗುವ ಆನಂದ ಮಾತ್ರ, ಸತ್ಯವಲ್ಲ. ಆನಂದವೆಂಬುದು ತನುವಿನ ಸತ್ಯದಲ್ಲಿದೆ. ಸತ್ಯವನ್ನು ತಿಳಿಯುವ ಚಿತ್ತದಲ್ಲಿದೆ. ಚಿತ್ತ ತನುವಿನ ಸತ್ಯದಲ್ಲಿ ನೆಟ್ಟಾಗ, ಸದಾ ಸತ್ ಚಿತ್ ಆನಂದನು ತಾನೆ ಆಗುವನು, ಸಚ್ಚಿದಾನಂದವೆಂಬುದು ಬೊಗಳೆ ಮಾತಲ್ಲ, ಜಪ ತಪ ಧ್ಯಾನಗಳಿಂದ ಬರುವ ಮ್ಯಾಜಿಕ್ಕೂ ಅಲ್ಲ, ತನುವಿನಲ್ಲಿಯೇ ತಾಂತ್ರಿಕವಾಗಿ ಕಂಡುಕೊಂಡು ಅನುಭವಿಸುವ ಆನಂದ, ಅದುವೇ ಸಚ್ಚಿದಾನಂದ ಪ್ರಸಾದ.

■

ಬೆಳಕು + ಬೆಳಕುಳ್ಳ ಬತ್ತಿ = ಬೆಳಕು

ಸದ್ಗುರುವೇ ಪ್ರಸಾದಲಿಂಗವು
ಸದ್ಗುರುವೇ ಸದ್ಭಕ್ತನು ಎಂದೆಂಬ ಮಹಾಜ್ಞಾನ ಜ್ಯೋತಿ
ಪ್ರಕಾಶವಾದ ಜ್ಯೋತಿರ್ಮಯ ಲಿಂಗವೇ
ಗುರುವಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

- ಶರಣ ಉರಿಲಿಂಗಪೆದ್ದಿ

ಉರಿಲಿಂಗ ಶರಣರು ಈ ವಚನದಲ್ಲಿ ಸದ್ಗುರು, ಸದ್ಭಕ್ತ, ಗುರು ಎಂಬ ಮೂರು ಶಬ್ದಗಳನ್ನು ಬಳಸಿದ್ದಾರೆ.

ಮನುಷ್ಯ ಸಂಕಟಪಡುತ್ತಾನೆ. ಸಂಕಟದಿಂದ ಮುಕ್ತನಾಗಬೇಕೆಂದು ಬಯಕೆ ಮಾಡುತ್ತಾನೆ. ಸ್ವರ್ಗವಾಗಬೇಕಾದ ಕುಟುಂಬ ಮಾತಿನ ಕಲಹದಿಂದ ಜಗಳದ ಮನೆ ಯಾಗುತ್ತದೆ. ಸಾಕಷ್ಟು ಕಲಿತು ಕಲಿಸುವ ಕಾಯಕದಲ್ಲಿ ನಿರತನಾದ ಉಪನ್ಯಾಸಕನಿಗೂ ಸಂಕಟದಿಂದ ಮುಕ್ತನಾಗಲು ಹೊಳೆಯುವುದಿಲ್ಲ.

ಒಬ್ಬರನ್ನು ಕಂಡರೆ ಒಬ್ಬರಿಗೆ ಆಗುವುದಿಲ್ಲ. ಸರ್ವರ ಒಳಿತು ಬಯಸುವ ರಾಜಕೀಯ ಕ್ಷೇತ್ರವೂ, ಮಠ ಮಾನ್ಯಗಳೂ ಸಂಕಟದಿಂದ ಮುಕ್ತರಾಗುವುದು ಜಟಿಲ ವಾಗುತ್ತಲಿವೆ. ಹೀಗೇಕೆ ಎನ್ನುವ ಯೋಚನೆ ಹೊಳೆದು ಗುರುವನ್ನು ಹುಡುಕುವ ಕೆಲಸ ಶುರುವಾಗುತ್ತದೆ. ಸರಿಯಾಗಿ ತಿಳಿಹೇಳುವ, ಸುಳುಹು ನೀಡುವ ಸದ್ಗುರುವನ್ನು ಹುಡುಕುತ್ತಾನೆ. ಸದ್ಗುರು ಸಿಕ್ಕರೆ ಆತನ ಮೇಲೆ ಭಕ್ತಿಯಿಂದ ಭಾವ ಮಾಡುತ್ತಾನೆ. ಗುರು ಯಾವುದೇ ಪ್ರಯೋಗಕ್ಕೆ ಅಣಿಗೊಳಿಸಿದರೂ ಶಿರಸಾವಹಿಸಿ ಸ್ವೀಕರಿಸಿ ಸದ್ಭಾವದಿಂದ ಸದ್ಭಕ್ತನಾಗುತ್ತಾನೆ.

ಸದ್ಭಕ್ತನ ತಿಳಿಯುವ ಶಕ್ತಿಯನ್ನು ಗಮನಿಸಿದ ಸದ್ಗುರು ಆತ ತನ್ನ ಮೇಲಿಟ್ಟ ಭಾವವನ್ನು ಸದ್ಭಾವವನ್ನೂ ನಿರ್ಭಾವಗೊಳಿಸಿ, ಸದ್ಗುರುವಿನ ಪರಿಚಯ ಮಾಡುತ್ತಾನೆ.

ಸದ್ಗುರು ಎಂದರೆ ಸತ್ಯದ ಅರಿವನ್ನು ತಿಳಿದವ. ಆ ಅರಿವೇ ತಾನಾದವ. ಸದ್ಭಕ್ತ ನೆಂದರೆ ಅರಿವನ್ನು ತಿಳಿಯಲು ಬಂದವ. ಸದ್ಗುರುವಿನ ಮೇಲೆ ಭಾವ, ಸದ್ಭಾವವಿಟ್ಟು ತಿಳಿಯಲು ಬಂದವ.

ಪ್ರತಿನಿತ್ಯ ಗುರು ಹೇಳುತ್ತಾ ಹೋಗುತ್ತಾನೆ ಶಿಷ್ಯ ಕೇಳುತ್ತಾ ಹೋಗುತ್ತಾನೆ. ಕೇಳುವುದು ಮುಗಿಯುವುದೇ ಇಲ್ಲ. ಒಂದು ಚಟ ಬಿಟ್ಟು ಮತ್ತೊಂದು ಚಟಕ್ಕೆ ದಾಸನಾಗುವುದು ಬೇಡವೆಂದು ತಿಳಿದ ಗುರು ಭಕ್ತನು ಗುರುವಿನ ಮೇಲಿಟ್ಟ ಭಾವ

ಸದ್ಭಾವವನ್ನು ಬೇರುಸಹಿತ ಕಿತ್ತು ಬಿಸಾಡುತ್ತಾನೆ. ಸದ್ಭಕ್ತನೆ ಸದ್ಗುರುವಾಗುತ್ತಾನೆ. ತನ್ನ ಸತ್ಯದ ಅರಿವಿನೊಂದಿಗೆ ಕೂಡಿ ತಾನೇ ಅರಿವಾಗುತ್ತಾನೆ.

ಒಂದು ಪ್ರಣತಿ ಉರಿಯುತ್ತಿದೆ. ಮತ್ತೊಂದು ಪ್ರಣತಿಯಲ್ಲಿ ಎಣ್ಣೆಯಿದೆ, ಬತ್ತಿಯಿದೆ ಉರಿಯುತ್ತಿಲ್ಲ. ಉರಿಯುವ ಪ್ರಣತಿ ಬತ್ತಿಗೆ ಚುಂಬಿಸಿದಾಗ ಮೊದಲ ಪ್ರಣತಿಯಂತೆ ಪ್ರಕಾಶಮಾನವಾಗಿ ಉರಿಯುತ್ತದೆ. ಮೊದಲು ಬೆಳಗಿದ್ದು ಗುರುವಲ್ಲ. ನಂತರ ಬೆಳಗಿದ್ದು ಶಿಷ್ಯನಲ್ಲ. ಎರಡೂ ಪ್ರಕಾಶವೇ. ಕಡೆ ಮೊದಲೆನ್ನುವ ಗುರುತಿಲ್ಲ ದಂತೆ ಪ್ರಕಾಶಮಾನವಾಗಿ ಜ್ಯೋತಿರ್ಮಯವಾಗಿ ಉರಿಯುವ ಬೆಳಕೇ ಅರಿವು. ಆ ಅರಿವೆ ಸತ್ಯದ ಅರಿವು, ಸತ್ಯದ ಗುರು ಸದ್ಗುರು.

ಶಿಷ್ಯ ಪರಂಪರೆಯನ್ನು ಬೆಳೆಸುತ್ತಾ, ಸದಾ ಶಿಷ್ಯನನ್ನಾಗಿಸಿಕೊಂಡು, ಸದಾ ಗುರುವಿನ ಪಾತ್ರದಲ್ಲಿರುವವ ಗುರುವಲ್ಲ. ಅದೊಂದು ವ್ಯವಹಾರ. ಗುರುವಿನದೂ ವ್ಯವಹಾರ, ಶಿಷ್ಯನದೂ ವ್ಯವಹಾರ! ಪೂಜೆ ಮಾಡುವ ವ್ಯವಹಾರ, ಪೂಜೆ ಮಾಡಿಸಿ ಕೊಳ್ಳುವ ವ್ಯವಹಾರ. ಆ ನೆಪದಲ್ಲಿ ಬೇಕಾದ ಬಂಧುಗಳಿಗೆ ಪ್ರಸಾದ ಬಡಿಸುವ ವ್ಯವ ಹಾರ. ಪೂಜೆ ಮಾಡಿದವರು, ಮಾಡಿಸಿಕೊಂಡವರು, ಪ್ರಸಾದ ಸ್ವೀಕರಿಸಿ ಆಶೀರ್ವಾದ ಪಡೆದವರು ಈ ಮೂವರೂ ಮೋಸಕ್ಕೊಳಗಾದವರು.

ಈ ಪರಂಪರೆಯ ಗುರು ಶಿಷ್ಯ ವರ್ಗವೇ ಅಧಿಕ. ಗುರುತನವೆನ್ನುವುದು ಬೆಳಕು. ಆ ಬೆಳಕು ಬತ್ತಿಗೆ ಚುಂಬಿಸುವಷ್ಟು ಕಾಲ ಮಾತ್ರ ಗುರುವಾಗಿರಬೇಕು. ಚುಂಬಿ ಸಿದ ಮೇಲೆ ಬತ್ತಿಯೂ ಬೆಳಕೇ ತಾನೂ ಬೆಳಕೆ. ಬೆಳಕಿಗೆ ಮತ್ತೊಂದು ವೇಷ ಬೇಕೇ? ವೇಷದ ಬೆಳಕು ಬೆಳಕಲ್ಲ ಬರೀ ಮೋಸ. ತನಗೆ ತಾನು ಮಾಡಿಕೊಳ್ಳುವ ಮೋಸ! ಬೆಳಕು ಬತ್ತಿಯಲ್ಲಿಯೇ ಇದೆ. ಮರೆವಾಗಿದೆ. ನೆನಪಿಸಿದರೆ ಸಾಕು ಬೆಳಕಾಗುತ್ತದೆ. ಬೆಳಗಿದ ಮೇಲೆ ಮತ್ತೆ ಬೆಳಕನ್ನು ನೆನೆಯುವುದಿಲ್ಲ. ಹೊತ್ತಿಸಿದ ಬೆಳಕು ಬೆಳಕೇ ಹೊತ್ತಿಸಿಕೊಂಡ ಬೆಳಕೂ ಬೆಳಕೇ ! ಹೊತ್ತಿಸಿದ ಬೆಳಕು ಹೊತ್ತಿಸಿಕೊಂಡ ಬೆಳಕಿನಲ್ಲಿ ಅಡಗಿ ಬೆಳಗಿದಾಗ ಯಾರನ್ನು ನೆನೆಯುವುದು ಎರಡೂ ಬೆಳಗುವುದೊಂದೆ ಕೆಲಸ. ತನ್ನಂತೆ ಇತರ ಬತ್ತಿಗಳನ್ನು ಬೆಳಗಿಸುವ ಕೆಲಸ.

ಬೆಳಕು + ಬೆಳಕುಳ್ಳ ಬತ್ತಿ = ಬೆಳಕು ಎನ್ನುವ ಸೂತ್ರ ಉರಿಲಿಂಗ ಶರಣರದು. ಇದನ್ನು ಬಳಕೆ ಮಾಡಿಕೊಂಡು ಬೆಳಕಾಗಬೇಕಿದೆ.

■

ಪುಸ್ತಕ ತನುವಿನಿಂದ ಬಂದ ತ್ಯಾಜ್ಯ

ಸಕಲ ಜನಂಗಳು ಹೇಸಿದ ಉದಾನವನು ಶ್ವಾನ ಭುಂಜಿಸಿ
ತನ್ನೊಡಲ ಹೊರೆವುದು. ಅದು ತಾನು ಹೇಸಿದ ಉದಾನವನು
ತಾನು ಮುಟ್ಟದು ನೋಡಾ. ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ
ಮರಳಿ ಭವಿಯ ಬೆರಿಸಿದೆನಾದಡೆ ಆ ಶ್ವಾನನಿಂದ ಕರಕಷ್ಟ ನೋಡಾ.
ನೀನೊಲಿದವರಿಗಲ್ಲದೆ ಎಲ್ಲರಿಗಳವಡುವುದೇ ?
ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

- ಶರಣ ಉರಿಲಿಂಗಪೆದ್ದಿ

ಸಕಲ ಜನರ ಮಲವನುಂಡು ನಾಯಿ ತನ್ನ ಹೊಟ್ಟೆ ತುಂಬಿಸಿಕೊಳ್ಳುತ್ತದೆ. ನಾಯಿಗೆ ಮಲ ಮೃಷ್ಠಾನ್ನ. ತಾನು ವಿಸರ್ಜಿಸಿದ ಮಲವನ್ನು ಅದು ತಾನೇ ತಿನ್ನುವುದಿಲ್ಲ.

ಅಜ್ಞಾನಕ್ಕೆ ಹೇಸಿ ಅರಿವಿಗೆ ಬಂದ ಬಳಿಕ ಮರಳಿ ಅಜ್ಞಾನವ ಬೆರೆಸಿದೆನಾದಡೆ ಆ ನಾಯಿಗಿಂತ ಕಡೆ ಮನುಷ್ಯ ಜನ್ಮ.

ಅರಿವು ಒಲಿದವರಿಗಲ್ಲದೆ ಎಲ್ಲರಿಗೆ ಅರಿವು ಅಳವಡುವುದೇ ಎಂದು ಪ್ರಶ್ನಿಸಿದ್ದಾರೆ ಉರಿಲಿಂಗ ಶರಣರು.

ಉರಿಲಿಂಗ ಶರಣರು ತಮ್ಮ ವಚನದ ಮೊದಲಿನ ಎರಡು ಸಾಲುಗಳಲ್ಲಿ ಅರಿವಿನ ಖಡ್ಗವನ್ನೇ ಝಳಪಿಸಿದ್ದಾರೆ.

ಪ್ರಾಣಿ, ಪಶು, ಪಕ್ಷಿಗಳು ಅವು ಉಂಡು ಹೊರ ಹಾಕಿದ್ದನ್ನು ಅವೇ ತಿನ್ನುವುದಿಲ್ಲ. ಮನುಷ್ಯ ಮಾತ್ರ ತಾನು ಹೊರ ಹಾಕಿದ್ದನ್ನು ತಾನೇ ಉಣ್ಣುವುದರಲ್ಲಿ ನಿರತನಾಗಿದ್ದಾನೆ.

ಮನುಷ್ಯ ಮೂಲತಃ ಜ್ಞಾನಿ. ಸಕಲ ವಸ್ತುಗಳನ್ನು ,ಗಿಡ-ಮರ, ಬಳ್ಳಿ ,ಪಶು -ಪಕ್ಷಿಗಳನ್ನು , ಜಲಚರಗಳನ್ನು ಹೆಸರಿಸಿದ್ದಾನೆ. ಅವೆಲ್ಲವುಗಳನ್ನು ತಿಳಿದುಕೊಂಡಿದ್ದಾನೆ. ಸಕಲ ಪ್ರಾಣಿಗಳನ್ನು ಪಳಗಿಸಿ ತನ್ನಂತೆ ಮಾಡಿಕೊಂಡಿದ್ದಾನೆ.

ಭೌತಿಕ ವಸ್ತುಗಳ ಪ್ರೊಡೆಕ್ಟ್‌ಗೆ ಕಾರಣನಾದ ಮನುಷ್ಯ ತನಗರಿಯದೇ ಆ ವಸ್ತುಗಳಿಗೇ ದಾಸನಾಗಿದ್ದಾನೆ.

ಬೆಳ್ಳಿ,ಚಿನ್ನ,ಮುತ್ತು,ರತ್ನ, ವಜ್ರ ಮುಂತಾದ ವಸ್ತುಗಳನ್ನು ಸೃಷ್ಟಿಸಿ ಅವುಗಳನ್ನು ನೋಡಿ ಆನಂದಿಸದೇ ಸಂಗ್ರಹಿಸಿ ಸುಖಿಸುವುದು, ಅದಕ್ಕೆ ಸೆರೆಯಾಳಾಗಿ, ಧರಿಸಿದ ತನುವನ್ನೇ ಕೊಂದು ಪಡೆಯುವುದು ಅಜ್ಞಾನವಲ್ಲವೇ ? ತನ್ನಿಂದ ಸೃಷ್ಟಿಯಾದ ಚಿನ್ನ ! ಅರಿವಿನಿಂದ ಭೂಮಿ ಅಗೆದು ಹೊರತೆಗೆದು ಆಭರಣ ಮಾಡಿದ ಚಿನ್ನ. ತನ್ನ ಅರಿವಿನಿಂದ ಹೊರ ಬಂದದ್ದನ್ನು ತಾನೇ ಉಣ್ಣುವುದು ಅಜ್ಞಾನವಲ್ಲವೇ ? ಅಜ್ಞಾನಕ್ಕೆ

ಸೆರೆಯಾಗುವುದೇ ? ಅದು ತಾನು ಉಂಡು ಹೊರಬಂದದ್ದನ್ನು ತಾನೇ ಸೇವಿಸಿದಂತಾಗುವುದಿಲ್ಲವೇ ? ತಾನು ತೊಡುವ, ಉಡುವ, ಇಡುವ ಆಭರಣಗಳನ್ನು ಸುಖಿಸಿ ಆನಂದಪಡುವ ವಸ್ತುಗಳನ್ನು ನಾಯಿಯೂ ಮೂಸುವುದಿಲ್ಲ. ಆ ವಸ್ತುಗಳು ಪಶು , ಪಕ್ಷಿ , ಪ್ರಾಣಿಗಳಿಗೂ ಹಿಡಿಸುವುದಿಲ್ಲವೆಂದ ಮೇಲೆ ಅರಿವುಳ್ಳ ಮನುಷ್ಯ ಅಜ್ಞಾನಕ್ಕೆ ಬಲಿಯಾಗಬೇಕೇ ? ನಾಯಿ-ನರಿಗಳಿಗಿಂತಲೂ ಕಡೆಯಾಗ ಬೇಕೇ ? ಎಂದು ಪ್ರಶ್ನಿಸಿದ್ದಾರೆ ಉರಿಲಿಂಗ ಶರಣರು.

ಪುಸ್ತಕಗಳು ಕೂಡಾ ತನುವಿನಿಂದ ಬಂದ ವಸ್ತುಗಳೇ. ಅರಿವಿನಿಂದ ಅರಿವಿಗೆ ಅನುಕೂಲವಾಗಲಿ ಎಂದು ರಚಿಸಿದ ಪುಸ್ತಕಕ್ಕೆ ಪೂಜೆ ಮಾಡ ಬೇಕೇ ? ಪುನಃ ಅವುಗಳನ್ನು ಉರುಹೊಡೆದು ತನುವಿನಲ್ಲಿ ಸಂಗ್ರಹಿಸಿ ಕೊಳ್ಳಬೇಕೇ ? ಪುಸ್ತಕ ಜಡವೆಂದು ಅನ್ನಿಸಲೇ ಇಲ್ಲ. ಅದು ತನುವಿನಿಂದ ಬಂದ ತ್ಯಾಜ್ಯ! ಆ ತ್ಯಾಜ್ಯವನ್ನು ತನುವಿಗೆ ಉಣ್ಣಿಸುವುದು ಮನುಷ್ಯನೊಬ್ಬನೇ ಎಂದು ಅನ್ನಿಸುವುದಿಲ್ಲವೇ ?

ಓದಿದರೂ ಆನಂದವಾಗುತ್ತದೆ, ಕೇಳಿದರೂ ಆನಂದವಾಗುತ್ತದೆ ಎಂದ ಮೇಲೆ ಆ ಆನಂದ ತನುವಿನಲ್ಲಿದ್ದರೆ ಮಾತ್ರ ಸಾಧ್ಯ ಎಂದು ತಿಳಿಯ ಬೇಡವೇ ? ಓದಿದ್ದೆಲ್ಲಾ ಪುಸ್ತಕದ ಹೆಸರೇಳಿ ಉದಾಹರಿಸುವುದೇ ? ತನುವನ್ನೇ ಲೈಬ್ರರಿ ಮಾಡಿಕೊಂಡರೆ ಹೇಗೆ? ತನುವು ಪುಸ್ತಕಗಳ ಚಿಲುಮೆ ! ಜ್ಞಾನ ಹೊರ ಹಾಕುವುದು ಮಾತ್ರ ಆದರ ಕೆಲಸ.

ತನುವಿನ ಅಜ್ಞಾನಕ್ಕೆ ತನುವೇ ಹೇಸಿ ಅರಿವಿಗೆ ಬಂದ ಬಳಿಕ, ಮರಳಿ ಅಜ್ಞಾನಕ್ಕೆ ತನುವ ಬಳಸಿದೆನಾದಡೆ ಆ ನಾಯಿಗಿಂತ ಕರಕಷ್ಟ ನರಜನ್ಮ.

ಅರಿವೇ ಅಜ್ಞಾನದ ಮರೆವಿನ ಮೇಲೆ ಬೆಳಕು ಚೆಲ್ಲಬೇಕು. ಮರೆವು ಅರಿವಿನಲ್ಲಿ ಲೀನವಾಗಿ ಅರಿವೇ ತಾನಾಗಬೇಕು. ಹೀಗೆ ವಸ್ತುವಿನ ಮೂಲ ನೋಡಿದ ಅರಿವು ಅದು ತನ್ನಿಂದ ಸೃಷ್ಟಿಸಲ್ಪಟ್ಟ ಪದಾರ್ಥವೆಂದು ತಿಳಿದು ಹೇಸಿ ವಾಸಿಸುವುದಿಲ್ಲ, ಮುಟ್ಟುವುದಿಲ್ಲ, ಸಂಗ್ರಹಿಸುವುದಿಲ್ಲ, ವಸ್ತುವಿಗಾಗಿ ಸಂಕಟ ಪಡುವುದಿಲ್ಲ. ತನ್ನಿಂದ ಹೊರಬಂದ ಉದಾನವೆಂದು ತಾನು ಭುಂಜಿಸುವುದಿಲ್ಲ !

■

ಪ್ರಸಾದದಲ್ಲಿ ರುಚಿಯನರಸುವರೆ?

ಸ್ತನಾಮೃತವ ಸೇವಿಸುವ ಶಿಶು ಸಕ್ಕರೆಯನಿಚ್ಛಿಸುವುದೆ?
ಪರುಷ ದೊರೆಕೊಂಡ ಪುರುಷನು ಜಲಗರವ ತೊಳೆಯಲಿಚ್ಛಿಸುವನೆ?
ದಾಸೋಹವ ಮಾಡುವ ಭಕ್ತನು ಮುಕ್ತಿಯನಿಚ್ಛಿಸುವನೆ?
ಇವರು ಮೂವರಿಗಿನ್ನಾವುದೂ ಇಚ್ಛೆ ಇಲ್ಲ.
ರುಚಿ ಪದಾರ್ಥವಿದ್ದಂತೆ ಇದ್ದ ಪರಿಯು ಸಹಜ ಸುಖವಯ್ಯಾ,
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

- ಶರಣ ಉರಿಲಿಂಗಪೆದ್ದಿ

ತಾಯಿಯ ಎದೆಹಾಲು ಸೇವಿಸುವ ಶಿಶು ಸಕ್ಕರೆಯನಿಚ್ಛಿಸುವುದಿಲ್ಲ. ಸ್ತನ ಮತ್ತು ಅಮೃತವೆಂಬ ಹಾಲಿನೊಂದಿಗೆ ತನ್ಮಯವಾಗಿರುತ್ತದೆ.

ಪರುಷ ದೊರಕಿದ ಮೇಲೆ ಆ ಪುರುಷ ಮಣ್ಣು ತೊಳೆದು ಚಿನ್ನ ಹುಡುಕುವ ಕೆಲಸ ಮಾಡುವುದಿಲ್ಲ.

ಜ್ಞಾನಿಯೇ ತಾನಾಗಿ ಆ ಜ್ಞಾನ ದಾಸೋಹ ಮಾಡುವ ಭಕ್ತನಿಗೆ ಯಾವ ಬಂಧನಗಳೂ ಇಲ್ಲ. ಜ್ಞಾನಿ ಮುಕ್ತಿಯನಿಚ್ಛಿಸುವುದಿಲ್ಲ.

ಎದೆಹಾಲು ಸೇವಿಸುವ ಶಿಶುವಿಗೂ, ಪರುಷ ದೊರಕಿಕೊಂಡ ಪುರುಷನಿಗೂ, ದಾಸೋಹ ಮಾಡುವ ಭಕ್ತನಿಗೂ ಇನ್ನಾವ ಇಚ್ಛೆಯೂ ಇಲ್ಲ.

ಪದಾರ್ಥದ್ದಲ್ಲಿದ್ದ ರುಚಿಯಂತೆ, ಪದಾರ್ಥ + ರುಚಿ ಮಿಲನವಾಗಿ ಬೇರ್ಪಡಿಸದಂತೆ ಸಹಜವಾಗಿಯೇ ಇದೆ. ರುಚಿ ಪದಾರ್ಥದಲ್ಲಿ ಬೆರೆತು ಸುಖದಿಂದ ತನ್ಮಯವಾಗಿದೆ. ಅದನ್ನು ಯಾರೂ ಬೇರ್ಪಡಿಸಲಾರರು. ಉರಿಲಿಂಗದೇವರು ಈ ವಚನದಲ್ಲಿ ನಾಲ್ಕು ಉದಾಹರಣೆಗಳನ್ನು ಕೊಡುವುದರ ಮೂಲಕ ಸರಳವಾಗಿ ಓದುಗರನ್ನು ವೈಜ್ಞಾನಿಕವಾಗಿ ಜ್ಞಾನದೆಡೆಗೆ ಕರೆದುಕೊಂಡು ಹೋಗುತ್ತಾರೆ.

ಸ್ತನಾಮೃತ ಸೇವಿಸುವ ಶಿಶು, ಪರುಷ ದೊರಕಿಕೊಂಡ ಪುರುಷ, ದಾಸೋಹ ಮಾಡುವ ಭಕ್ತ ಈ ಮೂರು ತನ್ಮಯವಾದ ತನುವಿನ ಕ್ರಿಯೆಗಳನ್ನು ಹೇಳುತ್ತ ಪದಾರ್ಥದಲ್ಲಿ ಬೆರೆತ ರುಚಿಯ ಪರಿ ಸಹಜ ಸುಖದಂತೆ ಎಂದಿದ್ದಾರೆ.

ಅಡಿಗೆ ರುಚಿ ಮಾಡಲಿಲ್ಲ ವೆಂದು ಪ್ರತಿಮನೆಯಲ್ಲಿ ಜಗಳವಾಗುತ್ತದೆ. ಒಂದು ಅಧ್ಯಯನದ ಪ್ರಕಾರ ರುಚಿ ಅಡಿಗೆಯ ನೆಪದಲ್ಲಿ ದೇಶದ ಶೇ.10 ಹೆಣ್ಣು ಮಕ್ಕಳನ್ನು ಕೊಲ್ಲಲ್ಪಟ್ಟರೆ. ಶೇ.15 ಮಹಿಳೆಯರು ಬಿರುನುಡಿಗಳನ್ನು ತಾಳದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ರುಚಿ ಪದಾರ್ಥದಲ್ಲಿದೆಯೋ ನಾಲಿಗೆಯಲ್ಲಿದೆಯೋ ಎಂದು ಕಂಡುಕೊಳ್ಳುವ ಶಿಕ್ಷಣ ಇಲ್ಲದ ನಿಮಿತ್ಯ ಈ ಸಾವು ನೋವುಗಳು ಸಂಭವಿಸುತ್ತವೆ.

ರಾಜಸ್ತಾನದ ಸಾಫ್ಟವೇರ್ ಇಂಜಿನೀಯರನೊಬ್ಬ ಇತ್ತೀಚೆಗೆ ಅಡಿಗೆ ರುಚಿ ಮಾಡಲಿಲ್ಲವೆಂದು ಟೇಬಲ್ ನೈಫ್‌ನಿಂದ ತಾಯಿಯನ್ನೇ ಕೊಂದ. ಹೀಗೆ ರುಚಿಗಾಗಿ ಹೆಂಡತಿ, ಸೊಸೆ, ತಾಯಿ ಬಲಿಯಾಗುತ್ತಿರುವುದು ಪ್ರತಿದಿನ ಮಾಧ್ಯಮಗಳಲ್ಲಿ ಬಯಲಾಗುತ್ತಲಿದೆ. ಇದು ಹಿಂದಿನಿಂದಲೂ ನಡೆದು ಬಂದದ್ದೇ.

ರುಚಿ ಎಂದರೆ ಏನೆಂಬುದನ್ನು ತಿಳಿಯದಿದ್ದರೆ ಹೀಗೇ ಆಗುತ್ತದೆ. ರುಚಿ ಎನ್ನುವುದು ತಾನೇ ಕಂಡುಕೊಳ್ಳಬೇಕಾದ ಶಿಕ್ಷಣ. ಉರಿಲಿಂಗದೇವರು ರುಚಿಯ ಬಗ್ಗೆ ಬೆಡಗಿನಲ್ಲಿ ಹೇಳಿದ್ದಾರೆ.

ರುಚಿ ಎನ್ನುವುದು ಮನುಷ್ಯ ಮಾಡುವುದಲ್ಲ. ಪದಾರ್ಥಗಳಲ್ಲಿಯೇ ರುಚಿಯಿದೆ. ರುಚಿ + ಪದಾರ್ಥ ತನ್ಮಯವಾಗಿದೆ.

ನೀರು ಕಬ್ಬಿನಲ್ಲಿ ಬೆರೆತು ಸಿಹಿಯಾಗಿದೆ. ಬೆಳ್ಳೊಳ್ಳಿಯಲ್ಲಿ ಬೆರೆತು ಘಾಟಾಗಿದೆ. ಈರುಳ್ಳಿಯಲ್ಲಿ ನೀರು ಬೆರೆತು ಕಾಕಾಗಿದೆ. ಮೆಣಸಿನ ಕಾಯಿ, ನೀರು ಬೆರೆತು ಖಾರವಾಯಿತು. ಈ ಎಲ್ಲಾ ರುಚಿಗೆ ನೀರೇ ಪ್ರಧಾನ.

ಅಂತೆಯೇ ತನುವಿನ ಜನ್ಮಕ್ಕೂ ನೀರೇ ಪ್ರಧಾನ ! ಜಲ ಬಿಂದುವಿನಿಂದ ತನು ಜನ್ಮತಳೆದಿದೆ. ಬಿಂದು ಗರ್ಭ ಪ್ರವೇಶಿಸಿ ಪಾಕವಾಗಿ ಎಲುಬು ರಕ್ತ ಮೂಳೆ ಚರ್ಮ ಮಜ್ಜಾ ಮೇದಸ್ಸಾಗಿ ತನುವಾಗಿದೆ. ತನುವಿನ ತುಂಬಾ ಜಲ ತುಂಬಿಕೊಂಡಿದೆ. ಪ್ರಾರಂಭದಲ್ಲಿ ನಾಲಿಗೆಗೆ ಸಕ್ಕರೆ ಸಿಹಿ, ಮೆಣಸಿನ ಕಾಯಿ ಖಾರ, ಹುಣಸೆ ಹುಳಿ ಕಂಡರೂ ತನುವಿನ ಜಲದ ಆಶ್ರಯ ಪಡೆದ ಪದಾರ್ಥ ರುಚಿ ಕಳೆದುಕೊಂಡು ನೀರಾಗುತ್ತದೆ.'ಹೊಳೆಯಲ್ಲಿ ಹುಣಸೆ ಹಣ್ಣು ತೊಳೆದಂತೆ' ಎಂದು ಜನಪದರು ಹೇಳಿದ್ದು ಇಲ್ಲಿ ಸತ್ಯವೇ ಆಗಿದೆ.

ಜಲದಿಂದಾದ ಪದಾರ್ಥವು ಜಲದಿಂದಾದ ತನುವಿನಲ್ಲಿ ಬೆರೆತು ರುಚಿ ಕಳೆದುಕೊಂಡು ಜಲವಾಗಿ ಮಾರ್ಪಡುತ್ತದೆ. ಆ ಜಲವೇ ರಕ್ತ ಮೂಳೆ, ಮಾಂಸ, ಚರ್ಮ ಮಜ್ಜಾ ಮೇದಸ್ಸಾಗಿ ಬೆಳೆಯುತ್ತದೆ.

ಪದಾರ್ಥದಲ್ಲಿ ರುಚಿಯಿದೆ. ಜಲದಲ್ಲಿ ರುಚಿ ತನ್ಮಯವಾಗಿ ಪದಾರ್ಥವಾಗಿದೆ. ಪದಾರ್ಥವು ಜಲದಿಂದ ಕೂಡಿದೆ. ತನುವೂ ಜಲದಿಂದ ಕೂಡಿದೆ. ಜಲ ತುಂಬಿದ ಪದಾರ್ಥವು ತನು ತುಂಬಿದ ಜಲದಲ್ಲಿ ಬೆರೆತು ರುಚಿ ಕಳೆದುಕೊಂಡು ಜಲ ಗಟ್ಟಿಗೊಂಡು ತನು ಬೆಳೆಯಲು ಕಾರಣವಾಗುತ್ತದೆ.

ಶಿಶು ಸ್ತನಾಮೃತದಲ್ಲಿ ತನ್ಮಯವಾದಂತೆ , ಪರುಷ ದೊರೆಕೊಂಡ ಪುರುಷನಂತೆ, ದಾಸೋಹ ಮಾಡುವ ಭಕ್ತನಂತೆ, ಪದಾರ್ಥದಲ್ಲಿ ಬೆರೆತ ರುಚಿಯಂತೆ, ತನುವಿನಲ್ಲಿ

ಜ್ಞಾನದ ಪರಿಮಳವೇ ಬೆರೆತಿದೆ. ಜ್ಞಾನ ತನುವಿನಲ್ಲಿ ತನ್ಮಯವಾಗಿದೆ. ಈ ಸೂತ್ರ ತಿಳಿದರೆ ಸಾಕು ಪದಾರ್ಥದಲ್ಲಿ ರುಚಿ ಹುಡುಕುವುದಿಲ್ಲ. ರುಚಿಗಾಗಿ ಸಾವು ನೋವುಗಳೂ ಸಂಭವಿಸುವುದಿಲ್ಲ.

■

ತನುವೆಂಬುದು ಷಡಕ್ಷರಿಯ ಮಹಾವೃಕ್ಷ

ಓಕಾಂರವೆಂಬ ವೃಕ್ಷದಲ್ಲಿ ಋಗ್ವೇದ,ಯಜುರ್ವೇದ
ಸಾಮವೇದ, ಅಥರ್ವಣ ವೇದಗಳೆಂಬ ನಾಲ್ಕು ಶಾಖೆಗಳು,
ವೇದಾಂಗಗಳೆಂಬ ಉಪಶಾಖೆಗಳು. ಶಾಸ್ತ್ರಂಗಳೆಂಬ ಅಂಕುರ
ಪಲ್ಲವಂಗಳು. ಪುರಾಣಂಗಳೆಂಬ ಪುಷ್ಪಗಳು.
ಆಗಮಂಗಳೆಂಬ ಕಾಯಿ ಬಲಿತು,
ಪಂಚಾಕ್ಷರಿ ಎಂಬ ಮಧುರಸ ಹಣ್ಣುಗಳು, ಅಗಣಿತ ಫಲವನು
ಅನಂತ ಕಾಲ ಭೋಗಿಸಲು ಮತ್ತು ಜಿಹ್ವೆಯೊಳಗೆ ಬಂದಿರಲು
ಭೋಗಿಸಿ ಸುಖಿಯಹುದಲ್ಲದೆ ಇತರ ವಿದ್ಯಂಗಳೆಂಬ
ಸಸಿಯ ಸಾಕಿ ಸಲಹಲುಂಟೆ ?
ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

- ಶರಣ ಉರಿಲಿಂಗಪೆದ್ದಿ

ಓಂನಮಃಶಿವಾಯ ಎಂಬುದು, ತಿಳಿದರೆ ಅರಿವಿನ ಸೂತ್ರ! ತಿಳಿಯದಿದ್ದರೆ ಶಬ್ದ.

ಓಂಕಾರವೆಂಬುದು ಒಂದು ವೃಕ್ಷ. ಆದರಲ್ಲಿ ವೇದಗಳ ನಾಲ್ಕು ಶಾಖೆಗಳಿವೆ. ವೇದಾಂತಗಳೆಂಬ ಉಪಶಾಖೆಗಳಿವೆ. ಶಾಸ್ತ್ರಗಳೆಂಬ ಅಂಕುರಗಳು ಪಲ್ಲವಿಸಿವೆ. ಪುರಾಣಗಳೆಂಬ ಪುಷ್ಪಗಳು ಆಗಮಂಗಳೆಂಬ ಕಾಯಿ ಬಲಿತು ಪಂಚಾಕ್ಷರಿಯೆಂಬ ಲೆಕ್ಕವಿಲ್ಲದ ಹಣ್ಣುಗಳು ಹುಟ್ಟಿವೆ. ಈ ನಮಃ ಶಿವಾಯ ಎಂಬ ಮಧು ರಸವುಳ್ಳ ಫಲವನ್ನು ಅನಂತ ಕಾಲದವರೆಗೆ ಭೋಗಿಸಿದರೂ ಸವೆಯದ ಸುಖ ನಾಲಿಗೆಗೆ ದೊರೆಯುವುದು.

ಓಂಕಾರ ವೆಂಬ ವೃಕ್ಷದ ಫಲ ಅನುಭವಿಸುವುದು ಬಿಟ್ಟು ಇತರ ವಿದ್ಯೆಗಳೆಂಬ ಸಸಿಯ ಸಾಕಿ ಸಲುಹಲುಂಟೆ ? ಎಂದು ಉರಿಲಿಂಗ ದೇವರು ಪ್ರಶ್ನಿಸಿದ್ದಾರೆ.

ಓಂನಮಃಶಿವಾಯ ಎಂಬ ವೃಕ್ಷವೇ ತಾನಾಗಿದ್ದಾನೆ ಎಂದು ಉರಿಲಿಂಗ ದೇವರು ಹೇಳಿದರೆ, ತನುವಿನಲ್ಲಿ ಓಂನಮಃಶಿವಾಯ ವೆಂಬ ಆರು ಶಾಖೆಗಳನ್ನು ಚನ್ನಬಸವಣ್ಣನವರು ಗುರ್ತಿಸಿದ್ದಾರೆ.

“ **ತ್ವಙ್ಮಯ** ವಾಗಿಹುದು **ಓಂ** ಕಾರ, **ರುದಿರ** ಮಯವಾಗಿಹುದು **ನ** ಕಾರ, **ಮಾಂಸ** ಮಯವಾಗಿಹುದು **ಮ** ಕಾರ, **ಮೇಧೋ** ಮಯವಾಗಿಹುದು **ಶಿ** ಕಾರ, **ಅಸ್ಥಿ** ಮಯವಾಗಿಹುದು **ವಾ** ಕಾರ, **ಮಜ್ಜಾ** ಮಯವಾಗಿಹುದು **ಯ** ಕಾರ. ಇಂತೀ ಷಡ್ಧಾತುವೇ ಷಡಕ್ಷರವಾಗಿ ಆವೇ ಲಿಂಗಾಂಗಗಳಾಗಿ, ಒಳ ಹೊರಗೆ ತೆರಹಿಲ್ಲದ ಸರ್ವಾಂಗವೆಲ್ಲವೂ ಲಿಂಗಮಯವಾದ ಇರವು. ಅದು ತಾನೇ ಶಿವನಿರವು. ಅದು

ತಾನೇ ಶಿವನ ಭವನ. ಅದು ತಾನೇ ಶಿವನ ವಿಶ್ರಾಮ ಸ್ಥಾನ. ಇಂತೀ ಷಟಸ್ಥಲ ಬ್ರಹ್ಮ ವನರಿದಾತನೇ ಶರಣ. ಆತನೇ ಲಿಂಗೈಕ್ಯ. ಇಂತೀ ಷಟಸ್ಥಲ ಬ್ರಹ್ಮವೆಂಬುದು ಅಪ್ರಮಾಣ ಅಗೋಚರ. ಅನಿರ್ವಾಚ್ಯವಾದ ಕಾರಣ, ವಚಿಸುತ್ತ ವಚಿಸುತ್ತ ವಚಿಸುತ್ತ ವಚನಗೆಟ್ಟಿತ್ತು. ಉಪ್ಪು ನೀರೊಳು ಕೂಡಿದಂತೆ, ವಾರಿಕಲ್ಲು ಅಂಬುಧಿಯೊಳು ಬಿದ್ದಂತೆ, ಶಿಖಿ ಕರ್ಪೂರ ಯೋಗದಂತೆ ಆದೆನಯ್ಯ ಕೂಡಲ ಚೆನ್ನ ಸಂಗಯ್ಯನಲ್ಲಿ, ಬಸವಣ್ಣ ಭಾವ ಹಸ್ತ ಮುಟ್ಟಿದ ಕಾರಣ ''

ಬಸವಣ್ಣನವರು ಚೆನ್ನಬಸವಣ್ಣ ನವರ ತನುವಿನಲ್ಲಿದ್ದ ಓಂನಮಃ ಶಿವಾಯ ವೆಂಬ ಅಗಾಧವಾದ ಸಂಪತ್ತನ್ನು ಭಾವಹಸ್ತ ಮುಟ್ಟಿ ತೋರಿಸಿದರು. ತನುವಿನಲ್ಲಿದ್ದ ಅರಿವನ್ನು ತನುವಿನ ಮನಕೆ ತಿಳಿಯುವ ಭಾವದಿಂದ ಹೇಳಿದರು. ಅವರನ್ನು ಶಿಷ್ಯನನ್ನಾಗಿಸಿಕೊಳ್ಳಲಿಲ್ಲ. ಬಸವಣ್ಣನವರು ಗುರುವಾಗಲಿಲ್ಲ.

ಸಕಲ ತನುಗಳು ಓಂಕಾರ ವೆಂಬ ವೃಕ್ಷಗಳೇ. ಆ ತನುವಿನಿಂದಲೇ ವೇದ, ಉಪನಿಷತ್ತು, ಭಗವದ್ಗೀತೆ ಬೈಬಲ್‌ಗಳು ಬಂದಿವೆ. ಶಾಸ್ತ್ರ ಪುರಾಣ, ಆಗಮಗಳು ಹುಟ್ಟಿವೆ. ಇವೆಲ್ಲ ನಮಃಶಿವಾಯ ಎಂಬ ತನುವಿನ ಫಲಗಳು. ಅವುಗಳನ್ನು ಉಣ್ಣಬೇಕು. ತನುವಿನಲ್ಲಿರುವ ಫಲಗಳನ್ನುಣ್ಣಲು ಜ್ಞಾನಿಗಳೊಬ್ಬರು ಸೂಚಿಸಬೇಕು. ಅಥವಾ ಹಸಿವಿನ ಆಸೆಯಿಂದ ತಾನೇ ತನುವಿನ ಮುಖದತ್ತ ಚಲಿಸಬೇಕು. ಆ ಫಲ ಉಂಡು ತಾನೇ ಓಂಕಾರ ನಾಗಬೇಕು. ಷಡಕ್ಷರಿಯಾಗಬೇಕು.

ಓಂಕಾರ, ಪಂಚಾಕ್ಷರಿ, ಷಡಕ್ಷರಿ ಮಂತ್ರ ಬೋಧಿಸಿ ಶಿಷ್ಯನನ್ನಾಗಿ ಮಾಡಿಕೊಳ್ಳುವ ಗುರುಗಳಿಗೇನೂ ಕಮ್ಮಿಯಿಲ್ಲ. ಸದಾ ಅವರು ಗುರುಗಳೇ. ಬೋಧೆ ಪಡೆದವರು ಸದಾ ಶಿಷ್ಯರೇ ಆಗಿರುತ್ತಾರೆ.

ಒಡೆದ ಮಡಕೆಗೆ ಒತ್ತು ಮಣ್ಣು ಹೇಗೆ ನಿಲ್ಲುವುದಿಲ್ಲವೋ ಹಾಗೆ ಗುರುಗಳು ಶಿಷ್ಯನಿಗೆ ಬೋಧಿಸಿದ ಬೋಧೆ ನಿಲ್ಲುವುದಿಲ್ಲ. ಬೋಧಿಸುವ ಗುರುಗಳಿಗೆ ಶರಣರು "ಕಾಳಗುರಿಕಿ ಗುರುವಿಗೆ ಕಾಳಗುರಿಕಿ ಶಿಷ್ಯ" ಇವರಿಬ್ಬರಿಗೆ ಮುಕ್ತಿಯಿಲ್ಲ ಎಂದಿದ್ದಾರೆ.

ತನುವಿನಲ್ಲಿ ರಕ್ತ, ಮಾಂಸ, ಮೂಳೆ ಮಜ್ಜಾ ಮೇಧಸ್ಸು ಇದೆ. ಇದೇ ನಮಃ ಶಿವಾಯ ವೆಂಬ ಐದಕ್ಷರಗಳು. ಈ ಪಂಚಾಕ್ಷರಿಯೆಂಬ ಮಂತ್ರವನ್ನು ಓಂಕಾರ ವೆಂಬ ಸುಂದರವಾದ ಚರ್ಮದಿಂದ ಪ್ಯಾಕ್ ಮಾಡಲ್ಪಟ್ಟಿದೆ. ಕಾಣುವ ತನುವುಗಳೆಲ್ಲ ಷಡಕ್ಷರಿ ಮಂತ್ರಗಳೇ ! ಆಡುವ ಮಾತುಗಳೆಲ್ಲ ಮಂತ್ರವೇ ಆಗಿದೆ. ತಿಳಿಯಬೇಕಷ್ಟೆ.

ಯಾರನ್ನು ದೂಷಿಸುವುದು? ಯಾರನ್ನು ಪ್ರೀತಿಸುವುದು? ಸಾವು ಸಮೀಪಿಸುವವರೆಗೆ ತಿಳಿಯದೆ ಓಂಕಾರ ಜಪಿಸಿದರೆ ಶಬ್ದವಾಯಿತೇ ಹೊರತು ಅರಿವಾಗಲಿಲ್ಲ. ಮಂತ್ರವಾಗಲಿಲ್ಲ. ಮಧುರಸದ ಫಲವಾಗಲಿಲ್ಲ!

ತನುವೆಂಬುದು ಷಡಕ್ಷರಿಯ ಮಹಾ ವೃಕ್ಷ, ಬ್ರಹ್ಮನ ಬೇರಿಲ್ಲದ ಮರ. ಈ

ಮರದ ಕೆಳಗೆ ಭ್ರಮೆಯ ಇತರ ಸಸಿಗಳು ಸಾಕಿ ಸಲುಹಲುಂಟೆ? ಸಲುಹಿದರೂ ಅವು ಹುಲುಸಾಗಿ ಬೆಳೆಯಲಾರವು. 'ಆಲದ ಮರದ ಕೆಳಗೆ ಯಾವ ಸಸಿಯೂ ಬೆಳೆಯುವುದಿಲ್ಲ' ಎಂಬ ಜನಪದ ಗಾದೆಯೂ ಇದೆ. ತನುವು ಓಂಕಾರ ವೆಂಬ ಮಹಾವೃಕ್ಷ, ಬೋಧಿವೃಕ್ಷ. ಇದರಲ್ಲಿ ಸಂಪತ್ತಿದೆ. ತನುವು ಶಿವನಿರುವು, ಶಿವನ ಭವನ, ಶಿವನ ವಿಶ್ರಾಮಸ್ಥಾನ, ಷಟಸ್ಥಲ ಬ್ರಹ್ಮ, ಅಪ್ರಮಾಣ, ಅಗೋಚರ. ಉಪ್ಪು ನೀರಲ್ಲಿ ಬೆರೆತಂತೆ, ಮಂಜುಗಡ್ಡೆ ಭೂಮಿಯಲ್ಲಿ ಬೆರೆತಂತೆ ಕರ್ಪುರ ಬೆಂಕಿಯಲ್ಲಿ ಬೆರೆತಂತೆ ಅಜ್ಞಾನ ಜ್ಞಾನದಲ್ಲಿ ಬೆರೆಯಬೇಕಷ್ಟೇ.

■

ಅವನಿದ್ದರೆ ನಾನು ಶಿವ

ಎನ್ನೊಳಗೆ ನೀನು ಪ್ರವೇಶ, ನಿನ್ನೊಳಗೆ ನಾನು ಪ್ರವೇಶ.
ದೇವ ನೀನಲ್ಲದಿಲ್ಲ, ಭಕ್ತ ನಾನಲ್ಲದಿಲ್ಲ.
ಈ ಪರಿಯಲ್ಲಿ ಮಾಡುವರಿನ್ನಾರು ಹೇಳಾ?
ಎನಗೆ ನೀನೇ ಗತಿ , ನಿನಗೆ ನಾನೆ ಗತಿ .
ಇನ್ನೇಕೆ ಜವನಿಕೆ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ ?

-ಶರಣ ಉರಿಲಿಂಗಪೆದ್ದಿ

ದೇಹ ಮೂರ್ತರೂಪವಾದರೆ ಅರಿವು ಅಮೂರ್ತ ರೂಪ. ನಾನು ಕಾಣುತ್ತೇನೆ. ಅವನು ಕಾಣುವುದಿಲ್ಲ. ಅವನಿದ್ದುದಕ್ಕೆ ನಾನು ಕಾಣುತ್ತೇನೆ. ಅವನಿಲ್ಲದಿದ್ದರೆ ನಾನೂ ಇಲ್ಲ. ಅವನಿಲ್ಲದ ನಾನು ಶವ. ಅವನಿದ್ದ ನಾನು ಶಿವ !

ಶಿವನನ್ನು ಹೊರಗೆ ಹುಡುಕಿದರೆ ಯಾರೇನು ಮಾಡಿಯಾರು? ಜಲ ನಾನಾದರೆ, ಜಲಕ್ಕೆ ಕಾರಣವಾದ ಜಲಜನಕ, ಆಮ್ಲ ಜನಕ ಅವನಲ್ಲವೆ? ಅವೆರಡೂ ಕೂಡಲು ಕಾರಣವಾದ ಬಯಲು ಅವನಲ್ಲವೆ?

ತಂದೆಯ ಬಿಂದುವಿನಲ್ಲಿ ಜಲವಾಗಿ ನಾನು ಬಂದರೆ, ಆ ಬಿಂದುವಿನಲ್ಲಿ ಜೀವಜಲವಾಗಿ ಅವನು ಬರಲಿಲ್ಲವೆ? ತಾಯಿಯ ಗರ್ಭಕ್ಕೆ ಜಲವಾಗಿ ಹೋದರೆ ಹೋಗುವ ವೇಗದಲ್ಲಿ ಅವನಿಲ್ಲವೆ? ಜಲ ನಾನಾದರೆ ಪಾಕವಾಗಿ ನನ್ನೊಳು ಬೆರೆತ. ನನಗೂ ಅವನಿಗೂ ಅವಿನಾಭಾವ ಸಂಬಂಧ !

ತಾಯಿ ಗರ್ಭದಲ್ಲಿ ಪಾಕಗಟ್ಟಿಗೊಂಡು ಎಲುಬು ತೊಗಲು ರಕ್ತ ಮಾಂಸ ಮಜ್ಜಾ ಮೇದಸ್ಸು ನಾನಾದರೆ, ಅವುಗಳಿಗೆ ಚೇತನವಾಗಿ ಅವನು ಬೆರೆತ !

ಮೂಗು ನಾನಾದರೆ ವಾಸನೆ ನೀನಾದೆ. ಕಿವಿ ನಾನಾದರೆ ಶಬ್ದ ನೀನಾದೆ. ಕಣ್ಣು ನಾನಾದರೆ ದೃಷ್ಟಿ ನೀನಾದೆ. ಚರ್ಮ ನಾನಾದರೆ ಸ್ಪರ್ಶ ನೀನಾದೆ. ನಾಲಿಗೆ ನಾನಾದರೆ ರುಚಿ ನೀನಾದೆ. ನನಗೂ ನಿನಗೂ ಅವಿನಾಭಾವ ಸಂಬಂಧ. ಎನ್ನೊಳಗೆ ಅವನು ಪ್ರವೇಶ ಅವನೊಳಗೆ ನಾನು ಪ್ರವೇಶ. ಅವನಿಲ್ಲದೆ ನಾನಿಲ್ಲ. ನಾನಿಲ್ಲದೆ ಅವನೂ ಇಲ್ಲ. ತನುವಿಗೂ ತನುವಿನೊಡೆಯನಿಗೂ ಅವಿನಾಭಾವ ಸಂಬಂಧ ! ತನು ನಾನಾದರೆ ತನುವಿನ ಅರಿವು ನೀನು. ಅನಂತ ನೀನಾದರೆ ಅನಂತದ ಕಣ ನಾನು.

ಈ ಪರಿಯಲ್ಲಿ ನನಗೆ ನೀನಾಗಿ ನೋಡುವರಿನ್ನಾರು ಹೇಳಾ? ಎನಗೆ ನೀನೇ ಗತಿ, ನಿನಗೆ ನಾನೇ ಗತಿ. ಗರ್ಭದಲ್ಲಿ ನಮ್ಮಿಬ್ಬರನ್ನು ಬಿಟ್ಟು ಬೇರಾರು ಇರಲಿಲ್ಲ. ನಾನೂ ನೀನೂ ಇಬ್ಬರೇ ; ಇಬ್ಬರಲ್ಲ ಒಬ್ಬನೇ. ನನ್ನೊಳಗೆ ನೀನಿದ್ದೆ, ನಿನ್ನೊಳಗೆ ನಾನಿದ್ದೆ.

ಹೀಗಿದ್ದಮೇಲೆ ಒಬ್ಬನಲ್ಲನೇ? ಎರಡೊಂದಾದ ಬಗೆಯಲ್ಲವೆ. ಜಲದೊಳಗೆ ಗಾಳಿ ಬೆಂಕಿ ಹುದುಕಲು ಸಾಧ್ಯವೆ ? ಗಾಳಿ ಬೆಂಕಿ ಇಲ್ಲದಿದ್ದರೆ ಜಲವಾಗಲು ಸಾಧ್ಯವೆ ?

ಗರ್ಭದಿಂದ ಹೊರ ಬಂದೆ, ತಾಯಿ ಎಂಬ ಬಂಧುವಿನ ಪರದೆ ಮರೆಮಾಡಿದೆ. ನೀನು ನನ್ನ ಗರ್ಭದಲ್ಲಿ ಮರೆಯಾದೆ. ನೀನು ಹತ್ತಿರವಿದ್ದರೂ ನಾನು ದೂರವಾದೆ. ತಂದೆ ಹತ್ತಿರವಾದ. ಬಂಧು ಬಳಗ ಹತ್ತಿರವಾಯಿತು. ಹೆಂಡತಿ ಮಕ್ಕಳು ಹತ್ತಿರವಾದರು. ಅಧಿಕಾರ ರಾಜಕೀಯ ಹತ್ತಿರವಾಯಿತು. ಪದವಿ ಪುರಸ್ಕಾರ ಹತ್ತಿರವಾಯಿತು. ವೇದಿಕೆ ಪುಸ್ತಕ ಹತ್ತಿರವಾದವು. ಮಠ, ಪೀಠ ಹತ್ತಿರವಾದವು. ಮಂದಿರಗಳು ಪುಣ್ಯ ಕ್ಷೇತ್ರಗಳು ಹತ್ತಿರವಾದವು. ನೀನು ಮಾತ್ರ ನನ್ನಲ್ಲಿಯೇ ಇದ್ದರೂ ಬಹುದೂರವಾದೆ !

ಅಲ್ಲಿ ಇಲ್ಲಿ ನಾಯಿಯಂತೆ ಎಲ್ಲಂದರಲ್ಲಿ ಸುಳಿಯುವಂತೆ ಮಾಡಿದೆ. ನಾಯಿಯ ಒಡೆಯ ನೀನು. ನೀನು ಸಾಕಿದ ನಾಯಿ ನಾನು. ನಾಯಿಗೆ ಬೆಲ್ಟ್ ಕಟ್ಟಿ ಬೆನ್ನ ಹಿಂದಿದ್ದು ಎಲ್ಲಂದರಲ್ಲಿ ಬಿಡುವುದು ನಿನಗೆ ಯೋಗ್ಯವೇ ? ನಿನ್ನ ನನ್ನ ಮಧ್ಯೆ ನೀನೇ ಕಟ್ಟಿದ ಬೆಲ್ಟ್ ನಿನ್ನನ್ನು ನೋಡದಂತೆ ಮಾಡುವಷ್ಟು ಕಠಿಣವೇ ? ನಿನ್ನನ್ನು ನಾನು ಹೊರಗೆ ನೋಡಲು ಸಾಧ್ಯವೆ ?

ರಾಜಕೀಯಕ್ಕೆ ತಳ್ಳಿದವ ನೀನೆ, ರಾಡಿ ಎರಚಿದವನೂ ನೀನೇ ! ಮಠಕ್ಕೆ ತಳ್ಳಿದವ ನೀನೇ, ಕಲ್ಲಿಲೆ ಹೊಡೆಸಿದವ ನೀನೆ ! ವ್ಯಾಪಾರಕ್ಕೆ ತಳ್ಳಿದವ ನೀನೆ, ಮೋಸಕ್ಕೆ ಪ್ರೇರಣೆ ನೀಡಿದವ ನೀನೆ ! ಉಪನ್ಯಾಸಕ್ಕೆ ತಳ್ಳಿ ಕೇಳುಗನನ್ನು ಮರೆಸಿದವನು ನೀನೆ ಅಲ್ಲವೆ ?

ಎನಗೆ ನಿನೇ ಗತಿ, ನಿನಗೆ ನಾನೇ ಗತಿಯಾದರೂ ಇನ್ನೇಕೆ ಈ ಪರದೆ ಹರಿಯಬಾರದೆ ತಂದೆ ? ಎಂದು ನಾನಾ ಪರಿಯಲ್ಲಿ ಆಲಾಪಿಸಿದ್ದಾರೆ ಅಂಗಲಾಚಿದ್ದಾರೆ ಉರಿಲಿಂಗ ದೇವರು. ಇದು ಅರಿವಿನ ಆಲಾಪ ! ಉರಿಲಿಂಗ ದೇವರ ಆಲಾಪ.

■

ಅರಿವಿನ ಊಟ ಅಮೃತ

ಸಹಜ ಶಿವಭಕ್ತರಾದವರು
ತಟ್ಟೆ ಬಟ್ಟಲೊಳಗುಂಡದ್ದು ಇಷ್ಟಲಿಂಗದ ಪ್ರಸಾದವು.
ಕರಕಮಲದೊಳಗುಂಡದ್ದು ಪ್ರಾಣಲಿಂಗದ ಪ್ರಸಾದವು.
ಪಾವುಡೆ ಪರ್ಣದೊಳುಂಡದ್ದು ಭಾವಲಿಂಗದ ಪ್ರಸಾದವು.
ಲಿಂಗದಲ್ಲಿ ಮನ ನೋಟವಿಲ್ಲದೆ ಕೊಂಬುದು ಅನರ್ಪಿತ-
ಅದು ಕಾರಣ ಲಿಂಗ ನೆನಹಿಂದೆ ಸ್ವೀಕರಿಸುವದು
ಎಂದು ಅರುಹಿದಾತ ನಮ್ಮ ಶಾಂತ ಕೂಡಲ ಸಂಗಮದೇವ.

-ಗಣದಾಸಿ ವೀರಣ್ಣ

ಉಣ್ಣುವುದರಲ್ಲಿ ಮನುಷ್ಯ ಅನೇಕ ನಿಯಮಗಳನ್ನು ಅಳವಡಿಸಿ ಕೊಂಡದ್ದು ಸಹಜ. ಎಲೆಯಲ್ಲಿ, ತಟ್ಟೆಯಲ್ಲಿ, ಬಟ್ಟಲಲ್ಲಿ, ಬಟ್ಟೆಯಲ್ಲಿ , ಬೊಗಸೆ ಯಲ್ಲಿ ಹೀಗೆ ಅನೇಕ ಉಪಕರಣಗಳನ್ನು ಬಳಸಿ ಉಣ್ಣುತ್ತಾನೆ.

ಮನೆಯಲ್ಲಿದ್ದ ಪರಿಕರಗಳನ್ನು ಬಳಸಿ ಉಣ್ಣುವುದು ಸಹಜ. ಆದರೆ ನಿಯಮ ಹಾಕಿಕೊಂಡು ಉಣ್ಣುತ್ತಾನಲ್ಲ ಅದು ವ್ಯರ್ಥ.

ಸಾಧನೆಯಲ್ಲಿರುವವರು ಉಣ್ಣುವುದಕ್ಕಾಗಿಯೆ ಕೆಲ ನಿಯಮಗಳನ್ನು ಹಾಕಿಕೊಂಡಿರುತ್ತಾರೆ. ಬಾಳೆ ಎಲೆ, ಮುತ್ತುಗದ ಎಲೆ, ಬೆಳ್ಳಿ ತಟ್ಟೆ , ಚಿನ್ನದ ತಟ್ಟೆ, ಕೆಲವರಿಗೆ ಮಣ್ಣಿನ ಪಾತ್ರೆಯೇ ಆಗಬೇಕು. ಹೀಗೆ ವಸ್ತುಗಳ ಮೇಲೆ ಭಾವವಿಟ್ಟು ಉಣ್ಣುವುದು ಒಂದು ನಿಯಮ.

ಮನದ ಬಯಕೆಯಿಂದ ತಟ್ಟೆ ಬಟ್ಟಲೊಳಗುಂಡ, ಪ್ರಾಣದ ಬಯಕೆ ಯಿಂದ ಬೊಗಸೆಯಲುಂಡ, ಭಾವದಿಂದ ವಸ್ತ್ರ ಪರ್ಣದಲುಂಡ.

ಊಟಕ್ಕೆ ಯಾವ ಪರಿಕರ ಬಳಸಿದಡೇನು ? ಮನ ಊಟದಲ್ಲಿ ನೆಡದಿ ದ್ದರೆ , ಮಾಡಿದ ಊಟವೆಲ್ಲ ತನುವಿಗೆ ನಂಜು. ಉಂಡದ್ದು ಅಂಟುವುದಿಲ್ಲ. ಮನಕ್ಕೆ ಪರಿಕರ ಪದಾರ್ಥದ ಚಿಂತೆ, ತನುವಿಗೆ ಹಸಿವಿನ ಚಿಂತೆ. ಅರಿವಿಗೆ ಊಟ ಬೇಕಿಲ್ಲ.

ಮನ, ತಟ್ಟೆ, ತಂಬಿಗೆ, ಗ್ಲಾಸ್, ಪದಾರ್ಥಗಳನ್ನು ವೀಕ್ಷಿಸಿ, ಇಲ್ಲದ ಪದಾರ್ಥಗಳನ್ನು ಬಯಸಿ, ತನುವನ್ನು ಉಣ್ಣದಂತೆ ಮಾಡುತ್ತದೆ. ಮನದ ಜಾಡು ಹಿಡಿದ ತನು, ಪದಾರ್ಥ ಸವಿಯದೆ ಜಡ ವಸ್ತುವಿನಂತೆ ಹೊಟ್ಟೆಗೆ ಸೇರಿಸುತ್ತದೆ. ಅರಿವಿನೊಂದಿಗೆ ಉಣ್ಣದಿದ್ದರೆ ಉಂಡ ಊಟವೆಲ್ಲ ವಿಷ.

ಉಣ್ಣುವ ಸಮಯದಲ್ಲಿ ಮತ್ತೊಂದು ನೆನೆಯುವ ಮನಕ್ಕೆ ಕಡಿವಾಣ ಹಾಕಲು

ಬರುವುದಿಲ್ಲ. ಮನವನ್ನು ಕಟ್ಟಿ ಹಾಕುವ ಸಾಧನಗಳಾಗಲಿ ಉಪಕರಣಗಳಾಗಲಿ ಇಲ್ಲವೇ ಇಲ್ಲ. ಏಕೆಂದರೆ ಮನವೆಂಬುದೇ ಇಲ್ಲ. ಇಲ್ಲದ ಮನ ಇದೆಯೆಂದು ದೃಢವಾಗಿದೆ. ಅದನ್ನು ನಿಯಂತ್ರಣದಲ್ಲಿಡಬೇಕೆಂಬ ಮಾತುಗಳೂ ಕೇಳಿಬರುತ್ತವೆ. ಆದರೂ ನಿಯಂತ್ರಣದಲ್ಲಿಡಲೂ ಸಾಧ್ಯವಾಗುವುದೇ ಇಲ್ಲ.

ಉಣ್ಣುವ ಊಟದಲ್ಲಿ ಮನ ನೆಡದೆ ಉಣ್ಣದಂತೆ ಮಾಡುತ್ತದೆ. ಮಾಡುವ ಕೆಲಸದಲ್ಲಿ ಮನ ನೆಡದೆ ಮಾಡದಂತೆ ಮಾಡುತ್ತದೆ. ಓದಿನಲ್ಲಿ ಮನ ನೆಡದೆ ಓದದಂತೆ ಮಾಡುತ್ತದೆ. ಕೇಳುವ ಉಪನ್ಯಾಸದಲ್ಲಿ ಮನ ನೆಡದೆ ಕೇಳದಂತೆ ಮಾಡುತ್ತದೆ. ಮನದ ನಿಯಂತ್ರಣಕ್ಕಾಗಿ ಜಪ-ತಪ-ಅನುಷ್ಠಾನಗಳು ಹುಟ್ಟಿಕೊಂಡವು. ಆದರೂ ಮನವನ್ನು ಬಂಧಿಸಲು ಸಾಧ್ಯವಾಗುವುದೇ ಇಲ್ಲ.

ಇದ್ದ ವಸ್ತುವನ್ನು ಬಂಧಿಸಬಹುದು. ಇಲ್ಲದ ವಸ್ತುವನ್ನು ಬಂಧಿಸುವುದು ಹೇಗೆ ಸಾಧ್ಯ ? ಮನ ಇಲ್ಲದ ವಸ್ತು. ತಟ್ಟೆಯಲ್ಲಿದ್ದ ವಸ್ತುವನ್ನು ಮನ ನೋಡುವುದಿಲ್ಲ. ತಟ್ಟೆಯಲ್ಲಿ ಇಲ್ಲದ ವಸ್ತುಗಳನ್ನು ನೆನೆದು ಇದ್ದ ವಸ್ತುಗಳನ್ನು ಉಣ್ಣದಂತೆ ಮಾಡಿ ಇಲ್ಲದ ವಸ್ತುಗಳೆಡೆಗೆ ತನುವನ್ನು ಕರೆದುಕೊಂಡು ಹೋಗುವುದೇ ಮನದ ಕೆಲಸ. ಆ ಮನದೊಂದಿಗೆ ಉಂಡರೆ ರುಚಿ ಹೇಗೆ ಸಾಧ್ಯ ? ಲಿಂಗದ ನೆನಹಿನಿಂದ ಉಣ್ಣಲು ತಿಳಿಯ ಹೇಳಿದ್ದಾರೆ ವೀರಣ್ಣ ಶರಣರು. ತನುವಿಗೆ ಹಸಿವೆಯಾಗಿದೆ ಅದಕ್ಕೆ ಪದಾರ್ಥ ಬೇಕು. ಅರಿವಿನಿಂದ ನೋಡಿದರೆ ಪದಾರ್ಥವೆಲ್ಲವೂ ಮೃಷ್ಟಾನ್ನವೇ. ಒಂದೊಂದು ವಸ್ತುವಿನಲ್ಲಿ ತನ್ನದೇ ಆದ ರುಚಿ ಇದೆ. ಅರಿವಿಗೆ ತಟ್ಟೆ ಯಾವುದಾದರೇನು ಅನ್ನ ಮುಖ್ಯ ! ಅನ್ನವನ್ನು ತನುವು ಅರಿವಿನೊಂದಿಗೆ ಸವಿದು ಸಂತುಷ್ಟವಾಗುತ್ತದೆ. ಹರಿದಾಡುವ ಮನ ಅರಿವಿನಲ್ಲಿ ಬಂಧಿಯಾಗಿ ತಟ್ಟೆಯಲ್ಲಿದ್ದ ಪದಾರ್ಥದೊಂದಿಗೆ ಬೆರೆಯುತ್ತದೆ.

ಊಟ ಮಾಡುವಾಗ ಮನ ಊಟದಲ್ಲಿ ಬೆರೆಯುತ್ತದೆ. ಸ್ನಾನ ಮಾಡುವಾಗ ಸ್ನಾನದಲ್ಲಿ, ಕೆಲಸ ಮಾಡುವಾಗ ಕೆಲಸದಲ್ಲಿ, ಓದುವಾಗ ಓದಿನಲ್ಲಿ ಮನ ಬೆರೆತು ನಿರ್ಮನವಾಗುತ್ತದೆ. ಆಗ ಊಟ, ಸ್ನಾನ, ಕೆಲಸ, ಓದು, ಉಪನ್ಯಾಸ ಎಲ್ಲವೂ ರುಚಿ !

■

ಹೆಬ್ಬಾವು ಮತ್ತು ಗಾರುಡಿಗ

ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ
ವಿಷವೇರಿತ್ತಯ್ಯ ಆಪಾದಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗಾತನೆ ಗಾರುಡಿಗ ಕಾಣಾ ! ರಾಮನಾಥ

-ದೇವರ ದಾಸಿಮಯ್ಯ

ಹಸಿದ ಹೆಬ್ಬಾವು ಆಹಾರಕ್ಕಾಗಿ ಸಿಕ್ಕ ಪ್ರಾಣಿಯನ್ನು ಹಿಡಿದು ಹಿಂಡಿ ಹಿಪ್ಪಿ ಮಾಡಿ ತಿನ್ನುತ್ತದೆ. ಹಸಿವಿನ ತೃಷೆ ಅಡಗಿದ ಮೇಲೆ ಆನಂದದಿಂದ ವಿರಮಿಸುತ್ತದೆ. ಇದು ಹೆಬ್ಬಾವಿನ ದಿನಚರಿ.

ದಾಸಿಮಾರ್ಯರು ಹೇಳಿದ ಹೆಬ್ಬಾವು ತನುವಿನ ಬಸಿರಿನಿಂದ ಬಂದದ್ದು. ತನುವನ್ನು ವಿಷಯದಿಂದ ಕ್ಷಣ ಕ್ಷಣಕ್ಕೂ ಹಿಂಡಿ ಹಿಪ್ಪಿ ಮಾಡಿ ತಿನ್ನುವುದೇ ಹೆಬ್ಬಾವಿನ ಕಾಯಕ. ಪಾದದಿಂದ ಹಿಡಿದು ಮಸ್ತಕದವರೆಗೂ ಇದರ ವಿಷದ ಸಂಚಾರ.

ಕ್ಷಣ ಕ್ಷಣಕ್ಕೂ ಹಿಂಡಿ ತಿನ್ನುವ ತನುವಿನಲ್ಲಿರುವ ಹೆಬ್ಬಾವಿಗೆ ಅನ್ನ ಹಾಕಿದರೂ ತೃಪ್ತಿಯಿಲ್ಲ.

ವಿಷಯದ ಹಸಿವಿನ ತೃಷೆಗಾಗಿ ತನ್ನದೇ ಆದ ಅನ್ನವಿದ್ದರೂ ತನುವಿನ ಬಸುರಿನಿಂದ ಬಂದ ವಿಷಯವೆಂಬ ಈ ಹೆಬ್ಬಾವಿಗೆ ಒಂದು ತನುವಿನ ಊಟದ ಸುಖ ಸಾಲದು, ಕಂಡ ತನುಗಳನ್ನೆಲ್ಲ ತಿನ್ನುವ ಬಯಕೆ, ಕಣ್ಣಿನಿಂದ, ಮನದಿಂದ, ಸ್ಪರ್ಶದಿಂದ, ವಾಸನೆಯಿಂದ, ಶಬ್ದದಿಂದ ಉಣ್ಣುವ ಬಯಕೆ. ಹೆಬ್ಬಾವಿನ ಬಯಕೆ ತೀರದ ಬಯಕೆ. ತನುವಿನ ರೋಮ ರೋಮಗಳಲ್ಲಿ ಇದರ ವಾಸ.

ಬಸಿರಿನಿಂದ ಬಂದ ಹೆಬ್ಬಾವಿಗೆ ಒಮ್ಮೆ ವಿಷಯದ ಹಸಿವಾದರೆ, ಮತ್ತೊಮ್ಮೆ ಅಧಿಕಾರದ ಹಸಿವು, ಶ್ರೀಮಂತಿಕೆಯ ಹಸಿವು, ಪಾಂಡಿತ್ಯದ ಹಸಿವು, ಪದವಿಯ ಹಸಿವು, ಪಡೆದಷ್ಟೂ ಪಡೆಯಬೇಕೆನ್ನುವ ಹಸಿವು ! ಹಿಂಗದ ಹಸಿವಿನ ನಂಜು ತನುವಿನ ತುಂಬಾ ತುಂಬಿದೆ.

ತನುವಿನ ಗರ್ಭದಿಂದ ಬಂದ ಹಾವು ತನುವನ್ನೇ ತಿಂದರೆ ಹೇಗೆ ? ಹಾವು ಬಯಸಿದ ಊಟಕ್ಕೆ ತನು ಆಹಾರವಾಗಬೇಕೆ ? ಹಸಿದ ಹಾವಿನಂತೆ ತನು ನಡೆಯಬೇಕೆ? ಒಡಲು ಒಡೆಯನದೋ ಹಾವಿನದೋ ? ಹಾವು ಹೇಳಿದಂತೆ ಒಡಲು ಕೇಳಬೇಕೆ ಗೆದ್ದಲು ಕಟ್ಟಿದ ಮನೆಯಲ್ಲಿ ಹಾವು ಬಂದು ಸೇರಿ ಗೆದ್ದಲಿಗೇ ಮುಳುವಾದರೆ ಹೇಗೆ ?

ಒಡಲೊಡೆಯ ಕಟ್ಟಿದ ಮನೆಯಲ್ಲಿ ಹಸಿವೆಂಬ ಹೆಬ್ಬಾವು ಬಂದು

ಒಡಲಿನೊಂದಿಗೆ ಸುಖಿಸಿದರೆ ಹೇಗೆ ? ಜನ ಹಾವು ನೋಡುವುದಿಲ್ಲ. ಒಡಲು ನೋಡುತ್ತಾರೆ. ಹಾವಿಗೆ ಶಿಕ್ಷೆಯಿಲ್ಲ, ಒಡಲಿಗೆ ಶಿಕ್ಷೆ! ಒಡಲು ಒಡೆಯನದು !

ಹಸಿವಿಗೆ ಅನ್ನವನಿಕ್ಕಿ ಹಾವಿನ ವಿಷ ಇಳಿಸುವ ಶಕ್ತಿ ಒಡಲೊಡೆಯನಿಗೆ ಮಾತ್ರವಿದೆ. ಒಡಲೊಡೆಯ ಗಾರುಡಿಗ ! ಹಾವು ಹೇಳಿದಂತೆ ಕೇಳುವವನಲ್ಲ. ಹಾವಿನ ವಿಷ ತೆಗೆದು ತನ್ನಂತೆ ಆಡಿಸುವವ !

ಹಾವಿನಿಚ್ಛೆಯಂತೆ ತನು ಕುಣಿದರೆ, ಗಾರುಡಿಗನಿಚ್ಛೆಯಂತೆ ಹಾವು ಕುಣಿಯುತ್ತದೆ.

ತನುವಿನಲ್ಲಿ ಜ್ಞಾನವಿದೆ. ಜ್ಞಾನವೇ ಅದರ ಕಾಯಕ. ಆದರೆ ಅಜ್ಞಾನ ಆವರಿಸಿಕೊಂಡಿದೆ. ತನುವಿಗೆ ಅಜ್ಞಾನದ ಹಸಿವು ಬಲು ರುಚಿ. ಉಂಡಷ್ಟೂ ಉಣ್ಣಬೇಕೆನಿಸುತ್ತದೆ. ಉಣ್ಣುವ ಕಾತುರದಲ್ಲಿ ಅಜ್ಞಾನ ತನುವನ್ನೇ ಬಳಸಿಕೊಳ್ಳುತ್ತದೆ. ಅಜ್ಞಾನಕ್ಕೆ ಅಧಿಕಾರದ ಹಸಿವು, ವಿಷಯದ ಹಸಿವು ಶ್ರೀಮಂತಿಕೆಯ ಹಸಿವು, ಪಾಂಡಿತ್ಯದ ಹಸಿವು, ಜಾತಿ, ಮತ, ಪಂಥದ ಹಸಿವು. ಹಸಿವಾದಾಗೊಮ್ಮೆ ತನುವನ್ನೇ ಬಳಸಿಕೊಂಡು ಉಣ್ಣುತ್ತದೆ. ತನುವೇ ಅದರ ವಾಸಸ್ಥಾನ. ಬಯಕೆಯಾದ ವಸ್ತುವಿನತ್ತ ತನುವನ್ನು ಸೆಳೆದೊಯ್ಯುತ್ತದೆ. ತನುವಿನೊಂದಿಗೆ ಉಣ್ಣುತ್ತದೆ. ಆದರೆ ತನುವು ಅರಿವಿನ ಸೊತ್ತು ! ಅರಿವು ಅಜ್ಞಾನದ ಗಾರುಡಿಗ !

ವಿಷಯ, ಅಧಿಕಾರ, ಶ್ರೀಮಂತಿಕೆ, ಜಾತಿ, ಮತ, ಪಂಥ ಅಜ್ಞಾನದ ಹಸಿವೆಂಬ ಹೆಬ್ಬಾವಿನ ಮೇಲೆ ಅರಿವೆಂಬ ಗಾರುಡಿಗನ ಬೆಳಕು ಬಿದ್ದರೆ ಸಾಕು ಹಾವಿಲ್ಲ. ಹಸಿವೂ ಇಲ್ಲ ! ಬರೀ ಗಾರುಡಿಗ ಮಾತ್ರ ! ಗಾರುಡಿಗ ಹೇಳಿದಂತೆ ಕುಣಿಯುವ ಹಸಿವಿಲ್ಲದ ಹಾವು ಮಾತ್ರ !

■

ಒಡಲು ನನ್ನದೋ ಅವನದೋ ?

ಎನ್ನೊಡಲಾದರೆ ಎನ್ನಿಚ್ಛೆಯಲ್ಲಿರದೇ ?
ನಿನ್ನೊಡಲಾದರೆ ನಿನ್ನಿಚ್ಛೆಯಲ್ಲಿರದೇ ?
ಅದು ಎನ್ನೊಡಲೂ ಅಲ್ಲ, ನಿನ್ನೊಡಲೂ ಅಲ್ಲ.
ಅದು ನೀ ಮಾಡಿದ ಜಗದ ಬಿನ್ನಾಣದೊಡಲು
ಕಾಣಾ ! ರಾಮನಾಥ

–ದೇವರ ದಾಸಿಮಯ್ಯ

ಇರುವ ಒಂದು ಒಡಲಿಗೆ ದಾಸಿಮಾರ್ಯರು ಎನ್ನೊಡಲು ನಿನ್ನೊಡಲು ಎಂದಿದ್ದಾರೆ. ಇದು ಯೋಚಿಸಬೇಕಾದದ್ದೇ.

ಒಡಲು ನನ್ನದೇ. ನನ್ನೊಡಲೆಂದು ಹೇಳಬೇಕಿಲ್ಲ. ಹೀಗೆ ಹೇಳುತ್ತೇವೆ ಎಂದ ಮೇಲೆ ಅದು ಮತ್ತೊಬ್ಬರದು ಆಗಿರಲೇಬೇಕು. ಒಡಲು ನನ್ನದಾದರೆ ನನ್ನಿಚ್ಛೆಯಂತೆ ನಡೆಯಬೇಕಲ್ಲ. ನನ್ನಿಚ್ಛೆಯಂತೆ ನಡೆಯದ ಒಡಲನ್ನು ನನ್ನ ಒಡಲೆಂದು ಹೇಳಲು ಸಾಧ್ಯವೇ ?

ಬಾಲ್ಯದಿಂದಲೂ ಹಿಡಿದು ಮುಪ್ಪಿನವರೆಗೆ ಒಡಲ ನೋಡಿದರೆ ನನ್ನಿಚ್ಛೆಯಂತೆ ನಡೆದ ಉದಾಹರಣೆಗಳು ಒಂದೂ ಇಲ್ಲ.

ಕಾಯಾ ವಾಚಾ ಮನಸಾ ಸತ್ಯವನ್ನೇ ಹೇಳುತ್ತೇನೆ. ಸತ್ಯದ ಹೊರತು ಮತ್ತೊಂದು ಹೇಳುವುದಿಲ್ಲ ಎಂದು ಹೇಳಿ ಪ್ರಮಾಣ ಸ್ವೀಕರಿಸಿದ ಶಾಸಕ, ಸಚಿವ, ಅಧಿಕಾರಿಗಳ ಒಡಲು ಸತ್ಯವೊಂದನ್ನು ಬಿಟ್ಟು ಏನೆಲ್ಲಾ ಮಾಡುತ್ತದೆ.

ಒಡಲು ತನ್ನಿಚ್ಛೆಯಂತೆ ಘೋಷಿಸಿ ದಾಖಲಿಸಿದ ಪ್ರಮಾಣವನ್ನು ತಾನೇ ಮುರಿಯುವುದು ಸೋಜಿಗವಲ್ಲವೇ ? ತನ್ನೊಡಲಾದರೆ ತನ್ನಿಚ್ಛೆಯಲ್ಲಿರಬೇಡವೇ? ಸತ್ಯ ಘೋಷಿಸುವಾಗ ತಾನಿದ್ದು, ಕಾರ್ಯ ನಿರ್ವಹಿಸುವಾಗ ಮತ್ತೊಬ್ಬ ಪ್ರವೇಶ ಮಾಡಿದನೇ ? ಅವನು ಮಾಡಿದ ಅಪರಾಧ ತನ್ನಿಚ್ಛೆಯ ತನುವಿಗೆ ಕಟ್ಟುವುದೇ ? ಸತ್ಯದ ಮಾತುಗಳನ್ನು ಘೋಷಿಸಿದವನಾರು ? ಒಡಲು ಯಾರದು ? ಅಪರಾಧ ಮಾಡಿದವನಾರು ? ಬಾಲ್ಯದಿಂದಲೂ ಮುಪ್ಪಿನವರೆಗೆ ಕಾಡುವ ಈ ಮೂರೂ ಕ್ರಿಯೆಗಳು ತಿಳಿಯಬೇಡವೇ ?

ವಿದ್ಯಾರ್ಥಿ ಶಾಲೆಗೆ ಹೋಗುತ್ತೇನೆಂದು ಹೇಳಿ ಹೋಗುವುದಿಲ್ಲ, ಪಾಠ ಮಾಡಲು ಬಂದ ಉಪನ್ಯಾಸಕ ಮಾಡುವುದಿಲ್ಲ, ಕೆಲಸಕ್ಕೆಂದು ಹೋದವ ಕೆಲಸ ಮಾಡುವುದಿಲ್ಲ. ಹೀಗೆ ವ್ಯವಹಾರ, ಆಡಳಿತ, ನ್ಯಾಯ, ರಾಜಕೀಯ, ಉಪನ್ಯಾಸ,

ಸಂಸಾರದಲ್ಲಿ ತೊಡಗಿಕೊಂಡ ಒಡಲಿನ ಘೋಷಣೆ ಒಂದಾದರೆ ಮಾಡುವ ಕ್ರಿಯೆ ಮತ್ತೊಂದು.

ಇದು ಒಡಲಿಗೆ ಸಂಬಂಧಪಟ್ಟ ರೋಗ. ಅವರೊಡಲು ಇವರೊಡಲು ಎಂದು ಹೆಸರಿಸುವಂತಿಲ್ಲ. ಹೆಣ್ಣು ಗಂಡೆನ್ನದೇ ಎಲ್ಲ ಒಡಲುಗಳು ಪ್ರಶ್ನಿಸಿಕೊಳ್ಳುವ ಪ್ರಶ್ನೆ ದಾಸಿ ಮಾರ್ಯರದು.

ಒಡಲು ನನ್ನದಾದರೆ ಅದರಲ್ಲಿ ನಾನಿರಬೇಕು. ನಾನು ಘೋಷಿಸಿದಂತೆ ಒಡಲಿನೊಂದಿಗೆ ನಡೆಯಬೇಕು. ಘೋಷಿಸಿದ ಘೋಷಣೆಗೂ ಒಡಲು ನಡೆಯುವ ನಡೆಗೂ ಒಂಚೂರು ವ್ಯತ್ಯಾಸವಿರಬಾರದು. ಹಾಗಾದರೆ ಅದು ನನ್ನ ಒಡಲು !

ನುಡಿದಂತೆ ನಡೆಯಲಿಲ್ಲವೆಂದಮೇಲೆ ನುಡಿಯುವಾಗ ಒಬ್ಬನದು, ನಡೆಯುವಾಗ ಮತ್ತೊಬ್ಬನ ಒಡಲಾಗಬೇಕಲ್ಲ, ಸತ್ಯ ನುಡಿಯುವಾಗ ಒಡಲನ್ನು ಒಬ್ಬ ಆಕ್ರಮಿಸಿಕೊಂಡ, ನುಡಿದಂತೆ ನಡೆಯದಿರಲು ಮತ್ತೊಬ್ಬ ಆಕ್ರಮಿಸಿಕೊಂಡ ಹೀಗೆ ಒಡಲು ಇಬ್ಬರದಿರಬೇಕಲ್ಲ ?

ಒಡಲೇ ಬೇರೆ, ಒಡಲಿಗಿಟ್ಟ ಹೆಸರೇ ಬೇರೆ ಇರಬೇಕಲ್ಲ ? ನುಡಿಯುವವನು ಒಡಲನ್ನು ಆಶ್ರಯಿಸಿ ನುಡಿದ, ನುಡಿದಂತೆ ನಡೆಯದವನು ಒಡಲನ್ನು ಆಶ್ರಯಿಸಿ ನಡೆಯದಂತೆ ಮಾಡಿದ. ಇವರಿಬ್ಬರಲ್ಲಿ ಒಡಲಿನದೇನು ತಪ್ಪಿದೆ? ತಪ್ಪೆಲ್ಲಾ ಇವರಿಬ್ಬರದೇ. ಒಡಲು ಅವರಿಬ್ಬರ ಉಪಕರಣ ಮಾತ್ರ.

ಅರಿವು ಒಡಲಿನ ಮಾಲೀಕ. ಮನದ ಗುಲಾಮ ಒಡಲು ! ಮಾಲೀಕನ ಮಾತು ಕೇಳಿ ನುಡಿದ. ಮನದ ಮಾತು ಕೇಳಿ ನುಡಿದಂತೆ ನಡೆಯಲಿಲ್ಲ. ಮನದ ಮಾತು ಒಡಲಿಗೆ ಬಲು ರುಚಿ ! ಹಣ,ಆಸ್ತಿ,ಅಧಿಕಾರ, ಪೀಠ, ಕಾರು ,ಬಂಗ್ಲೆ, ವಿಷಯ, ಮದಿರೆ, ಬಾರು ಒಂದೇ ಎರಡೇ ಹಲವಾರು ರುಚಿ ! ಮಾಲೀಕನಲ್ಲಿ ಇವು ಯಾವೂ ಇಲ್ಲ. ಬರೀ ಸತ್ಯ ಮಾತ್ರ. ಇವೆಲ್ಲವುಗಳನ್ನು ತಿಳಿಯುವ ಅರಿವು ಮಾತ್ರ. ಜ್ಞಾನದ ರುಚಿ ಬಲು ರುಚಿ. ಬುದ್ಧ, ಮಹಾವೀರ, ನಿಜಗುಣ, ಜನಕ ಮುಂತಾದವರು ರಾಜರಾದರೂ ಸತ್ಯದ ರುಚಿ ಸವೆದರು. ಮಾಲೀಕನೊಂದಿಗೆ ಬೆರೆತು ಮಾಲೀಕರಾದರು.

ಒಡಲ ನೆತ್ತಿಯ ಮೇಲೆ ಬಡಿದು ತನ್ನತ್ತ ಸೆಳೆಯುವ ತವಕ ಮಾಲೀಕನಿಗಿಲ್ಲ. ಮಾಲೀಕನ ರುಚಿ ಸವೆದು ಮಾಲೀಕನಲ್ಲಿ ಒಂದಾಗುವ ಗುಣ ಮನಕ್ಕಿಲ್ಲ. ಇದು ಮಾಲೀಕನ ಬಿನ್ನಾಣ ! ಒಡಲಿನ ಮಾಲೀಕ ಕಾಣುವುದಿಲ್ಲ. ಮನ ಮಾಲೀಕನನ್ನು ಅರಿಯಬೇಕಿದೆ. ಅರಿತು ಅರಿವಿನ ಗುಲಾಮನಾಗಬೇಕಿದೆ.

■

ಸತಿ ಪತಿಗಳ ಮನೆ, ಅರಿವಿನ ಮನೆ

ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆದಂತೆ
ಕಾಣಾ ! ರಾಮನಾಥ

-ದೇವರ ದಾಸಿಮಯ್ಯ

ತನುವೊಂದು ಮನೆ. ಈ ಮನೆಯಲ್ಲಿ ಜ್ಞಾನವೆಂಬ ಪತಿ, ಮನವೆಂಬ ಸತಿ ಸಂಸಾರ ಹೂಡಿದ್ದಾರೆ. ಇವರಿಬ್ಬರು ಒಂದಾಗಿ ಹಿತವಾಗಿ ಬದುಕಿದರೆ ದೇಹವೇ ದೇವಾಲಯ. ಇಲ್ಲದಿದ್ದರೆ ನರಕ. ಅಮೃತದೊಳಗೆ ವಿಷ ಬೆರೆಸಿದಂತೆ !

ಪತಿಯಲ್ಲಿ ಒಂದಾಗುವ ಬಯಕೆ ಸತಿಗಿರಬೇಕು ! ಸತಿಯನ್ನು ಕೂಡಿ ತನ್ನಂತೆ ಮಾಡಿಕೊಳ್ಳುವ ಬಯಕೆ ಪತಿಗಾದರೂ ಇರಬೇಕು. ಇವರಿಬ್ಬರೂ ಒಂದೇ ಮನೆಯಲ್ಲಿದ್ದರೂ ಉತ್ತರ ದಕ್ಷಿಣ. ಕೂಡಿ ಸಂಸಾರ ಹೂಡುವ ಜಾಣತನ ಹೆಂಡತಿಗಿಲ್ಲ. ಹರಿದಾಡುವ ಹೆಂಡತಿಯನ್ನಿಡಿದು ತನ್ನತ್ತ ಸೆಳೆದುಕೊಳ್ಳುವ ಬಯಕೆ ಗಂಡನಿಗಿಲ್ಲ.

ಬರಿ ಮಾತಿನಿಂದಲೇ ಹೆಂಡತಿಯ ಸೆಳೆದುಕೊಂಡು ಸಂಸಾರ ಹೂಡಬೇಕು. ಒಮ್ಮೆ ಕೂಡಿದರೆ ಸಾಕು ತನ್ನ ಸರ್ವಸ್ವವನ್ನೇ ಸ್ವರ್ಗಸುಖವನ್ನೇ ಧಾರೆ ಎರೆಯಬೇಕೆಂಬ ತವಕ ಗಂಡನದು. ಬರೀ ತಿಳುವಳಿಕೆಯ ಮಾತಿಗೆ ಮಣಿಯುವ ಜಾತಕ ಹೆಂಡತಿಯದಲ್ಲ. ಏನಿದ್ದರೂ ಆಕೆಗೆ ಇನ್‌ಸ್ಟ್ಯಾಂಟ್ ಸುಖವೇ ಬೇಕು. ಕಣ್ಣಿನಿಂದ ನೋಡಿದ ವಸ್ತುಗಳೆಲ್ಲ ಬೇಕು. ಕಿವಿಯಿಂದ ಕೇಳಿದ ವಸ್ತುಗಳೆಲ್ಲ ಬೇಕು. ಮೂಗಿನಿಂದ ವಾಸಿಸಿದ, ಚರ್ಮದಿಂದ ಸ್ಪರ್ಶಿಸಿದ , ನಾಲಿಗೆಯಿಂದ ರುಚಿಸಿದ ಪದಾರ್ಥಗಳೆಲ್ಲ ಬೇಕು. ಇಷ್ಟು ಸಿಕ್ಕರೆ ಸಾಲದು, ಅವುಗಳಲ್ಲಿ ಪ್ರತಿದಿನ ಹೊಸತನ ಕಂಡು ಅವುಗಳನ್ನು ಪಡೆಯುವುದು ಅವುಗಳೊಂದಿಗೆ ಕ್ಷಣಿಕ ಸುಖ ಅನುಭವಿಸಿ ಮತ್ತೆ ಮತ್ತೆ ಪಡೆಯುವುದು ಹೀಗೆ ಹೆಂಡತಿಯ ದಿನಚರಿ ಆಯುಷ್ಯ ಪರ್ಯಂತ ಆಕೆಯ ಬಯಕೆ.

ಗಂಡ ಒಂದೇ ಮನೆಯಲ್ಲಿ , ಹೆಂಡತಿ ಒಂದೇ ಮನೆಯಲ್ಲಿ ಆದರೇನು ಬಂತು ? ಹೆಂಡತಿ ಗಂಡನನ್ನು ಒಮ್ಮೆಯೂ ಕೂಡಲಿಲ್ಲ. "ಗಂಡ ಶಿವಲಿಂಗ ದೇವರ ಭಕ್ತನಾದರೆ, ಹೆಂಡತಿ ಮಾರಿ ಮಸಣೆಯ ಭಕ್ತೆ. ಗಂಡ ಪಾದೋದಕ ಪ್ರಸಾದ ಕೊಂಡರೆ ಹೆಂಡತಿಗೆ ಸುರೆ ಮಾಂಸ ಬೇಕು." ಒಂದಕ್ಕೊಂದು ಸಂಬಂಧವಿಲ್ಲ. ಒಂದೇ ಮನೆಯಲ್ಲಿ ಇಬ್ಬರ ವಾಸ.

ಒಂದು ಬಾರಿಯೂ ಹೆಂಡತಿ ಗಂಡನೊಂದಿಗೆ ಮಲಗಲಿಲ್ಲ. ಮನೆ

ಯೇನೋ(ತನು) ಶಿವಭಕ್ತರ ಮನೆ. ಮನೆಗೆ ವಿಭೂತಿ, ಗಂಧ ಎಲ್ಲೆಂದರಲ್ಲಿ ಹೂಸಲ್ಪಟ್ಟಿದೆ. ನೋಡಿದವರು ಮನೆಗೆ ಕೈಮುಗಿಯಬೇಕು. ಆದರೇನು ಬಂತು ಮನೆಯಲ್ಲಿ ನಿತ್ಯ ಕಲಹ. ಗಂಡ ಹೆಂಡತಿಯ ಕಲಹ.

ಶುದ್ಧವಲ್ಲದ ಹೆಂಡತಿಯನ್ನು ಗಂಡ ಕಟ್ಟಿಕೊಂಡಿದ್ದಾನೆ. ಹಿಡಿದು ಕಟ್ಟುವ ಬಯಕೆಯಿಲ್ಲ ಆತನಿಗೆ. ತಾನಾಗಿ ಬಂದರೆ ಸಂಸಾರ ಹೂಡಬೇಕೆಂಬ ಇಚ್ಛೆ. ಮನೆ ಎಷ್ಟು ಸ್ವಚ್ಛವಿದ್ದರೇನು ಅದು ಹೆಂಡದ ಮಡಕೆ. ಹೆಂಡದ ಮಡಕೆ ಹೊರಗೆ ತೊಳೆದು ವಿಭೂತಿ ಗಂಧ ಬಳಿದರೇನು ? ಹೆಂಡತಿ ಶುದ್ಧವಿರಬೇಡವೇ ? ಹೊರಗೆ ಅಮೃತದ ಲೇಪ, ಒಳಗೆಲ್ಲ ಬರೀ ವಿಷ. ಗಂಡನಲ್ಲಿ ಅಮೃತದ ಸವಿಮಾತುಗಳಿವೆ. ಹೆಂಡತಿಯಲ್ಲಿ ಬರಿ ನಂಜು ತುಂಬಿದ ನೋಟ, ಮಾತು.

ಗಂಡಗಂಜಿ ಹೆಂಡತಿ ಬದುಕು ಮಾಡುತ್ತಿಲ್ಲ. ಬರೀ ಕಂಡ ಪುರುಷರ ಚಿಂತೆ ಆಕೆಗೆ. ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ಸರ ಎಂಬ ಪುರುಷರೇ ಆಕೆಗೆ ಬೇಕು. ಅವರ ರುಚಿ ಆಕೆಗೆ ಬಲುಹಿತ.

ತನುವೆಂಬ ಒಂದೇ ಮನೆಯಲ್ಲಿ ವಾಸವಾಗಿರುವ ಸತಿಗೆ ಪರಮ ಪುರುಷನೆಂಬ ಪತಿಯನ್ನು ಸೇರುವ ತವಕವಾದರೆ ಸಾಕು. ಹಿಡಿದು ಜಿಗಿದಪ್ಪಿ ಸ್ವರ್ಗ ಸುಖವನ್ನೇ ಕೊಡುತ್ತಾನೆ. ಹೊರಗೆ ನೋಡುವ ಕಣ್ಣು ಕಿತ್ತಿ ನಿಟ್ಟೆಲವು ಮುರಿಯುತ್ತಾನೆ. ಅತ್ತ ಇತ್ತ ಸುಳಿಯದಂತೆ ಹೆಳವನನ್ನಾಗಿ ಮಾಡುತ್ತಾನೆ. ಹಾದರಗಳೆಲ್ಲ ಕಳಚಿ ಸಾಧ್ವಿ ಸತಿಮಣಿಯಾಗಿಸುತ್ತಾನೆ. ಗರತಿಯಾಗಿಸುತ್ತಾನೆ.

''ಎಮ್ಮ ಗಂಡನು ಏಕಾಂತಂ ಬೊಕ್ಕನು. ಬೇಗ ಬೇಗ ಹೊರ ನಡಿಯಿರಣ್ಣಗಳಿರಾ. ಒಬ್ಬನಿದ್ದಡೂ ಸೈರಿಸ ಕಪಿಲ ಸಿದ್ಧ ಮಲ್ಲಿಕಾರ್ಜುನ'' ತನ್ನೊಳಗಿದ್ದ ಆರು ಪುಂಡರನು ಹೊರ ಹಾಕಿ ಗಂಡನೊಂದಿಗೆ ಬದುಕು ಮಾಡಿ ಸ್ವರ್ಗ ಸುಖ ಅನುಭವಿಸಿದ ವೃತ್ತಾಂತವನ್ನು ಸಿದ್ಧರಾಮ ಶಿವಯೋಗಿ ಅರುಹಿದ್ದಾರೆ ಹೆಣ್ಣು-ಗಂಡೆಂಬ ಜಾತಿಯಿಲ್ಲ. ಎಲ್ಲರೂ ಹೆಣ್ಣೇ ! ಜ್ಞಾನ ವೆಂಬುದೊಂದೇ ಗಂಡು ! ಮನ ಜ್ಞಾನವಲ್ಲಿ ಕೂಡಿ ಸುಜ್ಞಾನ ಮನವಾಗಬೇಕು. ಸತಿ-ಪತಿ ಒಂದಾಗಬೇಕು. ಅವರಿದ್ದ ಮನೆ ಅರಿವಿನ ಮನೆಯಾಗಬೇಕು.

■

ನಿರೂಪ ತನುವನ್ನು ಕಾಮಿಸುವಂತಿಲ್ಲ

ಗುರು ನಿರೂಪವ ಮರೆದು
ಪರವಧುವ ನೆರೆವರು, ಪರಧನವನಳುಪುವರು.
ಗುರುವಿಲ್ಲವವರಿಗೆ ! ಪರವಿಲ್ಲವವರಿಗೆ !
ಇಂತಪ್ಪ ನರಕಿಗಳ ನೆನಗೊಮ್ಮೆ ತೋರದಿರಾ ರಾಮನಾಥ.

-ದೇವರ ದಾಸಿಮಯ್ಯ

ಗುರು ಗೋವಿಂದ ಭಟ್ಟರು ಒಮ್ಮೆ ಶಿಷ್ಯರೊಂದಿಗೆ ಸ್ನಾನಕ್ಕೆ ಹೋಗುವ ಹಾದಿಯಲ್ಲಿ ಚಿನ್ನದ ಕಡಗ ನೋಡಿ ಅದರ ಮೇಲೆ ಮಣ್ಣು ತಳ್ಳಿದರು. ಷರೀಫ ಅದರ ಮೇಲೆ ಬೇಲಿ ಇಟ್ಟು ಗುರುಗಳ ಹಿಂದೆ ಹೋಗುತ್ತಾನೆ. ಇನ್ನುಳಿದ ಶಿಷ್ಯರು ಬೇಲಿ ಸರಿಸದೇ ದಾಟಿ ಹೋಗುತ್ತಾರೆ. ಗುರುಗಳು ಷರೀಫನನ್ನು ಕರೆದು ಬೇಲಿ ಇಟ್ಟಿದ್ದು ಯಾಕೆ ಎಂದು ಪ್ರಶ್ನಿಸುತ್ತಾರೆ. ತಾವು ಚಿನ್ನದ ಕಡಗದ ಮೇಲೆ ಮಣ್ಣು ತಳ್ಳಿದಿರಿ ಅದರಲ್ಲಿ ಏನೋ ವಿಶೇಷ ಇರಬೇಕೆಂದು ತಿಳಿದು ಬೇಲಿ ಇಟ್ಟೆ ಎಂದು ಹೇಳುತ್ತಾನೆ.

ಷರೀಫ ಇನ್ನೂ ಬಾಲಕ. ಏನೂ ತಿಳಿಯದಿದ್ದರೂ ಗುರುವಿನ ಮೇಲೆ ಭಾವ ಸದ್ಭಾವಗಳನ್ನಿಟ್ಟು ಚಾಚೂ ತಪ್ಪದೇ ವೀಕ್ಷಿಸುವ, ಪಾಲಿಸುವ ಕ್ರಿಯೆಯಲ್ಲಿ ತೊಡಗಿದ್ದನು.

ಮುಂದೊಮ್ಮೆ ಗೋವಿಂದ ಭಟ್ಟರು ಚಿನ್ನದ ಬಗ್ಗೆ ಷರೀಫನಿಗೆ ಬೋಧಿಸಿದರು. ಅಂತೆಯೇ ದಾಸಿಮಾರ್ಯರು ಇಲ್ಲಿ ಓದುಗರಿಗೆ ಹೇಳಿದ್ದಾರೆ.

ಪರವಧು-ಪರಧನವನಳುಪುವವರಿಗೆ ಗುರುವಿಲ್ಲ ಪರವಿಲ್ಲ :

ಪರಧನ ಅಥವಾ ಚಿನ್ನ ಅದು ಬರೀ ಲೋಹ. ಅದರಲ್ಲಿ ಹಳದಿ ಬಣ್ಣ ಬೇರ್ಪಡಿಸದಂತೆ ಮಿಶ್ರವಾಗಿದೆ. ಅದರಂತೆ ತನುವಿನಲ್ಲಿ ಜ್ಞಾನ ಬೇರ್ಪಡಿಸದಂತೆ ಬೆರೆತಿದೆ. ಚಿನ್ನದಲ್ಲಿ ಬಣ್ಣ ಕಳೆದರೆ ಬರೀ ಲೋಹ. ಯಾರೂ ಅದನ್ನು ಗೌರವಿಸುವುದಿಲ್ಲ. ಅಂತೆಯೇ ದೇಹದಲ್ಲಿಯ ಜ್ಞಾನ ಹೋದರೆ ಉಸಿರಿಲ್ಲದ ಶವ, ಬರೀ ದೇಹ. ಅದನ್ನು ಯಾರೂ ಗೌರವಿಸುವುದಿಲ್ಲ.

ಲೋಹ ರೂಪವಾದರೆ ಬಣ್ಣ ನಿರೂಪ ! ದೇಹ ರೂಪವಾದರೆ ಜ್ಞಾನ ನಿರೂಪ! ಆ ಜ್ಞಾನ ಪರಶಿವ, ಪರಬ್ರಹ್ಮವೂ ಹೌದು. ಶ್ರೀ ಗುರುವೂ ಹೌದು. ಪರ ವಧುವಿನಲ್ಲಿ ರೂಪವಿದೆ. ಆ ರೂಪದಲ್ಲಿ ಪರಶಿವ, ಪರ ಬ್ರಹ್ಮ, ಜ್ಞಾನವೆಂಬ ನಿರೂಪವೂ ಇದೆ. ಪರಶಿವ, ಪರಬ್ರಹ್ಮನನ್ನು ಮರೆತು ರೂಪದೊಂದಿಗೆ ಕೂಡಿದರೆ ಶವದೊಂದಿಗೆ ಕೂಡಿದ ನರಕಿ ಆಗುತ್ತಾನೆ.

ರೂಪಕ್ಕೆ ಕಾರಣವಾದ ಪರಶಿವ, ಪರಬ್ರಹ್ಮ, ಜ್ಞಾನ ನೋಡುವ ಬಲ ಕಣ್ಣಿಗೆ

ಲಭಿಸಿದರೆ ಕೂಡಲಿಲ್ಲ, ಅಗಲಲಿಲ್ಲ. ತನ್ನಂತೆ ಚರ್ಮ, ಜ್ಞಾನ ಸ್ವರೂಪ ಹೊಂದಿರುವ ರೂಪದ ತನುವನ್ನು, ತನುವು ಬಯಸಲು ಸಾಧ್ಯವೇ ? ತನ್ನ ಕಾಲು ಮತ್ತೊಂದು ಕಾಲಿನ ಮೇಲೆ ಹೇರಿಕೊಂಡರೆ ಸುಖವಾಗಲು ಸಾಧ್ಯವೇ ?

ತನಗೆ ಕಾಣುವ ತನ್ನ ರೂಪ ರಕ್ತ,ಮೂಳೆ, ಮಾಂಸ, ಮಜ್ಜಾ, ಮೇದಸ್ಸುಗಳಿಂದ ಕೂಡಿ ಚರ್ಮದಿಂದ ಪ್ಯಾಕ್ ಮಾಡಿಕೊಂಡಿದೆ. ಇತರ ತನು ಕೂಡಾ ಹಾಗೆಯೇ. ರೂಪದ ತುಂಬಾ ನಿರೂಪವೆಂಬ ಜ್ಞಾನ ಅಡಗಿದೆ. ಜ್ಞಾನದೊಂದಿಗೆ ಕೂಡಿದರೆ ಕೂಡದಗಲದ ಸುಖ ! ರೂಪದೊಂದಿಗೆ ಕೂಡಿದರೆ ಕ್ಷಣಿಕ ಸುಖ. ಅದು ಅಜ್ಞಾನದ ಸುಖ. ನರಕದ ಸುಖ.

ನೋಡುವ ಕಣ್ಣಿನಲ್ಲಿ ಅಜ್ಞಾನದ ಲೇಪವಿಲ್ಲದಿದ್ದರೆ ಎಲ್ಲ ವಸ್ತುಗಳ ಮೂಲ ಗೋಚರಿಸಿ ವಸ್ತುಗಳಿಗಾಗಿ ಆಸೆ ಪಡುವುದಿಲ್ಲ.

ಹಳದಿ ಬಣ್ಣ ಬೆರೆತ ಲೋಹ ಚಿನ್ನವೆಂದು ಹೆಸರಿಸಿದರೂ ಅದು ಲೋಹವೇ. ಬಣ್ಣ ಕಣ್ಣಿನಲ್ಲಿ ಲೇಪವಾಗಿ ಅಜ್ಞಾನ ಮೆರೆಯಿತು. ಲೋಹಕ್ಕಾಗಿ ಮನಸೋತು ಅರಿವಿನ ತನುವಿನೊಂದಿಗೆ ಯುದ್ಧಗಳು ಪ್ರಾರಂಭವಾದವು. ಅಜ್ಞಾನವೇ ಪ್ರಧಾನವಾಗಿ ಮಾನವ ಕುಲವನ್ನು, ಅದು ವಾಸಿಸುವ ದೇಶವನ್ನು ಮಣ್ಣಿನಿಂದ,ಲೋಹದಿಂದ ಅಳೆಯಲ್ಪಟ್ಟಿತು. "ದೇಶಮಂಟೆ ಮಟ್ಟಿ ಕಾದೋಯ್ ದೇಶಮಂಟೆ ಮನುಸು ಲೋಯ್" ಎನ್ನುವ ತೆಲುಗು ಗಾದೆ ಮರುವಾಯಿತು.

ಪ್ರತಿ ತನುವಿನ ಮೂಲ ನಿರೂಪವೇ ಆಗಿದೆ. ಆ ನಿರೂಪದ ಸುಳುಹು ಗುರು ತಿಳಿ ಹೇಳಿದ ಮೇಲೆ, ತನ್ನ ಅರಿವೆಂಬ ಗುರು ನಿರೂಪದ ಮೂಲಕ ಪರವಧುವನ್ನು, ಪರಧನವನ್ನು, ಪರವಸ್ತುಗಳನ್ನು ನೋಡಿದರೆ ಬಯಕೆಯಾಗುವುದಿಲ್ಲ, ಬಯಕೆಯಾಗದಿದ್ದರೆ ಕೂಡುವುದಿಲ್ಲ. ಸಂಗ್ರಹಿಸುವುದಿಲ್ಲ. ತಾನು ನಿರೂಪವೇ ವಸ್ತುವೂ ನಿರೂಪವೇ.

■

ತನು ಮೀಸಲು ಅಜ್ಞಾನ ಎಂಜಲು

ಕಣ್ಣು ಮೀಸಲು ಶಿವನ, ಕೈ ಮೀಸಲು ಶಿವನ.
ಕಾಲು ಮೀಸಲು ಶಿವನ, ನಾಲಿಗೆ ಮೀಸಲು ಶಿವನ.
ಕಿವಿ ಮೀಸಲು ಶಿವನ, ನಾಸಿಕ ಮೀಸಲು ಶಿವನ.
ತನು ಮೀಸಲು ಶಿವನ, ಮನವೆಲ್ಲ ಮೀಸಲು ಶಿವನ.
ಈ ಮೀಸಲು ಬೀಸರ ವೋಗದಿದ್ದರೆ ಆತನೆ
ಜಗದೀಶ ಕಾಣಾ ರಾಮನಾಥ.

-ದೇವರ ದಾಸಿಮಯ್ಯ

ಜ್ಞಾನ ಎನ್ನುವುದು ದೈವೀ ಕೃಪೆಯಲ್ಲ. ಮನುಷ್ಯ ಮಾತ್ರ ಜ್ಞಾನವನ್ನು ವೈಜ್ಞಾನಿಕವಾಗಿ ತಿಳಿಯಬಲ್ಲ. ಕಣ್ಣು ನೋಡುವ ಕಲೆಯನ್ನು ಹುಟ್ಟಿನಿಂದಲೇ ಪಡೆದಿದೆ. ನೋಡುವ ಜ್ಞಾನವನ್ನು ಯಾವ ಪುಸ್ತಕಗಳಿಂದಲೂ ಹೆಚ್ಚು ಮಾಡಲು ಸಾಧ್ಯವಿಲ್ಲ. ಹಾಗೆಯೇ ಕಣ್ಣಿನ ಅಜ್ಞಾನವನ್ನು ಪುಸ್ತಕಗಳಿಂದ ಕಳೆಯಲೂ ಸಾಧ್ಯವಿಲ್ಲ. ನೋಡುವ ಜ್ಞಾನ ದಿಂದಲೇ ಅಜ್ಞಾನವನ್ನು ಕಳಿಯಲು ಸಾಧ್ಯ !

ಕಣ್ಣು ಕಿವಿ, ಮೂಗು, ನಾಲಿಗೆ, ತನು-ಮನ, ಕೈ-ಕಾಲು ಹುಟ್ಟಿದಂದಿನಿಂದಲೇ ಮೀಸಲಾಗಿದೆ, ಶುದ್ಧವಾಗಿದೆ. ನಂತರ ಇವೆಲ್ಲವುಗಳಿಗೆ ಎಂಜಲು ಸೇರಿತು. ಎಂಜಲೇ ಶ್ರೇಷ್ಠವಾಗಿ, ಮೀಸಲು ಮರೆಯಾಯಿತು.

ಕಣ್ಣು ಮೀಸಲು :

ಹುಟ್ಟಿನಿಂದಲೇ ಅದಕ್ಕೆ ನೋಡುವ ಮೀಸಲು ಜ್ಞಾನ ಬಂದಿದೆ. ನೋಡುವ ವಸ್ತುವನ್ನು ಸರಿಯಾಗಿ ನೋಡುವ ಮೀಸಲು ಗುಣ ಕಣ್ಣಿನಲ್ಲಿ ಮರೆಯಾಗಿ, ಆಸೆಗಣ್ಣಿನಿಂದ ನೋಡಿ ವಸ್ತುವಿನೊಂದಿಗೆ ಸುಖಿಸುವ ಎಂಜಲು ಗುಣ ಆವರಿಸಿದೆ.

ಕಣ್ಣಿಗೆ ಆವರಿಸಿದ ಎಂಜಲು ಬಲು ಕ್ರೂರಿ. ಕಾಣುವ ಕಣ್ಣನ್ನು ಕಾಣದಂತೆ ಮಾಡುವ ಗುಣ ಎಂಜಲಿಗಿದೆ. ಕಣ್ಣು ಬ್ರಹ್ಮನಾದರೆ ಎಂಜಲು ಭ್ರಮೆ. ಕಣ್ಣು ಶಿವನಾದರೆ ಎಂಜಲು ರಾಕ್ಷಸ.

ಅನ್ಯ ತನುಗಳನ್ನು ತನ್ನಂತೆ ನೋಡುವ ಗುಣ ಕಣ್ಣು ಹೊಂದಿದ್ದರೆ, ಎಂಜಲ ಕಣ್ಣಿಗೆ ತನುವಿನ ಚರ್ಮ, ಉಬ್ಬು, ತಗ್ಗುಗಳು ಕಂಡು ತನುವನ್ನು ಚಂಚಲಗೊಳಿಸಿ ವಿಷಯಾಸಕ್ತನನ್ನಾಗಿಸುತ್ತದೆ. ನೋಡಿದ್ದು ಕಣ್ಣಾದರೂ ಚಂಚಲ ಗೊಂಡಿದ್ದು ತನು. ಸುಖಿಸಲು ಹೋಗಿ ಸಂಕಟಕ್ಕೀಡಾದದ್ದು ತನು. ಜನ ತನುವನ್ನು ನಿಂದಿಸಿ ಶಿಕ್ಷಿಸಿದರೆ ಹೊರತು ಕಣ್ಣನ್ನು ಯಾರೂ ಬಯ್ಯಲಿಲ್ಲ. ಎಂಜಲು ಆವರಿಸಿದ ಕಣ್ಣಿನ ದೃಷ್ಟಿ ಕೋನವೇ

ಕುರುಡು. ವಸ್ತುವೊಂದಿದ್ದರೆ ತಾನೊಂದು ನೋಡುತ್ತವೆ. ಕಣ್ಣಿನ ಈ ಮೀಸಲು ಮೋಸ ಹೋಗದಿದ್ದರೆ ಕಣ್ಣು ಶಿವನ ಕಣ್ಣು!

ಕಾಲು,ಕೈ ತನುವಿಗೆ ಸೇರಿದ್ದು. ತನುವಿನ ತುಂಬಾ ಶಿವ ಜ್ಞಾನವೇ ತನ್ಮಯವಾಗಿದೆ.

ನಾಲಿಗೆಯಲ್ಲೂ, ಕಿವಿಯಲ್ಲೂ, ನಾಸಿಕದಲ್ಲಿಯೂ ಅರಿವೇ ತನ್ಮಯವಾಗಿದೆ.

ತನುವಿನಲ್ಲಿಯೂ ತನುವಿನ ಮನದಲ್ಲಿಯೂ ಅರಿವೇ ತುಂಬಿದೆ. ತನ್ಮಯವಾದ ಅರಿವು ಮರೆವಾದರೆ ರಕ್ಕಸ. ಅರಿವು ಬಳಕೆಯಾದರೆ ಶಿವ, ಮಹಾ ಜ್ಞಾನಿ.

ಕಣ್ಣಿನಲ್ಲಿ ಶಿವನಿದ್ದಾನೆ. ಕುರುಡಾಗುವುದರೊಳಗಾಗಿ ಕಣ್ಣಿಗೆ ಶಿವನ ಪರಿಚಯವಾಗಬೇಕು. ಸತ್ಯದ ಪರಿಚಯವಾಗಬೇಕು. ಇಲ್ಲದಿದ್ದರೆ ಕಣ್ಣಿನ ಪ್ರತಿ ನೋಟವು ತನುವನ್ನು ಕುದಿಯುವಂತೆ ಮಾಡುತ್ತದೆ. ನೋಟದಲ್ಲಿ ತನು ಕುದಿ ಯುವಂತೆ ಮಾಡುವ ರಾಕ್ಷಸ ಶಕ್ತಿಯನ್ನು ತಿಳಿಯಲು ಹೋದರೆ ಕಣ್ಣಿನಲ್ಲಿರುವ ಸತ್ಯದ ಪರಿಚಯವಾಗುತ್ತದೆ. ಆಗ ಪ್ರತಿ ನೋಟವು ದೋಷ ಕಳೆದುಕೊಂಡು ಸತ್ಯದ ನೋಟವಾಗುತ್ತದೆ.

ಪ್ರತಿ ಶಬ್ದದಲ್ಲಿಯೂ ಜ್ಞಾನವಿದೆ. ಅಜ್ಞಾನದ ಎಂಜಲು ಕೇಳುವ ಕಿವಿಗೆ ಆವರಿಸಿರುವುದರಿಂದ ಶಬ್ದ ಕೇಳಿದ ತನು ಉರಿಯುತ್ತದೆ. ಜಗಳಕ್ಕೆ ದಾರಿ ಮಾಡಿಕೊಡುತ್ತದೆ. ಶಬ್ದ ನುಡಿದವನನ್ನು, ಕೇಳಿದವನನ್ನು ಕುದಿಯುವಂತೆ ಮಾಡುತ್ತದೆ. ಇಬ್ಬರೂ ಸುಖಿಗಳಲ್ಲ. ನುಡಿದವನೂ ಜಾಣನಲ್ಲ. ಕೇಳಿದವನೂ ಜಾಣನಲ್ಲ. ಮೀಸಲು ಕಿವಿಗೆ ಮಾತ್ರ ಶಬ್ದವೆಲ್ಲ ಬ್ರಹ್ಮವೇ. ಮೀಸಲು ಕಿವಿ ತನ್ನದೇ, ಎಂಜಲು ಕಿವಿ ತನ್ನದೇ. ಎಂಜಲು ಕಳೆದು ಶಬ್ದ ಕೇಳುವ ಶಕ್ತಿ ತನ್ನಲ್ಲಿಯೇ ಅಡಗಿದೆ. ಅದೇ ಶಿವ, ಸತ್ಯ.

ನಾಲಿಗೆಯಲ್ಲಿ ಸತ್ಯವಿದೆ. ಅದಕ್ಕಾಗಿ ರುಚಿ ಗೋಚರಿಸುತ್ತದೆ. ನಾಲಿಗೆ ನೀರಿನಿಂದ ಕೂಡಿದೆ. ಪದಾರ್ಥವೂ ನೀರಿ ನಿಂದ ಕೂಡಿದೆ. ಕಬ್ಬು, ಮೆಣಸಿನ ಕಾಯಿ, ಬೆಳ್ಳುಳ್ಳಿ, ಈರುಳ್ಳಿ , ಎಣ್ಣೆ ಈ ಎಲ್ಲ ಪದಾರ್ಥಗಳು ನೀರಿನಿಂದಲೇ ಹುಟ್ಟಿವೆ. ತನವೂ ನೀರಿನಿಂದಲೇ ಹುಟ್ಟಿದೆ. ನೀರು ಸತ್ಯ, ಪದಾರ್ಥ ಮಿಥ್ಯ. ನೀರು ನೀರಿನಲ್ಲಿ ಕೂಡಿ ರುಚಿ ಕಳೆದುಕೊಳ್ಳುತ್ತದೆ. ಈ ಸತ್ಯ ಗೊತ್ತಿರದಿದ್ದರೆ ರುಚಿಗಾಗಿ ನಾಲಿಗೆ ತನುವಿನ ಮರ್ಯಾದೆ ಕಳೆಯುತ್ತದೆ.

ವಿಜ್ಞಾನ ಎನ್ನುವುದು ಹೊರಗಲ್ಲ. ತನುವಿನ ವಿಜ್ಞಾನ ಬಲು ಅಗಾಧವಾದದ್ದು. ಲಕ್ಷಗಟ್ಟಲೆ ವರ್ಷಗಳು ಕಳೆದರೂ ಮನುಷ್ಯ ವೈಜ್ಞಾನಿಕವಾಗಿ ಒಂದು ದೃಢ ನಿರ್ಧಾರಕ್ಕೆ ಬರಲಾಗುತ್ತಿಲ್ಲ. ಕಾಲ ಘಟ್ಟದಲ್ಲಿ ಹೇಳಿದ ಶಬ್ದಗಳನ್ನು ವೈಜ್ಞಾನಿಕವಾಗಿ ಯೋಚಿಸುತ್ತಿಲ್ಲ.ಆಧ್ಯಾತ್ಮ, ದೈವ, ದೇವರು,ದೆವ್ವ ಎಂದು ನಂಬಿ ಆರಾಧಿಸುವುದು ಬಿಡುತ್ತಿಲ್ಲ. ದೈವೀಕರಿಸಿದಷ್ಟೂ ಅದರ ವ್ಯವಹಾರ ವೃದ್ಧಿಯಾಗುತ್ತದೆ. ಆಧ್ಯಾತ್ಮ ಒಂದು

ವ್ಯವಹಾರವಲ್ಲ. ದೈವವೂ ಅಲ್ಲ. ತಿಳಿ ಹೇಳುವ ಸೂತ್ರ ಮಾತ್ರ. ಆದರಿಂದ ಸಂಪೂರ್ಣ ತಿಳಿಸಲು ಬರುವುದಿಲ್ಲ. ತಾನು ತಿಳಿಯಲು ತೊಡಗಬೇಕು. ವೈಜ್ಞಾನಿಕವಾಗಿ ತಿಳಿಯಬೇಕು. ತಿಳಿಸುವವನೂ,ತಿಳಿಯುವವನೂ ಮೋಸಕ್ಕೆ ಗುರಿಯಾಗಬಾರದು. ತಿಳಿ ಹೇಳುವವನಿಗೆ ವ್ಯವಹಾರ ವಾಗಬಹುದು. ಆದರೆ ತನಗಾದ ಮೋಸಕ್ಕೆ ತಾನೆ ಹೊಣೆಗಾರ. ಒಂದು ಹೇಳಿ ಮತ್ತೊಂದು ಕೆಲಸದಲ್ಲಿ ತೊಡಗಿದರೆ ಕೇಳಿದ ಜನ ಹೇಳಿದ ಗುರುವಿಗೆ ಕಲ್ಲಿಲೆ ಹೊಡೆಯದೇ ಬಿಡಲಾರರು.

ಕಣ್ಣು, ಕಿವಿ, ಮೂಗು, ಚರ್ಮ, ನಾಲಿಗೆಗೆ ಯಾರು ಪಾಠ ಮಾಡಬೇಕು ? ಪಾಠ ಮಾಡುವವನು ಇವುಗಳಿಂದ ಹೊರತಾಗಿಲ್ಲ. ಶಿವನಿಗೆ ಶಿವ ಪಾಠ ಮಾಡಲು ಸಾಧ್ಯವೇ ? ಪಾಠ ಕೇಳುವವ ಶಿವನೆಂದು ಪಾಠ ಹೇಳುವವ ತಿಳಿಯ ಬೇಡವೇ ? ಹೇಳುವ ಕೇಳುವ ಮೋಸ ನಿಂತು ತಿಳಿಯುವ ಕ್ರಿಯೆಯಲ್ಲಿ ತೊಡಗಬೇಕೆನ್ನುವುದೇ ದಾಸಿಮಾರ್ಯರ, ಸಕಲ ಶರಣ, ಸಂತರ ಅಭಿಪ್ರಾಯವಾಗಿದೆ.

■

ತನುವಿನ ಅರಿವೇ ತನುವಿಗೆ ಸರಕಾಗಬೇಕು

ಮನ ಮುಟ್ಟಿ ನೆನೆವಲ್ಲಿ ತನು ನಿಮ್ಮದಾಯಿತ್ತು.
ತನು ಮುಟ್ಟಿ ಅಪ್ಪಿ, ಮನ ಮುಟ್ಟಿ ನೆರೆದು
ವನಿತೆಯರ ಕೂಟಕ್ಕೆ ತೆರಪಿಲ್ಲದಾಯಿತ್ತು.
ಜನನ ಮರಣದ ಬಾಧೆ ಹರಿಯಿತ್ತು. ಈಶ್ವರ !
ನಿಮ್ಮ ಪಾದ ಸೇವೆಯಿಂದ ಕಾಣಾ ! ರಾಮನಾಥ.

- ದೇವರ ದಾಸಿಮಯ್ಯ

ಮನ ಮುಟ್ಟಿ ನೆನೆವಲ್ಲಿ ತನು ನಿಮ್ಮದಾಯಿತ್ತು:

ಈ ಸಾಲಿನಲ್ಲಿ ಮನ ತನು ಅರಿವು ಬಳಕೆಯಾಗಿದೆ. ತನು ನೋಡಲು ಒಂದೇ ಆದರೂ ವಿಚಿತ್ರವಾದ ವಿಜ್ಞಾನದಿಂದ ಕೂಡಿದೆ. ಈ ತನುವನ್ನು ತಿಳಿಯಲು ವಿಜ್ಞಾನಿಯಾಗಲೇಬೇಕು.

ತನುವಿದೆ, ಮನವಿದೆ, ಅರಿವಿದೆ, ಬಳಕೆ ಮಾಡುತ್ತಿರುವುದು ಬರೀ ಮನವನ್ನು ಮಾತ್ರ ! ಮನ ಹೇಳಿದಂತೆ ತನು ಬಳಕೆ ಮಾಡಿಕೊಂಡು ಕೇಳುವುದೇ ತನುವಿನ ಕಾಯಕವಾಗಿದೆ. ಮನ ಕಂಡದ್ದು ಬೇಡುತ್ತದೆ. ತನುವಿನೊಂದಿಗೆ ಪೂರೈಸಿಕೊಳ್ಳುತ್ತದೆ.

ಮನ ಬೇಡಿದ್ದು ತನುವಿಗೆ ಎಟುಕದೇ ಇದ್ದಾಗ ಕಳುವು ಹಾದರದಲ್ಲಿ ಭಾಗಿ ಯಾಗುತ್ತದೆ. ವೇಷ ಅಡ್ಡಿಪಡಿಸಬಹುದು. ಆದರೆ ಮನದ ಹಾದರದ ಕ್ರಿಯೆಗಳು ನಿಲ್ಲುವುದಿಲ್ಲ. ತನುವಿನ ವೇಷ ಅಡ್ಡಿಪಡಿಸಿದಾಗ ಮನವೊಂದೇ ಸುಖಿಸಲು ಬರುವುದಿಲ್ಲ. ಅವಕಾಶಕ್ಕಾಗಿ ಹೊಂಚು ಹಾಕಿ ತನುವಿನೊಂದಿಗೆ ಸುಖಿಸುತ್ತದೆ. ಈ ಮನದ ಶಿಕ್ಷಣ ಗೊತ್ತಿಲ್ಲದಿದ್ದರೆ ಆತ್ಮಹತ್ಯೆ, ಸಾವು, ನೋವುಗಳು, ಕೊಲೆ, ಹಲ್ಲೆ, ಅತ್ಯಾಚಾರ, ಕಳುವು, ಹಾದರ,ಮೋಸ, ವಂಚನೆ, ದಗಲಬಾಜಿ ಕೆಲಸಗಳಲ್ಲಿ ಮನ ತನುವಿನೊಂದಿಗೆ ನಿರತವಾಗಿರುತ್ತದೆ. ಅದು ತನುವಿನ ತಪ್ಪಲ್ಲ. ಮನದ ತಪ್ಪು.

ಮನ ಕಾಣುವುದಿಲ್ಲ. ತನುವಿನೊಂದಿಗೆ ಮನದ ಹಾದರ. ಜನ ಕೂಡ ಮನವುಳ್ಳವ ರಾದುದರಿಂದ ತನುವಿನದೇ ತಪ್ಪೆಂದು ಗುರುತಿಸಿ ತನುವನ್ನು ದಂಡಿಸುತ್ತಾರೆ. ತನುವನ್ನೇ ಕೊಲೆ ಮಾಡುತ್ತಾರೆ. ತನುವಿನ ಮೇಲೆ ಹಲ್ಲೆ ಮಾಡುತ್ತಾರೆ. ಹೀಗಾದರೂ ಹಠಮಾರಿ ಮನ ತಪ್ಪು ಒಪ್ಪಿ ಕೊಳ್ಳುವುದಿಲ್ಲ. ಮತ್ತಷ್ಟು ತಪ್ಪುಗಳನ್ನು ತನುವಿನೊಂದಿಗೆ ಮಾಡಿಸುತ್ತದೆ. ಹಾಗೆಯೇ ಮನ ಮತ್ತು ತನುವಿನ ಕ್ರಿಯೆ ನಡೆದಿರುತ್ತದೆ.

ಹೆಂಡತಿಯಿದ್ದಾಳೆ ಆದರೂ ಮನ ಅನ್ಯವನಿತೆಯರ ಕೂಟಕ್ಕೆ ತನುವನ್ನು ಕರೆದೊಯ್ಯುತ್ತದೆ. ಸುಖಿಸುವಾಗ ಸಿಕ್ಕರೆ ತನುವಿಗೆ ಶಿಕ್ಷೆ ! ಮನ ಕಾಣುವುದಿಲ್ಲ. ಮನದ

ತಪ್ಪು ಯಾರ ಗಮನಕ್ಕೂ ಬರುವುದಿಲ್ಲ. ಅನುಭವಿಸಿದ ತನ್ನ ಗಮನಕ್ಕೂ ಬರುವುದಿಲ್ಲ.ಯಾರಾದರೂ ತನುವಿಗೆ ಶಿಕ್ಷೆ ಕೊಟ್ಟಾರು, ಮನಕ್ಕೆ ಶಿಕ್ಷೆ ಕೊಡುವುದು ಸರಕಾರಕ್ಕೆ ಸಮಾಜಕ್ಕೆ ಕೋರ್ಟ್ ಕಚೇರಿಗಳಿಗೆ ಗೊತ್ತಿಲ್ಲದ ನಿಮಿತ್ತ ಮತ್ತೆ ಮತ್ತೆ ತನುವಿನೊಂದಿಗೆ ಸುಖಿಸುವುದಕ್ಕೆ ಹೊಂಚು ಹಾಕುವುದು ಮನ ಬಿಡುವುದಿಲ್ಲ. ತನು ಸಾಯುವವರೆಗೂ ಮನದ ಕ್ರಿಯೆ ನಿರಂತರ!

ಮನ ದಿನಕ್ಕೆ ಹಲವಾರು ವೇಷ ಹಾಕುತ್ತದೆ. ಅನ್ಯ ವನಿತೆಯರನ್ನು ಅಕ್ಕ , ತಂಗಿ,ಸೊಸೆ ಎಂದು ಸಂಬೋಧಿಸುತ್ತ ಮನದಲ್ಲಿ ರತಿಕ್ರಿಯೆಗೆ ತೊಡಗುತ್ತದೆ. ಅದಕ್ಕೆ ತೃಪ್ತಿ ಯಾಗುವುದಿಲ್ಲ. ದೇಹದೊಂದಿಗೆ ಸುಖಿಸಲು ತನುವಿನ ವೇಷ ಅಡ್ಡಿಪಡಿಸುತ್ತದೆ. ಏಕೆಂದರೆ ಗಣ್ಯನೋ ರಾಜಕಾರಣಿಯೋ, ಸ್ವಾಮಿಯೋ, ಪೀಠಾಧಿಪತಿಯೋ, ಅಧಿ ಕಾರಿಯೋ, ಸಚಿವನೋ, ಶಿಕ್ಷಕನೋ, ಪ್ರಶಸ್ತಿ ವಿಜೇತನೋ ಆಗಿರುವುದರಿಂದ ತನುವಿನ ವೇಷ ಅಡ್ಡಿಪಡಿಸುತ್ತದೆ. ಈ ವೇಷ ಕೂಡ ಮನದ್ದೇ. ಆದರೂ ಮನ ಸುಮ್ಮನಿರುವುದಿಲ್ಲ. ಸತಿಯೊಂದಿಗೆ ಸುಖಿಸುವ ನೆಪದಲ್ಲಿ ವನಿತೆ ಯರೊಂದಿಗೆ ಸುಖಿಸುತ್ತದೆ. ಸತಿಯ ತನು ಜಡ ಮಾಡಿಕೊಂಡು ವನಿತೆಯರೊಂ ದಿಗೆ ಸುಖಪಡುವ ಬಯಕೆ ಬಲು ಇಷ್ಟ ಮನಕ್ಕೆ.

ಈ ಕ್ರಿಯೆ ಪ್ರತಿ ನಿತ್ಯ ನಡೆದರೂ ಯಾಕೆ ಹೀಗೆ ಎಂದು ಪ್ರಶ್ನಿಸಿಕೊಳ್ಳುವುದೇ ಇಲ್ಲ. ಈ ಕ್ರಿಯೆಗೆ ಅಡ್ಡಿ ಪಡಿಸಿದ ಅರಿವು ನಾಯಿ ಎಂದು ಬೈಯ್ದರೂ ಮನಕ್ಕೆ ನಾಚಿಕೆಯೇ ಇಲ್ಲ. ಅರಿವಿನಿಂದ ಅಲ್ಲವೆಂದು ತಿಳಿದ ಮನ, ತನುವಿನೊಂದಿಗೆ ಭೋಗಕ್ಕೆ ಸಿದ್ಧವಾಗುತ್ತದೆ. ಅರಿವು ತನುವಿನಲ್ಲಿದೆ. ಮನವೂ ತನುವಿನಲ್ಲಿದೆ. ಎತ್ತು ಎರೆಗೆ ಎಳೆದರೆ ಕೋಣ ಕೆರೆಗೆ.

ತನಗೆ ಅಸಹ್ಯವಾಗುವ ರೀತಿಯಲ್ಲಿ ತಾನು ಜೀವಿಸಬೇಕೆ ? ಗುಟ್ಟು ರಟ್ಟಾದರೆ ಶಿಕ್ಷೆ, ಆತ್ಮಹತ್ಯೆ.ಗುಟ್ಟು ರಟ್ಟಾಗದಿದ್ದರೆ ತನು ಹಾದರಿಗ. ಈ ಕ್ರಿಯೆಯಲ್ಲಿ ನಿರ್ಭ ಯವಾಗಿ ತೊಡಗುವವರಿಗೆ ಹಾದರದ ಪಟ್ಟ : ಕಳ್ಳ, ಹಾದರಿಗ, ಕೊಲೆಗಡುಕ, ಹಲ್ಲೆಕೋರ ಹೀಗೆ.

ಈ ಸಂಕಟದಿಂದ ಹೊರಬರುವ ಸೂತ್ರ ನೀಡಿದ ವಿಜ್ಞಾನಿಗಳೇ ಶರಣರು, ಸಂತ ದಾಸವರೇಣ್ಯರು, ಕ್ರಿಸ್ತ, ಬುದ್ಧ, ಮಹಾವೀರ, ಮುಂತಾದವರು. ಮನ ಇವರನ್ನು ಹಾಡಿ ಹೊಗಳಿ ಅವರಿಗೊಂದು ಮಂದಿರ ಕಟ್ಟಿ ಆ ಪಂಥದವರನ್ನು ಹುಟ್ಟುಹಾಕಿ ಜಾತ್ರೆ ಮಾಡಿ ಮತ್ತಷ್ಟು ತನುವಿಗೆ ರೋಗ ಹಚ್ಚುತ್ತದೆ. ಈ ನೆಪದಲ್ಲಿ ಎಲ್ಲಿ ನೋಡಿದರೂ ಮಠ -ಮಂದಿರಗಳೇ, ವೇಷ-ಭೂಷಣಗಳೇ. ಈ ಶಿಕ್ಷಣ ತಿಳಿಯದಿದ್ದರೆ ಬರೀ ವೇಷಗಳೇ, ಯಾರೂ ಮನಕ್ಕೆ ಹೊರತಾಗುವುದಿಲ್ಲ. ಸುಪ್ತವಾಗಿ ಕಾಡುವ ಮನದ ಹಾದರ ವೇಷದ ತನುವಿನಲ್ಲಿ ನಡೆದೇ ಇರುತ್ತದೆ.

ದಾಸಿಮಾರ್ಯರು ತಮ್ಮ ವಚನದ ಐದು ಸಾಲುಗಳಲ್ಲಿ ಮನವೆಂಬ ವ್ಯಾಧಿಗೆ

ದಿವ್ಯ ಔಷಧಿಯನ್ನು ಇಟ್ಟಿದ್ದಾರೆ. ಈ ಔಷಧಿಯನ್ನು ಅರಿವಿನಿಂದ ಬಳಸಿಕೊಳ್ಳಬೇಕಷ್ಟೆ.

ತನುವಿನಲ್ಲಿ ಮನವಿದೆ, ಅರಿವಿದೆ, ತನುವನ್ನು ಅರಿವು ಬಳಕೆ ಮಾಡಿಕೊಂಡರೆ ಜ್ಞಾನಿ. ಮನ ಬಳಕೆ ಮಾಡಿಕೊಂಡರೆ ಅಜ್ಞಾನಿ ! ಹೊರಗೆ ನೋಡುವ ಮನಕ್ಕೆ ತನುವಿನ ಅಂತರಾಳದ ಅರಿವಿನ ದರ್ಶನ ಮಾಡಿಸಿದರೆ ಅರಿವೇ ತಾನಾಗುವುದು. ಅರಿವಿನಿಂದ ತನು ನೋಡಿದರೆ ತನ್ನ ತನುವಿನಂತೆ ವನಿತೆಯರ ತನುವಿದೆ. ಚರ್ಮ, ಮೂಳೆ,ಮಾಂಸ,ರಕ್ತ,ಮಜ್ಜಾ ,ಮೇದಸ್ಸು ಇವುಗಳಲ್ಲಿ ವ್ಯತ್ಯಾಸವಿಲ್ಲ. ತನ್ನ ತೊಡೆಯ ಮೇಲೆ ತನ್ನ ಕಾಲು ಬಿದ್ದರೆ ಹೇಗೆ ಸ್ಪರ್ಶ ಸುಖ ಸಿಗುವುದಿಲ್ಲವೋ ಹಾಗೆಯೇ ಇತರ ತನುವಿನ ಕಾಲು ತನ್ನ ತನುವನ್ನು ಸ್ಪರ್ಶಿ ಸಿದರೆ ಸುಖ ಸಿಗುವುದಿಲ್ಲ. ಏಕೆಂದರೆ ತನುವಿನ ಚರ್ಮ ಒಂದೇ ಆಗಿದೆ.

ಅರಿವು ತನುವನ್ನು ಅರಿವಿನ ಪ್ರಯೋಗದೆಡೆಗೆ ಕೊಂಡೊಯ್ದರೆ, ಮನ ತನುವನ್ನು ಅಜ್ಞಾನದೆಡೆಗೆ ಕೊಂಡೊಯ್ಯುತ್ತದೆ.

ಬಿಳಿ ಕಾಗದದಲ್ಲಿ ಮಸಿಯಿಂದ ಅಚ್ಚು ಹಾಕಿದ ಭಾವಚಿತ್ರವನ್ನು ಮನ ಪಾರ್ವತಿ, ಪರಮೇಶ್ವರ, ಬುದ್ಧ, ಬಸವ, ಮಹಾವೀರ ಎಂದು ಗುರುತಿಸಿ,ಜಗಲಿಯ ಮೇಲಿಟ್ಟು ತನು ಇರುವವರೆಗೆ ಪೂಜಿಸಿ, ದೀಪ ಹೊತ್ತಿಸುತ್ತದೆ. ನೈವೇದ್ಯ ಮಾಡಿ ತಿನ್ನುತ್ತದೆ. ಪೂಜೆಗೆ ಮೊದಲು ಮಕ್ಕಳನ್ನು ತಿನ್ನಲು ಬಿಡುವುದಿಲ್ಲ. ಇದು ಮನದ ಕೆಲಸ. ಅರ್ಥವಿಲ್ಲದ ಕೆಲಸವೆಂದು ಮನಕ್ಕೆ ಅನ್ನಿಸುವುದೇ ಇಲ್ಲ.

ಆದರೆ ತನುವಿನ ಅರಿವು ಈ ಎಲ್ಲ ಕ್ರಿಯೆಗಳನ್ನು ಖಂಡಿಸುತ್ತದೆ. ಅರಿವಿನ ಕಣ್ಣಿಗೆ ಕಾಗದ ಮಸಿ ಮಾತ್ರ ಕಾಣುತ್ತದೆ. ಪೂಜಿಸುವುದಿಲ್ಲ. ತನುವಿಗಂಟಿದ ಅಜ್ಞಾನದ ಕೊಂಡಿಗಳು ಅರಿವಿನ ಪ್ರಯೋಗದ ಮೂಲಕ ಒಂದೊಂದೇ ಕಳಚಿ ಬೀಳುತ್ತವೆ. ಮನ ಅರಿವನಪ್ಪಿ ತನುವು ಅರಿವಿನ ತನುವಾಗುತ್ತದೆ.

ಅರಿವಿಗೆ ಜನನವಿಲ್ಲ, ಮರಣವಿಲ್ಲ. ಈ ಎರಡೂ ಬಾಧೆಗಳಿಂದ ದೂರ. ಪುಸ್ತಕ ಓದಿ ಅರಿವನ್ನು ಹೆಚ್ಚು ಮಾಡಲು ಬರುವುದಿಲ್ಲ. ಓದದಿದ್ದರೆ ಅರಿವು ಕಡಿಮೆ ಯಾಗುವುದಿಲ್ಲ.

ಸದಾ ಹೊರಗೆ ನೋಡುವ ಮನ ಅರಿವಿನೊಂದಿಗೆ ಲೀನವಾದರೆ ನೋಡಿದ ನೋಟವೆಲ್ಲ ಮಾಹಿತಿಯಾಗುತ್ತದೆ. ಕೇಳಿದ ಶಬ್ದವೆಲ್ಲ ಮಾಹಿತಿಯಾಗುತ್ತದೆ. ರುಚಿಸಿದ ಪದಾರ್ಥ, ಸ್ಪರ್ಶಿಸಿದ ವಸ್ತುಗಳೆಲ್ಲ ಮಾಹಿತಿಯಾಗುತ್ತವೆ. ಓದಿದ ಪುಸ್ತಕಗಳೆಲ್ಲ ಮಾಹಿತಿಯಾಗುತ್ತವೆ.

ಶಬ್ದ ,ಸ್ಪರ್ಶ, ರೂಪ, ರುಚಿ, ವಾಸನೆ ತನುವನ್ನು ಕಾಡದೆ ಪ್ರಯೋಗಕ್ಕೆ ಗುರಿ ಮಾಡುತ್ತದೆ. ಇದಕ್ಕೆಲ್ಲಾ ಕಾಲಾವಕಾಶ ಬೇಕು, ಸ್ವತಃ ಪ್ರತಿ ತನುವು ಪ್ರಯೋಗದಲ್ಲಿ ತೊಡಗಬೇಕು. ಸಾಧ್ಯವಾದರೆ ಸರಕಾರ ಮನ ಅರಿವಿನೊಂದಿಗೆ ಲೀನವಾಗುವ

ಶಿಕ್ಷಣವನ್ನು ಪ್ರಾಯೋಗಿಕವಾಗಿ ಮಕ್ಕಳಿಗೆ ಪ್ರತಿ ಶಾಲೆಗಳಲ್ಲಿ ಜಾರಿಗೆ ತರಬೇಕು.

ದೇಶಕ್ಕೆ ದೇಶವಾಸಿಗಳಿಗೆ ವಸ್ತುಗಳು ಸರಕಾಗಬಾರದು. ಅರಿವೇ ಸರಕಾಗಬೇಕು. ಸಾಮಗ್ರಿಯಾಗಬೇಕು. ಜಾತಿ ಮತ ಬೇಧವೆನ್ನದೇ ಸಕಲ ತನುಗಳು ಅರಿವಿನ ಶಿಕ್ಷಣದಲ್ಲಿ ಪಾಲ್ಗೊಳ್ಳುವಂತಾಗಬೇಕು.


ತನುವಿನ ಮನವನ್ನು ಅರಿವಿನಲ್ಲಿ ಲೀನಗೊಳಿಸುವ ಶಿಕ್ಷಣ ಇಂದಿನದಲ್ಲ. ಸಾವಿರಾರು ವರ್ಷಗಳು ಸಂದರೂ ಸಾಧ್ಯವಾಗಿಲ್ಲ. ತನುವಿನಲ್ಲಿ ಮರೆಯಾದ ಅರಿವು ಬಳಕೆಯಾಗುವುದೇ ಇಲ್ಲ. ಮನ ತನುವನ್ನು ದುರ್ಬಳಕೆ ಮಾಡಿ ಕೊಳ್ಳುವುದೂ ಬಿಟ್ಟಿಲ್ಲ. ಉಪನಿಷತ್‌ಕಾರರಿಂದ ಹಿಡಿದು ಇಲ್ಲಿಯವರೆಗೆ ಅನೇಕ ಸಂತ ವಿಜ್ಞಾನಿಗಳು ಪ್ರಯೋಗದೊಂದಿಗೆ ಪ್ರಯತ್ನ ಮಾಡಿ ಸೂತ್ರ ಬಿಟ್ಟು ಹೋಗಿದ್ದಾರೆ.

ಮಗ್ಗಿ ಕಲಿತು ಲೆಕ್ಕ ಮಾಡುತ್ತೇವೆ. ಸೂತ್ರ ಕಲಿತು ಅರಿವಿಗೆ ಹೋಗುವುದಿಲ್ಲ, ಪಂಡಿತರಾಗುತ್ತೇವೆ. ಪಂಡಿತನ ವೇಷವೂ ಒಂದು ರೋಗವೆಂದು ಮನಕ್ಕೆ ತಿಳಿಯುವುದಿಲ್ಲ. ಯಾವ ವಿಷಯ ವಸ್ತುಗಳಲ್ಲಿಯೂ ಮನ ತೂರದಂತೆ ಅರಿವನೆ ಮುಟ್ಟಿ ಅರಿವನೆ ಅಪ್ಪಿ,ವಿಷಯ ಮತ್ತು ಜನನ ಮರಣದ ಬಾಧೆ ಹರಿಯುವತ್ತ ಸಾಗಬೇಕೆಂಬುದೇ ದಾಸಿಮಾರ್ಯರ ವಚನದ ಸಾರ. ಪ್ರಯೋಗದ ಮೂಲಕ ಕಂಡು ಕೊಂಡರೆ ಮಾತ್ರ ಸರ್ವರಿಗೂ ಸಾಧ್ಯ.

■

ವಚನಾನುಕ್ರಮಣಿಕೆ

ಬೆಳಕಿನ ಬಳ್ಳಿ



ಬರಿಗಣ್ಣಿಗೆ ಕಾಣದುದನ್ನು ಒಳಕಣ್ಣು ತೋರಿಸುತ್ತದೆ ಎಂಬ ಮಾತಿದೆ. ಬಾಹ್ಯ ಜಗತ್ತಿನಲ್ಲಿ ಕಂಡುದನ್ನು, ಅನುಭವಿಸಿದ್ದನ್ನು ಒರೆಗಣ್ಣಿಗೆ ಅರಸಿ ತೋರಿಸುವ ಸತ್ ಉದ್ದೇಶ ಬಸವರಾಜ ಸ್ವಾಮಿಯವರ ಈ ಪುಸ್ತಕದಲ್ಲಿದೆ. ಹೆಸರಿಗೆ ಇದು ಬೆಳಕಿನ ಬಳ್ಳಿ, ಆದರೆ, ಓದುತ್ತಾ ಹೋದಂತೆ (ದಿನಕ್ಕೊಂದು ಪುಟವಾದರೂ ಓದಿ, ದಿನವಿಡೀ ಕುಳಿತು ಓದಿ) ಇದರ ಪ್ರಭಾವ ಮಿದುಳಿನೊಳಗೆ ಮಿಂಚು ಸಿಡಿಸುತ್ತದೆಂಬುದಂತೂ ಪೊರೆಗಣ್ಣಿಗೂ ಹೊಡೆಯುತ್ತದೆ.

ದಾಸರ ಪದಗಳಂತೆ ಶರಣರ ವಚನಗಳು ಸರಳವಾಗಿ ಆತ್ಮದರ್ಶನ ಮಾಡಿಸುತ್ತವೆಂದು ನಾವು ಅರಿತಿದ್ದೇವೆ. ಅದಕ್ಕೆ ನಿಜಕಣ್ಣು ತೆರೆಯಬೇಕೆನ್ನುವ ಲೇಖಕರು "ಎಲ್ಲ ಸೂತ್ರಗಳೂ ಬಾಯಿಗೆ ಬಳಕೆಯಾದವೇ ಹೊರತು ಕಣ್ಣಿಗೆ ಬಳಕೆ ಯಾಗಲಿಲ್ಲ, ಆಗಿದ್ದಿದ್ದರೆ ಜಗತ್ತು ಕೆಡುತ್ತಿರಲಿಲ್ಲ, ಜಾತಿ, ಮತ, ಪಂಥಗಳೆಂಬ ಭೇದಭಾವಗಳಿರುತ್ತಿರಲಿಲ್ಲ, ಕಣ್ಣಿಗೆ ಬಳಕೆ ಯಾಗುತ್ತಿದ್ದರೆ ಅದು ಆನಂದ ಪಡುತ್ತಿತ್ತು, ಆನಂದದ ಸಂದೇಶ ಜಗತ್ತಿಡೀ ಸಾರುತ್ತಲಿತ್ತು" ಎನ್ನುವುದರಲ್ಲಿ ಜಗದಗಲದಷ್ಟು ಕಳಕಳಿಯಿದೆ.

ಮನದೊಳಗಿನ ಕಳೆ, ಕೊಳೆ ತೆಗೆವಂತಹ ಶಕ್ತಿಯುಳ್ಳ ಈ ಸಂಕಲನ, ಓದುಗರ ಕಣ್ಣು, ಕಿವಿ ತೆರೆಸಿ, ಬಾಯಿ ಮುಚ್ಚಿಸಿ, ಮನೆ, ಮನಗಳನ್ನು ಆನಂದಗೊಳಿಸಲಿ ಎನ್ನುವುದಷ್ಟೇ ನನ್ನ ಕಣ್ಣ ಮುಂದಿರುವ ಸತ್‌ಚಿತ್ರ. ಇನ್ನೊಂದು ಮಾತು, ಮಿತ್ರ ಬಸವರಾಜಸ್ವಾಮಿಯವರು ಮಾತನಾಡುವುದನ್ನು ಮಾತ್ರ ಕೇಳಿದ್ದ ನನಗೀಗ ಅವರು ಬರೆದುದನ್ನು ಬಾಹ್ಯಗಣ್ಣು ಮುಚ್ಚಿ, ಅಂತರ್‌ದೃಷ್ಟಿಯಿಂದ ಓದುವ ಅವಕಾಶ ಬಂದಿದೆ. ಅವರು ಅಂತಹ ಅಪೂರ್ವ ಆನಂದವನ್ನು ಅನುಭಾವಕ್ಕೆ ತೆರೆದಿಟ್ಟಿದ್ದಾರೆ. ಅವರಿಗೆ ಅಭಿನಂದನೆಗಳು

– ಈಶ್ವರ ದೈತೋಟ